ಭಾನುವಾರ, ಏಪ್ರಿಲ್ 24, 2022 | ₹ 6.00
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಪ್ರತಿಭಟನೆ

ಟಿಬೆಟ್ ಮೇಲೆ ಚೀನಾ ಅತಿಕ್ರಮಣ ವಿರೋಧಿಸಿ ಕೋಲ್ಕತ್ತದಲ್ಲಿ ಶನಿವಾರ ನಡೆದ ಪ್ರತಿಭಟನೆಯ ವೇಳೆ ಮಹಿಳೆಯೊಬ್ಬರು ದಲೈಲಾಮಾ ಅವರ ಭಾವಚಿತ್ರ ಪ್ರದರ್ಶಿಸಿದರು



ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭಾನುವಾರದ ಪುರವಣಿ
ಆರ್ಥಿಕವಾಗಿ ದಿವಾಳಿ ಎದ್ದಿರುವ ಶ್ರೀಲಂಕಾದ ಇಂದಿನ ಸಂಕಷ್ಟಕ್ಕೆ ಕಾರಣವೇನು? ಅಲ್ಲಿನ ಆಂತರಿಕ ಬೇಗುದಿಯ ಒಳನೋಟ



ವರ್ಗಾವಣೆ ತಡೆಗೆ ವಿದ್ಯಾರ್ಥಿನಿಯರನ್ನು ಒತ್ತೆಯಾಳಾಗಿರಿಸಿದ ಶಿಕ್ಷಕಿಯರು 8
ವಿಶೇಷ ಸ್ಥಾನಮಾನ ರದ್ದುಪಡಿಸಿದ ನಂತರ ಮೊದಲ ಬಾರಿಗೆ ಭೇಟಿ
402 ಪಿಎಸ್ಐಗಳ ನೇಮಕಾತಿಯಲ್ಲೂ ಅಕ್ರಮ: ಶಂಕೆ 6
ಸಾಂಬಾ ಜಿಲ್ಲೆಗೆ ಪ್ರಧಾನಿ ಭೇಟಿ ಇಂದು 10



ಹಾವೇರಿ: ಸೆ.23ರಿಂದ ಸಾಹಿತ್ಯ ಸಮ್ಮೇಳನ

ಬೆಂಗಳೂರು: ಹಾವೇರಿಯಲ್ಲಿ ಸೆಪ್ಟೆಂಬರ್ 23ರಿಂದ 25ರವರೆಗೆ 86ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ನಡೆಸಲು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅಧ್ಯಕ್ಷತೆಯಲ್ಲಿ ಶನಿವಾರ ನಡೆದ ಪೂರ್ವಭಾವಿ ಸಭೆಯಲ್ಲಿ ತೀರ್ಮಾನಿಸಲಾಗಿದೆ. 2

ಒಳ ಪುಟ

ಚಿನಕುರಳಿ

ಪ್ರಕಾಶ್ ಶೆಟ್ಟಿ



ಜಲಾಶಯ ಆಶ್ರಿತ ಕೃಷಿ ಭೂಮಿಯಲ್ಲಿ ಸವಳು–ಜವಳು ಸಮಸ್ಯೆ

ಬರಡಾಗುವತ್ತ ಭತ್ತದ ನೆಲ

• ಗಾಣಧಾಳು ಶ್ರೀಕಂಠ

ಒಳನೋಟ
ಸವಳು ನೆಲದ ಸವಾಲು
ಪ್ರತಿಕ್ರಿಯಿಸಿ: 9606038256
feedback@prajavani.co.in

ಬೆಂಗಳೂರು: 'ನಮ್ದು ನಾಲ್ಕೂವರೆ ಎಕರೆ ಜಮೀನು. ಮೇಲ್ಭಾಗದಲ್ಲಿ 2 ಎಕರೆ ಮಸಾರಿ(ಕೆಂಪು ಮಣ್ಣು) ಭೂಮಿ. ಉಳಿದಿದ್ದು ಸವಳು. ಮಸಾರಿಯಲ್ಲಿ ಎಕರೆಗೆ 40 ಕ್ವಿಂಟಲ್ ಭತ್ತ ಇಳುವರಿ ಬಂದ್ರೆ, ಸವಳು ಗದ್ದೆಯಲ್ಲಿ 20 ಕ್ವಿಂಟಲ್ ಬರೋದಿಲ್ಲ..!

– ಸವಳು ಮಣ್ಣಿನಿಂದ ಭತ್ತದ ಇಳುವರಿ ಕುಸಿದಿರುವುದನ್ನು ಹೀಗೆ ಬೇಸರದಿಂದಲೇ ವಿವರಿಸಿದರು ಬಳ್ಳಾರಿ ಜಿಲ್ಲೆಯ ಭೈರಾಪುರದ ಕೃಷಿಕ ಧನುಕೋಟಿ.

'ಒಂದು ಕಾಲದಲ್ಲಿ ಈ ಜಮೀನಿನಲ್ಲಿ ಭತ್ತದ ಇಳುವರಿ ಚೆನ್ನಾಗಿತ್ತು. ನಿರಂತರವಾಗಿ ನೀರು ನಿಲ್ಲಿಸಿ ಭತ್ತ ಬೆಳೆದಿದ್ದರಿಂದ, ಮಣ್ಣು ಸವಳಾಯಿತು. ಈಗ ಇಲ್ಲಿ ಏನೂ ಬೆಳೆಯೋದಿಲ್ಲ. 20 ಎಕರೆ ಪೂರ್ಣ ಹಾಳಾಗಿದೆ' ಎಂದು ತಮ್ಮ ಜಮೀನಿನ ಆಸು–ಪಾಸಿನಲ್ಲಿನ ಸವಳು ಭೂಮಿಯ ಸೋಲಿನ ಕಥೆ ಹೇಳಿದರು ಸಿರುಗುಪ್ಪದ ಕೃಷಿಕ ಸೂರ್ಯಭಾಸ್ಕರ್ !

ಇದು ಸಿರುಗುಪ್ಪ ಮಾತ್ರವಲ್ಲ, ರಾಜ್ಯದ ಜಲಾಶಯಗಳ ಅಚ್ಚುಕಟ್ಟು ಪ್ರದೇಶದಲ್ಲಿ ನಿರಂತರವಾಗಿ ನೀರು ನಿಲ್ಲಿಸಿ ಭತ್ತ, ಕಬ್ಬು ಬೆಳೆಯುವ ಸಾವಿರಾರು ಹೆಕ್ಟೇರ್ ಜಮೀನಿನ ಸ್ಥಿತಿ ಇದಕ್ಕಿಂತ ಭಿನ್ನವಾಗೇನಿಲ್ಲ. ಹೆಚ್ಚು ಇಳುವರಿ, ಲಾಭದ ಆಸೆಗಾಗಿ ಸತತವಾಗಿ ನೀರು ನಿಲ್ಲಿಸಿ, ವಿವೇಚನೆ ಇಲ್ಲದೇ ರಸಗೊಬ್ಬರ, ಕೀಟನಾಶಕ ಬಳಸಿ ವರ್ಷಕ್ಕೆ ಎರಡು ಬಾರಿ ಭತ್ತ ಬೆಳೆಯುತ್ತಿರುವ ಕೃಷಿ ಭೂಮಿಗಳು ಇಂಥ ಅಧೋಗತಿಗೆ ತಲುಪಿವೆ.

ಮೂರು ವರ್ಷಗಳ ಹಿಂದೆ ಸಮೀಕ್ಷೆ ನಡೆಸಿದ್ದ ಕೇಂದ್ರ ಸರ್ಕಾರದ ರಾಷ್ಟ್ರೀಯ ಮಣ್ಣು ಸರ್ವೇಕ್ಷಣಾ ಮತ್ತು ಭೂಬಳಕೆ ಯೋಜನಾ ಸಂಸ್ಥೆ (ಎನ್‌ಬಿಎಸ್‌ಎಸ್) ಕೂಡ, 'ರಾಜ್ಯದ ಕಬ್ಬು, ಭತ್ತ ಬೆಳೆಯುವ ಜಲಾನಯನ ಪ್ರದೇಶಗಳ ಮಣ್ಣಿನಲ್ಲಿ ಲವಣಾಂಶ ಹೆಚ್ಚಾಗುತ್ತಿದ್ದು, ಇದು ಹೀಗೇ ಮುಂದುವರೆದರೆ, ಭವಿಷ್ಯದಲ್ಲಿ ಆ ಭೂಮಿಯಲ್ಲಿ ಯಾವುದೇ ಬೆಳೆ ಬೆಳೆಯಲು ಸಾಧ್ಯವಾಗದ ಸ್ಥಿತಿ ನಿರ್ಮಾಣವಾಗುತ್ತದೆ' ಎಂದು ಎಚ್ಚರಿಕೆ ನೀಡಿತ್ತು.

8ನೇ ಪುಟ ನೋಡಿ

ಕಾಡಾ– ವ್ಯಾಪ್ತಿಯ ಸವಳು–ಜವಳು ಪ್ರಮಾಣ

ಮಲಪ್ರಭಾ – ಘಟಪ್ರಭಾ, ಭದ್ರಾ, ಕಾವೇರಿ ಸೇರಿದಂತೆ ರಾಜ್ಯದ ವಿವಿಧ ಜಲಾಶಯಗಳ (ಅಚ್ಚುಕಟ್ಟು ಅಭಿವೃದ್ಧಿ ಪ್ರಾಧಿಕಾರ – ಕಾಡಾ) ಅಚ್ಚುಕಟ್ಟು ಪ್ರದೇಶದಲ್ಲಿ ಸವಳು– ಜವಳಿನ ಪ್ರಮಾಣ, ಪರಿಹಾರ ಕುರಿತ ಮಾಹಿತಿ ಇಲ್ಲಿದೆ;

ಮಲಪ್ರಭಾ–ಘಟಪ್ರಭಾ ಅಚ್ಚುಕಟ್ಟು ಪ್ರದೇಶದಲ್ಲಿ 85,525 ಹೆಕ್ಟೇರ್ ಭೂಮಿ ಸವಳು–ಜವಳಾಗಿದೆ. ಈವರೆಗೆ 39,273 ಹೆಕ್ಟೇರ್ ಜಮೀನಿನಲ್ಲಿನ ಸಮಸ್ಯೆಯನ್ನು ಪರಿಹರಿಸಲಾಗಿದೆ. ಇನ್ನೂ 46,251 ಹೆಕ್ಟೇರ್ ಪ್ರದೇಶದಲ್ಲಿ ಸಮಸ್ಯೆ ಇದೆ. ಪ್ರಸಕ್ತ ಸಾಲಿನಲ್ಲಿ ಸವಳು–ಜವಳು ಮಣ್ಣನ್ನು ಫಲವತ್ತಾಗಿಸಲು ₹9.75 ಕೋಟಿ ಅನುದಾನ ಕಾಡಾಕ್ಕೆ ಲಭ್ಯವಾಗಿದೆ. ಉಳಿದ ಸಮಸ್ಯೆ ಪರಿಹರಿಸಲು ಅಗತ್ಯವಿರುವ ಅನುದಾನ ₹231 ಕೋಟಿ.

ಕಾವೇರಿ ನದಿ (ಮೈಸೂರು ವ್ಯಾಪ್ತಿ) ಅಚ್ಚುಕಟ್ಟು ಪ್ರದೇಶದಲ್ಲಿ 7,707 ಹೆಕ್ಟೇರ್ ಜವಳು(Water logging) ಹಾಗೂ 6307 ಹೆಕ್ಟೇರ್‌ನಲ್ಲಿ ಸವಳು ಸಮಸ್ಯೆ ಇದೆ. ಈವರೆಗೆ 25,257 ಹೆಕ್ಟೇರ್ ಪ್ರದೇಶದಲ್ಲಿನ ಜವಳು/ಕ್ಷಾರ, ಸವಳು ಸಮಸ್ಯೆಯನ್ನು ಪರಿಹರಿಸಲಾಗಿದೆ. ಮಣ್ಣು ಫಲವತ್ತಾಗಿಸಲು 2021–22ನೇ ಸಾಲಿನಲ್ಲಿ ₹ 38 ಲಕ್ಷ ಅನುದಾನವನ್ನು ಬಳಸಿ 110 ಹೆಕ್ಟೇರ್ ಪ್ರದೇಶವನ್ನು ಫಲವತ್ತಾಗಿಸಲಾಗಿದೆ. ಬಾಕಿ ಉಳಿದಿರುವ 14,014 ಹೆಕ್ಟೇರ್ ಪ್ರದೇಶದ ಸಾರವರ್ಧನೆಗೆ ₹ 40 ಕೋಟಿ ಅನುದಾನ ಬೇಕಿದೆ ಎಂದು ಕಾಡಾದ ಭೂ ಅಭಿವೃದ್ಧಿ ಅಧಿಕಾರಿ ಮಧುಸೂದನ್ ತಿಳಿಸಿದ್ದಾರೆ.

ಭದ್ರಾ ಜಲಾಶಯದ ವ್ಯಾಪ್ತಿಯಲ್ಲಿ, 40 ಸಾವಿರ ಹೆಕ್ಟೇರ್‌ನಲ್ಲಿ ಭತ್ತ, 12 ಸಾವಿರ ಹೆಕ್ಟೇರ್‌ನಲ್ಲಿ ಕಬ್ಬು ಬೆಳೆಯಲಾಗುತ್ತಿದೆ. 23,207 ಹೆಕ್ಟೇರ್ ನಷ್ಟು ಸವಳು–ಜವಳು ಪ್ರದೇಶವಿದೆ. ಈವರೆಗೆ 8,200 ಹೆಕ್ಟೇರ್ ಜಮೀನಿನಲ್ಲಿ ಸಮಸ್ಯೆ ಪರಿಹರಿಸಲಾಗಿದೆ. ಪ್ರಸ್ತುತ ಸವಳು ಸಮಸ್ಯೆ ಪರಿಹಾರಕ್ಕಾಗಿ ಬಂದಿರುವ 3600 ರೈತರ ಅರ್ಜಿಗಳು ಬಾಕಿ ಉಳಿದಿವೆ. ಈವರೆಗೆ ಮಣ್ಣು ಫಲವತ್ತಾಗಿಸಲು ಕಾಡಾಕ್ಕೆ ₹ 95 ಲಕ್ಷ ಅನುದಾನ ಲಭ್ಯವಾಗಿದೆ. ಮಣ್ಣು ಫಲವತ್ತಾಗಿಸಲು ಅಗತ್ಯವಿರುವ ಅಂದಾಜು ಅನುದಾನ ₹ 26 ಕೋಟಿ.

ಇನ್ನಷ್ಟು ಸುದ್ದಿಗಳು 8



ಸಿಬಿಎಸ್‌ಇ ಪಠ್ಯದಲ್ಲಿ ಬದಲಾವಣೆ: ಶೀತಲ ಸಮರದ ಅಧ್ಯಾಯವೂ ಇಲ್ಲ

ಅಲಿಪ್ತ ನೀತಿ, ಮೊಘಲ್ ಚರಿತ್ರೆಗೆ ಕತ್ತರಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಕೇಂದ್ರ ಪ್ರೌಢ ಶಿಕ್ಷಣ ಮಂಡಳಿಯು (ಸಿಬಿಎಸ್‌ಇ) 10, 11 ಮತ್ತು 12ನೇ ತರಗತಿಯ ಪಠ್ಯಕ್ರಮದಲ್ಲಿ ವ್ಯಾಪಕ ಬದಲಾವಣೆಗಳನ್ನು ಮಾಡಿದೆ. ಅಲಿಪ್ತ ನೀತಿ, ಶೀತಲ ಸಮರ ಯುಗ, ಆಫ್ರಿಕಾ ಮತ್ತು ಏಷ್ಯಾ ಪ್ರದೇಶದಲ್ಲಿ ಮುಸ್ಲಿಂ ಸಾಮ್ರಾಜ್ಯಗಳ ಉದಯ, ಮೊಘಲ್ ಚರಿತ್ರೆ, ಕೈಗಾರಿಕಾ ಕ್ರಾಂತಿ, ಉರ್ದು ಮತ್ತು ಪಂಜಾಬಿ ಭಾಷೆಯ ಅತ್ಯುತ್ತಮ ಕವಿ ಎಂದು ಗುರುತಿಸಲಾಗಿರುವ ಫೈಝ್ ಅಹಮ್ಮದ್ ಫೈಝ್ ಅವರ ಕವಿತೆಗಳನ್ನು ಪಠ್ಯದಿಂದ ಕೈಬಿಡಲಾಗಿದೆ.

11 ಮತ್ತು 12ನೇ ತರಗತಿಯ ಚರಿತ್ರೆ ಮತ್ತು ರಾಜಕೀಯ ಶಾಸ್ತ್ರ ಪಠ್ಯಕ್ರಮದಲ್ಲಿ ಮಾಡಿರುವ ಬದಲಾವಣೆಯು ಮುಂದಿನ ಶೈಕ್ಷಣಿಕ ವರ್ಷದಿಂದ ಜಾರಿಗೆ ಬರಲಿದೆ. 11ನೇ ತರಗತಿಯ ಚರಿತ್ರೆ ಪಠ್ಯದಿಂದ 'ಕೇಂದ್ರೀಯ ಇಸ್ಲಾಮಿಕ್ ಪ್ರದೇಶಗಳು' ಎಂಬ ಅಧ್ಯಾಯವನ್ನು ಕೈಬಿಡಲಾಗಿದೆ. ಈ ಅಧ್ಯಾಯದಲ್ಲಿ ಆಫ್ರಿಕಾ ಮತ್ತು ಏಷ್ಯಾದಲ್ಲಿ ಮುಸ್ಲಿಂ ಸಾಮ್ರಾಜ್ಯಗಳ ಉದಯದ ವಿವರಗಳು ಇವೆ. ಖಲೀಫಾ ಪದ್ಧತಿ, ಆ ಸಾಮ್ರಾಜ್ಯಗಳ ಅವಧಿಯಲ್ಲಿನ ಆರ್ಥಿಕ ಮತ್ತು ಸಾಮಾಜಿಕ ಸ್ಥಿತಿಗತಿಯ ಮಾಹಿತಿ ಇದೆ. ಗಣಿತಶಾಸ್ತ್ರ ಪಠ್ಯದಿಂದ ಗಣಿತಶಾಸ್ತ್ರೀಯ ತರ್ಕದ ಬಗೆಗಿನ ಅಧ್ಯಾಯವನ್ನು ಕೈಬಿಡಲಾಗಿದೆ.

12ನೇ ತರಗತಿಯ ಚರಿತ್ರೆ ಪಠ್ಯದಿಂದ ಕಥಾನಕಗಳ ಮೂಲಕ ಇತಿಹಾಸದ ಮರುಸೃಷ್ಟಿ ಎಂಬ ಅಧ್ಯಾಯವನ್ನು ತೆಗೆಯಲಾಗಿದೆ.

8ನೇ ಪುಟ ನೋಡಿ



ಮುಂಗಾರು ಹಂಗಾಮಿಗೆ ಮುನ್ನ ರಸಗೊಬ್ಬರ ಕೊರತೆ

● ಸಚ್ಚಿದಾನಂದ ಕುರಗುಂದ

ಬೆಂಗಳೂರು: ರಾಜ್ಯದಲ್ಲಿ ಮುಂಗಾರು ಹಂಗಾಮು ಆರಂಭವಾಗುವ ಮುನ್ನವೇ ರಸಗೊಬ್ಬರ ಕೊರತೆಯಾಗಬಹುದೆಂಬ ಆತಂಕ ರೈತರನ್ನು ಕಾಡಲಾರಂಭಿಸಿದೆ.

ಹೆಚ್ಚುತ್ತಿರುವ ದರ ಮತ್ತು ಪೂರೈಕೆಯಲ್ಲಿ ವ್ಯತ್ಯಾಸಗಳಿಂದ ಕೃಷಿಕರು ಕಂಗಾಲಾಗಿದ್ದಾರೆ. ಸಕಾಲಕ್ಕೆ ರಸಗೊಬ್ಬರ ಸಿಗುತ್ತಿಲ್ಲ ಎನ್ನುವ ದೂರುಗಳು ನಾಡಿನ ನಾನಾ ಕಡೆಗಳಿಂದ ಕೇಳಲಾರಂಭಿಸಿದೆ. ದಿನೇ ದಿನೇ ರಸಗೊಬ್ಬರ ಸಮಸ್ಯೆ ಹೆಚ್ಚುತ್ತಿದ್ದು, ರೈತರು ಅಂಗಡಿಗಳ ಎದುರು ಕಾದು ನಿಲ್ಲಬೇಕಾದ ಸ್ಥಿತಿ ಸೃಷ್ಟಿಯಾಗುತ್ತಿದೆ. ಹಲವೆಡೆ ಪೂರೈಕೆಯಾದ ತಕ್ಷಣವೇ ಖಾಲಿಯಾಗುತ್ತಿದೆ.

ಬೇಡಿಕೆಯುಕ್ತ ಪೊಟ್ಯಾಷ್ ಸೇರಿದಂತೆ ವಿವಿಧ ಮಾದರಿ ಮಿಶ್ರಣದ-ರಸಗೊಬ್ಬರ ದಾಸ್ತಾನು ಪ್ರಮಾಣದಲ್ಲೂ ಕೊರತೆಯಾಗಿದೆ. ಬಿತ್ತನೆ ಸಮಯದಲ್ಲಿ ಬೀಜ, ಸಸಿಯೊಂದಿಗೆ ನೀಡುವ ಡಿಎಪಿ ಮತ್ತು ಎನ್‌ಪಿಕೆ ಮಿಶ್ರಣದ ರಸಗೊಬ್ಬರ ಬೆಲೆಯೂ ಗಗನಕ್ಕೇರಿದೆ. ಕಳೆದ ವರ್ಷ ಸೆಪ್ಟೆಂಬರ್‌ನಿಂದಲೇ ಆರಂಭವಾದ ಸಮಸ್ಯೆ ಈಗ ಪರಿಸ್ಥಿತಿ ಮತ್ತಷ್ಟು ಬಿಗಡಾಯಿಸಿದೆ. ಕೆಲವು ಭಾಗಗಳಲ್ಲಿ ಯೂರಿಯಾ ಕೊರತೆ ಇದ್ದರೆ, ಇನ್ನು ಕೆಲವೆಡೆ ಡಿಎಪಿ ಕೊರತೆ ತಲೆದೋರಿದೆ ಎನ್ನುವುದು ರೈತರ ದೂರು.

ಪ್ರಜಾವಾಣಿ ವಿಶೇಷ

ಕಾಂಪ್ಲೆಕ್ಸ್ ರಸಗೊಬ್ಬರಗಳು ಸಾರಜನಕ, ರಂಜಕ ಮತ್ತು ಪೊಟ್ಯಾಷ್ (ಎನ್‌ಪಿಕೆ) ಒಳಗೊಂಡಿವೆ. ಹಿಂದಿನ ವರ್ಷಗಳಿಗೆ ಹೋಲಿಸಿದರೆ ಈಗ ಶೇ 30ರಷ್ಟು ಕಾಂಪ್ಲೆಕ್ಸ್ ರಸಗೊಬ್ಬರ ಬಳಕೆ ಹೆಚ್ಚಾಗಿದೆ. 2019–20ರಲ್ಲಿ ಕರ್ನಾಟಕದಲ್ಲಿ 7.6 ಲಕ್ಷ ಟನ್ ಕಾಂಪ್ಲೆಕ್ಸ್ ರಸಗೊಬ್ಬರವನ್ನು ಬಳಕೆ ಮಾಡಲಾಗಿತ್ತು 2020–21ರಲ್ಲಿ 10 ಲಕ್ಷ ಟನ್ ಬಳಕೆಯಾಗಿತ್ತು. 2021–22ರಲ್ಲಿ 11 ಲಕ್ಷ ಟನ್‌ಗೂ ಹೆಚ್ಚು ರಸಗೊಬ್ಬರ ಬಳಕೆಯಾಗಿತ್ತು.

‘2021ರ ಏಪ್ರಿಲ್‌ವರೆಗೆ ರಸಗೊಬ್ಬರಕ್ಕೆ ನಿರ್ದಿಷ್ಟ ದರವನ್ನು ಕೇಂದ್ರ ಸರ್ಕಾರ ನಿಗದಿಪಡಿಸುವ ಪದ್ಧತಿ ಇತ್ತು. 2021ರ ಏಪ್ರಿಲ್ ನಂತರ ವಾರಕ್ಕೊಮ್ಮೆ, 15 ದಿನಗಳಿಗೊಮ್ಮೆ ದರಗಳನ್ನು ಬದಲಾವಣೆ ಮಾಡುತ್ತ ಬಂದಿದೆ. 50 ಕೆ.ಜಿ ತೂಕದ ಪೊಟ್ಯಾಷ್‌ಗೆ ₹850 ದೊರೆಯುತ್ತಿತ್ತು. ಕಳೆದ ವರ್ಷದ ದೀಪಾವಳಿ ವೇಳೆಗೆ ಇದು ₹1,040ಕ್ಕೆ ತಲುಪಿತು. ಕಾಂಪ್ಲೆಕ್ಸ್ ರಸಗೊಬ್ಬರ ₹1,075ಕ್ಕೆ ಹೆಚ್ಚಾಯಿತು. ಒಟ್ಟಾರೆಯಾಗಿ ಕಳೆದ ವರ್ಷಕ್ಕೆ ಹೋಲಿಸಿದರೆ ಒಂದು ಚೀಲಕ್ಕೆ ₹300ರಿಂದ ₹350ರಷ್ಟು ಹೆಚ್ಚಾಗಿದೆ’ ಎಂದು ಚಿಕ್ಕಮಗಳೂರಿನ ರಸಗೊಬ್ಬರ ಮಾರಾಟಗಾರರೊಬ್ಬರು ವಿವರಿಸಿದರು.

‘ಸೆಪ್ಟೆಂಬರ್ ನಂತರ 100 ಚೀಲಗಳಿಗೆ ಬೇಡಿಕೆ ಸಲ್ಲಿಸಿದರೆ ಕೇವಲ 10ರಿಂದ 20 ಚೀಲ ಮಾತ್ರ ಪೂರೈಕೆಯಾಗುತ್ತಿದೆ. ನಮಗೆ ಮೂರು ತಿಂಗಳಲ್ಲಿ 500 ಚೀಲ ಕಳುಹಿಸಿದ್ದಾರೆ’ ಎಂದರು.

‘ಸದ್ಯ 6.52 ಲಕ್ಷ ಟನ್ ದಾಸ್ತಾನು’

ಪ್ರಸ್ತುತ 6.52 ಲಕ್ಷ ಟನ್ ಪ್ರಮಾಣದ ರಸಗೊಬ್ಬರವು ಖಾಸಗಿ ಮಾರಾಟಗಾರರು ಮತ್ತು ಸಹಕಾರ ಸಂಘಗಳಲ್ಲಿ ಲಭ್ಯವಿದೆ. ಹೀಗಾಗಿ, ರಸಗೊಬ್ಬರದ ಕೊರತೆ ಇಲ್ಲ ಎಂದು ಕೃಷಿ ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ.

ಯೂರಿಯಾ 3.5 ಲಕ್ಷ ಮೆಟ್ರಿಕ್ ಟನ್, ಡಿಎಪಿ 0.61 ಲಕ್ಷ ಮೆಟ್ರಿಕ್ ಟನ್, ಎಂಒಪಿ 0.17 ಲಕ್ಷ ಮೆಟ್ರಿಕ್ ಟನ್ ಮತ್ತು ಕಾಂಪ್ಲೆಕ್ಸ್ 2.24 ಲಕ್ಷ ಮೆಟ್ರಿಕ್ ಟನ್‌ನಷ್ಟು ರಸಗೊಬ್ಬರ ಲಭ್ಯ ಇದೆ ಎಂದು ತಿಳಿಸಿದ್ದಾರೆ.

ಮುಂಗಾರು ಹಂಗಾಮಿಗೆ ಅಗತ್ಯವಿರುವಷ್ಟು ರಸಗೊಬ್ಬರವನ್ನು ಕೃಷಿಕರಿಗೆ ಸರಬರಾಜು ಮಾಡಲು ಈಗಾಗಲೇ ಕ್ರಮಗಳನ್ನು ಕೈಗೊಳ್ಳಲಾಗಿದೆ ಎಂದಿದ್ದಾರೆ.

‘100 ಚೀಲ ಕೇಳಿದರೆ 5 ಚೀಲ ಬರುತ್ತದೆ’

‘ಕಚ್ಚಾ ವಸ್ತುಗಳು ದುಬಾರಿಯಾಗಿರುವುದರಿಂದ ರಸಗೊಬ್ಬರ ಉತ್ಪಾದನೆ ಮೇಲೆಯೇ ಪರಿಣಾಮ ಬೀರಿದೆ ಹೀಗಾಗಿ, ಕಳೆದ ವರ್ಷಕ್ಕೆ ಹೋಲಿಸಿದರೆ ಈ ಬಾರಿ ಕೊರತೆಯಾಗಿರುವುದು ನಿಜ. ನಾವು 100 ಚೀಲ ಬೇಡಿಕೆ ಸಲ್ಲಿಸಿದರೆ 5 ಚೀಲ ಪೂರೈಸುತ್ತಾರೆ’ ಎಂದು ಹೊಳೆನರಸೀಪುರದ ಮಾರಾಟಗಾರರೊಬ್ಬರು ವಿವರಿಸಿದರು. ‘ಒಂದು ಚೀಲ ಪೊಟ್ಯಾಷ್ ಬೆಲೆ ಕಳೆದ ವರ್ಷ ₹850 ಇತ್ತು. ಈಗ ಅದು ₹1,700ಕ್ಕೆ ತಲುಪಿದೆ’ ಎಂದರು.

ಮುಂಗಾರಿಗೆ ಗೊಬ್ಬರದ ಬೇಡಿಕೆ (ಲಕ್ಷ ಟನ್)

ಯೂರಿಯಾ	10.50
ಡಿಎಪಿ	4
ಎಂಒಪಿ	2
ಕಾಂಪ್ಲೆಕ್ಸ್	10.26
ಒಟ್ಟು ಬೇಡಿಕೆ	26.76

ಮೈಸೂರು, ಚಾಮರಾಜನಗರ ಸೇರಿದಂತೆ ಕೆಲ ಜಿಲ್ಲೆಗಳಲ್ಲಿ ರಸಗೊಬ್ಬರ ಅಭಾವ ಸೃಷ್ಟಿಯಾಗಿದೆ. ಅಂಗಡಿ ಮಾಲೀಕರು ಕೃತಕ ಅಭಾವ ಸೃಷ್ಟಿಸುತ್ತಿದ್ದಾರೆ

ಅತ್ತಹಳ್ಳಿ ದೇವರಾಜ್, ಕಬ್ಬು ಬೆಳೆಗಾರರ ಸಂಘದ ರಾಜ್ಯ ಸಂಘಟನಾ ಕಾರ್ಯದರ್ಶಿ

‘ಮುಂದಿನ ಗುರಿ ಕೃಷ್ಣ ಜನ್ಮಭೂಮಿ’

ಮೈಸೂರು: ‘ರಾಮ ಜನ್ಮಭೂಮಿ ನಂತರ ಕೃಷ್ಣ ಜನ್ಮಭೂಮಿ ಹಾಗೂ ಕಾಶಿ ವಿಶ್ವನಾಥ ಮಂದಿರ ವಿವಾದಗಳೇ ನಮ್ಮ ಗುರಿ’ ಎಂದು ರಾಜ್ಯಸಭಾ ಸದಸ್ಯ ಸುಬ್ರಹ್ಮಣಿಯನ್ ಸ್ವಾಮಿ ತಿಳಿಸಿದರು.

ಮೈಸೂರು ಹಿಂದೂ ಫೋರಂ ಇಲ್ಲಿ ಶನಿವಾರ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ವಿಶೇಷ ಉಪನ್ಯಾಸ ನೀಡಿದ ಅವರು, ‘ಕೃಷ್ಣ ಜನ್ಮಭೂಮಿ ಹಾಗೂ ಕಾಶಿ ವಿಶ್ವನಾಥ ಮಂದಿರಕ್ಕೆ ಸಂಬಂಧಿಸಿದ ಹಿಂದೂ, ಮುಸ್ಲಿಂ ವಿವಾದಗಳನ್ನೂ ಶಾಂತಿಯುತವಾಗಿಯೇ ಬಗೆಹರಿಸುತ್ತೇವೆ’ ಎಂದರು.

ಹಾವೇರಿ: ಸೆ.23ರಿಂದ ಸಾಹಿತ್ಯ ಸಮ್ಮೇಳನ

ಬೆಂಗಳೂರು: ಹಾವೇರಿಯಲ್ಲಿ ಸೆಪ್ಟೆಂಬರ್ 23ರಿಂದ 25ರವರೆಗೆ 86ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ನಡೆಸಲು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅಧ್ಯಕ್ಷತೆಯಲ್ಲಿ ಶನಿವಾರ ನಡೆದ ಪೂರ್ವಭಾವಿ ಸಭೆಯಲ್ಲಿ ತೀರ್ಮಾನಿಸಲಾಗಿದೆ.

ಬೆಂಗಳೂರು– ಪುಣೆ ಹಳೆ ರಸ್ತೆಯಲ್ಲಿರುವ ಹಾವೇರಿಯ ಹಳ್ಳಿಕೇರಿಯ ಗುತ್ತಲಪ್ಪ ಕಾಲೇಜಿನ ಪಕ್ಕದಲ್ಲಿರುವ 22 ಎಕರೆ ಪ್ರದೇಶದಲ್ಲಿ ಸಾಹಿತ್ಯ ಸಮ್ಮೇಳನ ಆಯೋಜನೆಗೆ ನಿರ್ಧರಿಸಲಾಗಿದೆ. ಸಾಹಿತ್ಯ ಸಮ್ಮೇಳನದ ಪ್ರಧಾನ ವೇದಿಕೆಯಲ್ಲೇ ಎಲ್ಲ ಗೋಷ್ಠಿಗಳನ್ನೂ ನಡೆಸಬೇಕು. ಸಮಾನಾಂತರ ವೇದಿಕೆಗಳಲ್ಲಿ ಗೋಷ್ಠಿ ಆಯೋಜಿಸುವ ಬದಲು, ಒಂದೇ ವೇದಿಕೆಯಲ್ಲಿ ಕಡಿಮೆ ಸಂಖ್ಯೆಯ, ಗುಣಮಟ್ಟದ ಗೋಷ್ಠಿಗಳನ್ನು ಆಯೋಜಿಸಿ ಎಂದು ಬೊಮ್ಮಾಯಿ ಸೂಚಿಸಿದರು.

ಕೇಂದ್ರ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಚಂದ್ರಶೇಖರ ಕಂಬಾರ, ಸಚಿವರಾದ ವಿ. ಸುನಿಲ್ ಕುಮಾರ್, ಶಿವರಾಂ ಹೆಬ್ಬಾರ್, ಬಿ.ಸಿ.ಪಾಟೀಲ, ಸಂಸದ ಶಿವಕುಮಾರ್ ಉದಾಸಿ, ರಾಜ್ಯ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಆಯೋಗದ ಅಧ್ಯಕ್ಷ ನೆಹರು ಓಲೇಕಾರ್, ಶಾಸಕರಾದ ಅರುಣ್ ಕುಮಾರ್ ಪೂಜಾರ್, ವಿಧಾನ ಪರಿಷತ್ ಸದಸ್ಯ ಸಲೀಂ ಅಹಮದ್, ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಹೇಶ್ ಜೋಶಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಕಾರ್ಯದರ್ಶಿ ಎನ್.ಮಂಜುಳಾ, ಹಾವೇರಿ ಜಿಲ್ಲಾಧಿಕಾರಿ ಡಾ. ಸಂಜಯ ಶೆಟ್ಟೆಣ್ಣವರ ಸಭೆಯಲ್ಲಿದ್ದರು.

ಸೇತುವೆಗೆ ಕಾರು ಡಿಕ್ಕಿ ಮೂವರ ಸಾವು

ಚಿಕ್ಕಬಳ್ಳಾಪುರ: ತಾಲ್ಲೂಕಿನ ಜಾತವಾರ ಹೊಸಹಳ್ಳಿ ಬಳಿ ಶುಕ್ರವಾರ ರಾತ್ರಿ ಕಾರು ಸೇತುವೆಗೆ ಡಿಕ್ಕಿಯಾಗಿ ಮೂವರು ಸ್ಥಳದಲ್ಲಿಯೇ ಮೃತಪಟ್ಟಿದ್ದಾರೆ.

ಗುಡಿಬಂಡೆ ತಾಲ್ಲೂಕಿನ ಸೋಮೇನಹಳ್ಳಿಯ ಲಕ್ಷ್ಮಿ, ಬೆಂಗಳೂರಿನ ಕೆ.ಆರ್.ಪುರಂನ ಅರುಣ್, ಶಿವಕುಮಾರ್ ಮೃತರು. ಚಿಕ್ಕಬಳ್ಳಾಪುರದ ವಾಪಸಂದ್ರದ ಚಂದ್ರಶೇಖರ್ ಮತ್ತು ಅರಣಾ ಗಾಯಗೊಂಡಿದ್ದು ಜಿಲ್ಲಾ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಚಿಕ್ಕಬಳ್ಳಾಪುರ ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸುದ್ದಿ 2 ನಿಮಿಷ

ಎಸ್‌ಸಿಎಸ್‌ಪಿ, ಟಿಎಸ್‌ಪಿ ಅನುದಾನ: ಅಭಿವೃದ್ಧಿ ಸೂಚ್ಯಂಕ ವಿಶ್ಲೇಷಣೆ ನಾಳೆ

ಬೆಂಗಳೂರು: ಯೋಜನಾ ಇಲಾಖೆ ಹಾಗೂ ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯವು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಧಿಕಾರಿ ಮತ್ತು ನೌಕರರ ಸಂಘದ ಸಹಯೋಗದಲ್ಲಿ ಇದೇ ಮೊದಲ ಬಾರಿಗೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ಸೂಚ್ಯಂಕ ಮತ್ತು ಪರಿಶಿಷ್ಟ ಜಾತಿ ಉಪಯೋಜನೆ (ಎಸ್‌ಸಿಎಸ್‌ಪಿ) ಮತ್ತು ಬುಡಕಟ್ಟು ಉಪಯೋಜನೆ (ಟಿಎಸ್‌ಪಿ) ಅಡಿ ವೆಚ್ಚ ಮಾಡಿದ ಅನುದಾನ ಬಳಕೆ ಕುರಿತ ವಿಶ್ಲೇಷಣೆಗೆ ಕಾರ್ಯಾಗಾರ ಹಮ್ಮಿಕೊಂಡಿದೆ.

ಅಂಬೇಡ್ಕರ್ ಅವರ 131ನೇ ಜಯಂತಿ ಅಂಗವಾಗಿ ವಿಕಾಸಸೌಧದ ನಾಲ್ಕನೇ ಮಹಡಿಯಲ್ಲಿ (ಕೊಠಡಿ ಸಂಖ್ಯೆ 419) ಇದೇ 25ರಂದು ಕಾರ್ಯಕ್ರಮ ನಡೆಯಲಿದೆ.

‘ಎಸ್‌ಸಿಎಸ್‌ಪಿ– ಟಿಎಸ್‌ಪಿ ಯೋಜನೆಯಡಿ 2014ರಿಂದ 2021ರವರೆಗೆ ಸುಮಾರು ₹ 120 ಲಕ್ಷ ಕೋಟಿ ವೆಚ್ಚವಾಗಿದ್ದು, ಲಭ್ಯವಿರುವ ಸುಮಾರು 20 ಲಕ್ಷ ಕುಟುಂಬಗಳಿಗೆ ಕನಿಷ್ಠ ₹ 1 ಕೋಟಿ ತಲುಪಿದಂತಾಗಿದೆ. ಆದರೆ, ವಾಸ್ತವಿಕವಾಗಿ ಒಂದು ರೂಪಾಯಿಯೂ ತಲುಪದ ಕುಟುಂಬಗಳಿವೆ. ಅಭಿವೃದ್ಧಿ ಕೊರತೆ ಇರುವ ಕ್ಷೇತ್ರಗಳನ್ನು ಗುರುತಿಸಿ, ಅಭಿವೃದ್ಧಿಗೆ ಯೋಜನೆ ರೂಪಿಸದಿರುವುದು ಇದಕ್ಕೆ ಕಾರಣ. ಆದ್ದರಿಂದ, ಯಾವ ಕ್ಷೇತ್ರಗಳಿಗೆ ಎಸ್‌ಸಿಎಸ್‌ಪಿ– ಟಿಎಸ್‌ಪಿ ಅನುದಾನ ಹೂಡಿಕೆ ಮಾಡಬೇಕು ಎಂಬ ಬಗ್ಗೆ ಯೋಜನೆ ರೂಪಿಸುವ ಅಗತ್ಯವಿದೆ’ ಎಂದು ಅಭಿವೃದ್ಧಿ ಸೂಚ್ಯಂಕ ಕುರಿತು ವಿಚಾರ ಮಂಡಿಸಲಿರುವ ಯೋಜನಾ ಇಲಾಖೆಯ ಪ್ರದೇಶಾಭಿವೃದ್ಧಿ ಮಂಡಳಿಯ ನಿರ್ದೇಶಕ ಡಿ. ಚಂದ್ರಶೇಖರಯ್ಯ ತಿಳಿಸಿದರು.

ಕಾರ್ಯಾಗಾರವನ್ನು ಆರ್ಥಿಕ ಮತ್ತು ಸಾಂಖ್ಯಿಕ ಸಚಿವ ಮುನಿರತ್ನ ಉದ್ಘಾಟಿಸಲಿದ್ದು, ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಅಧ್ಯಕ್ಷತೆ ವಹಿಸಲಿದ್ದಾರೆ.



ಜಯನಗರದಲ್ಲಿ ಮಲಬಾರ್‌ನ ನವೀಕೃತ ಮಳಿಗೆ ಆರಂಭ

ಬೆಂಗಳೂರು: ಮಲಬಾರ್ ಗೋಲ್ಡ್ ಆ್ಯಂಡ್ ಡೈಮಂಡ್ಸ್‌ನ ಜಯನಗರದಲ್ಲಿನ ನವೀಕೃತ ಮಳಿಗೆಯನ್ನು ಶಾಸಕ ಉದಯ್ ಬಿ. ಗರುಡಾಚಾರ್ ಅವರು ಶನಿವಾರ ಉದ್ಘಾಟಿಸಿದರು. ಈ ಮಳಿಗೆಯಲ್ಲಿ ಮೇ 3ರವರೆಗೆ ಕಲಾತ್ಮಕ ಆಭರಣಗಳ ಮೇಳ ನಡೆಯಲಿದೆ.

ನಮ್ಮ ಗ್ರಾಹಕರಿಗೆ ಚಿನ್ನಾಭರಣ ಖರೀದಿಯ ಹೊಸ ಅನುಭವ ನೀಡಲು ಜಯನಗರ ಮಳಿಗೆಯು ಸಜ್ಜಾಗಿದೆ. ವಿಶ್ವದರ್ಜೆಯ ಖರೀದಿ ಅನುಭವವನ್ನು ಪಡೆಯಬಹುದಾಗಿದೆ. ವಿಶಾಲವಾದ ಸ್ಥಳಾವಕಾಶ, ವಿಶೇಷ ವಿನ್ಯಾಸದ ಆಭರಣಗಳು, ಹೆಚ್ಚಿನ ಆಯ್ಕೆಗಳು ಇಲ್ಲಿವೆ ಎಂದು ಮಲಬಾರ್ ಸಮೂಹದ ಅಧ್ಯಕ್ಷ ಎಂ.ಪಿ. ಅಹಮದ್ ತಿಳಿಸಿದರು.

ಬೆಲೆಯಲ್ಲಿ ಪಾರದರ್ಶಕತೆ, ಜೀವಿತಾವಧಿಯ ನಿರ್ವಹಣೆ, ಹಳೆಯ ಚಿನ್ನಾಭರಣ ಮಾರಾಟ ಮಾಡುವಾಗ ಚಿನ್ನಕ್ಕೆ ಶೇ 100ರಷ್ಟು ಮೌಲ್ಯ, ಮರುಖರೀದಿ ಖಾತರಿ, ಬಿಐಎಸ್ ಹಾಲ್‌ಮಾರ್ಕ್... ಹೀಗೆ ಒಟ್ಟಾರೆ 10 ಭರವಸೆಗಳನ್ನು ನಮ್ಮ ಗ್ರಾಹಕರಿಗೆ ನೀಡಲಾಗುತ್ತಿದೆ ಎಂದು ಅವರು ವಿವರಿಸಿದರು.

ನಾಳೆಯಿಂದ ಹರಿದಾಸ ಹಬ್ಬ

ಬೆಂಗಳೂರು: ಹರಿದಾಸ ಸಂಪದ ಟ್ರಸ್ಟ್ ವತಿಯಿಂದ ‘ಹರಿದಾಸ ಹಬ್ಬ’ ವಿಶೇಷ ಕಾರ್ಯಕ್ರಮವನ್ನು ಏ.25ರಿಂದ ಮೇ 1ರವರೆಗೆ ಬೆಂಗಳೂರು ಗಾಯನ ಸಮಾಜದಲ್ಲಿ ಆಯೋಜಿಸಲಾಗಿದೆ.

ಶನಿವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಹರಿದಾಸ ಸಂಪದ ಟ್ರಸ್ಟ್‌ನ ಸಂಸ್ಥಾಪಕ ಕಾರ್ಯದರ್ಶಿ ಎಂ.ವಿ.ಮಧುಸೂದನ್, ‘ಏ.25ರಂದು ಸಂಜೆ 5 ಗಂಟೆಗೆ ಸೋಸಲೆ ಶ್ರೀವ್ಯಾಸರಾಯ ಮಠದ ವಿದ್ಯಾಶ್ರೀಶ ತೀರ್ಥ ಶ್ರೀಪಾದಂಗಳವರ ಅಧ್ಯಕ್ಷತೆಯಲ್ಲಿ ಕಾರ್ಯಕ್ರಮ ಉದ್ಘಾಟನೆಗೊಳ್ಳಲಿದೆ. ಶಿಕ್ಷಣ ಸಚಿವ ಬಿ.ಸಿ.ನಾಗೇಶ್ ಭಾಗವಹಿಸಲಿದ್ದಾರೆ’ ಎಂದರು.

‘ಜಯಲಕ್ಷ್ಮೀ ಮಂಗಳಮೂರ್ತಿ ಅವರಿಗೆ ‘ಪ್ರಸನ್ನ ವೆಂಕಟ’ ಪುರಸ್ಕಾರ ಪ್ರದಾನ ನಡೆಯಲಿದೆ. ಪ್ರತಿದಿನ ಸಂಜೆ 4.45ಕ್ಕೆ ಭಜನೆ, ನಂತರ ಉಪನ್ಯಾಸ ಹಾಗೂ ದಾಸ ಗಾಯನ ಕಛೇರಿಗಳು ನಡೆಯಲಿವೆ. ಸಾರ್ವಜನಿಕರಿಗೆ ಉಚಿತ ಪ್ರವೇಶ ಇರಲಿದೆ. ಯೂಟ್ಯೂಬ್‌ನಲ್ಲೂ ಹರಿದಾಸ ಹಬ್ಬದ ನೇರಪ್ರಸಾರ ಇರಲಿದೆ’ ಎಂದರು.

ಕಾಮಗಾರಿ ಪೂರ್ಣಗೊಳಿಸಲು 45 ದಿನಗಳ ಗಡುವು

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಕಳೆದ ವರ್ಷ ಪ್ರವಾಹದಲ್ಲಿ ಕೊಚ್ಚಿಹೋಗಿದ್ದ ತಡೆಗೋಡೆ
- ₹9.1 ಕೋಟಿ ವೆಚ್ಚದಲ್ಲಿ ಕಾಮಗಾರಿ

ಬೆಂಗಳೂರು: ಕೆಂಗೇರಿಯ ಬಿಡಿಎ ಅಪಾರ್ಟ್‌ಮೆಂಟ್ ಸಮುಚ್ಚಯದ ಬಳಿ ಮೈಸೂರು ರಸ್ತೆಯ ಪಕ್ಕದಲ್ಲಿ ವೃಷಭಾವತಿ ರಾಜಕಾಲುವೆಯ ತಡೆಗೋಡೆ ನಿರ್ಮಾಣ ಕಾಮಗಾರಿಯನ್ನು 45 ದಿನಗಳ ಒಳಗೆ ಪೂರ್ಣಗೊಳಿಸಬೇಕು ಎಂದು ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ ಅವರು ಅಧಿಕಾರಿಗಳಿಗೆ ಸೂಚಿಸಿದರು.

ಕಳೆದ ವರ್ಷ ಪ್ರವಾಹದಲ್ಲಿ ಇಲ್ಲಿನ ತಡೆಗೋಡೆ ಕೊಚ್ಚಿ ಹೋಗಿತ್ತು. ಬಿಬಿಎಂಪಿಯು ತಡೆಗೋಡೆಯನ್ನು ಹೊಸತಾಗಿ ನಿರ್ಮಿಸುತ್ತಿದೆ. ನಿರ್ಮಾಣ ಕಾಮಗಾರಿಯನ್ನು ಮುಖ್ಯ ಆಯುಕ್ತರು ಶನಿವಾರ ಪರಿಶೀಲಿಸಿದರು.

‘ದುಬಾಸಿಪಾಳ್ಯ ಕಡೆಯಿಂದ ಬರುವ ಮಳೆ ನೀರು ಮೈಸೂರು ರಸ್ತೆಯ ಕೆಳಭಾಗದ ಸೇತುವೆಯ ಮೂಲಕ ವೃಷಭಾವತಿ ರಾಜಕಾಲುವೆಯನ್ನು ತಲುಪುತ್ತದೆ. ಇಲ್ಲಿ ರಸ್ತೆಗೆ ಅಡ್ಡಲಾಗಿ ಒಂದೇ ಪೈಪ್ ಕಲ್ವರ್ಟ್ ಇದ್ದ ಪರಿಣಾಮ ನೀರು ಸರಾಗವಾಗಿ ಹರಿದುಹೋಗುತ್ತಿರಲಿಲ್ಲ. ಈ ಸಮಸ್ಯೆ ನೀಗಿಸಲು ವೃಷಭಾವತಿ ಕಾಲುವೆಗೆ ತಡೆಗೋಡೆ ನಿರ್ಮಾಣ, ಸೇತುವೆಯ ಬಾಕ್ಸ್ ಕಲ್ವರ್ಟ್ ನಿರ್ಮಾಣ, ರಸ್ತೆ ಎತ್ತರಿಸುವಿಕೆ ಸೇರಿದಂತೆ ಸುಮಾರು ₹ 9.1 ಕೋಟಿ ವೆಚ್ಚದಲ್ಲಿ ಕಾಮಗಾರಿ ಕೈಗೆತ್ತಿಕೊಳ್ಳಲಾಗಿದೆ’ ಎಂದು ರಾಜಕಾಲುವೆ ವಿಭಾಗದ ಅಧಿಕಾರಿಯೊಬ್ಬರು ಮಾಹಿತಿ ನೀಡಿದರು.

‘ವೃಷಭಾವತಿ ರಾಜಕಾಲುವೆಗೆ 240 ಮೀಟರ್ ಉದ್ದದ ತಡೆಗೋಡೆ ನಿರ್ಮಿಸಲಾಗುತ್ತಿದೆ. ಮಳೆನೀರು ರಸ್ತೆಯಲ್ಲಿ ನಿಲ್ಲುವುದನ್ನು ತಡೆಯಲು ಕೆಂಗೇರಿ ಕಡೆ ಹೋಗುವ 200 ಮೀಟರ್ ರಸ್ತೆಯನ್ನು ಎತ್ತರಿಸುವ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗಿದೆ. ದುಬಾಸಿಪಾಳ್ಯದಿಂದ ಹರಿದುಬರುವ ನೀರು ಸರಾಗವಾಗಿ ವೃಷಭಾವತಿ ಕಾಲುವೆಯನ್ನು ಸೇರಲು 6 ಮೀಟರ್ ಅಗಲದ ಸೇತುವೆಯ ಬಾಕ್ಸ್ ಕಲ್ವರ್ಟ್ ನಿರ್ಮಿಸಲಾಗುತ್ತಿದ್ದು, ಇದರ ಕಾಮಗಾರಿಯು ಅರ್ಧದಷ್ಟು ಪೂರ್ಣಗೊಂಡಿದೆ. ಹಾಗಾಗಿ ವಾಹನಗಳ ಸಂಚಾರಕ್ಕೆ ಕೆಂಗೇರಿ ಕಡೆ ಹೋಗುವ ರಸ್ತೆಯಲ್ಲಿ ಅವಕಾಶ ಕಲ್ಪಿಸಿ, ಇನ್ನೊಂದು ಭಾಗದಲ್ಲಿ ಸೇತುವೆ ನಿರ್ಮಾಣ ಕಾರ್ಯ ಆರಂಭಿಸಲಿದ್ದೇವೆ’ ಎಂದು ಅವರು ವಿವರಿಸಿದರು.

‘ನಗರದೊಳಗೆ ಸಂಪರ್ಕ ಕಲ್ಪಿಸುವ ರಸ್ತೆಯಲ್ಲಿ ಕಾಮಗಾರಿ ಕೈಗೊಳ್ಳಲು ಸಂಚಾರ ಪೊಲೀಸರಿಂದ ಅನುಮತಿ ಪಡೆಯಲಾಗಿದೆ. ವಾಹನಗಳ ಸಂಚಾರಕ್ಕೆ ಪರ್ಯಾಯ ಮಾರ್ಗವನ್ನು ಸೂಚಿಸಿ ಮುಂದಿನ ವಾರದಿಂದ ಕಾಮಗಾರಿ ಪ್ರಾರಂಭಿಸಲಾಗುವುದು’ ಎಂದೂ ಅವರು ಮಾಹಿತಿ ನೀಡಿದರು.

ರಾಜಕಾಲುವೆ ವಿಭಾಗದ ಮುಖ್ಯ ಎಂಜಿನಿಯರ್ ಸುಗುಣಾ, ಕಾರ್ಯಪಾಲಕ ಎಂಜಿನಿಯರ್ ಸತೀಶ್ ಹಾಗೂ ಇತರ ಅಧಿಕಾರಿಗಳು ಇದ್ದರು.

ನಗರದಲ್ಲಿ ಇಂದು

ಆರೋಗ್ಯ ತಪಾಸಣೆ ಶಿಬಿರ: ಉದ್ಘಾಟನೆ-ನಿಡಸಾಲೆ ಪುಟ್ಟಸ್ವಾಮಯ್ಯ, ಅತಿಥಿಗಳು- ಡಾ.ಶ್ರೀಕಾಂತ್ ಬಸೂರ್, ಹುಲಿಯೂರುದುರ್ಗ ಲಕ್ಷ್ಮೀನಾರಾಯಣ, ಇಳಾ ವಿಟ್ಲ, ನಂದೀಶ್, ಪರಮೇಶ್ವರ್, ಶಿವರಾಜ್ ಗೌಡ, ಆಯೋಜನೆ ಮತ್ತು ಸ್ಥಳ-ಶಾಂತ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆ, ಬಿಇಎಲ್ ಬಡಾವಣೆ, ಮಾಗಡಿ ಮುಖ್ಯರಸ್ತೆ, ಬೆಳಿಗ್ಗೆ 9ರಿಂದ ಸಂಜೆ 5

ಸುವರ್ಣ ಮಹೋತ್ಸವ ಸಂಗೀತೋತ್ಸವ: ಗಾಯನ-ನಾಗವಲ್ಲಿ ನಾಗರಾಜ್, ಆಯೋಜನೆ-ಶ್ರೀ ತ್ಯಾಗರಾಜ ಗಾನ ಸಭಾ ಟ್ರಸ್ಟ್, ಸ್ಥಳ-ಆನೂರು ಸಭಾಂಗಣ, ಮಾರುತಿ ಬಡಾವಣೆ, ವಸಂತಪುರ, ಬೆಳಿಗ್ಗೆ 10


ರಾಜ್‌ಕುಮಾರ್ ನೆನಪಿನೋತ್ಸವ: ಅಧ್ಯಕ್ಷತೆ-ಕಂನಾಡಿಗಾ ನಾರಾಯಣ, ಅತಿಥಿಗಳು-ವೈ.ಬಿ.ಎಚ್.ಜಯದೇವ್, ಮಮತಾ ವಾರನಹಳ್ಳಿ, ಆಯೋಜನೆ-ಕನ್ನಡ ಜಾನಪದ ಪರಿಷತ್ತು, ಸ್ಥಳ-ಕೃಷ್ಣ ಕಲಾ ಸಂಗಮ, ಆಚಾರ್ಯ ಕಾಲೇಜು ರಸ್ತೆ, ತಮ್ಮೇನಹಳ್ಳಿ, ಬೆಳಿಗ್ಗೆ 10

ಆರೋಹಣ ಸಂಸ್ಥೆಯ ವಾರ್ಷಿಕೋತ್ಸವ: ಮಂಜುಳಾ ಗುರುರಾಜ್ ಅವರಿಗೆ ಕಲಾರೂಪ ಪ್ರಶಸ್ತಿ ಪ್ರದಾನ; ಉದ್ಘಾಟನೆ-ಶಾಸಕ ರವಿಸುಬ್ರಹ್ಮಣ್ಯ, ಅತಿಥಿಗಳು-ಕಟ್ಟೆ ಸತ್ಯ, ಅಧ್ಯಕ್ಷತೆ-ರೂಪಾ ನಾಗೇಂದ್ರ, ಕಲಾರೋಹಣ ಅನಾವರಣ-ಮೇದಿನಿ ಉದಯ್ ಗರುಡಾಚಾರ್, ಸ್ಥಳ-ಸಿ.ಅಶ್ವಥ್ ಕಲಾ ಭವನ, ಬಸವನಗುಡಿ, ಬೆಳಿಗ್ಗೆ 10

ಪ್ರದರ್ಶನ ಕಲಾ ವಿಭಾಗದ ಸುವರ್ಣ ಮಹೋತ್ಸವ: ಉದ್ಘಾಟನೆ-ಕೆ.ಆರ್. ವೇಣುಗೋಪಾಲ್, ಎಂ.ಆರ್. ವಿ.ಪ್ರಸಾದ್, ಹಂಸಿನಿ ನಾಗೇಂದ್ರ, ಆಯೋಜನೆ-ಬೆಂಗಳೂರು ವಿಶ್ವವಿದ್ಯಾಲಯದ ಪ್ರದರ್ಶನ ಕಲಾ ವಿಭಾಗ, ಸ್ಥಳ-ಬೆಂಗಳೂರು ಗಾಯನ ಸಮಾಜ, ಬೆಳಿಗ್ಗೆ 10

ರಾಮಸಂಭ್ರಮ: ನ.ರಾಮನಾಥ್ ಅವರ ಜನ್ಮದಿನ, ಉದ್ಘಾಟನೆ-ಅ.ರಾ.ಮಿತ್ರ, ಸಿ.ಸೋಮಶೇಖರ್, ರು.ಬಸಪ್ಪ, ಜೋಗಿ, ಬಾಬು ಹಿರಣ್ಣಯ್ಯ, ಆಯೋಜನೆ-ವಿಶ್ವಸೇವಾ ಕೇಂದ್ರ, ಸ್ಥಳ-ನ್ಯಾಷನಲ್ ಕಾಲೇಜು, ಬಸವನಗುಡಿ, ಬೆಳಿಗ್ಗೆ 10

ಭರತನಾಟ್ಯ ರಂಗಪ್ರವೇಶ: ಎಚ್.ಆರ್.ಕವಿತಾ, ಅತಿಥಿಗಳು-ಆಚಾರ್ಯ ಅಶೋಕ್ ಕುಮಾರ್, ಪದ್ಮಿನಿ ಅಚ್ಚಿ, ಆಯೋಜನೆ-ಸಂಗೀತ ನೃತ್ಯ ಭಾರತಿ ಅಕಾಡೆಮಿ, ಸ್ಥಳ-ಸೇವಾ ಸದನ ಸಭಾಂಗಣ, ಮಲ್ಲೇಶ್ವರ, ಬೆಳಿಗ್ಗೆ 10



ಕವಿತಾ

ಬಿ.ವಿ.ಮಹೀದಾಸ ಅವರ ‘ದೇವರು ಹಾಡಿದ ಹಾಡು’, ‘ಶ್ರುತಿ ಶೃಂಗಾರ’, ‘ರೂಪಕಗಳ ಸುತ್ತ ಮತ್ತು ಇತರ ಪ್ರಬಂಧಗಳು’, ‘ಶಾಲಾ ಮಕ್ಕಳಲ್ಲಿ ಬೆಳವಣಿಗೆ ಮತ್ತು ಕಲಿಕೆ’ ಪುಸ್ತಕ ಬಿಡುಗಡೆ: ಅಧ್ಯಕ್ಷತೆ-ನಾ.ಸೋಮಶೇಖರ್, ಅತಿಥಿಗಳು-ಅಶೋಕ್ ಕಾಮತ್, ಸತ್ಯೇಶ್ ಬೆಳ್ಳೂರು, ಸ್ಥಳ-ಕಟ್ಟೆ ಭವನ, ಎನ್.ಆರ್.ಕಾಲೊನಿ, ಬೆಳಿಗ್ಗೆ 10

ಶಿರಡಿ ಸಾಯಿಬಾಬಾ ಪ್ರಾರ್ಥನಾ ಮಂದಿರ ಮತ್ತು ಸಭಾಂಗಣದ ಉದ್ಘಾಟನೆ: ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಅರುಣ್ ಸಿಂಗ್, ಆರ್‌ಎಸ್‌ಎಸ್ ಮುಖಂಡ ಇಂದ್ರೇಶ್ ಕುಮಾರ್, ಅತಿಥಿಗಳು-ಕೇಂದ್ರ ಸಚಿವ ಎ.ನಾರಾಯಣಸ್ವಾಮಿ, ಸಂಸದ ಡಿ.ವಿ. ಸದಾನಂದ ಗೌಡ, ಸಚಿವರಾದ ಸಿ.ಎನ್. ಅಶ್ವತ್ಥನಾರಾಯಣ, ಆರಗ ಜ್ಞಾನೇಂದ್ರ, ಹಾಲಪ್ಪ ಆಚಾರ್, ಮುನಿರತ್ನ, ಎಸ್.ಟಿ.ಸೋಮಶೇಖರ್, ಸಂಸದ ತೇಜಸ್ವಿ ಸೂರ್ಯ, ತಾರಾ ಅನೂರಾಧ, ಪ್ರಮೀಳಾ ನಾಯ್ಡು, ಆಯೋಜನೆ ಮತ್ತು ಸ್ಥಳ-ಶತಶೃಂಗ ವಿದ್ಯಾಸಂಸ್ಥೆ, ಮೇಟಿಪಾಳ್ಯ ಗ್ರಾಮ, ಸೊಂಡೆಕೊಪ್ಪ ರಸ್ತೆ, ಬೆಂಗಳೂರು ದಕ್ಷಿಣ, ಬೆಳಿಗ್ಗೆ 10

ಶಿವಕುಮಾರ ಸ್ವಾಮೀಜಿ ಜನ್ಮದಿನ ಮತ್ತು ಅಕ್ಕಮಹಾದೇವಿ ಜಯಂತಿ: ಉಪನ್ಯಾಸ-ಕೆ.ವಿ.ನಾಗರಾಜಮೂರ್ತಿ, ಅಧ್ಯಕ್ಷತೆ-ಎಚ್.ಎಸ್.ರಾಜಶೇಖರ್, ಆಯೋಜನೆ-ನಾಗರಬಾವಿ ಬಸವ ಬಳಗ, ಸ್ಥಳ-ಕಲ್ಯಾಣ ನಗರ, ಬಿಡಿಎ ಬಡಾವಣೆ, ಬೆಳಿಗ್ಗೆ 11ರಿಂದ

ಶೂನ್ಯ ನೆರಳು ದಿನ-ನೆರಳು ಬೀಳುವ ಬಗೆ ತಿಳಿಯೋಣ: ಸ್ಥಳ-ಮಾರ್ಥಾಸ್ ಆಸ್ಪತ್ರೆ, ಉತ್ತರಹಳ್ಳಿ, ಬೆಳಿಗ್ಗೆ 11.30


ಶೂನ್ಯ ನೆರಳಿನ ದಿನ ಮತ್ತು ಸೂರ್ಯನ ಕುರಿತು ಭಿತ್ತಿಚಿತ್ರ ಪ್ರದರ್ಶನ: ಆಯೋಜನೆ-ಬೆಂಗಳೂರು ಅಸೋಸಿಯೇಷನ್ ಫಾರ್ ಸೈನ್ಸ್ ಎಜುಕೇಷನ್, ಸ್ಥಳ-ಜವಾಹರ್‌ಲಾಲ್ ನೆಹರು ತಾರಾಲಯ, ಮಧ್ಯಾಹ್ನ 12ರಿಂದ

ನ್ಯಾಯಾಂಗ ಅಧಿಕಾರಿಗಳ ದ್ವೈವಾರ್ಷಿಕ ಸಮ್ಮೇಳನದ ಸಮಾರೋಪ: ಅತಿಥಿಗಳು-ನ್ಯಾಯಮೂರ್ತಿಗಳಾದ ಎಸ್.ಅಬ್ದುಲ್ ನಜೀರ್, ದಿನೇಶ್ ಮಾಹೇಶ್ವರಿ, ಅಭಯ್ ಎಸ್.ಓಕಾ, ಋತು ರಾಜ್ ಅವಸ್ಥಿ, ರವಿ ಮಳಿಮಠ್, ಸಚಿವರಾದ ಮಾಧುಸ್ವಾಮಿ, ಸಿ.ಸಿ. ಪಾಟೀಲ, ಆಯೋಜನೆ-ರಾಜ್ಯ ನ್ಯಾಯಾಂಗ ಅಧಿಕಾರಿಗಳ ಸಂಘ, ಸ್ಥಳ-ಬಾಬು ರಾಜೇಂದ್ರ ಪ್ರಸಾದ್ ಸಮ್ಮೇಳನ ಸಭಾಂಗಣ, ಜಿಕೆವಿಕೆ, ಮಧ್ಯಾಹ್ನ 2.30

84ನೇ ಶ್ರೀರಾಮನವಮಿ ಉತ್ಸವ ಮತ್ತು ಅಂತರರಾಷ್ಟ್ರೀಯ ಸಂಗೀತೋತ್ಸವ: ಸಂಗೀತ ಕಾರ್ಯಕ್ರಮ-ಯು.ರಾಜೇಶ್, ಎಂಬಾರ್ ಕಣ್ಣನ್, ಬೆಂಗಳೂರು ಪ್ರವೀಣ್, ಬಿ.ರಾಜಶೇಖರ್, ಪ್ರವೀಣ್ ನಾರಾಯಣ್, ಆಯೋಜನೆ-ಶ್ರೀರಾಮಸೇವಾ ಮಂಡಳಿಯ ರಾಮನವಮಿ ಉತ್ಸವ ಟ್ರಸ್ಟ್, ಸ್ಥಳ-ಚಾಮರಾಜಪೇಟೆಯ ಕೋಟೆ ಪ್ರೌಢಶಾಲೆ ಮೈದಾನ, ಸಂಜೆ 4.15ರಿಂದ

ದೇಸಿ ಸಾಂಸ್ಕೃತಿಕ ಉತ್ಸವ-ಜಾನಪದ ಜಾತ್ರೆ: ಉದ್ಘಾಟನೆ-ಎಸ್.ಟಿ.ಸೋಮಶೇಖರ್, ಚಾಲನೆ-ವಿ.ಸುನಿಲ್ ಕುಮಾರ್, ಅಧ್ಯಕ್ಷತೆ-ಆರ್. ಮಂಜುನಾಥ್, ಆಯೋಜನೆ-ತಾಯಿಬೇರು ಸಾಮಾಜಿಕ ಮತ್ತು ಸಾಂಸ್ಕೃತಿಕ ಯುವ ವೇದಿಕೆ ಸುಂಕದಕಟ್ಟೆ, ಸ್ಥಳ-ನ್ಯೂ ಬಾಲ್ಡ್‌ವಿನ್ ಶಾಲೆಯ ಮೈದಾನ, ನಾಗರಹೊಳೆನಗರ, ಸಂಜೆ 5

‘ಸ್ವರಾನುಭೂತಿ’ ಸಂಗೀತ ಕಾರ್ಯಕ್ರಮ: ರಾಜೇಶ್ ಕೃಷ್ಣನ್, ಮಾನಸ ಹೊಳ್ಳ, ನದಿರಾ ಬಾನು, ಆಯೋಜನೆ-ಸ್ವಾಮಿ ವಿವೇಕಾನಂದ ಯೂತ್ ಮೂವ್‌ಮೆಂಟ್, ಸ್ಥಳ-ಸೇಂಟ್ ಜಾನ್ಸ್ ಸಭಾಂಗಣ, ಕೋರಮಂಗಲ, ಸಂಜೆ 5.30



ರಾಜೇಶ್ ಕೃಷ್ಣನ್

ಕರ್ನಾಟಕ ಸಂಗೀತ ಕಾರ್ಯಕ್ರಮ: ಗಾಯನ-ಸಹನಾ ರಾಮಚಂದ್ರ, ಆಯೋಜನೆ-ವಿಜಯನಗರ ಸಂಗೀತ ಸಭಾ ಟ್ರಸ್ಟ್, ಸ್ಥಳ-ವಿದ್ಯಾಗಣಪತಿ ಮತ್ತು ಶಿರಡಿ ಸಾಯಿಬಾಬಾ ದೇವಸ್ಥಾನ ಟ್ರಸ್ಟ್, ಪೈಪ್‌ಲೈನ್ ರಸ್ತೆ, ವಿಜಯನಗರ, ಸಂಜೆ 5.45

ಡಾ.ರಾಜಕುಮಾರ್ ಜಯಂತಿ ಹಾಗೂ 2017ನೇ ಸಾಲಿನ ರಾಜ್ಯ ಚಲನಚಿತ್ರ ಪ್ರಶಸ್ತಿ ಪ್ರದಾನ: ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಅತಿಥಿಗಳು-ಕೇಂದ್ರ ಸಚಿವರಾದ ನಿರ್ಮಲಾ ಸೀತಾರಾಮನ್, ಎಂ.ರಾಜೀವ್ ಚಂದ್ರಶೇಖರ್, ವಿಧಾನಸಭೆಯ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಬಿ.ಕೆ. ಹರಿಪ್ರಸಾದ್, ಅಧ್ಯಕ್ಷತೆ-ಉದಯ್ ಬಿ.ಗರುಡಾಚಾರ್, ಆಯೋಜನೆ-ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಸ್ಥಳ-ರವೀಂದ್ರ ಕಲಾಕ್ಷೇತ್ರ, ಜೆ.ಸಿ.ರಸ್ತೆ, ಸಂಜೆ 6

‘ಅರಾಜಕತೆ ಸೃಷ್ಟಿಸಿ ಅಧಿಕಾರಕ್ಕೇರಲು ಕಾಂಗ್ರೆಸ್ ಯತ್ನ’

ಬೆಂಗಳೂರು: ರಾಜ್ಯದಲ್ಲಿ ಅರಾಜಕತೆ ಸೃಷ್ಟಿಸಿ ಅಧಿಕಾರಕ್ಕೆ ಬರಲು ಕಾಂಗ್ರೆಸ್ ಪಕ್ಷ ಯತ್ನಿಸುತ್ತಿದೆ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಆರೋಪಿಸಿದರು.

ನಗರದಲ್ಲಿ ಶನಿವಾರ ಆರಂಭವಾದ ಬಿಜೆಪಿ ಬೆಂಗಳೂರು ದಕ್ಷಿಣ, ಬೆಂಗಳೂರು ಉತ್ತರ ಮತ್ತು ಬೆಂಗಳೂರು ಕೇಂದ್ರ ಜಿಲ್ಲಾ ಘಟಕಗಳ ಪ್ರಮುಖರ ಸಭೆಗೂ ಮೊದಲು ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿದರು.

ಅಧಿಕಾರದಲ್ಲಿ ಇಲ್ಲದ ಸಂದರ್ಭದಲ್ಲಿ ಸಮಾಜಘಾತುಕ ಶಕ್ತಿಗಳ ಜತೆ ಕೈಜೋಡಿಸಿ ಗಲಭೆ ಸೃಷ್ಟಿಸುವುದು ಕಾಂಗ್ರೆಸ್ ಹವ್ಯಾಸ. ಈಗಲೂ ರಾಜ್ಯದಲ್ಲಿ ಅದೇ ಪ್ರಯತ್ನ ಮಾಡುತ್ತಿದೆ. ವಿರೋಧ ಪಕ್ಷವಾಗಿ ವಿಫಲವಾಗಿರುವ ಕಾಂಗ್ರೆಸ್, ಗಲಭೆ ಮಾಡಿಸಿ, ಬೆಂಕಿ ಹಚ್ಚಿ ಅಧಿಕಾರ ಪಡೆಯಬಹುದು ಎಂಬ ಕನಸು ಕಾಣುತ್ತಿದೆ ಎಂದರು.

ಡಿ.ಜೆ. ಹಳ್ಳಿ ಗಲಭೆ ಹಿಂದೆ ಕಾಂಗ್ರೆಸ್ ಇತ್ತು., ಶಿವಮೊಗ್ಗದಲ್ಲಿ ಹರ್ಷ ಕೊಲೆ ಪ್ರಕರಣದ ಸಂದರ್ಭದಲ್ಲೂ ಗಲಭೆಗೆ ಪ್ರಯತ್ನಿಸಿತ್ತು. ಹುಬ್ಬಳ್ಳಿಯಲ್ಲಿ ನಡೆದ ಗಲಭೆ ಯತ್ನದ ಹಿಂದೆಯೂ ಕಾಂಗ್ರೆಸ್ ಇರುವುದು ಬಯಲಾಗಿದೆ ಎಂದು ಹೇಳಿದರು.

ಹಿಂದೆ ಭಯೋತ್ಪಾದನೆಗೆ ಬೆಂಬಲ ನೀಡಿ ಕಾಂಗ್ರೆಸ್ ಅಧಿಕಾರಕ್ಕೆ ಬಂದ ಉದಾಹರಣೆ ಇದೆ. ಭಿಂದ್ರನ್‌ವಾಲೆಯನ್ನು ಸೃಷ್ಟಿಸಿದ್ದೇ ಆ ಪಕ್ಷ. ದಾವೂದ್ ಇಬ್ರಾಹಿಂಗೂ ಬೆಂಬಲ ನೀಡಿತ್ತು. ಈಗಲೂ ಕಾಂಗ್ರೆಸ್ ನಾಯಕರ ಮನಸ್ಥಿತಿ ಬದಲಾಗಿಲ್ಲ ಎಂದು ವಾಗ್ದಾಳಿ ನಡೆಸಿದರು.

ಶಿವರಾಮ ಕಾರಂತ ಬಡಾವಣೆ: 870 ಕಟ್ಟಡಗಳ ಸಕ್ರಮಕ್ಕೆ ಸುಪ್ರೀಂ ನಿರ್ದೇಶನ

ನವದೆಹಲಿ: ನ್ಯಾ. ಎ.ವಿ. ಚಂದ್ರಶೇಖರ್ ಸಮಿತಿಯ 13ನೇ ವರದಿಯ ಶಿಫಾರಸಿನಂತೆ ಶಿವರಾಮ ಕಾರಂತ ಬಡಾವಣೆಯ 870 ಕಟ್ಟಡಗಳನ್ನು ಸಕ್ರಮಗೊಳಿಸುವಂತೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ(ಬಿಡಿಎ) ಸುಪ್ರೀಂ ಕೋರ್ಟ್ ನಿರ್ದೇಶನ ನೀಡಿದೆ.

ಈ ಬಗ್ಗೆ ಗುರುವಾರ ವಿಚಾರಣೆ ನಡೆಸಿದ ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಗಳಾದ ಎಸ್. ಅಬ್ದುಲ್ ನಜೀರ್ ಹಾಗೂ ಸಂಜೀವ್ ಖನ್ನಾ ಅವರಿದ್ದ ಪೀಠವು, 4 ವಾರಗಳ ಒಳಗಾಗಿ ಸಮಿತಿಯ ಮೇಲ್ವಿಚಾರಣೆಯಡಿ ಪಾರದರ್ಶಕವಾಗಿ ಅರ್ಜಿದಾರರಿಗೆ ಸಕ್ರಮದ ಪ್ರಮಾಣ ಪತ್ರಗಳನ್ನು ನೀಡಬೇಕು ಎಂದು ಬಿಡಿಎ ಆಯುಕ್ತರಿಗೆ ಸೂಚಿಸಿದೆ. ಅಲ್ಲದೆ, ಸಮಿತಿಯೊಂದಿಗೆ ಚರ್ಚೆ ನಡೆಸಿದ ಬಳಿಕ ನಿರ್ಮಾಣದ ಸ್ವರೂಪಕ್ಕೆ ಸಂಬಂಧಿಸಿ 2 ವಾರಗಳಲ್ಲಿ ಅಫಿಡವಿಟ್ ಸಲ್ಲಿಸುವಂತೆ ರಾಜ್ಯ ಸರ್ಕಾರದ ವಸತಿ ಇಲಾಖೆಗೂ ಸೂಚಿಸಲಾಗಿದೆ.

ಸತ್ಯನಾರಾಯಣ, ಶಾಂತಾಗೆ ಪ್ರಶಸ್ತಿ



ಶಾಂತಾ



ಸತ್ಯನಾರಾಯಣ

ಬೆಂಗಳೂರು: ಬಿ.ಎಂ.ಶ್ರೀ ಪ್ರತಿಷ್ಠಾನದ ವತಿಯಿಂದ ನೀಡಲಾಗುವ ಈ ಸಾಲಿನ 'ಡಾ. ವಿಜಯಾ ಸುಬ್ಬರಾಜ್ ಗಣ್ಯ ಲೇಖಕಿ ಪ್ರಶಸ್ತಿ'ಗೆ ಲೇಖಕಿ ಶಾಂತಾ ಇಮ್ರಾಪುರ ಹಾಗೂ 'ಸೂ.ವೆಂ.ಆರಗ ವಿಮರ್ಶಾ ಪ್ರಶಸ್ತಿ'ಗೆ ಕೆ.ಸತ್ಯನಾರಾಯಣ ಅವರ 'ಅವರವರ ಭವಕ್ಕೆ ಓದುಗರ ಭಕುತಿಗೆ' ಪುಸ್ತಕವನ್ನು ಆಯ್ಕೆ ಮಾಡಲಾಗಿದೆ.

'ಪ್ರಶಸ್ತಿಗಳು ತಲಾ ₹10 ಸಾವಿರ ನಗದು, ಸ್ಮರಣಿಕೆ ಒಳಗೊಂಡಿವೆ. ಮೇ ಮೊದಲ ವಾರದಲ್ಲಿ ಪ್ರಶಸ್ತಿ ಪ್ರದಾನ ನಡೆಯಲಿದೆ' ಎಂದು ಪ್ರತಿಷ್ಠಾನದ ಅಧ್ಯಕ್ಷ ಬೈರಮಂಗಲ ರಾಮೇಗೌಡ ತಿಳಿಸಿದ್ದಾರೆ.

ಗಲಭೆಕೋರರ ಸೂರು ನಾಶ ಕುರಿತು ಸಿ.ಎಂ ಜತೆ ಚರ್ಚೆ: ಕಟೀಲ್, ಅಶೋಕ

'ಬುಲ್ಡೋಜರ್' ಕಾನೂನಿಗೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗಲಭೆಕೋರರ ಆಸ್ತಿಗಳನ್ನು 'ಬುಲ್ಡೋಜರ್'ಗಳ ಮೂಲಕ ಧ್ವಂಸಗೊಳಿಸುವ ಕ್ರಮವನ್ನು ರಾಜ್ಯದಲ್ಲೂ ಜಾರಿಗೊಳಿಸಬೇಕು ಎಂಬ ಆಗ್ರಹ ರಾಜ್ಯದ ಬಿಜೆಪಿ ನಾಯಕರಿಂದಲೇ ವ್ಯಕ್ತವಾಗಿದೆ.

ಇಂತಹ ಕಾನೂನು ಜಾರಿಗೊಳಿಸುವಂತೆ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ರಾಜ್ಯ ಸರ್ಕಾರವನ್ನು ಆಗ್ರಹಿಸಿದ್ದು, ಕಂದಾಯ ಸಚಿವ ಆರ್. ಅಶೋಕ ಅವರೂ ಸಹಮತ ವ್ಯಕ್ತಪಡಿಸಿದರು. ಬಿಜೆಪಿ ಆಡಳಿತದಲ್ಲಿರುವ ಉತ್ತರಪ್ರದೇಶ, ಗುಜರಾತ್ ಮತ್ತು ಮಧ್ಯಪ್ರದೇಶ ರಾಜ್ಯಗಳಲ್ಲಿ ಕೈಗೊಳ್ಳುತ್ತಿರುವ ಕಾರ್ಯಾಚರಣೆ ರಾಜ್ಯದಲ್ಲೂ ಆರಂಭವಾಗಬೇಕು ಎಂದು ಉಭಯ ನಾಯಕರು ಹೇಳಿದರು.

ಸುದ್ದಿಗಾರರ ಜತೆ ಶನಿವಾರ ಮಾತನಾಡಿದ ನಳಿನ್, 'ಈಗ ನಾವು ಕಾಣುತ್ತಿರುವ ಗಲಭೆಗಳ ಹಿಂದೆ ರಾಜಕೀಯ ಕೈವಾಡವಿದೆ. ಚುನಾವಣಾ ವರ್ಷವಾಗಿರುವುದರಿಂದ ಇನ್ನೂ ಅನೇಕ ಘಟನೆಗಳು ನಡೆಯಬಹುದು. ಸರ್ಕಾರಿ ಕಚೇರಿಗಳಿಗೆ ಬೆಂಕಿ ಹಚ್ಚುವುದು, ಪೊಲೀಸರ ನೈತಿಕ ಸ್ಥೈರ್ಯ ಕುಸಿಯುವಂತೆ ಮಾಡುವುದು ಭಯೋತ್ಪಾದನೆಗೆ ಸಮನಾದುದು. ಈ ರೀತಿಯ ಗಲಭೆಕೋರರ ವಿರುದ್ಧ ಕಠಿಣ ಕ್ರಮ ಅಗತ್ಯ' ಎಂದರು.

'ಗಲಭೆಕೋರರ ಆಸ್ತಿಗಳನ್ನು ಮುಟ್ಟುಗೋಲು ಹಾಕಿಕೊಂಡು, ನೆಲಸಮಗೊಳಿಸುವುದಕ್ಕೆ ಅವಕಾಶ ಕಲ್ಪಿಸುವಂತಹ ಕಠಿಣ ಕಾನೂನು ಬೇಕಿದೆ. ಒಂದು ಪಕ್ಷವಾಗಿ ಇದನ್ನೇ ನಾವು ಸರ್ಕಾರಕ್ಕೆ ಹೇಳುತ್ತೇವೆ' ಎಂದು ತಿಳಿಸಿದರು.

'ಗಲಭೆಕೋರರಿಗೆ ಸ್ವಂತ ಸೂರು ಇಲ್ಲದಂತೆ ಮಾಡಬೇಕು. ಉತ್ತರ ಪ್ರದೇಶದ ಮಾದರಿಯಲ್ಲಿ ನಮ್ಮ ರಾಜ್ಯದಲ್ಲೂ ಬಿಗಿಯಾದ ಕ್ರಮ ಕೈಗೊಳ್ಳುವ ಅಗತ್ಯವಿದೆ' ಎಂದು ಅಶೋಕ ಹೇಳಿದರು.

'ಮುಸ್ಲಿಮರಲ್ಲೂ ಒಳ್ಳೆಯವರಿದ್ದಾರೆ. ಅವರಲ್ಲಿ ಕೆಟ್ಟವರೂ ಇದ್ದಾರೆ. ಐಎಸ್ಐ ಉಗ್ರರ ಜತೆ ಸಂಪರ್ಕ ಇರಿಸಿಕೊಂಡವರು, ಪಾಕಿಸ್ತಾನಕ್ಕೆ ಜೈಕಾರ ಹಾಕುವವರೂ ಇದ್ದಾರೆ. ಹುಬ್ಬಳ್ಳಿ ಗಲಭೆಗೂ ವಿದೇಶಿ ನಂಟು ಇರುವಂತೆ ಕಾಣುತ್ತಿದೆ. ಉತ್ತರ ಪ್ರದೇಶ, ಮಧ್ಯಪ್ರದೇಶ ರಾಜ್ಯಗಳ ಮಾದರಿಯಲ್ಲಿ ಗಲಭೆ ಸೃಷ್ಟಿಸುವವರ ಅಕ್ರಮ ಆಸ್ತಿಗಳನ್ನು ಪತ್ತೆ ಮಾಡಿ, ಧ್ವಂಸಗೊಳಿಸುವ ಕುರಿತು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರೊಂದಿಗೆ ಚರ್ಚಿಸುತ್ತೇನೆ' ಎಂದರು.

ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ. ರವಿ, ಇಂಧನ ಸಚಿವ ವಿ. ಸುನಿಲ್‌ಕುಮಾರ್ ಹಾಗೂ ಮೈಸೂರು–ಕೊಡಗು ಸಂಸದ ಪ್ರತಾಪಸಿಂಹ ಕೂಡ ರಾಜ್ಯದಲ್ಲೂ 'ಬುಲ್ಡೋಜರ್' ಕಾನೂನು ಜಾರಿಗೆ ತರಬೇಕಾಗುತ್ತದೆ ಎಂದು ಎಚ್ಚರಿಸಿದ್ದರು.

'ಮನುಕುಲದ ವಿರೋಧಿಗಳು ಹೆಚ್ಚಾಗಿದ್ದಾರೆ'

'ಮನುಕುಲದ ವಿರೋಧಿಗಳು ಹೆಚ್ಚಾಗಿದ್ದಾರೆ. ಪ್ರಾಣಿಗಳನ್ನಲ್ಲ, ಮನುಷ್ಯರನ್ನೇ ಕಡಿದು ತಿನ್ನುವ ರಾಕ್ಷಸಿ ಭಾವನೆ ಇರುವ ಸಮುದಾಯ ನಮ್ಮ ಮಧ್ಯೆ ಇರುವಾಗ, ನಾವು ಸಾಧ್ಯವಾದಷ್ಟು ಎಚ್ಚರಿಕೆಯಿಂದ ಇರಬೇಕು' ಎಂದು ಗೃಹ ಸಚಿವ ಆರಗ ಜ್ಞಾನೇಂದ್ರ ಹೇಳಿದರು.

ಅನಂತಕುಮಾರ್ ಪ್ರತಿಷ್ಠಾನ ಮತ್ತು ಅದಮ್ಯ ಚೇತನದ ವತಿಯಿಂದ ಶನಿವಾರ ಆಯೋಜಿಸಿದ್ದ ದೇಶ ಮೊದಲು ಸಂವಾದದ 'ನಮ್ಮ ಕಾಶ್ಮೀರ- ನಮ್ಮ ಹೊಣೆ' ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. 'ಧಾರವಾಡದ ನುಗ್ಗಿಕೇರಿಯಲ್ಲಿ ಕಲ್ಲಂಗಡಿ ಹಾಳು ಮಾಡಿದ ವಿಚಾರ ರಾಜ್ಯದಾದ್ಯಂತ ಚರ್ಚೆಯಾಯಿತು. ಆದರೆ, ಹುಬ್ಬಳ್ಳಿ ಗಲಭೆಯನ್ನು ಸಕಾಲದಲ್ಲಿ ನಿಯಂತ್ರಿಸದೇ ಹೋಗಿದ್ದರೆ, ಇಡೀ ಊರು ಹೊತ್ತಿ ಉರಿಯುತ್ತಿತ್ತು. ಈ ಬಗ್ಗೆ ಹೆಚ್ಚು ಚರ್ಚೆ ಆಗಲೇ ಇಲ್ಲ. ಆ ಸಮುದಾಯದ ಎಲ್ಲರೂ ಕೆಟ್ಟವರು ಎಂದು ನಾನು ಹೇಳುವುದಿಲ್ಲ. ಕೆಲವು ಮತಾಂಧ ಶಕ್ತಿಗಳ ಕುಮ್ಮಕ್ಕು ಇದರ ಹಿಂದೆ ಇದೆ' ಎಂದರು.

ಸುದ್ದಿ 2 ನಿಮಿಷ

ಪ್ರಿಯಾಂಕ್ ಖರ್ಗೆ ಟ್ವೀಟ್ ಡಿಲೀಟ್!

ಬೆಂಗಳೂರು: ಕಾಂಗ್ರೆಸ್ ಶಾಸಕ ಪ್ರಿಯಾಂಕ್ ಖರ್ಗೆ ಅವರ ಅಧಿಕೃತ ಟ್ವಿಟರ್ ಖಾತೆಯ ಎಲ್ಲ ಟ್ವೀಟ್‌ಗಳು ಏಕಾಏಕಿ ಅಳಿಸಿ ಹೋಗಿವೆ!

ಈ ಬಗ್ಗೆ ಮಾಧ್ಯಮ ಹೇಳಿಕೆ ನೀಡಿರುವ ಅವರು, 'ನನ್ನ ಟ್ವಿಟರ್ ಖಾತೆಯು ಇದ್ದಕ್ಕಿದ್ದಂತೆ ನಿಷ್ಕ್ರಿಯವಾಗಿದೆ. ನಾನು ನನ್ನ ಖಾತೆಯನ್ನು ತೆರೆಯಲು ಸಾಧ್ಯವಾಗದ ರೀತಿಯಲ್ಲಿ ನಿಯಂತ್ರಣ ತಪ್ಪಿಸಲಾಗಿದೆ. ಇದು ಟ್ವಿಟರ್ ಸಂಸ್ಥೆಯವರಿಂದ ಆಗಿದೆಯೋ ಅಥವಾ ಕಿಡಿಗೇಡಿಗಳು ಹ್ಯಾಕ್ ಮಾಡಿದ್ದರೂ ಎಂದು ಇನ್ನೂ ನನಗೆ ತಿಳಿದಿಲ್ಲ' ಎಂದಿದ್ದಾರೆ.

'ಟ್ವಿಟರ್ ಸಂಸ್ಥೆಯಿಂದ ಈ ರೀತಿ ಆಗಿದ್ದರೆ ನನಗೆ ಸೂಚನೆ ನೀಡಲಾಗುತ್ತಿತ್ತು ಎಂದು ತಿಳಿದಿದ್ದೇನೆ. ಆದರೆ, ಇದುವರೆಗೂ ನನಗೆ ಯಾವುದೇ ರೀತಿಯ ಸೂಚನೆಗಳು ಬಂದಿರದ ಕಾರಣ ಹ್ಯಾಕ್ ಆಗಿರಬಹುದು. ನನ್ನ ಟ್ವಿಟರ್ ಖಾತೆ ನನ್ನ ನಿಯಂತ್ರಣಕ್ಕೆ ಸಿಗುವವರೆಗೂ ಅದರಲ್ಲಿ ಯಾವುದೇ ಬಗೆಯ ಅಸಂಬದ್ಧ, ಅಪ್ರಬುದ್ಧ ಪೋಸ್ಟ್‌ಗಳು ಕಂಡುಬಂದಲ್ಲಿ ಅದು ನನ್ನದಾಗಿರುವುದಿಲ್ಲ' ಎಂದು ಅವರು ತಿಳಿಸಿದ್ದಾರೆ.

'ಕಾಶ್ಮೀರ: ಕರ್ನಾಟಕ ಭವನ ಅಗತ್ಯ'



ಬೆಂಗಳೂರು: 'ದೆಹಲಿ, ತಿರುಪತಿಯಲ್ಲಿ ಕರ್ನಾಟಕ ಭವನ ನಿರ್ಮಿಸಿರುವಂತೆ ಕಾಶ್ಮೀರದಲ್ಲೂ ಕರ್ನಾಟಕ ಭವನ ನಿರ್ಮಿಸುವ ಅಗತ್ಯವಿದೆ' ಎಂದು ಗೃಹ ಸಚಿವ ಆರಗ ಜ್ಞಾನೇಂದ್ರ ಹೇಳಿದರು.

ಅನಂತಕುಮಾರ್ ಪ್ರತಿಷ್ಠಾನ ಮತ್ತು ಅದಮ್ಯ ಚೇತನದ ವತಿಯಿಂದ ಶನಿವಾರ ಆಯೋಜಿಸಿದ್ದ ದೇಶ ಮೊದಲು ಸಂವಾದದ 'ನಮ್ಮ ಕಾಶ್ಮೀರ-ನಮ್ಮ ಹೊಣೆ' ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಮತಾಂಧ ಶಕ್ತಿಗಳ ಉಪಟಳ ಇಂದು ಹೆಚ್ಚುತ್ತಿದೆ. ಇಂತಹ ಹೊತ್ತಿನಲ್ಲಿ ಮಠಗಳ ಪಾತ್ರ ಮಹತ್ವದ್ದಾಗಿದೆ. ಮಠಗಳು ಕೇವಲ ಆಸ್ತಿ ವೃದ್ಧಿಸಿಕೊಳ್ಳದೇ, ಧರ್ಮವನ್ನು ಗಟ್ಟಿಗೊಳಿಸುವ ಕೆಲಸದಲ್ಲಿ ತೊಡಗಿಸಿಕೊಳ್ಳಬೇಕು' ಎಂದು ಅವರು ಹೇಳಿದರು.ಅದಮ್ಯ ಚೇತನದ ಮುಖ್ಯಸ್ಥೆ ತೇಜಸ್ವಿನಿ ಅನಂತ ಕುಮಾರ್, 'ಕಾಶ್ಮೀರದ ಪ್ರವಾಸೋದ್ಯಮ ಅಭಿವೃದ್ಧಿ ಹಾಗೂ ಉದ್ಯೋಗ ಸೃಷ್ಟಿಗೆ ಒತ್ತು ನೀಡಿ ರಾಜ್ಯವನ್ನು ಅಭಿವೃದ್ದಿಗೊಳಿಸಬೇಕು'ಎಂದರು. ರಂಗಕರ್ಮಿ ಪ್ರಕಾಶ ಬೆಳವಾಡಿ,ಲೇಖಕಿ ಸಹನಾ ವಿಜಯ ಕುಮಾರ್ ಮಾತನಾಡಿದರು. ಪ್ರತಿಷ್ಠಾನದ ಅಧ್ಯಕ್ಷರಾದ ಪಿ.ವಿ. ಕೃಷ್ಣ ಭಟ್, ಕಾಶ್ಮೀರ ಹಿಂದೂ ಸಾಂಸ್ಕೃತಿಕ ಕಲ್ಯಾಣ ಟ್ರಸ್ಟ್ ಅಧ್ಯಕ್ಷ ಆರ್.ಕೆ ಮಟ್ಟು ಇದ್ದರು.



ಕ್ರೀಡಾಕೂಟಕ್ಕೆ ಮ್ಯಾಸ್ಕಟ್ ಮೆರುಗು

ಬೆಂಗಳೂರಿನಲ್ಲಿ ಭಾನುವಾರ ಉದ್ಘಾಟನೆಗೊಳ್ಳಲಿರುವ ಖೇಲೊ ಇಂಡಿಯಾ ವಿಶ್ವವಿದ್ಯಾಲಯಗಳ ಕ್ರೀಡಾಕೂಟದ ಮ್ಯಾಸ್ಕಟ್‌ಗಳಾದ 'ವೀರ' (ಆನೆ), 'ಜಯ' (ಹುಲಿ) ಮತ್ತು 'ವಿಜಯ' (ಜಿಂಕೆ) ಕಂಠೀರವ ಕ್ರೀಡಾಂಗಣದಲ್ಲಿ ಕ್ರೀಡಾಪಟುಗಳಿಗೆ ಶನಿವಾರ ಮುದ ನೀಡಿದವು –ಪ್ರಜಾವಾಣಿ ಚಿತ್ರ

'ಜಿಲ್ಲಾ ನ್ಯಾಯಾಧೀಶರೇ ಭದ್ರ ಬುನಾದಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪರಿಣಾಮಕಾರಿ ನ್ಯಾಯಾಂಗ ವ್ಯವಸ್ಥೆ ಹುಟ್ಟುವುದೇ ಜಿಲ್ಲಾ ಮಟ್ಟದ ನ್ಯಾಯಾಧೀಶರಿಂದ. ಹೀಗಾಗಿ ಜಿಲ್ಲಾ ನ್ಯಾಯಾಲಯಗಳು ಜಾಮೀನು ಅರ್ಜಿಗಳ ವಿಚಾರಣೆಯಲ್ಲಿ ವಿಳಂಬ ಮಾಡದೇ, ಧೈರ್ಯ ವಹಿಸಿ ತೀರ್ಮಾನ ಕೈಗೊಳ್ಳಬೇಕು' ಎಂದು ಸುಪ್ರೀಂ ಕೋರ್ಟ್ ನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ ಅವರು ಅಭಿಪ್ರಾಯಪಟ್ಟರು.

ಶನಿವಾರ ನಡೆದ ನ್ಯಾಯಾಂಗ ಅಧಿಕಾರಿಗಳ 20ನೇ ದ್ವೈವಾರ್ಷಿಕ ರಾಜ್ಯ ಸಮ್ಮೇಳನದ ಉದ್ಘಾಟಿಸಿ ಮಾತನಾಡಿದ ಅವರು, 'ಡಿಜಿಟಲೀಕರಣ ಮತ್ತು ತಂತ್ರಜ್ಞಾನ ವ್ಯಾಪಕವಾಗಿ ಬೆಳೆಯುತ್ತಿರುವ ಹಿನ್ನೆಲೆಯಲ್ಲಿ ಜಿಲ್ಲಾ ನ್ಯಾಯಾಲಯಗಳ ಮೇಲಿನ ಹೈಕೋರ್ಟ್ ನಂಬಿಕೆ ಹೆಚ್ಚಾಗುವಂತೆ ನೋಡಿಕೊಳ್ಳುವ ಹೊಣೆಗಾರಿಕೆ ಜಿಲ್ಲಾ ನ್ಯಾಯಾಧೀಶರ ಮೇಲೆ ಇದೆ' ಎಂದು ಹೇಳಿದರು.

'ಜಿಲ್ಲಾ ಪ್ರಧಾನ ನ್ಯಾಯಾಧೀಶರು ನ್ಯಾಯಾಂಗದ ಆಡಳಿತ ನಿರ್ವಹಣೆಗೂ ಗಮನ ಕೊಡಬೇಕಾಗುವುದರಿಂದ ಅವರೊಬ್ಬ ಐಎಎಸ್ ಅಧಿಕಾರಿಯ ರೀತಿ ಕೆಲಸ ಮಾಡುವ ಅಗತ್ಯ ಇದೆ. ನ್ಯಾಯಾಂಗದಲ್ಲಿ ಇ–ಕೋರ್ಟ್ ವ್ಯವಸ್ಥೆ ಕೋವಿಡ್ ಸಮಯದಲ್ಲಿ ಅತಿ ವೇಗವನ್ನು ಕಂಡಿದೆ. ಆನ್‌ಲೈನ್ ವಿಚಾರಣಾ ಪದ್ಧತಿಯಲ್ಲಿ ಕರ್ನಾಟಕ ಗಣನೀಯ ಯಶಸ್ಸು ಸಾಧಿಸಿದ್ದು ಪ್ರಕರಣಗಳ ವಿಲೇವಾರಿಯಲ್ಲಿ ಮುಂಚೂಣಿ ಸ್ಥಾನದಲ್ಲಿದೆ' ಎಂದು ಶ್ಲಾಘಿಸಿದರು.

ಕರ್ನಾಟಕದ ನಂಟು: ನಾಟಕಕಾರ ಆದ್ಯ ರಂಗಾಚಾರ್ಯರ (ಶ್ರೀರಂಗ) ನಿಕಟ ಸಂಬಂಧಿಯೂ ಆದ ಚಂದ್ರಚೂಡ ಅವರು ಕರ್ನಾಟಕದ ಜೊತೆಗಿನ ತಮ್ಮ ನಂಟನ್ನು ಮೆಲುಕು ಹಾಕಿದರು. ಲೇಖಕಿ ಶಶಿ ದೇಶಪಾಂಡೆ ನನ್ನ ಪ್ರಥಮ ಸೋದರ ಸಂಬಂಧಿ ಎಂದ ಅವರು, ಧಾರವಾಡ, ಮುಂಬೈ ನಡುವಿನ ತಮ್ಮ ಕುಟುಂಬದ ಒಡನಾಟಗಳನ್ನು ತೆರೆದಿಟ್ಟರು.

ಕಾರ್ಯಕ್ರಮದಲ್ಲಿ ಮಾತನಾಡಿದ ಮುಖ್ಯಮಂತ್ರಿ ಬೊಮ್ಮಾಯಿ, 'ದೇಶದ ಅಭಿವೃದ್ಧಿಗೆ ಭಾರತದ ನ್ಯಾಯಾಂಗ ವ್ಯವಸ್ಥೆ ಸಾಕ್ಷಿಯಾಗಿದೆ ಅಂತೆಯೇ, ನ್ಯಾಯಮೂರ್ತಿಗಳಾಗಿ ಕೆಲಸ ಮಾಡುವುದು ಸುಲಭದ ಕೆಲಸ ಅಲ್ಲ' ಎಂದರು.

ಸುಪ್ರಿಂ ಕೋರ್ಟ್ ನ್ಯಾಯಮೂರ್ತಿ ಬಿ.ವಿ.ನಾಗರತ್ನ ಮತ್ತು ನ್ಯಾಯಮೂರ್ತಿ ಅಜ್ಜಿಕುಟೀರ ಸೋಮಯ್ಯ ಬೋಪಣ್ಣ ಮಾತನಾಡಿದರು. ಕರ್ನಾಟಕ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ಋತುರಾಜ್ ಅವಸ್ಥಿ ಅಧ್ಯಕ್ಷತೆ ವಹಿಸಿದ್ದರು. ಕರ್ನಾಟಕ ರಾಜ್ಯ ನ್ಯಾಯಾಂಗ ಅಧಿಕಾರಿಗಳ ಸಂಘದ ಅಧ್ಯಕ್ಷ ಮಲ್ಲನಗೌಡ, ಪ್ರಧಾನ ಕಾರ್ಯದರ್ಶಿ ಡಿ.ಆರ್.ಜಯಪ್ರಕಾಶ್ ವೇದಿಕೆಯಲ್ಲಿದ್ದರು.

ಖೇಲೊ ಇಂಡಿಯಾ: ಬೆಂಗಳೂರು ದರ್ಶನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಖೇಲೊ ಇಂಡಿಯಾ ವಿಶ್ವವಿದ್ಯಾಲಯದ ಕ್ರೀಡಾಕೂಟದಲ್ಲಿ ಭಾಗವಹಿಸುವ ಕ್ರೀಡಾಪಟುಗಳಿಗಾಗಿ 'ವಿಶೇಷ ಬೆಂಗಳೂರು ದರ್ಶಿನಿ' ಸಾರಿಗೆ ಸೇವೆಯನ್ನು ಬಿಎಂಟಿಸಿ ಆರಂಭಿಸಿದೆ.

ಮೂರು ಪ್ಯಾಕೇಜ್‌ಗಳಲ್ಲಿ ಬೆಂಗಳೂರಿನ ದರ್ಶನ ಮಾಡಿಸಲು ಬಿಎಂಟಿಸಿ ಉದ್ದೇಶಿಸಿದೆ. ಕೆಂಪೇಗೌಡ ಬಸ್ ನಿಲ್ದಾಣದಿಂದ ಬೆಳಿಗ್ಗೆ 9 ಗಂಟೆಗೆ ಹೊರಡುವ ಬಸ್ ಇಸ್ಕಾನ್ ದೇವಸ್ಥಾನ, ವಿಧಾನಸೌಧ, ಗವಿಗಂಗಾಧರೇಶ್ವರ ದೇವಸ್ಥಾನ, ದೊಡ್ಡಗಣಪತಿ ದೇವಸ್ಥಾನ, ಲಾಲ್‌ಬಾಗ್, ನ್ಯಾಷನಲ್ ಗ್ಯಾಲರಿ ಆಫ್ ಮಾಡರ್ನ್ ಆರ್ಟ್, ಸರ್. ಎಂ.ವಿಶ್ವೇಶ್ವರಯ್ಯ ಮ್ಯೂಸಿಯಂ, ಕಬ್ಬನ್ ಉದ್ಯಾನ ವೀಕ್ಷಣೆ ಮಾಡಿಸಿ ಕೆಂಪೇಗೌಡ ಬಸ್ ನಿಲ್ದಾಣಕ್ಕೆ ಮರಳಲಿದೆ. ₹420 ಪ್ರಯಾಣ ದರವನ್ನು ನಿಗದಿ ಮಾಡಲಾಗಿದೆ.

ಕನಕಪುರ ರಸ್ತೆಯಲ್ಲಿರುವ ಆರ್ಟ್ ಆಫ್ ಲಿವಿಂಗ್‌ನಿಂದ ಬೆಳಿಗ್ಗೆ 8.40ಕ್ಕೆ ಹೊರಡುವ ಬಸ್ ಗವಿಗಂಗಾಧರೇಶ್ವರ ದೇವಸ್ಥಾನ, ದೊಡ್ಡಗಣಪತಿ ದೇವಸ್ಥಾನ, ಇಸ್ಕಾನ್ ದೇವಸ್ಥಾನ, ವಿಧಾನಸೌಧ, ಲಾಲ್‌ಬಾಗ್, ಸರ್.ಎಂ. ವಿಶ್ವೇಶ್ವರಯ್ಯ ಮ್ಯೂಸಿಯಂ ವೀಕ್ಷಣೆ ಮಾಡಿಸಿ ಆರ್ಟ್ ಆಫ್ ಲಿವಿಂಗ್‌ಗೆ ಮರಳಲಿದೆ. ₹500 ಪ್ರಯಾಣ ದರವನ್ನು ನಿಗದಿ ಮಾಡಲಾಗಿದೆ.

ಕನಕಪುರ ರಸ್ತೆಯ ಜೈನ್ ಕಾಲೇಜ್ ಆವರಣದಿಂದ ಬೆಳಿಗ್ಗೆ 8.30ಕ್ಕೆ ಹೊರಡುವ ಬಸ್, ಗವಿಗಂಗಾಧರೇಶ್ವರ ದೇವಸ್ಥಾನ, ದೊಡ್ಡಗಣಪತಿ ದೇವಸ್ಥಾನ, ವಿಧಾನಸೌಧ, ಸರ್.ಎಂ. ವಿಶ್ವೇಶ್ವರಯ್ಯ ಮ್ಯೂಸಿಯಂ, ಕಬ್ಬನ್ ಉದ್ಯಾನ, ಲಾಲ್‌ಬಾಗ್ ವೀಕ್ಷಣೆ ಮಾಡಿಸಿ ಜೈನ್ ಕಾಲೇಜ್ ಆವರಣಕ್ಕೆ ಮರಳಿ ಕರೆತರಲಿದೆ. ₹600 ಪ್ರಯಾಣ ದರವನ್ನು ನಿಗದಿ ಮಾಡಲಾಗಿದೆ.

ಒಂದೇ ಸ್ಥಳದಿಂದ 15ಕ್ಕಿಂತ ಹೆಚ್ಚು ಜನ ಆಸನಗಳನ್ನು ಕಾಯ್ದಿರಿಸಿದಲ್ಲಿ ಪ್ರಯಾಣಿಕರನ್ನು ಹತ್ತಿಸಿಕೊಂಡು ಬೆಂಗಳೂರಿನ ದರ್ಶನ ಮಾಡಿಸಿ ಅದೇ ಸ್ಥಳಕ್ಕೆ ವಾಪಸ್ ಇಳಿಸಲಾಗುವುದು ಎಂದು ಬಿಎಂಟಿಸಿ ತಿಳಿಸಿದೆ.



ಡಾ.ರಾಜ್‌ಕುಮಾರ್ 94ನೇ ಜನ್ಮದಿನದ ಅಂಗವಾಗಿ ಶಾಲಾ ಮಕ್ಕಳಿಗೆ ನೋಟ್ ಪುಸ್ತಕಗಳನ್ನು ಅಶ್ವಿನಿ ಪುನೀತ್ ರಾಜ್‌ಕುಮಾರ್ ಅವರು ಬೆಂಗಳೂರಿನ ತಮ್ಮ ನಿವಾಸದಲ್ಲಿ ಶನಿವಾರ ವಿತರಿಸಿದರು – ಪ್ರಜಾವಾಣಿ ಚಿತ್ರ

ನ್ಯಾಯಮಿತ್ರ ಸಹಕಾರಿ ಬ್ಯಾಂಕ್ ಅಧ್ಯಕ್ಷರಾಗಿ ರಮೇಶ್ ಬಾಬು



ಬೆಂಗಳೂರು: ನಗರದ ನ್ಯಾಯಮಿತ್ರ ಸಹಕಾರಿ ಬ್ಯಾಂಕ್ ಅಧ್ಯಕ್ಷರಾಗಿ ರಮೇಶ್ ಬಾಬು ಪುನರಾಯ್ಕೆಯಾಗಿದ್ದಾರೆ.

ಈ ಬ್ಯಾಂಕ್‌ಗೆ ಹಿಂದಿನ ಅವಧಿಯಲ್ಲೂ ರಮೇಶ್ ಬಾಬು ಅಧ್ಯಕ್ಷರಾಗಿದ್ದರು. ಏಪ್ರಿಲ್ 19ರಂದು ನಡೆದ ಚುನಾವಣೆಯಲ್ಲಿ ಪುನರಾಯ್ಕೆಯಾಗಿದ್ದಾರೆ ಎಂದು ಬ್ಯಾಂಕ್‌ನ ಪ್ರಧಾನ ವ್ಯವಸ್ಥಾಪಕ ಪ್ರಸನ್ನ ಡಿ.ಆರ್. ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮುಂಬೈ ರೇಸ್

ಟೈರಾನ್ ಬ್ಲ್ಯಾಕ್ ಗೆಲ್ಲುವ ನಿರೀಕ್ಷೆ

ಹಿಂದೂ ಟ್ರೋಫಿ ಭಾನುವಾರದ ಮುಂಬೈ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಟೈರಾನ್ ಬ್ಲ್ಯಾಕ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆ ಇದೆ. ಮಧ್ಯಾಹ್ನ 3.00ಕ್ಕೆ ಪ್ರಾರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ರೆಡ್ ಡಸ್ಟ್ 1, ಡಿವೈನ್ ಸೌಲ್ 4, ಡೌಸಬೆಲ್ 5
2ನೇ ರೇಸ್: ಮೆಜೆಸ್ಟಿಕ್ ವಾರಿಯರ್ 1, ಡಾಲಿ ಸ್ವಿರ್ಲ್ 2, ಲಾರ್ಡ್ ಅಂಡ್ ಮಾಸ್ಟರ್ 7
3ನೇ ರೇಸ್: ಕ್ಯಾಂಡೆಸೆಂಟ್ ಸ್ಟಾರ್ 4, ಎಂಪವರ್ 2, ಟಾರ್ಜಾನ್ 7
4ನೇ ರೇಸ್: ಟೈರಾನ್ ಬ್ಲಾಕ್ 5, ಜೆರುಸಲೆಮ್ 1, ಪೆಗಾಸೊ 4
5ನೇ ರೇಸ್: ಸ್ವಿಫ್ಟ್ 10, ವೆರೊನಿಕಾ 11, ಸಿಯೆರಾ ಡೆಲಾ ಪ್ಲಾಟಾ 9
6ನೇ ರೇಸ್: ಅನೌಶ್ಕ 8, ಸಿಲ್ವರ್ ಸ್ಟೆಪ್ಸ್ 3, ಬ್ಲೇಜಿಂಗ್ ಬೇ 1
7ನೇ ರೇಸ್: ಬಿಟ್ವೀನ್ ಫ್ರೆಂಡ್ಸ್ 7, ಸಿಫರ್ 7, ಸ್ಕೈ ಹಾಕ್ 2

ಉತ್ತಮ ಬೆಟ್: ಸ್ವಿಫ್ಟ್

ಜಾಕ್‌ಪಾಟ್	ಟ್ರಿಬಲ್
3,4,5,6,7	5,6,7

ರಸ್ತೆ ಬದಿ ನಿಲ್ಲಿಸಿದ್ದ ಕಾರು ಬೆಂಕಿಗಾಹುತಿ

ಬೆಂಗಳೂರು: ನಗರದ ಕ್ವೀನ್ಸ್ ರಸ್ತೆಯಲ್ಲಿ ನಿಲುಗಡೆ ಮಾಡಲಾಗಿದ್ದ ಕಾರೊಂದು ಬೆಂಕಿಗಾಹುತಿಯಾಗಿದೆ.

'ಕೆಟ್ಟು ನಿಂತಿದ್ದ ಕಾರಿಗೆ ದುಷ್ಕರ್ಮಿಗಳು ಬೆಂಕಿ ಹಚ್ಚಿರುವ ಶಂಕೆ ಇದ್ದು, ವಿಷಯ ತಿಳಿದೊಡನೆ ಸ್ಥಳಕ್ಕೆ ಬಂದ ಅಗ್ನಿಶಾಮಕ ದಳದ ಸಿಬ್ಬಂದಿ ಬೆಂಕಿ ನಂದಿಸಿದ್ದಾರೆ. ಅಕ್ಕಪಕ್ಕದಲ್ಲಿ ಯಾವುದೇ ವಾಹನಗಳು ಇರಲಿಲ್ಲ. ಹೀಗಾಗಿ ಅನಾಹುತ ತಪ್ಪಿದೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದ್ದಾರೆ.

ಕೆಎಸ್‌ಒಯು ಘಟಿಕೋತ್ಸವ ನಾಳೆ

ಮೈಸೂರು: ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ (ಕೆಎಸ್‌ಒಯು) 17ನೇ ಘಟಿಕೋತ್ಸವ ಸೋಮವಾರ (ಏ.25) ರಂದು ನಡೆಯಲಿದೆ.

'ಕೆಎಸ್‌ಒಯು ಘಟಿಕೋತ್ಸವ ಭವನದಲ್ಲಿ ಬೆಳಿಗ್ಗೆ 11ಕ್ಕೆ ಆರಂಭವಾಗಲಿದ್ದು, ರಾಜ್ಯಪಾಲ ಥಾವರಚಂದ್ ಗೆಹಲೋತ್ ಪದವಿ ಪ್ರದಾನ ಮಾಡುವರು. ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ ನಿರ್ದೇಶಕ (ತಾಂತ್ರಿಕ) ಎ.ಬಿ ಬಸವರಾಜು ಘಟಿಕೋತ್ಸವ ಭಾಷಣ ಮಾಡಲಿದ್ದು, ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ ಭಾಗವಹಿಸಲಿದ್ದಾರೆ' ಎಂದು ಕೆಎಸ್‌ಒಯು ಕುಲಪತಿ ಡಾ.ಎಸ್.ವಿದ್ಯಾಶಂಕರ್ ಶನಿವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ವಿಜೃಂಭಣೆಯಿಂದ ನಡೆದ ಮಣ್ಣಮ್ಮ ದೇವಿ ಜಾತ್ರೆ

ಪ್ರಜಾವಾಣಿ ವಾರ್ತೆ

ದಾಬಸ್ ಪೇಟೆ: ಗಂಗರಸರ ರಾಜಧಾನಿಯಾಗಿದ್ದ ನೆಲಮಂಗಲ ತಾಲ್ಲೂಕಿನ ಮಣ್ಣೆ ಗ್ರಾಮದ ಮಣ್ಣಮ್ಮ ದೇವಿ ಮತ್ತು ಮಾದಾಪುರದಮ್ಮ ಜಾತ್ರಾ ಮಹೋತ್ಸವವು ಏ.17ರಿಂದ 24ರವರೆಗೆ ಒಂದು ವಾರ ಕಾಲ ವಿಜೃಂಭಣೆಯಿಂದ ನಡೆಯಿತು.

ವಾರದ ಪ್ರತಿದಿನವೂ ವಿಭಿನ್ನವಾದ ಪೂಜಾ ಕಾರ್ಯಕ್ರಮಗಳು, ಸಂಜೆ ಹಾಗೂ ರಾತ್ರಿ ಆರತಿ, ಉಪಾಹಾರ, ರಥೋತ್ಸವ ಕೊಂಡ ಹಾಗೂ ಪೂಜಾದಿ ಕಾರ್ಯಗಳು ನಡೆದವು.

ಜಾತ್ರೆ ಆರಂಭವಾದ ಭಾನುವಾರ ಬೆಳಿಗ್ಗೆ ಗಣೇಶನಿಗೆ ಪೂಜೆ ಹಾಗೂ ಉತ್ಸವ, ಸಂಜೆ ಚೌಡೇಶ್ವರಿ ದೇವಿಗೆ ಆರತಿ ಸೇವೆ ನೆರವೇರಿತು. ಸೋಮವಾರ ಸೋಮೇಶ್ವರ ಸ್ವಾಮಿಗೆ ಬೆಲ್ಲದ ಆರತಿಯನ್ನು ಬೆಳಗಲಾಯಿತು. ಮಂಗಳವಾರ ಗ್ರಾಮ ದೇವತೆ ಮಣ್ಣಮ್ಮ ದೇವಿಗೆ ಉಪಹಾರದ ಸೇವೆ, ಬುಧವಾರ ರಾಶಿ ಪೂಜೆಗಳು ನಡೆದವು. ಪುರೋಹಿತರು ದೇವಾಲಯದ ಮುಂಭಾಗದಲ್ಲಿ ರಾಗಿ ರಾಶಿ ಹಾಕಿ ದೇವರನ್ನು ಹೊಗಳಿದರು. ಮಣ್ಣಮ್ಮ ದೇವಿ ಮತ್ತು ಮಾದಾಪುರದಮ್ಮರನ್ನು ಅಕ್ಕಪಕ್ಕದ ಏಳು ಗ್ರಾಮಗಳಿಗೆ ತೆಗೆದುಕೊಂಡು ಹೋಗಿ ಪೂಜೆ ಸಲ್ಲಿಸಲಾಯಿತು.ಗುರುವಾರದ ಆರತಿ ಇಲ್ಲಿನ ವಿಶೇಷ. ಊರಿನ ಮನೆಮನೆಗೂ ಅಂದು ದೇವರನ್ನು ಕರೆದುಕೊಂಡು ಹೋಗಲಾಗುತ್ತದೆ. ಶುಕ್ರವಾರ ಬೆಳಗ್ಗಿನ ಜಾವಕ್ಕೆ ಕೊಂಡ ಹಾಕಿ ಅದರ ಮೂಲಕ ಸಾಗಿ ದೇವರಿಗೆ ಆರತಿ ಬೆಳಗಲಾಯಿತು.

ಶುಕ್ರವಾರ ಸಂಜೆ ಪುಕ್ಲಮ್ಮ ದೇವರಿಗೆ ಆರತಿ ನೆರವೇರಿತು. ಶನಿವಾರ ಹೋಮ–ಹವನಗಳ ನಂತರ ಅಲಂಕೃತ ರಥೋತ್ಸವದಲ್ಲಿ ಮಣ್ಣಮ್ಮ ದೇವಿಯನ್ನು ಕೂರಿಸಿ ತೇರು ಎಳೆಯಲಾಯಿತು. ಸಾವಿರಾರು ಮಂದಿ ರಥೋತ್ಸವದಲ್ಲಿ ಭಾಗವಹಿಸಿದ್ದರು. ದೇವರಿಗೆ ಧವನದ ಬಾಳೆಹಣ್ಣು ಎಸೆದು ಕೃತಾರ್ಥರಾದರು. ಇದೇ ವೇಳೆ ಜಾತ್ರೆಗೆ ಬಂದವರಿಗೆ ನೀರುಮಜ್ಜಿಗೆ, ಪಾನಕ, ಹೆಸರು ಬೇಳೆ ಹಾಗೂ ದಾಸೋಹದ ವ್ಯವಸ್ಥೆ ಮಾಡಲಾಗಿತ್ತು. ಕಡೆಯ ದಿನವಾದ ಭಾನುವಾರ ಆಂಜನೇಯ ಸ್ವಾಮಿಗೆ ಬೆಲ್ಲದ ಆರತಿ ಮಾಡುವ ಮೂಲಕ ಜಾತ್ರೆ ಸಂಪನ್ನಗೊಂಡಿತು.



ಮಣ್ಣಮ್ಮ ದೇವಿ ಬ್ರಹ್ಮ ರಥೋತ್ಸವದಲ್ಲಿ ಭಾಗವಹಿಸಿದ್ದ ಭಕ್ತ ಸಮೂಹ

ಉಕ್ರೇನ್ ಯುದ್ಧ, ದೆಹಲಿ ಗಲಭೆ ವರದಿ– ಪ್ರಸಾರ ಸಂಹಿತೆ ಉಲ್ಲಂಘನೆ ಆರೋಪ

ಸುಳ್ಳು ಸುದ್ದಿ: ವಾಹಿನಿಗಳಿಗೆ ಎಚ್ಚರಿಕೆ

ನವದೆಹಲಿ (ಪಿಟಿಐ): ಉಕ್ರೇನ್-ರಷ್ಯಾ ಸಂಘರ್ಷ ಮತ್ತು ದೆಹಲಿ ಗಲಭೆಗಳ ಕುರಿತು ಸುದ್ದಿವಾಹಿನಿಗಳು ಸುದ್ದಿ ಪ್ರಸಾರ ಮಾಡಿರುವ ರೀತಿಗೆ ಕೇಂದ್ರ ಸರ್ಕಾರವು ತೀವ್ರ ಆಕ್ಷೇಪ ವ್ಯಕ್ತಪಡಿಸಿದೆ. ಕಾನೂನು ಪ್ರಕಾರ ನಿಗದಿಪಡಿಸಿರುವ ಕಾರ್ಯಕ್ರಮ ಪ್ರಸಾರ ಸಂಹಿತೆಯನ್ನು ಪಾಲಿಸಬೇಕು ಎಂದು ಸುದ್ದಿವಾಹಿನಿಗಳಿಗೆ ಶನಿವಾರ ಕಠಿಣ ಎಚ್ಚರಿಕೆ ನೀಡಿದೆ.

ಕೇಬಲ್ ಟಿ.ವಿ. ಜಾಲಗಳು (ನಿಯಂತ್ರಣ) ಕಾಯ್ದೆ 1995 ಮತ್ತು ಅದರ ಅಡಿಯಲ್ಲಿನ ನಿಯಮ ಮತ್ತು ನಿಬಂಧನೆಗಳನ್ನು ಉಲ್ಲಂಘಿಸುವ ರೀತಿಯಲ್ಲಿ ಯಾವುದೇ ಸುದ್ದಿ ಪ್ರಕಟಣೆ ಮತ್ತು ಪ್ರಸಾರವನ್ನು ತಕ್ಷಣವೇ ನಿಲ್ಲಿಸಬೇಕು ಎಂದು ಕಠಿಣ ಎಚ್ಚರಿಕೆ ಕೊಟ್ಟಿದೆ.

ಉಕ್ರೇನ್-ರಷ್ಯಾ ಸಂಘರ್ಷದ ಬಗ್ಗೆ ವರದಿ ಪ್ರಸಾರದಲ್ಲಿ ಸುದ್ದಿ ನಿರೂಪಕರು ಬಳಸಿದ 'ಅತಿರಂಜಿತ' ಹೇಳಿಕೆಗಳು ಮತ್ತು 'ಹತ್ಯಾಕಾಂಡದ ಶೀರ್ಷಿಕೆಗಳು/ ಟ್ಯಾಗ್‌ಲೈನ್‌ಗಳು' ಹಾಗೂ ವಾಯವ್ಯ ದೆಹಲಿಯಲ್ಲಿನ ಹಿಂಸಾಚಾರದ್ದು ಎಂದು ಹೇಳಲಾದ ಸಿ.ಸಿ.ಟಿ.ವಿ. ಕ್ಯಾಮೆರಾ ದೃಶ್ಯಗಳನ್ನು ಪರಿಶೀಲಿಸದೆಯೇ ಪ್ರಕಟಿಸಲಾಗಿದೆ. ಈ ನಡೆಯು ತನಿಖಾ ಪ್ರಕ್ರಿಯೆಗೆ ಅಡ್ಡಿ ಉಂಟು ಮಾಡುತ್ತದೆ ಎಂದು ಸರ್ಕಾರ ಹೇಳಿದೆ.

ವಾಯವ್ಯ ದೆಹಲಿಯಲ್ಲಿ ನಡೆದ ಘಟನೆಗಳ ಕುರಿತು ಸುದ್ದಿವಾಹಿನಿಗಳಲ್ಲಿ ನಡೆದ ಚರ್ಚೆಗಳು 'ಅಸಂಸದೀಯ, ಪ್ರಚೋದನಕಾರಿ ಮತ್ತು ಸಾಮಾಜಿಕವಾಗಿ ಸ್ವೀಕೃತವಲ್ಲದ ಭಾಷೆಯನ್ನು ಹೊಂದಿದ್ದವು' ಎಂದು ಸರ್ಕಾರ ತೀವ್ರ ಆಕ್ಷೇಪ ವ್ಯಕ್ತಪಡಿಸಿದೆ.

ಕಳೆದ ವಾರ, ವಾಯವ್ಯ ದೆಹಲಿಯ ಜಹಾಂಗೀರ್‌ಪುರಿಯಲ್ಲಿ ಹನುಮ ಜಯಂತಿ ಮೆರವಣಿಗೆಯಲ್ಲಿ ಎರಡು ಸಮುದಾಯಗಳ ನಡುವೆ ಘರ್ಷಣೆ ನಡೆದಿತ್ತು.

'ಇಂತಹ ವಿಷಯಗಳಲ್ಲಿ ಸುದ್ದಿವಾಹಿನಿಗಳು ನಡೆದುಕೊಳ್ಳುತ್ತಿರುವ ರೀತಿಗೆ ಮತ್ತು ಸಮಾಜಕ್ಕೆ ರವಾನಿಸುತ್ತಿರುವ ಸಂದೇಶಗಳ ಬಗ್ಗೆ ಸರ್ಕಾರಕ್ಕೆ ಗಂಭೀರ ಕಳವಳವಿದೆ' ಎಂದು ವಾರ್ತಾ ಮತ್ತು ಪ್ರಸಾರ ಸಚಿವಾಲಯ ಹೇಳಿದೆ.

ಕಾಯ್ದೆಯಲ್ಲಿರುವ ಕಾರ್ಯಕ್ರಮ ಸಂಹಿತೆಯ ಸೆಕ್ಷನ್ 6ರ ಪ್ರಕಾರ, 'ಯಾವುದೇ ಕಾರ್ಯಕ್ರಮವು ಉತ್ತಮ ಅಭಿರುಚಿ ಅಥವಾ ಸಭ್ಯತೆಗೆ ಧಕ್ಕೆ ತರುವಂತೆ ಇರಬಾರದು, ಮಿತ್ರ ರಾಷ್ಟ್ರಗಳ ಕುರಿತು ಟೀಕೆಯನ್ನು ಹೊಂದಿರಬಾರದು, ಧರ್ಮ ಅಥವಾ ಸಮುದಾಯಗಳ ಮೇಲೆ ದಾಳಿ ಮಾಡುವಂತಿರಬಾರದು, ಧಾರ್ಮಿಕ ಗುಂಪುಗಳನ್ನು ತುಚ್ಛೀಕರಿಸುವಂತಿರಬಾರದು, ಅಶ್ಲೀಲ, ಮಾನಹಾನಿಕಾರಕ, ಸುಳ್ಳು ಮತ್ತು ಅರ್ಧಸತ್ಯಗಳನ್ನು ಹೊಂದಿರಬಾರದು, ಕೆಟ್ಟ ಭಾವನೆ ಬರುವಂತಹ ಹೇಳಿಕೆಗಳನ್ನೂ ಹೊಂದಿರಬಾರದು' ಎನ್ನುವುದನ್ನು ಸಚಿವಾಲಯ ನೆನಪಿಸಿದೆ.

'ಸುದ್ದಿವಾಹಿನಿಗಳಲ್ಲಿ ಸುಳ್ಳು ಸುದ್ದಿ ಪ್ರಸಾರ'

'ರಷ್ಯಾ-ಉಕ್ರೇನ್ ಸಂಘರ್ಷದ ಕುರಿತು ಸುದ್ದಿವಾಹಿನಿಗಳು ಸುಳ್ಳು ಸುದ್ದಿಗಳನ್ನು ಪ್ರಸಾರ ಮಾಡುತ್ತಿವೆ. ಅಂತರರಾಷ್ಟ್ರೀಯ ಸಂಸ್ಥೆಗಳು ಅಥವಾ ನಾಯಕರ ಹೇಳಿಕೆಗಳನ್ನು ತಪ್ಪಾಗಿ ಉಲ್ಲೇಖಿಸಲಾಗುತ್ತಿದೆ, ಸುದ್ದಿಗೆ ಸಂಬಂಧವಿಲ್ಲದ ಅವಹೇಳನಕಾರಿ ಶೀರ್ಷಿಕೆಗಳು ಅಥವಾ ಟ್ಯಾಗ್‌ಲೈನ್‌ಗಳನ್ನು ಬಳಸುತ್ತಿರುವುದು ಕಂಡುಬಂದಿದೆ. ವೀಕ್ಷಕರನ್ನು ಪ್ರಚೋದಿಸುವುದಕ್ಕಾಗಿ ಸತ್ಯಕ್ಕೆ ದೂರವಾದ ಮತ್ತು ಅತಿಶಯೋಕ್ತಿಯಿಂದ ಕೂಡಿದ ಹೇಳಿಕೆಗಳನ್ನು ಸುದ್ದಿವಾಹಿನಿಗಳ ಅನೇಕ ಪತ್ರಕರ್ತರು ಮತ್ತು ಸುದ್ದಿ ನಿರೂಪಕರು ಕೊಡುತ್ತಿರುವುದು ಗಮನಕ್ಕೆ ಬಂದಿದೆ' ಎಂದು ಕೇಂದ್ರ ಮಾಹಿತಿ ಮತ್ತು ಪ್ರಸಾರ ಸಚಿವಾಲಯ ಹೇಳಿದೆ.

'ಅಣ್ವಸ್ತ್ರ ಹೊಂದಿರುವ ಪುಟಿನ್ ಬಗ್ಗೆ ಝೆಲೆನ್‌ಸ್ಕಿಗೆ ಚಿಂತೆ', 'ಅಣ್ವಸ್ತ್ರ ಬಳಕೆ ಭೀತಿಯಿಂದ ಝೆಲೆನ್‌ಸ್ಕಿಗೆ ಖಿನ್ನತೆ', 'ಪರಮಾಣು ಆಕ್ಷನ್ ಕಿ ಚಿಂತಾ ಸೆ ಝೆಲೆನ್‌ಸ್ಕಿ ಕೊ ಡಿಪ್ರೆಶನ್' (ಪರಮಾಣು ದಾಳಿ ಭೀತಿ: ಝೆಲೆನ್‌ಸ್ಕಿಗೆ ಖಿನ್ನತೆ), 'ಮೂರನೇ ಮಹಾಯುದ್ಧ ಪ್ರಾರಂಭ' ಇಂತಹ ಶೀರ್ಷಿಕೆಗಳು ಮತ್ತು ಟ್ಯಾಗ್‌ಲೈನ್‌ಗಳನ್ನು ಬಳಸಲಾಗಿದೆ. ಅಂತರರಾಷ್ಟ್ರೀಯ ಸಂಸ್ಥೆಗಳ ಹೇಳಿಕೆಗಳನ್ನು ಪರಿಶೀಲಿಸದೆಯೇ ತಪ್ಪಾಗಿ ಉದ್ಧರಿಸಿರುವ ಉದಾಹರಣೆಗಳನ್ನು ಸಚಿವಾಲಯ ನೀಡಿರುವ ಕಠಿಣ ಎಚ್ಚರಿಕೆಯಲ್ಲಿ ಉಲ್ಲೇಖಿಸಲಾಗಿದೆ.

'ಸುದ್ದಿವಾಹಿನಿಯೊಂದು ಉಕ್ರೇನ್ ಮೇಲೆ ಮುಂಬರುವ ಪರಮಾಣು ದಾಳಿಯ ಪುರಾವೆ ಎಂದು ಬಿಂಬಿಸುವ ಕಟ್ಟುಕಥೆಯ ಚಿತ್ರಗಳನ್ನು ಪ್ರಸಾರ ಮಾಡಿದೆ. ಇಂತಹ ಊಹಾಪೋಹದ ಸುದ್ದಿಗಳು ವೀಕ್ಷಕರನ್ನು ದಾರಿತಪ್ಪಿಸುತ್ತವೆ ಮತ್ತು ಅವರೊಳಗೆ ಚಿತ್ತ ಕ್ಷೋಭೆ ಹುಟ್ಟುಹಾಕುತ್ತವೆ' ಎಂದು ಅದು ಎಚ್ಚರಿಸಿದೆ.

'ಸಾಧನೆಯ ಸೋಪಾನಗಳು' ಕೃತಿ ಬಿಡುಗಡೆ

ಪ್ರಜಾವಾಣಿ ವಾರ್ತೆ


ಬೆಂಗಳೂರು: 'ಅಧ್ಯಾತ್ಮದ ಒಲವು ಇರುವವರಿಗೆ ಸ್ವಾಮಿ ಜಪಾನಂದಜೀ ಮಹಾರಾಜ್ ಅವರ ಪುಸ್ತಕ ಕೈಹಿಡಿದು ಮುನ್ನಡೆಸುವುದರಲ್ಲಿ ಸಂದೇಹವಿಲ್ಲ' ಎಂದು ಉಡುಪಿ ಪೇಜಾವರ ಮಠದ ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ ಹೇಳಿದರು.

ಶ್ರೀರಾಮಕೃಷ್ಣ ಸೇವಾಶ್ರಮ ಮತ್ತು ವಿವೇಕ ಹಂಸಬಳಗದ ಸಹಯೋಗದಲ್ಲಿ ಶನಿವಾರ ಏರ್ಪಡಿಸಿದ್ದ ಸ್ವಾಮಿ ಜಪಾನಂದಜೀ ಮಹಾರಾಜ್ ಅವರ ಲೇಖನಗಳ ಗುಚ್ಛ 'ಸಾಧನೆಯ ಸೋಪಾನಗಳು' ಪುಸ್ತಕ ಬಿಡುಗಡೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಈಗಿನ ಆಧುನಿಕತೆ ಹಾಗೂ ಅನೇಕ ರೀತಿಯ ಯಾತನೆಗಳಿಂದ ಸಿಲುಕಿರುವ ಜನರಿಗೆ ಈ ಪುಸ್ತಕದ ಮೂಲಕ ಸಾಧನೆಯ ಸೋಪಾನಗಳನ್ನು ನೋಡಿದಂತಾಗಿದೆ. ಜಪಾನಂದಜೀ ಅವರು ಜನರಿಗೆ ಬೋಧಿಸುವುದು ಮಾತ್ರವಲ್ಲದೆ, ಅವರನ್ನು ಮುನ್ನಡೆಸುವ ಸಾಧಕರಾಗಿಯೂ ಕಾಣುತ್ತಿದ್ದಾರೆ' ಎಂದರು.

ಬೇಲಿಮಠದ ಶಿವರುದ್ರ ಸ್ವಾಮೀಜಿ, 'ಸ್ವಾಮಿ ಜಪಾನಂದಜೀ ಮಹಾರಾಜ್ ಅವರು ಈ ಪುಸ್ತಕದ ಮೂಲಕ ಲೌಕಿಕ ಹಾಗೂ ಪಾರಮಾರ್ಥಿಕ ಎರಡನ್ನೂ ಸಮನ್ವಯಗೊಳಿಸಿದ್ದಾರೆ. ಸೇವಾಶ್ರಮದ ಮೂಲಕ ಅನಾಥರ, ದುಃಖಿಗಳ ಆಸರೆಯಾಗಿ ದೇಶದ ತುಂಬೆಲ್ಲ ಮನೆಮಾತಾಗಿದ್ದಾರೆ' ಎಂದರು.

ಸ್ವಾಮಿ ಜಪಾನಂದಜೀ ಮಹಾರಾಜ್,'ಈ ಪುಸ್ತಕವು ಇಂದಿನ ಆಧುನಿಕ ಯುಗಕ್ಕೆ ಸುಲಭವಾಗಿ, ಯಾವುದೇ ರೀತಿಯ ಕ್ಲಿಷ್ಟ ವಿಚಾರಗಳ ಗೋಜಲುಗಳಿಲ್ಲದೆ ತಾಯಿ ಮಗುವಿಗೆ ಉಪದೇಶಿಸಿದ ರೀತಿಯಲ್ಲಿದೆ. ರಾಮಕೃಷ್ಣ ಪರಮಹಂಸರು ಆಧ್ಯಾತ್ಮಿಕ ಜೀವಿಗಳಿಗೆ ಬೋಧಿಸಿದ ನುಡಿದೀಪವಾಗಿದೆ' ಎಂದರು. 'ಒಬ್ಬ ಸಾಧಕ ರಾಮಕೃಷ್ಣ ಪರಮಹಂಸರ ವಿಚಾರಧಾರೆಯ ಸಹಾಯದಿಂದ ಈ ಪ್ರಪಂಚದ ಅಂಧಕಾರದಲ್ಲಿಯೂ ಮುಂದೆ ಸಾಗಬಹುದು ಎಂಬುದನ್ನು ಈ ಗ್ರಂಥ ತಿಳಿಸುತ್ತದೆ' ಎಂದು ಹೇಳಿದರು.



'ಸಾಧನೆಯ ಸೋಪಾನಗಳು' ಪುಸ್ತಕವನ್ನು (ಮಧ್ಯದಲ್ಲಿರುವವರು) ಪೇಜಾವರ ಮಠದ ವಿಶ್ವಪ್ರಸನ್ನ ತೀರ್ಥರು ಬಿಡುಗಡೆ ಮಾಡಿದರು.ಸ್ವಾಮಿ ಜಪಾನಂದಜೀ ಮಹಾರಾಜ್ ಹಾಗೂ ಬೇಲಿಮಠದ ಶಿವರುದ್ರ ಸ್ವಾಮೀಜಿ ಇದ್ದಾರೆ.

ಜನತಾ ಸೇವಾ ಕೋ-ಆಪರೇಟಿವ್ ಬ್ಯಾಂಕ್ ಸುವರ್ಣ ಮಹೋತ್ಸವ

'ಆರ್ಥಿಕತೆಯಲ್ಲಿ ಸಹಕಾರ ಚಳವಳಿ ಪಾತ್ರ ಮುಖ್ಯ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ದೇಶದ ಆರ್ಥಿಕತೆಗೆ ಸಹಕಾರ ಚಳವಳಿಯ ಪಾತ್ರ ಬಹಳ ಮುಖ್ಯ. ಕರ್ನಾಟಕದಲ್ಲಿ ಸಹಕಾರ ಬ್ಯಾಂಕ್ ಕ್ಷೇತ್ರ ಸದೃಢವಾಗಿದೆ' ಎಂದು ಆದಿಚುಂಚನಗಿರಿ ಮಠದ ಪೀಠಾಧ್ಯಕ್ಷ ನಿರ್ಮಲಾನಂದನಾಥ ಸ್ವಾಮೀಜಿ ಅಭಿಪ್ರಾಯಪಟ್ಟರು.

ಜನತಾ ಸೇವಾ ಕೋ-ಆಪರೇಟಿವ್ ಬ್ಯಾಂಕ್ ವತಿಯಿಂದ ನಗರದಲ್ಲಿ ಶನಿವಾರ ಏರ್ಪಡಿಸಿದ್ದ ಬ್ಯಾಂಕಿನ ಸುವರ್ಣ ಮಹೋತ್ಸವ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಮಾನವ ಸಂಪನ್ಮೂಲ ಹಾಗೂ ಬೌದ್ಧಿಕ ಸಂಪತ್ತನ್ನು ಸಮರ್ಥವಾಗಿ ಬಳಸಿಕೊಂಡಾಗ ಮಾತ್ರ ಅಭಿವೃದ್ಧಿ ಸಾಧ್ಯ. ಪ್ರತಿಯೊಬ್ಬರೂ ದುಡಿದ ಹಣವನ್ನು ಸದ್ಬಳಕೆ ಮತ್ತು ಉಳಿತಾಯ ಮಾಡುವತ್ತ ಗಮನ ನೀಡಬೇಕು. ಸಾಲ ಪಡೆದವರು ಅದನ್ನು ಸೂಕ್ತ ಉದ್ದೇಶಕ್ಕೆ ಬಳಸಿ, ಮರುಪಾವತಿಯನ್ನೂ ಕ್ರಮ ಬದ್ಧವಾಗಿ ಮಾಡಬೇಕು' ಎಂದು ಅವರು ಸಲಹೆ ನೀಡಿದರು.

ಸಿದ್ಧಗಂಗಾ ಮಠದ ಸಿದ್ಧಲಿಂಗ ಸ್ವಾಮೀಜಿ,'ಜನತಾ ಸೇವಾ ಸಹಕಾರ ಬ್ಯಾಂಕ್ 50 ವರ್ಷಗಳಲ್ಲಿ ಹಂತ ಹಂತವಾಗಿ ಅಭಿವೃದ್ಧಿ ಸಾಧಿಸಿ, ಬೃಹದಾಕಾರವಾಗಿ ಬೆಳೆದಿದೆ. ವಸೂಲಾಗದ ಸಾಲದ ಪ್ರಮಾಣ ಶೂನ್ಯದಲ್ಲಿರುವುದರಿಂದ ಬ್ಯಾಂಕ್‌ನ ಏಳಿಗೆ ಉತ್ತಮವಾಗಿದೆ' ಎಂದು ಶ್ಲಾಘಿಸಿದರು.

'ಅಭಿವೃದ್ಧಿಗೆ ಸಹಕಾರ ತತ್ವ ಪಾಲನೆ ಬಹಳ ಮುಖ್ಯ. ನಮ್ಮ ದೇಹವೂ ಸಹಕಾರ ಸಿದ್ಧಾಂತದ ಆಧಾರದಲ್ಲೇ ಕೆಲಸ ಮಾಡುತ್ತದೆ. ಯಾವುದೋ ಒಂದು ಅಂಗದ ಕೆಲಸದಲ್ಲಿ ಏರುಪೇರಾದರೆ, ಇಡೀ ದೇಹ ಸಮತೋಲನ ಕಳೆದುಕೊಳ್ಳುತ್ತದೆ. ಅದೇ ರೀತಿ ಆರ್ಥಿಕತೆ ಮತ್ತು ಸಮಾಜ ಸಮತೋಲಿತವಾಗಿ ನಡೆಯಬೇಕು' ಎಂದು ಹೇಳಿದರು.

ಬ್ಯಾಂಕ್‌ನ ಅಧ್ಯಕ್ಷ ಎಚ್.ಸಿ. ಗೋಪಾಲ್,'1969ರಲ್ಲಿ 30 ಸದಸ್ಯರೊಂದಿಗೆ ಕ್ರೆಡಿಟ್ ಸೊಸೈಟಿಯಾಗಿ ಜನತಾ ಸೇವಾ ಸಂಸ್ಥೆ ಆರಂಭಗೊಂಡಿದ್ದು, ಈಗ 14 ಸಾವಿರ ಸದಸ್ಯರನ್ನು ಹೊಂದಿದೆ. ಲಾಭಾಂಶ ಹಂಚಿಕೆಯಲ್ಲಿ ಶೇ 3ರಿಂದ 23ಕ್ಕೆ ಹೆಚ್ಚಳವಾಗಿದೆ. ಲಾಭದ ಪ್ರಮಾಣವೂ ₹15 ಕೋಟಿವರೆಗೆ ಏರಿಕೆಯಾಗಿದೆ. ಬ್ಯಾಂಕ್ ನಾಲ್ಕು ಸ್ವಂತ ಕಟ್ಟಡಗಳನ್ನು ಹೊಂದಿದೆ' ಎಂದು ಮಾಹಿತಿ ನೀಡಿದರು.

ಕಾರ್ಯಕ್ರಮದಲ್ಲಿ ಬ್ಯಾಂಕಿನ ಸಾಕ್ಷ್ಯಚಿತ್ರ ಬಿಡುಗಡೆ ಮಾಡಲಾಯಿತು. ಬ್ಯಾಂಕ್ ಅಭಿವೃದ್ಧಿಗೆ ಶ್ರಮಿಸಿದ ನಿರ್ದೇಶಕರು ಮತ್ತು ಇತರರನ್ನು ಸನ್ಮಾನಿಸಲಾಯಿತು.



ಕಾರ್ಯಕ್ರಮದಲ್ಲಿ ನಿರ್ಮಲಾನಂದನಾಥ ಸ್ವಾಮೀಜಿ ಮತ್ತು ಸಿದ್ಧಲಿಂಗ ಸ್ವಾಮೀಜಿ ಅವರು ಜನತಾ ಸೇವಾ ಕೋ–ಆಪರೇಟಿವ್ ಬ್ಯಾಂಕಿನ ಸುವರ್ಣ ಮಹೋತ್ಸವದ ಲಾಂಛನ ಬಿಡುಗಡೆ ಮಾಡಿದರು. (ಎಡದಿಂದ) ಬ್ಯಾಂಕಿನ ಉಪಾಧ್ಯಕ್ಷರಾದ ಬಿ.ಎಸ್.ಕನ್ಯಾಕುಮಾರಿ, ಶಾಸಕ ಎಂ.ಕೃಷ್ಣಪ್ಪ, ಬ್ಯಾಂಕಿನ ಅಧ್ಯಕ್ಷ ಎಚ್.ಸಿ.ಗೋಪಾಲ್ ಹಾಗೂ ಬ್ಯಾಂಕಿನ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಎಸ್.ಭಾಗ್ಯ ಇದ್ದಾರೆ
–ಪ್ರಜಾವಾಣಿ ಚಿತ್ರ

ಹಿಜಾಬ್: ಏಳು ವಿದ್ಯಾರ್ಥಿನಿಯರು ಪರೀಕ್ಷೆಗೆ ಗೈರು

ಉಡುಪಿ/ಸುರಪುರ: ಹಿಜಾಬ್ ತೆಗೆಯಲು ನಿರಾಕರಿಸಿ ಉಡುಪಿ ಯಲ್ಲಿ ಮೂವರು, ಯಾದಗಿರಿ ಜಿಲ್ಲೆ ಸುರಪುರದಲ್ಲಿ ನಾಲ್ವರು ಸೇರಿ ಏಳು ವಿದ್ಯಾರ್ಥಿನಿಯರು ದ್ವಿತೀಯ ಪಿಯುಸಿ ಗಣಿತ ಪರೀಕ್ಷೆಗೆ ಶನಿವಾರ ಗೈರಾದರು.

ಹಿಜಾಬ್ ಹೋರಾಟ ನಡೆಸುತ್ತಿರುವ ಸರ್ಕಾರಿ ಬಾಲಕಿಯರ ಪದವಿಪೂರ್ವ ಕಾಲೇಜಿನ ವಿದ್ಯಾರ್ಥಿನಿಯರಾದ ಆಲ್ಮಾಸ್, ಹಾಜ್ರಾ ಶಿಫಾ ಹಾಗೂ ಆಯಿಶಾ ಪರೀಕ್ಷೆಗೆ ಹಾಜರಾಗಿಲ್ಲ.

ಮೂವರ ಪೈಕಿ ಆಲ್ಮಾಸ್ ಶುಕ್ರವಾರ ಕಾಲೇಜಿಗೆ ಬಂದು ಪ್ರವೇಶ ಪತ್ರ ಪಡೆದಿದ್ದರು. ಉಳಿದ ಇಬ್ಬರು ಪಡೆದಿರಲಿಲ್ಲ ಎಂದು ಕಾಲೇಜಿನ ಪ್ರಾಂಶುಪಾಲ ರುದ್ರೇಗೌಡ ತಿಳಿಸಿದರು. ಸುರಪುರದ ಬಾಲಕರ ಸರ್ಕಾರಿ ಪದವಿಪೂರ್ವ ಕಾಲೇಜಿನಲ್ಲಿ ನಾಲ್ವರು ವಿದ್ಯಾರ್ಥಿನಿಯರು ಪರೀಕ್ಷೆಗೆ ಗೈರಾದರು.

‘ಹಿಜಾಬ್ ತೆಗೆಯಲು ವಿದ್ಯಾರ್ಥಿನಿಯರು ವಿರೋಧ ವ್ಯಕ್ತಪಡಿಸಿಲ್ಲ. ಪರೀಕ್ಷಾ ಕೇಂದ್ರಕ್ಕೆ ಹಿಜಾಬ್ ಧರಿಸಿ ಬಂದ ಅವರಿಗೆ ಹಿಜಾಬ್ ತೆಗೆದು ಬರಲು ಪರೀಕ್ಷಾ ಅಧೀಕ್ಷಕರು ತಿಳಿಸಿದ್ದಾರೆ. ಅವರು ಹಿಜಾಬ್ ತೆಗೆಯುವ ಕೋಣೆಯೊಳಗೆ ಹೋಗಿ, ಮನೆಗೆ ಮರಳಿದ್ದಾರೆ. ಯಾವುದೇ ವಿರೋಧ ವ್ಯಕ್ತಪಡಿಸಿಲ್ಲ’ ಎಂದು ಡಿಡಿಪಿಯು ಚಂದ್ರಕಾಂತ ಹಿಳ್ಳಿ ಪ್ರತಿಕ್ರಿಯಿಸಿದರು.

ಇವರು ರಂಗಂಪೇಟೆಯ ಕರ್ನಾಟಕ ಪಬ್ಲಿಕ್ ಶಾಲೆಯ ವಿದ್ಯಾರ್ಥಿನಿಯರು.

ಬೆದರಿಕೆ ಆರೋಪ: ‘ಶನಿವಾರದ ಪರೀಕ್ಷೆಗೆ ಹಾಜರಾದರೆ ಕ್ರಿಮಿನಲ್ ಪ್ರಕರಣ ದಾಖಲಿಸುವುದಾಗಿ ಶಾಸಕ ರಘುಪತಿ ಭಟ್ ಬೆದರಿಕೆ ಹಾಕಿರುವುದು ಖಂಡನೀಯ. ನಾವು ಮಾಡಿರುವ ಅಪರಾಧವಾದರೂ ಏನು, ದೇಶ ಎತ್ತ ಸಾಗುತ್ತಿದೆ. ಶುಕ್ರವಾರ ಹಿಜಾಬ್ ಧರಿಸಿ ಪರೀಕ್ಷೆ ಬರೆಯಲು ನನಗೆ ಹಾಗೂ ಸಹಪಾಠಿ ರೇಶಮ್‌ಗೆ ಅನುಮತಿ ನಿರಾಕರಿಸಲಾಗಿದೆ' ಎಂದು ಹಿಜಾಬ್ ಪರ ಕಾನೂನು ಹೋರಾಟ ನಡೆಸುತ್ತಿರುವ ಆಲಿಯಾ ಅಸಾದಿ ಟ್ವೀಟ್ ಮಾಡಿದ್ದಾರೆ.

‘ಮೆಜೆಸ್ಟಿಕ್’ ಇದು ನಿಲ್ದಾಣವಲ್ಲ, ಚಿತ್ರಮಂದಿರ!

• ವಿಜಯಕುಮಾರ್ ಎಸ್.ಕೆ.



ಮೆಜೆಸ್ಟಿಕ್

ಬೆಂಗಳೂರು: ಮೆಜೆಸ್ಟಿಕ್ ಎಂಬುದು ಬೆಂಗಳೂರಿನ ಹೆಗ್ಗುರುತುಗಳಲ್ಲೊಂದು. ಕೆಂಪೇಗೌಡ ಬಸ್ ನಿಲ್ದಾಣ, ಸಂಗೊಳ್ಳಿ ರಾಯಣ್ಣ ನಗರ ರೈಲು ನಿಲ್ದಾಣಗಳನ್ನು ಹೊಂದಿರುವ ಬೆಂಗಳೂರಿನ ಕೇಂದ್ರ ಸ್ಥಾನವು ಜನಮಾನಸದಲ್ಲಿ ‘ಮೆಜೆಸ್ಟಿಕ್’ ಎಂದೇ ಪ್ರಸಿದ್ಧಿ. ಈ ಜಾಗಕ್ಕೆ ‘ಮೆಜೆಸ್ಟಿಕ್’ ಎಂಬ ಇಂಗ್ಲಿಷ್ ಪದ ಬಳಕೆಗೆ ಬಂದಿರುವುದೇ ಒಂದು ಕುತೂಹಲ.

‘ಮೆಜೆಸ್ಟಿಕ್’ ಎಂಬ ಪದಕ್ಕೆ ಕನ್ನಡದಲ್ಲಿ ‘ಭವ್ಯ’ ಎಂಬ ಅರ್ಥವಿದೆ. ಆದರೆ, ‘ಮೆಜೆಸ್ಟಿಕ್’ ಪ್ರದೇಶಕ್ಕೆ ಭವ್ಯವಾದ ಸ್ಥಳ ಎಂಬರ್ಥದಲ್ಲಿ ಆ ಹೆಸರು ಪಡೆದಿಲ್ಲ. 1920–25ರ ನಡುವೆ ನಿರ್ಮಾಣಗೊಂಡಿದ್ದ ‘ಮೆಜೆಸ್ಟಿಕ್’ ಎಂಬ ಚಿತ್ರಮಂದಿರ ಇಲ್ಲಿತ್ತು. ಈ ಪ್ರದೇಶವು ಈ ಹೆಸರಿನಿಂದ ಪರಿಚಿತವಾಗಲು ಈ ಚಿತ್ರಮಂದಿರವೇ ಕಾರಣ. ಆದರೆ, ಈಗ ಈ ಚಿತ್ರ ಮಂದಿರ ಇಲ್ಲ. ಆದಾಗ್ಯೂ, ಹೆಸರು ಮಾತ್ರ ಉಳಿದುಕೊಂಡಿದೆ.

1920ರ ದಶಕದಲ್ಲಿ ಬೆಂಗಳೂರು ನಗರದಲ್ಲಿ ಸಾರ್ವಜನಿಕವಾಗಿ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯುತ್ತಿದ್ದ ಜಾಗವೆಂದರೆ ದೊಡ್ಡಣ್ಣ ಹಾಲ್ ಮತ್ತು ಮೆಜೆಸ್ಟಿಕ್ ಚಿತ್ರಮಂದಿರ. ದೊಡ್ಡ ದೊಡ್ಡ ಸಾಂಸ್ಕೃತಿಕ ಕಾರ್ಯಕ್ರಮಗಳು ಲಾಲ್‌ಬಾಗ್‌ನ ಗಾಜಿನ ಮನೆಯಲ್ಲಿ ನಡೆಯುತ್ತಿದ್ದವು. ಆ ಸಂದರ್ಭದಲ್ಲಿ ಬೆಂಗಳೂರಿನಲ್ಲಿ ಇದ್ದ ಕೆಲವೇ ಚಿತ್ರಮಂದಿರಗಳಲ್ಲಿ ‘ಮೆಜೆಸ್ಟಿಕ್’ ಚಿತ್ರಮಂದಿರವೂ ಒಂದು.

ಅದು ಮೂಕಿ ಚಿತ್ರಗಳ ಕಾಲ. ಆಗೊಂದು, ಈಗೊಂದು ಚಿತ್ರಗಳು ಈ ಚಿತ್ರಮಂದಿರದಲ್ಲಿ ಪ್ರದರ್ಶನವಾಗುತ್ತಿದ್ದವು. ಉಳಿದ ದಿನಗಳಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳು, ಸನ್ಮಾನ ಸಮಾರಂಭಗಳು ನಡೆಯುತ್ತಿದ್ದವು. ಬಸವನಗುಡಿ, ಚಾಮರಾಜಪೇಟೆ, ಮಲ್ಲೇಶ್ವರ ಹಾಗೂ ಇತರೆಡೆಗಳಿಂದ ಬರುತ್ತಿದ್ದ ಜನ ‘ಮೆಜೆಸ್ಟಿಕ್’ಗೆ (ಚಿತ್ರಮಂದಿರಕ್ಕೆ) ಹೋಗೋಣ’ ಎಂದು ಹೇಳುತ್ತಿದ್ದರು. ತಂಡೋಪತಂಡವಾಗಿ ಬಂದು ಚಲನಚಿತ್ರ ಮತ್ತು ಕಾರ್ಯಕ್ರಮಗಳನ್ನು ವೀಕ್ಷಿಸುತ್ತಿದ್ದರು.

‘ಮೆಜೆಸ್ಟಿಕ್’ ಚಿತ್ರಮಂದಿರವನ್ನೇ ಇಲ್ಲಿನ ಸುತ್ತಮುತ್ತಲ ಪ್ರದೇಶದ ಹೆಗ್ಗುರುತನ್ನಾಗಿ ಜನ ಬಳಸುತ್ತಿದ್ದರು. ಕ್ರಮೇಣ ಬಹಳಷ್ಟು ಪ್ರಸಿದ್ಧ ಪಡೆದಿದ್ದ ಚಿತ್ರಮಂದಿರ ಸುತ್ತಮುತ್ತಲಿನ ಇಡೀ ಪ್ರದೇಶವೇ ‘ಮೆಜೆಸ್ಟಿಕ್’ ಎಂದು ಹೆಸರು ಪಡೆಯಿತು ಎಂದು ಮೆಜೆಸ್ಟಿಕ್ ಇತಿಹಾಸ ತಿಳಿದವರು ಹೇಳುತ್ತಾರೆ.

ಹೀಗೆ ಚಿತ್ರಮಂದಿರವೊಂದರ ಹೆಸರು ಬೆಂಗಳೂರಿನ ಕೇಂದ್ರ ಸ್ಥಾನದ ಹೆಸರಾಯಿತು. ಈಗ ಬೆಂಗಳೂರು ಮಾತ್ರವಲ್ಲ ರಾಜ್ಯ ಮತ್ತು ಹೊರ ರಾಜ್ಯಗಳ ಮೂಲೆ ಮೂಲೆಗೂ ಈ ಮೆಜೆಸ್ಟಿಕ್ ಹೆಸರುವಾಸಿ. ‘ಮೆಜೆಸ್ಟಿಕ್’ ಹೆಸರಿನಲ್ಲಿ ಕನ್ನಡದಲ್ಲಿ ಸಿನಿಮಾ ಕೂಡ ನಿರ್ಮಾಣವಾಗಿದೆ.

ಕೆರೆಯಲ್ಲೇ ಬಸ್ ನಿಲ್ದಾಣ ನಿರ್ಮಾಣ

ಧರ್ಮಾಂಬುಧಿ ಕೆರೆ ದಂಡೆಯ ಸುತ್ತ ನಗರ ಸಾರಿಗೆ ಬಸ್‌ಗಳನ್ನು ನಿಲ್ಲಿಸಲಾಗುತ್ತಿತ್ತು. ಹೀಗಾಗಿ 1964ರಲ್ಲಿ ಬಸ್ ನಿಲ್ದಾಣ ನಿರ್ಮಾಣಕ್ಕಾಗಿ ಕೆರೆ ಜಾಗವನ್ನು ಸಾರಿಗೆ ಇಲಾಖೆಗೆ ಹಸ್ತಾಂತರ ಮಾಡಲಾಯಿತು.

ಅಂದಿನ ಮೈಸೂರು ಸರ್ಕಾರವು 1969ರಲ್ಲಿ ಬಸ್ ನಿಲ್ದಾಣಕ್ಕೆ ಶಂಕುಸ್ಥಾಪನೆ ನೆರವೇರಿಸಿತ್ತು. 1980ರ ಸಂದರ್ಭದಲ್ಲಿ ಈ ಸ್ಥಳದಲ್ಲಿ ಕೆಂಪೇಗೌಡ ಬಸ್ ನಿಲ್ದಾಣ ತಲೆ ಎತ್ತಿ ನಿಂತಿತು.



ಶಾಸಕ ಅರವಿಂದ ಲಿಂಬಾವಳಿ ಬೈಕ್ ರ‍್ಯಾಲಿ ಮೂಲಕ ರಸ್ತೆಗಳ ಪರಿಶೀಲನೆ ನಡೆಸಿದರು. ಬಿಬಿಎಂಪಿ ಜಂಟಿ ಆಯುಕ್ತ ವೆಂಕಟಾಚಲಪತಿ, ಬಿಜೆಪಿ ನಗರ ಮಂಡಲ ಅಧ್ಯಕ್ಷ ಮನೋಹರ ರೆಡ್ಡಿ, ಮುಖಂಡರಾದ ನಟರಾಜ್ ಮಹೇಂದ್ರ ಮೋದಿ, ಅನಂತರಾಮಯ್ಯ, ಶ್ರೀಧರ್ ರೆಡ್ಡಿ, ಹೂಡಿ ಪಿಳ್ಳಪ್ಪ, ಎಲೆರಾಜೇಶ್, ನಲ್ಲೂರಹಳ್ಳಿ ಚಂದ್ರಶೇಖರ ರೆಡ್ಡಿ, ಚನ್ನಸಂದ್ರ ಚಂದ್ರಶೇಖರ್ ಇದ್ದರು.

ರಸ್ತೆಗಳ ಪರಿಶೀಲನೆಗೆ ಬೈಕ್ ರ‍್ಯಾಲಿ

ಕೆ.ಆರ್.ಪುರ: ಶಾಸಕ ಅರವಿಂದ ಲಿಂಬಾವಳಿ ಅವರು ಮಹದೇವಪುರ ಕ್ಷೇತ್ರದ ವ್ಯಾಪ್ತಿಯಲ್ಲಿ 35 ಕಿಮೀ ಬೈಕ್ ರ‍್ಯಾಲಿ ನಡೆಸುವ ಮೂಲಕ ರಸ್ತೆ ತಪಾಸಣೆ ಮಾಡಿದರು.

ಅಗ್ನಿ ಸ್ಥಿತಿಗತಿ ಪರಿಶೀಲಿಸಲು ದಿ ಅಗ್ನಿ ಇಂಡಿಯಾ ಸಂಸ್ಥೆ ಸಹಯೋಗ ದಲ್ಲಿ ಶನಿವಾರ ಹಮ್ಮಿಕೊಂಡಿದ್ದ ‘ಮಹದೇವಪುರ ಕ್ಲೀನ್ ಸ್ಟ್ರೀಟ್ 75ಕೆ ಚಾಲೆಂಜ್ ತಪಾಸಣೆ-2’ ಅಭಿಯಾನದಲ್ಲಿ ಅವರು ಭಾಗವಹಿಸಿದರು.

ಯಮಲೂರು ಜಂಕ್ಷನ್‌ನಲ್ಲಿ ಸ್ವಯಂಸೇವಕರ ಜೊತೆ ಗೂಡಿಗೆ ಬಣ್ಣ ಬಳಿಯುವ ಮೂಲಕ ರ‍್ಯಾಲಿಗೆ ಚಾಲನೆ ನೀಡಿದ ಅವರು, ‘ಸಾರ್ವಜನಿಕರ ಕಸವನ್ನು ಎಲ್ಲೆಂದರಲ್ಲಿ ಬಿಸಾಡದೆ ಸುತ್ತ-ಮುತ್ತಲಿನ ಪ್ರದೇಶಗಳನ್ನು ಸ್ವಚ್ಛವಾಗಿರಿಸಿಕೊಳ್ಳಬೇಕು’ ಎಂದರು.

ಪಾದಚಾರಿ ಮಾರ್ಗಗಳನ್ನು ಅತಿಕ್ರಮಿಸಿಕೊಂಡ ವ್ಯಾಪಾರಿಗಳು ಒಂದು ವಾರದೊಳಗೆ ಒತ್ತುವರಿಯನ್ನು ತೆರವುಗೊಳಿಸಬೇಕು ಎಂದು ಸೂಚಿಸಿದರು.

ದೊಡ್ಡನೆಕ್ಕುಂದಿ, ರೈನ್ ಬೋ ಆಸ್ಪತ್ರೆ ರಸ್ತೆ, ಅಲ್ಟನ್ ಇಕೋ ರಸ್ತೆ, ಗ್ರಾಫೈಟ್ ರಸ್ತೆ, ಗರುಡಾಚಾರ್ ಪಾಳ್ಯ, ಟಿನ್ ಫ್ಯಾಕ್ಟರಿ ರಸ್ತೆ, ಹೂಡಿ ವೃತ್ತ, ಅಯ್ಯಪ್ಪ ನಗರ, ಐಟಿಪಿಎಲ್, ಹೋಪ್ ಫಾರಂ, ವರ್ತೂರು ಕೋಡಿ, ಕುಂದಲಹಳ್ಳಿ ಜಂಕ್ಷನ್, ಗೋ ಶಾಲೆ ರಸ್ತೆ, ಬೋರ್‌ವೆಲ್ ರಸ್ತೆಗಳನ್ನು ಅವರು ಪರಿಶೀಲಿಸಿದರು.

ಸಿಟಿ ಮಾರುಕಟ್ಟೆ ಪೊಲೀಸರ ಕಾರ್ಯಾಚರಣೆ: 9 ಮಂದಿಯ ಬಂಧನ

ಜಾಮೀನು ಕೊಡಿಸಲು ನಕಲಿ ದಾಖಲೆ ಸೃಷ್ಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆರೋಪಿಗಳಿಗೆ ಜಾಮೀನು ಕೊಡಿಸಲು ನಕಲಿ ದಾಖಲೆ ಸೃಷ್ಟಿಸುತ್ತಿದ್ದ ಜಾಲ ಭೇದಿಸಿರುವ ಸಿಟಿ ಮಾರುಕಟ್ಟೆ ಠಾಣೆ ಪೊಲೀಸರು, ಮಹಿಳೆ ಸೇರಿ ಒಟ್ಟು 9 ಆರೋಪಿಗಳನ್ನು ಬಂಧಿಸಿದ್ದಾರೆ.

‘ಹಗ್ಗನಹಳ್ಳಿಯ ಪುಟ್ಟಸ್ವಾಮಿ (47), ಮಧುಗಿರಿಯ ನವೀನ್ (27), ಚಿಕ್ಕಬಳ್ಳಾಪುರದ ರಾಜಣ್ಣ (52), ಮಂಜುನಾಥ್ (36), ದೊಡ್ಡಬಳ್ಳಿಯ ಅಂಜಿನಪ್ಪ (43), ಲಕ್ಷ್ಮಣರಾರದ ಕುಮಾರ (43), ದೇವನಹಳ್ಳಿ ಬಳಿಯ ಚನ್ನರಾಯಪಟ್ಟಣದ ಚಂದ್ರೇಗೌಡ (38), ಕೋಲಾರದ ಸಣ್ಣೇಗೌಡ (41) ಹಾಗೂ ಚಿಕ್ಕಬಳ್ಳಾಪುರದ ದಾಸಪ್ಪ (48) ಬಂಧಿತರು. ಇವರು ಸರ್ಕಾರಿ ಕಚೇರಿಯ ಸೀಲ್‌ಗಳನ್ನು ನಕಲು ಮಾಡಿ ದಾಖಲೆಗಳನ್ನು ಸೃಷ್ಟಿಸುತ್ತಿದ್ದರು’ ಎಂದು ಪೊಲೀಸರು ತಿಳಿಸಿದ್ದಾರೆ.

‘ಕೃತ್ಯಕ್ಕೆ ಬಳಸಿದ್ದ 14 ನಕಲಿ ಸೀಲ್‌ಗಳು, 35ಕ್ಕೂ ಅಧಿಕ ಆಧಾರ್ ಕಾರ್ಡ್‌ಗಳು, 100ಕ್ಕೂ ಅಧಿಕ ಪಹಣಿ ಪತ್ರಗಳು, 40ಕ್ಕೂ ಹೆಚ್ಚು ಖಾಲಿ ಪರಿಹಾರ (ಸಾಲ್ವೆನ್ಸಿ) ಪ್ರಮಾಣಪತ್ರಗಳು, ತಲಾ ಒಂದು ಕಂಪ್ಯೂಟರ್, ಪ್ರಿಂಟರ್, ಸ್ಕ್ಯಾನರ್, ಲ್ಯಾಮಿನೇಷನ್ ಯಂತ್ರ ಹಾಗೂ ಆಟೊ ಜಪ್ತಿ ಮಾಡಲಾಗಿದೆ’ ಎಂದು ಮಾಹಿತಿ ನೀಡಿದ್ದಾರೆ.

‘ಇದೇ 19ರ ರಾತ್ರಿ 10.30ರ ಸುಮಾರಿಗೆ ಸಿಬ್ಬಂದಿ ಠಾಣೆ ವ್ಯಾಪ್ತಿಯಲ್ಲಿ ವಾಹನ ತಪಾಸಣೆ ನಡೆಸುತ್ತಿದ್ದರು. ಈ ವೇಳೆ ಆಟೊ ರಿಕ್ಷಾವೊಂದು ಬಂದಿತ್ತು. ಅದನ್ನು ತಡೆದು ಪರಿಶೀಲಿಸಲು ಮುಂದಾದಾಗ ಆಟೊದಲ್ಲಿದ್ದ ಇಬ್ಬರು ಅನುಮಾನಾಸ್ಪದವಾಗಿ ವರ್ತಿಸಿದ್ದರು. ಅವರನ್ನು ಠಾಣೆಗೆ ಕರೆತಂದು ಬ್ಯಾಗ್ ಪರಿಶೀಲಿಸಿದಾಗ ಅದರಲ್ಲಿ ಸರ್ಕಾರಿ ಇಲಾಖೆಯ ಸೀಲುಗಳು ಹಾಗೂ ಹಲವು ದಾಖಲೆಗಳು ಪತ್ತೆಯಾಗಿದ್ದವು. ತೀವ್ರ ವಿಚಾರಣೆ ನಡೆಸಿದಾಗ ಜಾಲದಲ್ಲಿ ಭಾಗಿಯಾಗಿದ್ದ ಇತರ ಏಳು ಮಂದಿಯ ಹೆಸರು ಬಹಿರಂಗಪಡಿಸಿದ್ದರು’ ಎಂದು ಮಾಹಿತಿ ನೀಡಿದ್ದಾರೆ.

‘ತಾಲ್ಲೂಕು ಕಚೇರಿಗಳಿಗೆ ಹೋಗಿ ಕೆಲ ರೈತರ ಆರ್‌ಟಿಸಿ ಹಾಗೂ ಮ್ಯುಟೇಷನ್ ಪಡೆಯುತ್ತಿದ್ದ ಆರೋಪಿಗಳು ಅದರಲ್ಲಿನ ಹೆಸರಿಗೆ ಅನುಗುಣವಾಗಿ ಕೆಲವು ವ್ಯಕ್ತಿಗಳ ಭಾವಚಿತ್ರ ಬಳಸಿ ನಕಲಿ ಆಧಾರ್ ಕಾರ್ಡ್‌ಗಳನ್ನು ತಯಾರಿಸುತ್ತಿದ್ದರು. ಪಹಣಿಗೆ ಅನುಗುಣವಾಗಿ ಋಣ ಪರಿಹಾರ ಪ್ರಮಾಣಪತ್ರ ಕೂಡ ತಯಾರಿಸುತ್ತಿದ್ದರು. ಅದನ್ನು ವಕೀಲರ ಮೂಲಕ ನ್ಯಾಯಾಲಯಕ್ಕೆ ಸಲ್ಲಿಸಿ ಜಾಮೀನಿಗೆ ಅರ್ಜಿ ಸಲ್ಲಿಸುತ್ತಿದ್ದರು’ ಎಂದು ಹೇಳಿದ್ದಾರೆ.

ಮುಖ್ಯಾಂಶಗಳು
• ನಕಲಿ ದಾಖಲೆ ಸೃಷ್ಟಿಯ ಜಾಲ ಭೇದಿಸಿದ ಪೊಲೀಸರು
• ಬಂಧಿತರ ಬಳಿಯಿದ್ದ 35ಕ್ಕೂ ಹೆಚ್ಚು ಆಧಾರ್, 100ಕ್ಕೂ ಅಧಿಕ ಪಹಣಿ ಪತ್ರ ವಶ
• ಕಂಪ್ಯೂಟರ್, ಪ್ರಿಂಟರ್, ಸ್ಕ್ಯಾನರ್, ಲ್ಯಾಮಿನೇಷನ್ ಯಂತ್ರ, ಆಟೊ ಜಪ್ತಿ

ಶೀಲ ಶಂಕೆ: ಮುದ್ದೆಕೋಲಿನಿಂದ ಹೊಡೆದು ಪತ್ನಿ ಕೊಲೆ

ಬೆಂಗಳೂರು: ಶೀಲಶಂಕಿಸಿ ಮುದ್ದೆಕೋಲಿನಿಂದ ಹೊಡೆದು ಪತ್ನಿಯನ್ನು ಕೊಲೆ ಮಾಡಿದ್ದ ಆರೋಪಿಯನ್ನು ತಲಘಟ್ಟಪುರ ಠಾಣೆ ಪೊಲೀಸರು ಬಂಧಿಸಿದ್ದಾರೆ.

‘ನಾಗೇಗೌಡನ ಪಾಳ್ಯದ ನಿವಾಸಿ ಪದ್ಮಾ (45) ಮೃತರು. ಆರೋಪಿ ಮಾರಪ್ಪನನ್ನು ಬಂಧಿಸಿ ವಿಚಾರಣೆ ನಡೆಸಲಾಗುತ್ತಿದೆ’ ಎಂದು ಪೊಲೀಸರು ತಿಳಿಸಿದ್ದಾರೆ.

‘ದಂಪತಿಗೆ ಇಬ್ಬರು ಗಂಡು ಮಕ್ಕಳಿದ್ದಾರೆ. ಆರೋಪಿ ಮಾರಪ್ಪ ಕೃಷಿಕನಾಗಿದ್ದ. ಪತ್ನಿಯ ಶೀಲ ಶಂಕಿಸಿ ಆಗಾಗ ಜಗಳವಾಡುತ್ತಿದ್ದ. ಶುಕ್ರವಾರವೂ ದಂಪತಿ ನಡುವೆ ಇದೇ ವಿಚಾರಕ್ಕೆ ಗಲಾಟೆ ನಡೆದಿತ್ತು. ಆಗ ಕೋಪಗೊಂಡಿದ್ದ ಆತ ಅಡುಗೆ ಕೋಣೆಯಲ್ಲಿದ್ದ ಮುದ್ದೆಕೋಲಿನಿಂದ ಪದ್ಮಾ ಅವರ ತಲೆಗೆ ಹೊಡೆದಿದ್ದ. ಬಳಿಕ ಒಳಗಿನಿಂದ ಬಾಗಿಲ ಚಿಲಕ ಹಾಕಿಕೊಂಡಿದ್ದ’ ಎಂದಿದ್ದಾರೆ.

‘ಮಗ ರಾತ್ರಿ ಮನೆಗೆ ಬಂದು ಬಾಗಿಲು ತೆಗೆಯುವಂತೆ ಅಮ್ಮನನ್ನು ಕೂಗಿದ್ದರು. ಅವರು ಪ್ರತಿಕ್ರಿಯಿಸಿರಲಿಲ್ಲ. ಅನುಮಾನಗೊಂಡ ಮಗ, ಠಾಣೆಗೆ ಕರೆ ಮಾಡಿದ್ದರು. ಸಿಬ್ಬಂದಿ ಬಂದು ಪರಿಶೀಲಿಸಿದಾಗ ಪದ್ಮಾ ರಕ್ತದ ಮಡುವಿನಲ್ಲಿ ಬಿದ್ದಿರುವುದು ಕಂಡುಬಂದಿತ್ತು’ ಎಂದು ವಿವರಿಸಿದ್ದಾರೆ.

‘ಪದವಿ ನೀಡಿದರೆ ಸಾಲದು, ಗುಣಮಟ್ಟ ಕಾಯ್ದುಕೊಳ್ಳಬೇಕು’

ಪ್ರಜಾವಾಣಿ ವಾರ್ತೆ



ಡಾ.ಕೆ.ಬಾಲವೀರರೆಡ್ಡಿ ಅವರು ವಿದ್ಯಾರ್ಥಿಯೊಬ್ಬರಿಗೆ ಪದವಿ ಪ್ರದಾನ ಮಾಡಿದರು. ಪ್ರಾಧ್ಯಾಪಕ ಮಂಜುನಾಥ್ ರವಿಕುಮಾರ್, ಎಸ್‌ಎನ್‌ವಿ.ಎಲ್ ನರಸಿಂಹರಾಜು, ಡಾ.ಕಣ್ಣನ್ ಮತ್ತಿತರರು ಇದ್ದಾರೆ.

ಬೊಮ್ಮನಹಳ್ಳಿ: ‘ಕಾಲೇಜುಗಳು ಕೇವಲ ಪದವಿ ನೀಡಿ ಕೈತೊಳೆದುಕೊಳ್ಳುವುದಲ್ಲ, ಬದಲಾಗಿ ಜಾಬ್ ಮಾರ್ಕೆಟ್‌ನ ಗುಣಮಟ್ಟದ ಶಿಕ್ಷಣ ನೀಡುವತ್ತ ವಿದ್ಯಾಸಂಸ್ಥೆಗಳು ಚಿತ್ತ ಹರಿಸಬೇಕು’ ಎಂದು ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಡಾ.ಕೆ. ಬಾಲವೀರರೆಡ್ಡಿ ಹೇಳಿದರು.

ಹೊಸೂರು ರಸ್ತೆ ಬೊಮ್ಮನಹಳ್ಳಿಯ ಆಕ್ಸ್‌ಫರ್ಡ್ ಎಂಜಿನಿಯರಿಂಗ್ ಕಾಲೇಜಿನಲ್ಲಿ ಶನಿವಾರ ಏರ್ಪಡಿಸಿದ್ದ 17ನೇ ಘಟಿಕೋತ್ಸವದಲ್ಲಿ ಅವರು ಮಾತನಾಡಿದರು.

‘ವಿದ್ಯಾರ್ಥಿಗಳಲ್ಲಿ ಕೌಶಲ ಬೆಳೆಸಲು ಶಿಕ್ಷಕರು ಗಮನ ನೀಡಬೇಕು. ಉದ್ಯೋಗ ಅರಸುವವರ ಬದಲು ಉದ್ಯೋಗದಾತರನ್ನು ರೂಪಿಸಬೇಕು’ ಎಂದರು.

‘ದೇಶದಲ್ಲಿ ಸರಕು ಆಮದು ಪ್ರಮಾಣ ಹೆಚ್ಚುತ್ತಿದೆ. ಸರಕು ಉತ್ಪಾದನೆಯ ಜತೆಗೆ ರಫ್ತು ಮಾಡುವ ಸಾಮರ್ಥ್ಯವೂ ಹೆಚ್ಚಬೇಕಿದೆ. ಇದರತ್ತ ಎಂಜಿನಿಯರಿಂಗ್ ಪದವೀಧರರು ಹೊಸ ಆವಿಷ್ಕಾರದಲ್ಲಿ ತೊಡಗಿ ದೇಶದ ಅಭಿವೃದ್ಧಿಗೆ ಕೊಡುಗೆ ನೀಡಬೇಕು’ ಎಂದು ಕಿವಿಮಾತು ಹೇಳಿದರು.

ಅಧ್ಯಕ್ಷತೆ ವಹಿಸಿದ್ದ ಆಕ್ಸ್‌ಫರ್ಡ್ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಎಸ್.ಎನ್.ವಿ.ಎಲ್.ನರಸಿಂಹರಾಜು, ‘ವಿದ್ಯಾರ್ಥಿಗಳು ವಿದ್ಯಾರ್ಜನೆಯ ಜತೆಗೆ ಸಾಮರ್ಥ್ಯ ವೃದ್ಧಿಯತ್ತ ಗಮನಹರಿಸಬೇಕು. ಆಕ್ಸ್‌ಫರ್ಡ್ ಸಂಸ್ಥೆ ವಿದ್ಯಾರ್ಥಿಗಳಿಗೆ ಪ್ರಾಯೋಗಿಕ ಕೌಶಲ ಮೂಡಿಸುವ ದಿಸೆಯಲ್ಲಿ ಕೆಲಸ ಮಾಡುತ್ತಿದೆ. ವಿದ್ಯಾರ್ಥಿಗಳೇ ನಮ್ಮ ಕಾಲೇಜಿನ ರಾಯಭಾರಿಗಳು’ ಎಂದರು.

ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಾಯಿತು. ರ‍್ಯಾಂಕ್ ವಿಜೇತರನ್ನು ಸನ್ಮಾನಿಸಲಾಯಿತು. ಪ್ರಾಂಶುಪಾಲ ಡಾ.ಎನ್.ಕಣ್ಣನ್, ನಿರ್ದೇಶಕ ಡಾ.ಕೆ. ಎಂ.ರವಿಕುಮಾರ್, ಆಡಳಿತ ಮಂಡಳಿ ಸದಸ್ಯ ವೆಂಕಟೇಶ್ವರಲು ಇದ್ದರು.

ವರ್ಷದಲ್ಲಿ 18 ಅಪರಾಧ ಕೃತ್ಯ: ಆರೋಪಿ ಬಂಧನ

ಪ್ರಜಾವಾಣಿ ವಾರ್ತೆ



ಜಪ್ತಿ ಮಾಡಿದ ಸ್ವತ್ತುಗಳೊಂದಿಗೆ ಆರೋಪಿ ಸಿದ್ದಿಕ್

ಬೆಂಗಳೂರು: ಜೈಲಿನಿಂದ ಬಿಡುಗಡೆಯಾದ ಒಂದೇ ವರ್ಷದಲ್ಲಿ ಒಟ್ಟು 18 ಅಪರಾಧ ಕೃತ್ಯಗಳಲ್ಲಿ ಭಾಗಿಯಾಗಿದ್ದ ಆರೋಪಿಯನ್ನು ತಲಘಟ್ಟಪುರ ಠಾಣೆ ಪೊಲೀಸರು ಬಂಧಿಸಿದ್ದಾರೆ. ಆತನಿಂದ ಒಟ್ಟು ₹11.50 ಲಕ್ಷ ಮೌಲ್ಯದ ಸ್ವತ್ತು ಜಪ್ತಿ ಮಾಡಿದ್ದಾರೆ.

‘ಮೈಸೂರಿನ ರಾಜೀವ್‌ನಗರ ನಿವಾಸಿ ಸೈಯದ್ ಅಬೂಬಕರ್ ಸಿದ್ದಿಕ್ ಯಾನೆ ಸಿದ್ದಿಕ್ (39) ಬಂಧಿತ. ಆತನಿಂದ 5 ದ್ವಿಚಕ್ರ ವಾಹನ, ವಿವಿಧ ಕಂಪನಿಯ 9 ಲ್ಯಾಪ್‌ಟಾಪ್‌ಗಳು, ಸೋನಿ ಕಂಪನಿಯ 1 ಕ್ಯಾಮೆರಾ, ತಲಾ 2 ಲೆನ್ಸ್ ಹಾಗೂ ಫ್ಲ್ಯಾಷ್ ಮತ್ತು ₹65 ಸಾವಿರ ನಗದು ಜಪ್ತಿ ಮಾಡಿದ್ದೇವೆ’ ಎಂದು ಪೊಲೀಸರು ತಿಳಿಸಿದ್ದಾರೆ.

‘ಬನ್ನೇರುಘಟ್ಟ ರಸ್ತೆ ವಿಲಾಂಬರಹಳ್ಳಿಯ ಹಾಜಿ ಮಸೀದಿ ಹತ್ತಿರ ವಾಸವಿದ್ದ ಆರೋಪಿಯ ವಿರುದ್ಧ ಈವರೆಗೂ ಒಟ್ಟು 77 ಪ್ರಕರಣಗಳು ದಾಖಲಾಗಿವೆ. ಈತ ಒಟ್ಟು 60 ಪ್ರಕರಣಗಳಲ್ಲಿ ನ್ಯಾಯಾಲಯಕ್ಕೆ ಹಾಜರಾಗದೆ ತಲೆಮರೆಸಿಕೊಂಡಿದ್ದ’ ಎಂದು ಹೇಳಿದ್ದಾರೆ.

‘ಖಾಸಗಿ ಕಂಪನಿಯ ಉದ್ಯೋಗಿಯೊಬ್ಬರು ಇದೇ 9ರಂದು ಠಾಣೆ ವ್ಯಾಪ್ತಿಯ ಸ್ನೇಹಿತರೊಂದಿಗೆ ಬಳಿ ಸಂಜೆ 6.50ರ ಸುಮಾರಿಗೆ ಕಾರು ನಿಲುಗಡೆ ಮಾಡಿ ಕಚೇರಿಗೆ ತೆರಳಿದ್ದರು. ಅದರೊಳಗೆ ಲೆನೊವಾ ಕಂಪನಿಯ ಲ್ಯಾಪ್‌ಟಾಪ್, ಚಾರ್ಜರ್, ಪರ್ಸ್ ಹಾಗೂ ಕೆಲ ದಾಖಲೆಗಳನ್ನು ಇಟ್ಟಿದ್ದರು. 10 ನಿಮಿಷಗಳ ಬಳಿಕ ಬಂದು ನೋಡಿದಾಗ ಕಾರಿನ ಹಿಂಬದಿಯ ಗಾಜು ಒಡೆದಿತ್ತು. ಅದರಲ್ಲಿದ್ದ ವಸ್ತುಗಳನ್ನು ಯಾರೋ ಕಳವು ಮಾಡಿದ್ದರು. ಈ ಸಂಬಂಧ ಅವರು ಠಾಣೆಗೆ ಬಂದು ದೂರು ದಾಖಲಿಸಿದ್ದರು’ ಎಂದು ತಿಳಿಸಿದ್ದಾರೆ.

‘ಇದೇ 16ರಂದು ಆರೋಪಿಯನ್ನು ಬಂಧಿಸಿ ವಿಚಾರಿಸಿದಾಗ ಆತ ಕಳವು ಮಾಡಿರುವುದನ್ನು ಒಪ್ಪಿಕೊಂಡಿದ್ದ. ಈತನ ಬಂಧನದಿಂದ ಠಾಣೆ ವ್ಯಾಪ್ತಿಯ 3, ಜೆಪಿನಗರ, ಬಂಡೇಪಾಳ್ಯ, ಬಾಗಲೂರು, ಎಚ್‌ಎಎಲ್ ಏರ್‌ಪೋರ್ಟ್, ಕೆಂಗೇರಿ ಠಾಣೆ ವ್ಯಾಪ್ತಿಯ ತಲಾ 2, ಪರಪ್ಪನ ಅಗ್ರಹಾರ, ಅತ್ತಿಬೆಲೆ, ಸರ್ಜಾಪುರ, ಕೊತ್ತನೂರು, ಹುಳಿಮಾವು, ಗಿರಿನಗರ ಠಾಣೆಯ ತಲಾ ಒಂದು ಪ್ರಕರಣ ಪತ್ತೆಯಾಗಿದೆ’ ಎಂದು ಮಾಹಿತಿ ನೀಡಿದ್ದಾರೆ.

‘ಆರೋಪಿಯ ವಿರುದ್ಧ ಚಂದ್ರಾಲೇಔಟ್, ರಾಜರಾಜೇಶ್ವರಿನಗರ, ಅನ್ನಪೂರ್ಣೇಶ್ವರಿ ನಗರ, ಜ್ಞಾನಭಾರತಿ, ಬ್ಯಾಟರಾಯನಪುರ, ಬಸವೇಶ್ವರನಗರ, ವಿಜಯ ನಗರ, ಕಾಟನ್‌ಪೇಟೆ, ಕೋಣನಕುಂಟೆ, ಸುಬ್ರಹ್ಮಣ್ಯಪುರ, ಕುಮಾರಸ್ವಾಮಿ ಲೇಔಟ್, ಮೈಕೋ ಲೇಔಟ್, ರಾಮಮೂರ್ತಿ ನಗರ, ಕಾಡುಗೊಂಡನಹಳ್ಳಿ (ಕೆ.ಜಿ.ಹಳ್ಳಿ), ಸಂಜಯನಗರ, ಬಾಣಸವಾಡಿ, ಕೊಡಿಗೇಹಳ್ಳಿ, ವಿದ್ಯಾರಣ್ಯಪುರ, ಯಲಹಂಕ ನ್ಯೂ ಟೌನ್, ಸಂಪಿಗೆಹಳ್ಳಿ, ಅಮೃತಹಳ್ಳಿ, ಬ್ಯಾಡರಹಳ್ಳಿ, ಮಹಾಲಕ್ಷ್ಮಿ ಲೇಔಟ್, ಕೆ.ಆರ್.ಪುರ ಪೊಲೀಸ್ ಠಾಣೆಗಳಲ್ಲೂ ಪ್ರಕರಣ ದಾಖಲಾಗಿವೆ’ ಎಂದು ವಿವರಿಸಿದ್ದಾರೆ.

ಅಕ್ರಮವಾಗಿ ಅನಿಲ ಮರುಪೂರಣ: ಸಿಸಿಬಿ ದಾಳಿ

ಬೆಂಗಳೂರು: ಅಕ್ರಮವಾಗಿ ಅನಿಲ ಮರುಪೂರಣ (ಗ್ಯಾಸ್ ರೀಫಿಲ್ಲಿಂಗ್) ಮಾಡುತ್ತಿದ್ದ ಶೆಡ್ ಮೇಲೆ ದಾಳಿ ನಡೆಸಿರುವ ಸಿಸಿಬಿ ಪೊಲೀಸರು ಒಟ್ಟು 6 ಮಂದಿಯನ್ನು ಬಂಧಿಸಿದ್ದಾರೆ.

‘ಲಾಲ್ ಸಿಂಗ್, ಜಬ್ಬರ್ ಸಿಂಗ್ ಹಾಗೂ ಇತರರನ್ನು ಬಂಧಿಸಲಾಗಿದೆ. ಶೆಡ್‌ನಲ್ಲಿ ದಾಸ್ತಾನು ಇಡಲಾಗಿದ್ದ 500 ಖಾಲಿ ಸಿಲಿಂಡರ್‌ಗಳು ಹಾಗೂ ಇವುಗಳ ಸಾಗಣೆಗೆ ಬಳಸುತ್ತಿದ್ದ ನಾಲ್ಕು ವಾಹನಗಳನ್ನು ಜಪ್ತಿ ಮಾಡಲಾಗಿದೆ. ಇವುಗಳ ಒಟ್ಟು ಮೌಲ್ಯ ₹7 ಲಕ್ಷ’ ಎಂದು ಸಿಸಿಬಿ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

‘ಚಿಕ್ಕಜಾಲ ಪೊಲೀಸ್ ಠಾಣೆ ವ್ಯಾಪ್ತಿಯ ಬೆಟ್ಟಹಲಸೂರಿನ ಸೊಣ್ಣಪ್ಪ ಹೌಸ್ಟ್ರೀ ಫಾರಂನ ಶೆಡ್‌ಗಳಲ್ಲಿ ಆರೋಪಿಗಳು ಎಚ್‌ಪಿ, ಇಂಡೇನ್, ಭಾರತ್, ಜ್ಯೋತಿ, ಇಂಡೋ ಹಾಗೂ ಟೋಟಲ್ ಕಂಪನಿಯ ಸಿಲಿಂಡರ್‌ಗಳನ್ನು ದಾಸ್ತಾನು ಇಟ್ಟಿದ್ದರು’ ಎಂದು ವಿವರಿಸಿದ್ದಾರೆ.

‘ಕಾಂಗ್ರೆಸ್ ಜನರ ವಿಶ್ವಾಸ ಕಳೆದುಕೊಂಡಿದೆ’

ಬೆಂಗಳೂರು: ‘ಕಾಂಗ್ರೆಸ್ ಆತ್ಮಾವಲೋಕನ ಪಕ್ಷ. ಇದರ ಉಪಯುಕ್ತತೆ ಅವಧಿ ಮೀರಿದ್ದು, ಜನರಿಗೆ ಇದರ ಮೇಲೆ ವಿಶ್ವಾಸ ಹೋಗಿದೆ’ ಎಂದು ಆಮ್ ಆದ್ಮಿ ಪಕ್ಷದ (ಎಎಪಿ) ರಾಜ್ಯ ಘಟಕದ ಅಧ್ಯಕ್ಷ ಪೃಥ್ವಿ ರೆಡ್ಡಿ ಹೇಳಿದರು.

‘ಕೇಜ್ರಿವಾಲ್ ಅವರ ಭೇಟಿ ರಾಜ್ಯದ ಮೂರೂ ರಾಜಕೀಯ ಪಕ್ಷಗಳನ್ನು ನಿದ್ರೆಯಿಂದ ಎಬ್ಬಿಸಿದಂತಿದೆ. ನಾವು ಈಗಷ್ಟೇ ಹುಟ್ಟಿರುವ ಸಣ್ಣ ಪಕ್ಷ. ಆದರೆ, ಪ್ರಾಮಾಣಿಕ ಜನ ಒಗ್ಗೂಡಿದರೆ ಕಡಿಮೆ ಸಮಯದಲ್ಲಿ ಎಲ್ಲವೂ ಮಾಡಬಹುದು ಎಂಬುದನ್ನು ತೋರಿಸಿಕೊಟ್ಟಿದೆ. ಎಎಪಿ ಜನರಿಗೆ ಹೊಸ ಆಶಾಕಿರಣವಾಗಿ ಹೊರಹೊಮ್ಮುತ್ತಿದೆ’ ಎಂದರು.

‘ಎಎಪಿ ಮಾತ್ರ ಭ್ರಷ್ಟಾಚಾರರಹಿತ ಆಡಳಿತ ನೀಡಿದ್ದು, ಜೆಡಿಎಸ್, ಬಿಜೆಪಿ, ಕಾಂಗ್ರೆಸ್ ಪಕ್ಷಗಳ ಭ್ರಷ್ಟಾಚಾರದ ಬಗ್ಗೆ ಮಾತನಾಡುವ ಧೈರ್ಯ ಮತ್ತು ನೈತಿಕತೆ ಹೊಂದಿದೆ. ಜನರಿಗೆ ಭ್ರಷ್ಟಾಚಾರವಿಲ್ಲದ ಸರ್ಕಾರದ ಅಗತ್ಯವಿದೆ’ ಎಂದರು.

‘ಸಮಯ ಮತ್ತು ಅವಕಾಶ ನೀಡಿದಾಗಲೂ ಭ್ರಷ್ಟಾಚಾರದ ಬಗ್ಗೆ ಏನೂ ಮಾಡಲು ಆಗಲಿಲ್ಲ ಎಂಬುದನ್ನು ಜೆಡಿಎಸ್ ಒಪ್ಪಿಕೊಂಡಿದೆ’ ಎಂದರು.

‘ದಿಜಿಟಲೀಕರಣದ ಈ 40ರಷ್ಟು ಕಮಿಷನ್ ಪಡೆಯುವುದನ್ನು ನಿಲ್ಲಿಸಿದ್ದಲ್ಲಿ, ನಾಡಿನ ಎಲ್ಲರಿಗೂ ಪ್ರತಿ ತಿಂಗಳು 200 ಯೂನಿಟ್ ವಿದ್ಯುತ್ತನ್ನು ಉಚಿತವಾಗಿ ನೀಡಬಹುದು. ಮೂರು ಪಕ್ಷಗಳಲ್ಲಿಯೂ ಕೆಲವು ಒಳ್ಳೆಯವರಿದ್ದಾರೆ. ಸಮಾನ ಮನಸ್ಕರು ಮುಂದೆ ಬಂದು ಆಮ್ ಆದ್ಮಿ ಪಾರ್ಟಿ ಸೇರಿದರೆ, ರಾಜ್ಯದಲ್ಲೂ ಬದಲಾವಣೆ ಸಾಧ್ಯ. ರಾಜ್ಯದ ಜನರಿಗೆ ಸಾಮಾಜಿಕ ನ್ಯಾಯ ಸಿಗಲಿದೆ’ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಸ್ಥಳೀಯರಿಗೆ ಟಿಕೆಟ್: ವರಿಷ್ಠರ ಬಳಿಗೆ ನಿಯೋಗ?

ಪ್ರಜಾವಾಣಿ ವಾರ್ತೆ

ನೆಲಮಂಗಲ: ಕಳೆದ ಮೂರು ವಿಧಾನಸಭಾ ಚುನಾವಣೆಗಳಲ್ಲಿ ಆಗಿರುವ ತಪ್ಪುಗಳನ್ನು ಸರಿಪಡಿಸಿಕೊಳ್ಳುವ ಕುರಿತಂತೆ ಕ್ಷೇತ್ರದ ಕಾಂಗ್ರೆಸ್ ಮುಖಂಡರು ಮತ್ತು ಟಿಕೆಟ್ ಆಕಾಂಕ್ಷಿಗಳು ಶನಿವಾರ ಗೋಪ್ಯವಾಗಿ ಸಭೆ ಸೇರಿ ಆತ್ಮಾವಲೋಕನ ನಡೆಸಿದರು.

‘ಕಾಂಗ್ರೆಸ್ ಭದ್ರಕೋಟೆಯಾಗಿದ್ದ ನೆಲಮಂಗಲ ವಿಧಾನಸಭಾ ಕ್ಷೇತ್ರದಲ್ಲಿ ಈ ಹಿಂದೆ ನಡೆದಂತಹ ತಪ್ಪುಗಳ ಪುನರಾವರ್ತನೆಗೆ ಅವಕಾಶ ನೀಡಬಾರದು. ಗೆಲುವು ಸಾಧಿಸುವುದೊಂದೆ ನಮ್ಮ ಗುರಿಯಾಗಬೇಕು’ ಎಂದು ಮುಖಂಡರು ಸಭೆಯಲ್ಲಿ ಒಮ್ಮತದ ತೀರ್ಮಾನಕ್ಕೆ ಬಂದಿದ್ದಾರೆ ಎಂದು ಪಕ್ಷದ ಮೂಲಗಳು ತಿಳಿಸಿವೆ.

ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ವಿಧಾನಸಭೆಯ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ಜಿಲ್ಲಾ ಘಟಕದ ಅಧ್ಯಕ್ಷ ಸಿ.ನಾರಾಯಣಸ್ವಾಮಿ ಮತ್ತು ಮುಖಂಡ ವೀರಪ್ಪ ಮೊಯಿಲಿ ಬಳಿಗೆ ಸೋಮವಾರ ನಿಯೋಗದಲ್ಲಿ ತೆರಳಿ ಈ ಬಗ್ಗೆ ಚರ್ಚಿಸಲು ಸಭೆಯ ಮುಖಂಡರು ತೀರ್ಮಾನಿಸಿದ್ದಾರೆ. ವರಿಷ್ಠರು ಸೂಚಿಸಿದ ಯಾವುದೇ ಮುಖಂಡರಿಗೆ ಟಿಕೆಟ್ ನೀಡಿದರೂ ಅವರ ಗೆಲುವಿಗೆ ಶ್ರಮಿಸುವ ಬಗ್ಗೆಯೂ ತೀರ್ಮಾನಕ್ಕೆ ಬರಲಾಗಿದೆ ಎಂದು ಮುಖಂಡರೊಬ್ಬರು ಮಾಹಿತಿ ನೀಡಿದರು.

ಈಚೆಗೆ ಒಕ್ಕಲಿಗ ಮುಖಂಡರು ಸಭೆ ಸೇರಿ ಸ್ಥಳೀಯರಾದ ಮಾಜಿ ಸಚಿವ ಅಂಜನಾಮೂರ್ತಿ, ಸಪ್ತಗಿರಿ ಶಂಕರ್ ನಾಯಕ್, ಎಚ್.ಪಿ. ಚೆಲುವರಾಜು, ಕಾರೆಹಳ್ಳಿ ವೆಂಕಟರಾಮ್, ಕೃಷ್ಣಮೂರ್ತಿ, ಮುಮ್ಮೇನ ಹಳ್ಳಿ ಜಯರಾಮ್ ಇವರಲ್ಲಿ ಯಾರಿಗಾದರು ಟಿಕೆಟ್ ನೀಡುವಂತೆ ಪಕ್ಷದ ವರಿಷ್ಠರನ್ನು ಒತ್ತಾಯಿಸಿದ್ದರು.

‘ಇದು ನನ್ನ ಕೊನೆ ಚುನಾವಣೆ. ನನಗೆ ಟಿಕೆಟ್ ನೀಡಿ ಎಲ್ಲರೂ ಬೆಂಬಲಿಸಬೇಕು’ ಎಂದು ಅಂಜನಾಮೂರ್ತಿ ಕೇಳಿಕೊಂಡರು. ‘ಇಲ್ಲವಾದಲ್ಲಿ ಟಿಕೆಟ್ ಆಕಾಂಕ್ಷಿ ಕೃಷ್ಣಮೂರ್ತಿ, ‘ನಿಮಗೆ ಬಿಟ್ಟು ನಮ್ಮಲ್ಲಿ ಬೇರೆ ಯಾರಿಗಾದರೂ ಟಿಕೆಟ್ ದೊರೆತರೆ, ನೀವೂ ಸಹಕರಿಸಬೇಕು’ ಎಂದರು. ಮುಖಂಡರಾದ ವರದನಾಯಕನಹಳ್ಳಿ ನಾಗರಾಜು, ಕೊಡಿಗೆಹಳ್ಳಿ ಶಿವಣ್ಣ, ಚಿಕ್ಕನಾಗಯ್ಯ, ಉಮೇಶ್, ಬಿ.ಟಿ. ಶ್ರೀನಿವಾಸಮೂರ್ತಿ, ಆರ್. ಉಮಾಶಂಕರ್, ಯೋಗೇಶ್ ಗೌಡ, ವಿಜಯ್ ಕಿರಣ್ ಇದ್ದರು.

ಕೊರಟಗೆರೆ ವಿಧಾನಸಭಾ ಕ್ಷೇತ್ರಕ್ಕೆ ಸೇರಿದ್ದ ತ್ಯಾಮಗೊಂಡ್ಲು, ಸೋಂಪುರ ಹೋಬಳಿ, ಈ ಹಿಂದೆ ನೆಲಮಂಗಲ ಕ್ಷೇತ್ರಕ್ಕೆ ಸೇರಿದ್ದ ದಾಸನಪುರ ಮತ್ತು ಮಧುರೆ ಹೋಬಳಿಗಳ ಯಲಹಂಕ ಕ್ಷೇತ್ರಕ್ಕೆ ಸೇರಿವೆ. ಈ ಬದಲಾವಣೆ ಹಾಗೂ ಕ್ಷೇತ್ರದ ಹೊರಗಿನವರಿಗೆ ಟಿಕೆಟ್ ನೀಡಿದ್ದರಿಂದ ಇಲ್ಲಿ ಕಾಂಗ್ರೆಸ್ ಸೋಲು ಕಂಡಿತ್ತು. ಕೆಲವು ಮುಖಂಡರ ಬೆಂಬಲ ಪಡೆದವರು ಚುನಾವಣೆ ಸಂದರ್ಭದಲ್ಲಿ ತಾವೇ ಅಭ್ಯರ್ಥಿ ಎಂದು ಹೇಳಿಕೊಂಡು ಗೊಂದಲ ಸೃಷ್ಟಿಸಿದ್ದು ಹಾಗೂ ಒಮ್ಮತ ಇಲ್ಲದಿದ್ದುದು ಹಿಂದಿನ ಚುನಾವಣೆಗಳಲ್ಲಿ ಪಕ್ಷದ ಸೋಲಿಗೆ ಪ್ರಮುಖ ಕಾರಣವಾಗಿತ್ತು ಎಂದು ಮುಖಂಡರೊಬ್ಬರು ವಿಶ್ಲೇಷಿಸಿದರು.

‘ವಿಧಾನಸೌಧದಲ್ಲಿ ಇಫ್ತಾರ್ ಕೂಟಕ್ಕೆ ಅವಕಾಶ ಬೇಡ’

ಬೆಂಗಳೂರು: ವಿಧಾನಸೌಧ ಹಾಗೂ ವಿಕಾಸಸೌಧದಲ್ಲಿ ಇಫ್ತಾರ್ ಕೂಟ ಆಯೋಜಿಸಲು ಅವಕಾಶ ನೀಡಬಾರದೆಂದು ಒತ್ತಾಯಿಸಿ ರಾಷ್ಟ್ರ ರಕ್ಷಣಾ ಪಡೆ ಕಾರ್ಯಕರ್ತರು ಸ್ವಾತಂತ್ರ್ಯ ಉದ್ಯಾನದಲ್ಲಿ ಶನಿವಾರ ಪ್ರತಿಭಟನೆ ನಡೆಸಿದರು.

‘ಹಲಾಲ್ ಬಹಿಷ್ಕರಿಸಿ-ಭಯೋತ್ಪಾದನೆ ನಿಲ್ಲಿಸಿ’, ‘ಹಲಾಲ್ ಬಹಿಷ್ಕರಿಸಿ-ದೇಶ ಮತ್ತಷ್ಟು ತುಂಡಾಗುವುದನ್ನು ತಡೆಯಿರಿ’, ‘ಹಲಾಲ್ ನಿಷೇಧಿಸಿ-ನಮ್ಮ ಹಿಂದೂಗಳನ್ನು ರಕ್ಷಿಸಿ’ ಎಂಬ ಫಲಕಗಳನ್ನು ಪ್ರತಿಭಟನಾಕಾರರು ಪ್ರದರ್ಶಿಸಿದರು. ಘೋಷಣೆಗಳನ್ನೂ ಕೂಗಿದರು.

‘ಇಫ್ತಾರ್ ಕೂಟವು ಜಾತ್ಯತೀತ ಸರ್ಕಾರವೊಂದು ನಡೆಸಿಕೊಂಡು ಬಂದಿರುವ ಹಳೆಯ ಸಂಪ್ರದಾಯ. ನಿರ್ದಿಷ್ಟ ಧರ್ಮವೊಂದರ ಓಲೈಕೆಗಾಗಿ ಸರ್ಕಾರವು ಜನತೆ ತೆರಿಗೆ ಹಣದಲ್ಲಿ ಇಂಥ ಕಾರ್ಯಕ್ರಮ ಆಯೋಜಿಸುತ್ತಾ ಬಂದಿದ್ದಾರೆ. ಈ ಸಂಸ್ಕೃತಿ ಕೊನೆಗಾಣಬೇಕು. ವಿಧಾನಸೌಧ ಹಾಗೂ ವಿಕಾಸಸೌಧದಲ್ಲಿ ಇನ್ನು ಮುಂದೆ ಇಫ್ತಾರ್ ಕೂಟ ಆಯೋಜಿಸಲು ಅವಕಾಶ ನೀಡಬಾರದು’ ಎಂದು ಪ್ರತಿಭಟನಾಕಾರರು ಆಗ್ರಹಿಸಿದರು.

ವಿಧಾನಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಸಲಹೆ

‘ಪತ್ರಕರ್ತರು ವೃತ್ತಿ ಘನತೆ ಉಳಿಸಲಿ’

ಪ್ರಜಾವಾಣಿ ವಾರ್ತೆ



ಬಸವರಾಜ ಹೊರಟ್ಟಿ ಅವರು ನೂತನ ಪದಾಧಿಕಾರಿಗಳಿಗೆ ಪ್ರಮಾಣ ವಚನ ಬೋಧಿಸಿದರು. (ಎಡದಿಂದ) ಸೋಮಶೇಖರ ಕೆರೆಗೋಡು, ಮತ್ತೀಕೆರೆ ಜಯರಾಮು, ಉಪಾಧ್ಯಕ್ಷ ಅಜ್ಜಮಾಡ ರಮೇಶ್ ಕುಟ್ಟಪ್ಪ, ಪ್ರಧಾನ ಕಾರ್ಯದರ್ಶಿ ಜಿ.ಸಿ.ಲೋಕೇಶ್, ಪತ್ರಕರ್ತ ಪಿ.ರಾಮಯ್ಯ, ಸಂಘದ ಅಧ್ಯಕ್ಷ ಶಿವಾನಂದ ತಗಡೂರು, ನಿಂಗಪ್ಪ ಚಾವಡಿ, ಪುಂಡಲೀಕ್ ಬಾಳೋಜಿ ಮತ್ತು ಭವಾನಿ ಸಿಂಗ್ ಇದ್ದಾರೆ – ಪ್ರಜಾವಾಣಿ ಚಿತ್ರ

ಬೆಂಗಳೂರು: ‘ಪತ್ರಕರ್ತರು ಜವಾಬ್ದಾರಿಯುತ ಸ್ಥಾನದಲ್ಲಿರುವವರು. ರಾಜಕಾರಣಿಗಳಿಗೆ ಬುದ್ಧಿ ಹೇಳುವ ನೈತಿಕತೆಯನ್ನು ಅವರು ಉಳಿಸಿಕೊಳ್ಳಬೇಕು. ವೃತ್ತಿ ಘನತೆ ಕಾಪಾಡಿಕೊಳ್ಳುವುದರತ್ತಲೂ ಚಿತ್ತ ಹರಿಸಬೇಕು’ ಎಂದು ವಿಧಾನಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ತಿಳಿಸಿದರು.

ಗುರುವಾರ ನಡೆದ ಕಾರ್ಯಕ್ರಮದಲ್ಲಿ ಕರ್ನಾಟಕ ಪತ್ರಕರ್ತರ ಸಂಘದ ನೂತನ ಪದಾಧಿಕಾರಿಗಳಿಗೆ ಪ್ರತಿಜ್ಞಾ ವಿಧಿ ಬೋಧಿಸಿ ಅವರು ಮಾತನಾಡಿದರು.

‘ಪತ್ರಕರ್ತರ ಭವನ ನಿರ್ಮಾಣಕ್ಕೆ ವಿಧಾನಪರಿಷತ್ ನಿಧಿಯಿಂದ ₹1.5 ಕೋಟಿ ನೆರವು ನೀಡಿದ್ದೇನೆ. ತಾಲ್ಲೂಕು ಮಟ್ಟದಲ್ಲೂ ಪತ್ರಕರ್ತರ ಭವನ ನಿರ್ಮಿಸಲು ಗರಿಷ್ಠ ₹10 ಲಕ್ಷ ಬಿಡುಗಡೆ ಮಾಡಲು ಸಿದ್ಧನಿದ್ದೇನೆ’ ಎಂದರವರು ನೀಡಿದರು.

‘ಕಾರ್ಯನಿರತ ಪತ್ರಕರ್ತರ ಸಂಘವು ಸುಚನೆಯ ಜಿಲ್ಲೆಗಳಲ್ಲಿ ಪತ್ರಕರ್ತರ ಕ್ಷೇಮಾಭಿವೃದ್ಧಿ ನಿಧಿ ಸ್ಥಾಪಿಸಲು ನಿರ್ಧರಿಸಿದ್ದೇನೆ. ತಾಯಿಯ ಹೆಸರಿನಲ್ಲಿರುವ ಟ್ರಸ್ಟ್ ಮೂಲಕ ಈ ಕೆಲಸ ಮಾಡಲು ಚಿಂತಿಸಲಾಗಿದೆ’ ಎಂದರು.

ಪತ್ರಕರ್ತ ಪಿ.ರಾಮಯ್ಯ, ‘ಪತ್ರಕರ್ತರು ವೃತ್ತಿ ಬದ್ಧತೆ ಉಳಿಸಿಕೊಳ್ಳುವುದು ಪ್ರಸ್ತುತ ಸನ್ನಿವೇಶದಲ್ಲಿ ಸವಾಲಾಗಿದೆ’ ಎಂದು ಹೇಳಿದರು.

ಕಯುಡಬ್ಲ್ಯುಜೆ ಅಧ್ಯಕ್ಷ ಶಿವಾನಂದ ತಗಡೂರು, ‘ಸಂಘ ರಾಜ್ಯ ಕಾರ್ಯನಿರತ ಪತ್ರಕರ್ತರ ಕ್ಷೇಮಾಭಿವೃದ್ಧಿಗೆ ಶ್ರಮಿಸಲಿದೆ’ ಎಂದರು.

ಪಿಎಸ್‌ಐ ನೇಮಕಾತಿ ಪರೀಕ್ಷೆಯ ಅಕ್ರಮ: ಮತ್ತೊಬ್ಬ ಆರೋಪಿ ವಶಕ್ಕೆ

ಮಹಾರಾಷ್ಟ್ರದಲ್ಲಿ ಸಿಕ್ಕಿಬಿದ್ದ ರುದ್ರಗೌಡ ಪಾಟೀಲ

ಪ್ರಜಾವಾಣಿ ವಾರ್ತೆ

ಕಲಬುರಗಿ: ಪಿಎಸ್‌ಐ ನೇಮಕಾತಿ ಪರೀಕ್ಷೆಯಲ್ಲಿ ನಡೆದಿದೆ ಎನ್ನಲಾದ ಅಕ್ರಮಕ್ಕೆ ಸಂಬಂಧಪಟ್ಟಂತೆ ಮತ್ತೊಬ್ಬ ಆರೋಪಿ ರುದ್ರಗೌಡ ಡಿ. ಪಾಟೀಲ ಅವರನ್ನು ಮಹಾರಾಷ್ಟ್ರದಲ್ಲಿ ಸಿಐಡಿ ಪೊಲೀಸರು ಶನಿವಾರ ವಶಕ್ಕೆ ಪಡೆದಿದ್ದಾರೆ. ತನಿಖಾಧಿಕಾರಿಗಳು ಆರೋಪಿಯನ್ನು ಕರೆತರಲು ಅಲ್ಲಿಗೆ ತೆರಳಿದ್ದಾರೆ.



ರುದ್ರಗೌಡ ಪಾಟೀಲ

ಪರೀಕ್ಷಾ ಕೇಂದ್ರದೊಳಗೆ ಕೆಲ ಅಭ್ಯರ್ಥಿಗಳಿಗೆ ಬ್ಲೂಟೂತ್ ಸಂಪರ್ಕದ ಮೂಲಕ ಉತ್ತರಗಳನ್ನು ರವಾನಿಸಿದ ಆರೋಪ ರುದ್ರಗೌಡ ಮೇಲಿದೆ. ಈ ಹಿಂದೆ ನಡೆದ ಕೆಲವು ನೇಮಕಾತಿ ಪರೀಕ್ಷೆಗಳಲ್ಲೂ ರುದ್ರಗೌಡ ಇದೇ ತಂತ್ರ ಬಳಸಿ ಅಕ್ರಮ ಎಸಗಿದ ಬಗ್ಗೆಯೂ ಸಿಐಡಿ ಅಧಿಕಾರಿಗಳು ಮಾಹಿತಿ ಕಲೆಹಾಕಿದ್ದಾರೆ.

ರುದ್ರಗೌಡ ಅವರ ಅಣ್ಣ, ಅಫಜಲಪುರದ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮಹಾಂತೇಶ ಪಾಟೀಲ ಅವರನ್ನು ಪೊಲೀಸರು ಶುಕ್ರವಾರ ಬಂಧಿಸಿದ್ದಾರೆ. ಆದರೆ, ರುದ್ರಗೌಡ ತಲೆಮರೆಸಿಕೊಂಡಿದ್ದರು. ಮಹಾಂತೇಶ ಅವರನ್ನು ಬಂಧಿಸುವ ವೇಳೆ ರುದ್ರಗೌಡ ಮೊಬೈಲ್ ಮೂಲಕ ಸಿಐಡಿ ಅಧಿಕಾರಿಗಳೊಂದಿಗೆ ಮಾತನಾಡಿ, ಬೆದರಿಕೆ ಹಾಕಿದ್ದರು. ಈ ಕರೆಯ ಜಾಡು ಹಿಡಿದ ಪೊಲೀಸರು ಮಹಾರಾಷ್ಟ್ರದ ಪುಣೆಯ ಹತ್ತಿರ ಅವರ ಲೊಕೇಶನ್ ಪತ್ತೆ ಮಾಡಿದರು. ಮಹಾರಾಷ್ಟ್ರದ ಸಿಐಡಿ ತಂಡಕ್ಕೆ ಮಾಹಿತಿ ನೀಡಿ, ಅವರ ಮೂಲಕ ಶನಿವಾರ ಮಧ್ಯಾಹ್ನ ವಶಕ್ಕೆ ಪಡೆಯಲಾಯಿತು ಎಂದು ಮೂಲಗಳು ‘ಪ್ರಜಾವಾಣಿ’ಗೆ ಖಚಿತಪಡಿಸಿವೆ.

ಬ್ಲೂಟೂತ್ ಬಳಸಿ ಪಿಎಸ್‌ಐ ತಾತ್ಕಾಲಿಕ ಆಯ್ಕೆಪಟ್ಟಿಯಲ್ಲಿ ಸ್ಥಾನ ಪಡೆದಿರುವ ಕಲಬುರಗಿಯ ವಿಶಾಲ್ ಶಿರೂರ ಹಾಗೂ ಅಫಜಲಪುರ ತಾಲ್ಲೂಕಿನ ಕರಜಗಿಯ ಚೇತನ ನಂದಗಾಂವ ಅವರು ಈ ಹಿಂದೆಯೇ ಬಂಧಿಸಲಾಗಿದೆ.

ಬಂಧಿತರಲ್ಲಿ ಮೂವರು ಬಿ.ಇ ಪದವೀಧರರು
ಪ್ರಕರಣದಲ್ಲಿ ಬಂಧಿತರಾದ ಅಭ್ಯರ್ಥಿಗಳ ಪೈಕಿ ವಿಶಾಲ್ ಶಿರೂರ, ಚೇತನ ನಂದಗಾಂವ ಹಾಗೂ ಕೆ.ಪ್ರವೀಣಕುಮಾರ್ ಬಿ.ಇ ಪದವೀಧರರು. ವಿಶೇಷ ನೇಮಕಾತಿ ಎಂದು ಎನಿಸಿ, ಅಫಜಲಪುರ ಪಾಟೀಲ ಬಿ.ಇಡಿ ಪದವಿ ಪಡೆದಿದ್ದಾರೆ. ಎಲ್ಲರೂ 30 ವರ್ಷ ಆಸುಪಾಸಿನವರಿದ್ದಾರೆ. ವಯೋಮಿತಿ ಮೀರುವ ಕಾರಣ ಈ ಬಾರಿ ತಪಾಯಿಸಬಾರದು ಹುದ್ದೆ ಗಿಟ್ಟಿಸಿಕೊಳ್ಳಬೇಕು ಎಂಬ ನಿರ್ಧಾರಕ್ಕೆ ಬಂದಿದ್ದರು ಎಂದು ಗೊತ್ತಾಗಿದೆ.

60 ಅಭ್ಯರ್ಥಿಗಳು ಬ್ಲೂಟೂತ್ ಬಳಸಿದ ಸಾಧ್ಯತೆ
‘ಈ ಅಣ್ಣ–ತಮ್ಮ ಸೇರಿಕೊಂಡು ಇದೇ ಪಿಎಸ್‌ಐ ನೇಮಕಾತಿ ಪರೀಕ್ಷೆಯಲ್ಲಿ ಸುಮಾರು 60 ಅಭ್ಯರ್ಥಿಗಳಿಗೆ ಬ್ಲೂಟೂತ್ ಮೂಲಕ ಉತ್ತರ ಪೂರೈಸಿ ಪಾಸ್ ಮಾಡಿಸಿದ ಸಾಧ್ಯತೆ ಇದೆ. ಅವರಲ್ಲಿ ತಾತ್ಕಾಲಿಕ ಆಯ್ಕೆ ಪಟ್ಟಿಯಲ್ಲಿದ್ದಾರೆ. ಅದರಲ್ಲೂ ಆರು ಮಂದಿ ಅಫಜಲಪುರದವರೇ ಇದ್ದಾರೆ’ ಎಂದು ಉನ್ನತ ಮೂಲಗಳು ಮಾಹಿತಿ ನೀಡಿವೆ. ಸದ್ಯ ಜ್ಞಾನಜ್ಯೋತಿ ಶಾಲೆಯ ಪ್ರಕರಣ ಮಾತ್ರ ಹೊರಬಿದ್ದಿದೆ ಎನ್ನುತ್ತವೆ ಮೂಲಗಳು.

‘ಅವರು ಬಾಯಿ ಬಿಟ್ಟಿದ್ದರಿಂದ ರುದ್ರಗೌಡ ಹಾಗೂ ಮಹಾಂತೇಶ ಸಿಕ್ಕಿಬಿದ್ದಿದ್ದಾರೆ. ಮಹಾಂತೇಶ ದುಡ್ಡು ಕುಳಗಳನ್ನು ಹುಡುಕಿ ತರುತ್ತಿದ್ದ, ರುದ್ರಗೌಡ ವ್ಯವಹಾರ ಕುದುರಿಸಿ, ಪರೀಕ್ಷೆ ಪಾಸ್ ಮಾಡಲು ಬೇಕಾದ ವ್ಯವಸ್ಥೆ ಮಾಡುತ್ತಿದ್ದ ಎಂಬುದು ವಿಚಾರಣೆ ವೇಳೆ ಗೊತ್ತಾಗಿದೆ’ ಎಂದು ಮೂಲಗಳು ತಿಳಿಸಿವೆ.

ಸ್ಪಷ್ಟಪಡಿಸಲು: ಬಿಜೆಪಿ ನಾಯಕಿ ದಿವ್ಯಾ ಹಾಗರಗಿ ಅವರ ಜ್ಞಾನಜ್ಯೋತಿ ಆಂಗ್ಲ ಮಾಧ್ಯಮ ಶಾಲೆಯಲ್ಲಿ ಪರೀಕ್ಷೆ ಬರೆದ ಅಭ್ಯರ್ಥಿಗಳಲ್ಲಿ 11 ಮಂದಿ ಪಿಎಸ್‌ಐ ತಾತ್ಕಾಲಿಕ ಆಯ್ಕೆಪಟ್ಟಿಯಲ್ಲಿದ್ದಾರೆ. ಇವರಲ್ಲಿ ಇಬ್ಬರು ಸರಿಯಾದ ಮಾರ್ಗದಲ್ಲಿ ಪಾಸಾಗಿದ್ದಾರೆ ಎಂದು ಖಚಿತವಾಗಿದೆ. ಉಳಿದ ಒಂಬತ್ತು ಮಂದಿಯ ಕುರಿತಾಗಿ ತನಿಖೆ ನಡೆದಿದೆ. ಒಎಂಆರ್ ಶೀಟಿನ ಮೂಲಕ ಅಕ್ರಮ ಎಸಗಿದ ನಾಲ್ವರು ಹಾಗೂ ಬ್ಲೂಟೂತ್ ಬಳಸಿದ ಇಬ್ಬರನ್ನು ಈಗಾಗಲೇ ಬಂಧಿಸಲಾಗಿದೆ. ಈ ಎರಡೂ ರೀತಿಯ ಪ್ರಕರಣಗಳನ್ನು ದಿವ್ಯಾ ಹಾಗರಗಿ ಅವರೇ ‘ಡೀಲ್’ ಮಾಡಿದ್ದು ವಿಚಾರಣೆ ವೇಳೆ ಗೊತ್ತಾಗಿದೆ ಎಂದು ಸಿಐಡಿ ಮೂಲಗಳು ತಿಳಿಸಿವೆ.

ಇನ್ನೊಂದು ಸುದ್ದಿ | 6

ಇಬ್ಬರ ಸಂಭಾಷಣೆಯ ಆಡಿಯೊ ಬಿಡುಗಡೆ ಮಾಡಿದ ಕೆಪಿಸಿಸಿ ವಕ್ತಾರ ಪ್ರಿಯಾಂಕ್ ಖರ್ಗೆ

402 ಪಿಎಸ್ಐಗಳ ನೇಮಕಾತಿಯಲ್ಲೂ ಅಕ್ರಮ: ಶಂಕೆ

ಪ್ರಜಾವಾಣಿ ವಾರ್ತೆ

ಕಲಬುರಗಿ: '545 ಪಿಎಸ್ಐ ಹುದ್ದೆಗಳ ನೇಮಕಾತಿ ಅಕ್ರಮದ ಬಗ್ಗೆ ತನಿಖೆ ನಡೆಯುತ್ತಿರುವ ಬೆನ್ನಲ್ಲೇ, ಮುಂದೆ ನಡೆಯಲಿರುವ 402 ಪಿಎಸ್ಐ ಹುದ್ದೆಗಳ ನೇಮಕಾತಿಯಲ್ಲಿ ಅಕ್ರಮವಾಗಿ ಆಯ್ಕೆಯಾಗುವ ಬಗ್ಗೆ ಇಬ್ಬರು ಸಂಭಾಷಣೆ ನಡೆಸಿದ್ದಾರೆ. ಈ ನಿಟ್ಟಿನಲ್ಲಿ ಸಿಐಡಿ ಪೊಲೀಸರು ತನಿಖೆ ನಡೆಸಬೇಕು' ಎಂದು ಕೆಪಿಸಿಸಿ ವಕ್ತಾರ, ಶಾಸಕ ಪ್ರಿಯಾಂಕ್ ಖರ್ಗೆ ಒತ್ತಾಯಿಸಿದರು.

ನಗರದಲ್ಲಿ ಶನಿವಾರ ಆಡಿಯೊ ಬಿಡುಗಡೆ ಮಾಡಿ ಮಾತನಾಡಿದ ಅವರು, '545 ಹುದ್ದೆಗಳಲ್ಲಿ 300ಕ್ಕೂ ಅಧಿಕ ಹುದ್ದೆಗಳಿಗೆ ಅಕ್ರಮವಾಗಿ ಒಎಂಆರ್ ಶೀಟ್ ತಿದ್ದಿ ಆಯ್ಕೆಯಾದ ಬಗ್ಗೆ ತನಿಖೆ ನಡೆಯುತ್ತಿದೆ. ಅಂತಹ ಸಂದರ್ಭದಲ್ಲೇ ಮುಂದೆ ನಡೆಯುವ ನೇಮಕಾತಿಯಲ್ಲಿ ಅಕ್ರಮ ಎಸಗಿ ಹುದ್ದೆಗಳನ್ನು ಕೊಡಿಸಲು 'ಬಕ್ರಾ'ಗಳನ್ನು ಹುಡುಕುವ ಜವಾಬ್ದಾರಿಯನ್ನು ಅಕ್ರಮ ಎಸಗಿ ತಾತ್ಕಾಲಿಕ ಪಟ್ಟಿಯಲ್ಲಿ ಹೆಸರು ಬಂದಿರುವ ವ್ಯಕ್ತಿಗೆ ವಹಿಸುವ ಮಾತುಗಳು ಆಡಿಯೊದಲ್ಲಿವೆ' ಎಂದರು.

'ಅಕ್ರಮ ಎಸಗಲು ನೆರವಾಗುವ ಪರೀಕ್ಷಾ ಕೇಂದ್ರ ಸಿಗಬೇಕು ಎಂದರೆ ಅರ್ಜಿ ಸಂಖ್ಯೆಯನ್ನು ಮುಂಚೆಯೇ ಹಂಚಿಕೊಳ್ಳುವಂತೆ ಆ ವ್ಯಕ್ತಿ ತಿಳಿಸಿದ್ದಾನೆ. ವಿಜಯಪುರ ಜಿಲ್ಲೆಯ ಸಿಂದಗಿ ಕಡೆಯವರು ಈ ಮಾತುಕತೆ ನಡೆಸಿರುವ ಸಾಧ್ಯತೆ ಇದೆ. 371 (ಜೆ) ಮೀಸಲಾತಿ ಪಡೆಯುವವರು ಪ್ರತಿ ಬಾರಿ ಕೋರ್ಟ್‌ಗೆ ಹೋಗುತ್ತಾರೆ. ಪ್ರತಿ ಬಾರಿ ಅವರದು ಇದ್ದದ್ದೇ. ಆದರೂ ಏನೂ ಆಗುವುದಿಲ್ಲ ಎಂದಿದ್ದಾರೆ. ಈ ಆಡಿಯೊ ನ್ಯಾಯಾಲಯದಲ್ಲಿ ಪುರಾವೆ ಆಗುವುದಿಲ್ಲವಾದರೂ ಇದರ ಆಧಾರದ ಮೇಲೆ ಸಿಐಡಿ ಅಧಿಕಾರಿಗಳು ತನಿಖೆ ನಡೆಸಿ ಸತ್ಯಾಂಶ ಹೊರಗೆಳೆಯಬೇಕು' ಎಂದು ಪ್ರಿಯಾಂಕ್ ಒತ್ತಾಯಿಸಿದರು.

402 ಸಿವಿಲ್ ಪಿಎಸ್ಐ ಹುದ್ದೆಗಳ ನೇಮಕಾತಿಗೆ ಮಾರ್ಚ್ 5ರಂದು ಅಧಿಸೂಚನೆ ಹೊರಡಿಸಿದ್ದು, ಅರ್ಜಿ ಸಲ್ಲಿಸಲು ಮೇ 5 ಕೊನೆಯ ದಿನವಾಗಿದೆ.

'ಬಿಜೆಪಿ ನಾಯಕಿ ದಿವ್ಯಾ ಹಾಗರಗಿ ಮುಖ್ಯಸ್ಥೆ ಆಗಿರುವ ಜ್ಞಾನ ಜ್ಯೋತಿ ಶಿಕ್ಷಣ ಸಂಸ್ಥೆ ಪಿಎಸ್ಐ ನೇಮಕ ಪರೀಕ್ಷೆಗೆ ಅಗತ್ಯ ಮಾನದಂಡ ಹೊಂದಿಲ್ಲ ಎಂದು ಕಲಬುರಗಿ ಡಿಡಿಪಿಐ ಅವರು ತಿರಸ್ಕರಿಸಿದ್ದರು. ಅದನ್ನು ಮೀರಿ ಆ ಸಂಸ್ಥೆ ಪರೀಕ್ಷಾ ಕೇಂದ್ರವಾಗಲು ಯಾರು ಶಿಫಾರಸು ಪತ್ರ ನೀಡಿದ್ದರು ಎಂಬುದು ಬಯಲಾಗಬೇಕು' ಎಂದರು.

ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರಾಜೀನಾಮೆ: 'ನೇಮಕಾತಿ ಅಕ್ರಮಕ್ಕೆ ಸಂಬಂಧಿಸಿದಂತೆ ಶುಕ್ರವಾರ ಬಂಧಿತರಾಗಿರುವ ಅಫಜಲಪುರದ ಕಾಂಗ್ರೆಸ್ ಮುಖಂಡ ಮಹಾಂತೇಶ ಪಾಟೀಲ 2019ರಲ್ಲೇ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಹುದ್ದೆಗೆ ರಾಜೀನಾಮೆ ನೀಡಿದ್ದಾರೆ. ಹಾಗಂತ ನಾನು ಅವರ ಪರ ಮಾತನಾಡುವುದಿಲ್ಲ. ಯಾವ ಪಕ್ಷದವರೇ ಆಗಿರಲಿ ತಪ್ಪಿತಸ್ಥರಿಗೆ ಶಿಕ್ಷೆಯಾಗಲಿ' ಎಂದರು.

ನೇಮಕಾತಿ ವಿಭಾಗದ ಎಡಿಜಿಪಿ ಅವರನ್ನು ಇನ್ನೂ ವರ್ಗಾವಣೆ ಮಾಡಿಲ್ಲ. ಅವರು ತನಿಖೆ ಮೇಲೆ ಪ್ರಭಾವ ಬೀರುವ ಸಾಧ್ಯತೆ ಇದ್ದು, ಕೂಡಲೇ ವರ್ಗಾಯಿಸಬೇಕು

ಪ್ರಿಯಾಂಕ್ ಖರ್ಗೆ, ಕೆಪಿಸಿಸಿ ವಕ್ತಾರ, ಶಾಸಕ

ಆಡಿಯೊ ತನಿಖೆ ಮಾಡಿ ಕ್ರಮ- ಬೊಮ್ಮಾಯಿ

ಬೆಂಗಳೂರು: 'ಶಾಸಕ ಪ್ರಿಯಾಂಕ್ ಖರ್ಗೆ ಬಿಡುಗಡೆ ಮಾಡಿರುವ ಆಡಿಯೊವನ್ನು ಕೂಡಾ ತನಿಖೆಗೆ ಒಳಪಡಿಸಿ, ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ಸುದ್ದಿಗಾರರ ಜೊತೆ ಶನಿವಾರ ಮಾತನಾಡಿದ ಅವರು, 'ಆಡಿಯೊದಲ್ಲಿ ಇಬ್ಬರ ನಡುವೆ ಮಾತುಕತೆಯಾಗಿದೆ. ಅವರಿಬ್ಬರು ಯಾರು, ಅವರ ಅರ್ಹತೆ ಏನು ಎನ್ನುವುದು ತನಿಖೆಯಿಂದ ತಿಳಿಯಲಿದೆ. ಅಲ್ಲದೆ, ಯಾವುದೇ ಸಾಲಿನ ನೇಮಕಾತಿಯಲ್ಲಿ ಅಕ್ರಮ ಆಗಿದ್ದರೂ ಕ್ರಮ ತೆಗೆದುಕೊಳ್ಳಲಾಗುವುದು' ಎಂದರು.

ಸಿಐಡಿ ಅಧಿಕಾರಿಗಳಿಗೆ ನೀಡಲಿ: 'ಪ್ರಿಯಾಂಕ್ ಖರ್ಗೆ ತಮ್ಮ ಬಳಿಯಿರುವ ದಾಖಲೆ ಹಾಗೂ ಮಾಹಿತಿಯನ್ನು ಸಿಐಡಿ ಅಧಿಕಾರಿಗಳಿಗೆ ನೀಡಲಿ' ಎಂದು ಗೃಹ ಸಚಿವ ಆರಗ ಜ್ಞಾನೇಂದ್ರ ಹೇಳಿದರು.

'ಈ ಅಕ್ರಮಕ್ಕೆ ಸಂಬಂಧಿಸಿದಂತೆ ತಿಂಗಳ ಹಿಂದೆಯೇ ಆಡಿಯೊ ಸಿಕ್ಕಿದ್ದು, ಅದನ್ನು ಶನಿವಾರ ಬಿಡುಗಡೆ ಮಾಡಿರುವುದಾಗಿ ಖರ್ಗೆ ಹೇಳಿಕೊಂಡಿದ್ದಾರೆ. ಆದರೆ, ಇತ್ತೀಚೆಗೆ ಪತ್ರಿಕಾಗೋಷ್ಠಿ ನಡೆಸಿದ್ದ ಅವರು ಈ ಆಡಿಯೊ ಬಗ್ಗೆ ಮಾಹಿತಿ ನೀಡಿರಲಿಲ್ಲ. ಅವರ ಆಪ್ತರ ಬಂಧನವಾಗುತ್ತಿದ್ದಂತೆ ಮಾಹಿತಿ ಹೊರಹಾಕಿದ್ದಾರೆ' ಎಂದು ದೂರಿದ ಸಚಿವರು, 'ಇಷ್ಟು ದಿನ ತಮ್ಮ ಬಳಿ ಸಾಕ್ಷ್ಯವನ್ನು ಯಾಕೆ ಇಟ್ಟುಕೊಂಡಿದ್ದರು ಎಂದು ಸಾರ್ವಜನಿಕರಿಗೆ ಅವರು ತಿಳಿಸಬೇಕು. ಸಿಐಡಿ ತನಿಖೆಯಲ್ಲಿ ತಮ್ಮ ಬೆಂಬಲಿಗರು ಸಿಕ್ಕಿ ಬೀಳುವುದಿಲ್ಲ ಎಂಬ ಹುಸಿ ನಂಬಿಕೆಯೂ ಇರಬಹುದು' ಎಂದರು.

ಆಡಿಯೊದಲ್ಲಿ ಏನಿದೆ?

ಕಲಬುರಗಿ: ಕೆಪಿಸಿಸಿ ವಕ್ತಾರ, ಶಾಸಕ ಪ್ರಿಯಾಂಕ್ ಖರ್ಗೆ ಅವರು ಬಿಡುಗಡೆ ಮಾಡಿರುವ ಪಿಎಸ್ಐ ಅಕ್ರಮ ನೇಮಕಾತಿ ಕುರಿತ ಆಡಿಯೊದ ಸಂಭಾಷಣೆ ಇಲ್ಲಿದೆ.

ವ್ಯಕ್ತಿ–1: ನಮಸ್ಕಾರರಿ ಸರ

ವ್ಯಕ್ತಿ–2: ನಮಸ್ಕಾರ ಪಿಎಸ್ಐ ಸಾಹೇಬರಿಗಿ, ಎಲ್ಲಿದೀರಿ?

ವ್ಯಕ್ತಿ–1: ಸರ್ ಸಿಂದಗಿಗೆ ಹೋಗಿದ್ದೇರಿ

ವ್ಯಕ್ತಿ–2: ಹೌದಾ, ಯಾರ್ಯಾರು ಇದ್ದೀರಿ

ವ್ಯಕ್ತಿ–1ಸರ್, ಒಬ್ಬನೇ ಇದ್ದೀನ್ರಿ. ನಾ ಕಾರು ತಗೊಂಡು ಬಂದೀನ್ರಿ, ನಮ್ಮ ಬ್ರದರ್ ಅದಾರ್ರಿ

ವ್ಯಕ್ತಿ–2: ಹೌದರಿ

ವ್ಯಕ್ತಿ–1: ಅದೇ ಏನೋ ಬ್ಯಾರೇ ಕೇಳಿದೀನ್ರಿ. ಎಚ್‌ಕೆದವರು ಕೋರ್ಟ್‌ಗೆ ಹೋಗ್ಯಾರ ಏನೋ, ಹಾಂಗ ಹಿಂಗ ಅಂದರ್ರಿ

ವ್ಯಕ್ತಿ–2: ಅವರು ಪ್ರತಿ ವರ್ಷ ಆಕ್ಷೇಪಣೆ ಹಾಕುತ್ತಾರೆ.

ವ್ಯಕ್ತಿ 1: ಹೌದಿಲ್ರಿ

ವ್ಯಕ್ತಿ–2: ವರ್ಷಾ ಇದ್ದಿದ್ದೇರಿ. ವರ್ಷ ವರ್ಷ ಒಬ್ಬೊಬ್ಬರದು ಆಕ್ಸೆಪ್ಟ್ ಮಾಡೇ ಮಾಡ್ತಾರಿ

ವ್ಯಕ್ತಿ–1: ಅಂದರ ರಿ, ಇವಾಗ 2014ರಾಗ ಆಯ್ತಲ್ಲ. ಕೆಎಎಸ್ ಹಾಂಗ ಆಗೇದ ಅಂತಾ?

ವ್ಯಕ್ತಿ–2: ಇದು ಒಂದು ದೊಡ್ಡ ಇದುನೇ ಅದರಿ

ವ್ಯಕ್ತಿ–1: ಹೌದು, ಹೌದು, ಎಲ್ಲರೂ ಇದರಾಗ ಶಾಮೀಲ ಅದಾರರಿ

ವ್ಯಕ್ತಿ–2: ಈಗ ಫಸ್ಟ್ ಪೇಪರದಾಗ ಹಾಕ್ಯಾರರಿ ಅವರು.

ವ್ಯಕ್ತಿ–1: ಹಾ... ಹಾ ಹಾ

ವ್ಯಕ್ತಿ–2: ಫಸ್ಟ್ ಪೇಪರದಾಗ ಏನ್ರಿ, ಬರೇ ಈಗ ಟಿಇ ಸ್ಟೇಟ್ ಬರಿಬೇಕು ಅಂತೆ ತಿಳ್ಕೋರಿ. ಸ್ಟೇಟ್ ಬರಿಬೇಕು ರ್‍ಯಾ

ವ್ಯಕ್ತಿ–1: ಹಾ ಹಾ ರಿ

ವ್ಯಕ್ತಿ–2: ಈಗ ಐಪಿಸಿ ಅವ ಇಲ್ಲ ಈಗ ಐಪಿಎಸ್ ಆಫೀಸರ್ಸ್ ಅವರದು ಕೊಡ್ರಿ ನಮಗೆ ಅಂತ ಕೇಳೋಕೆ ಬರಲ್ಲ ಅಲ್ಲಿ ಆ... ರಿ...

ವ್ಯಕ್ತಿ–1: ಒಂದು ಇದು ಅದರಿ ಗೌಡ್ರೆ, ಹ್ಯಾಂಗ ಮಾಡೂದು ರಿ ನೆಕ್ಸ್ಟ್

ವ್ಯಕ್ತಿ–2: ಹ್ಯಾಂಗ ಸರ, ನಮ್ಮ ಬ್ರದರ್‌ದು ರಿ

ವ್ಯಕ್ತಿ–1: ಡೇಟ್ ಹೇಳ್ರಿ, ಈ ನೋಟಿಫಿಕೇಶನ್‌ಗೆ ಅಂತೂ ಆಗೂದಿಲ್ಲರಿ

ವ್ಯಕ್ತಿ–2: ಈ ಸದ್ದ ನಾಳೆ 402 ರಿ? 402 ಅಂದ್ರ, ಇಷ್ಟು ದಿನ ನಿಮ್ಮ ಹಾಲ್ ಟಿಕೆಟ್ ಹಾಕಬೇಕಲ್ಲ ಸರ್, ಇದು ಅಪ್ಲಿಕೇಶನ್ ನಂಬರ್

ವ್ಯಕ್ತಿ–1: ಎ ಹಾಕಿನಿರಿ, ನಮ್ಮ ಅಣ್ಣನ ಸಡಕರಿ, ಭಾಳ ಚಲೊ ಮನುಷ್ಯ, ದುಡ್ಡು ಸಾಕಷ್ಟು ಅದರಿ, ಬಹಳ ಇನ್‌ಫ್ಲುಯೆನ್ಸ್ ಅದ, ಆದರೆ, ಕರೆಕ್ಟ್ ಕ್ಯಾಂಡಿಡೇಟ್ ಸಿಕ್ಕಿಲ್ಲರಿ.

ವ್ಯಕ್ತಿ–2: ಬೇಗನೇ ಹೇಳಬೇಕಿತ್ತರಿ. ಆಗಲೇ ಸೆಂಟರ್ ತರ್ತಾ ಇದ್ದಾರ.

ವ್ಯಕ್ತಿ–1: ಹೌದರಿ. ಮತ್ತೆ ಹೆಂಗ ಮಾಡೂದು

ವ್ಯಕ್ತಿ–2: ಅದೇ ಸರ್ ಅಪ್ಲಿಕೇಶನ್ ನಂಬರ್ ಹಾಕಂತ ಹೇಳ್ರಿ. ನಿಮ್ಮ ಮೊಬೈಲ್‌ನಿಂದ ನನಗ ಕಳಿಸ್ರಿ, ನೋಡುಮ. ನಾ ಅವರ ಹಂತೇಕ ಹೊರಟೀನಿ. ಮುಂದಿನ ಪ್ರೊಸಿಜರ್ ಹೇಳ್ತೀನಿ. ಅಪ್ಲಿಕೇಶನ್ ಹಾಕುವಾಗ ಬಳಸಿದ ನಂಬರ್ (ಮೊಬೈಲ್) ಬಿಟ್ಟು ಬೇರೆ ನಂಬರ್ ಬಳಸಲು ಹೇಳ್ರಿ

ವ್ಯಕ್ತಿ: 1ಯಾಕ ಆಗಾವಲ್ದರಿ ಗೌಡ್ರೆ

ಸುದ್ದಿ 2 ನಿಮಿಷ

ಹಾಲು ಒಕ್ಕೂಟದ ನೇಮಕಾತಿಯಲ್ಲೂ ಭಾರಿ ಭ್ರಷ್ಟಾಚಾರ: ಕುಮಾರಸ್ವಾಮಿ

ಬೀದರ್: 'ಪಿಎಸ್ಐ ನೇಮಕಾತಿಯಲ್ಲಿ ಅಷ್ಟೇ ಅಲ್ಲ, ಹಾಲು ಒಕ್ಕೂಟದಲ್ಲಿ ಪ್ರತಿಯೊಂದು ಹುದ್ದೆಯ ನೇಮಕಾತಿಯಲ್ಲೂ ಭಾರಿ ಭ್ರಷ್ಟಾಚಾರ ನಡೆಯುತ್ತದೆ' ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಆರೋಪಿಸಿದರು.

ಬೀದರ್ ತಾಲ್ಲೂಕಿನ ಕಾಶೆಂಪುರ ಗ್ರಾಮದಲ್ಲಿ ಶನಿವಾರ ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡಿದ ಅವರು, 'ಹಾಲು ಒಕ್ಕೂಟದಲ್ಲಿ ಒಂದು ಹುದ್ದೆ ಪಡೆಯಬೇಕಾದರೆ ₹25 ಲಕ್ಷ ಕೊಡುವ ಪರಿಸ್ಥಿತಿ ಇದೆ' ಎಂದರು.



'ಕೆಪಿಎಸ್‌ಸಿ ಮೂಲಕ ನಡೆಯುವ ಗೆಜೆಟೆಡ್ ಪ್ರೊಬೇಷನರಿ ಹುದ್ದೆಗೆ ನೇಮಕಾತಿಯಲ್ಲಿ ₹ 1 ಕೋಟಿ ಕೇಳಲಾಗುತ್ತಿದೆ. ಪಿಎಸ್ಐ ನೇಮಕಾತಿಯಲ್ಲಿ ನಡೆದಿರುವ ಭ್ರಷ್ಟಾಚಾರದ ತನಿಖೆ ನಡೆಸಿ ತಪ್ಪಿತಸ್ಥರಿಗೆ ಶಿಕ್ಷೆ ಕೊಡಬೇಕು. ಇಲ್ಲದಿದ್ದರೆ ಪ್ರಾಮಾಣಿಕರು ಹಾಗೂ ಅರ್ಹ ಅಭ್ಯರ್ಥಿಗಳಿಗೆ ಅನ್ಯಾಯವಾಗಲಿದೆ' ಎಂದರು.

'ಬಿಜೆಪಿ ಸರ್ಕಾರದಲ್ಲಿ ಕೆಲ ವ್ಯಕ್ತಿಗಳು ಗಂಟೆಗೆ ಕೋಟ್ಯಂತರ ರೂಪಾಯಿ ಗಳಿಸುತ್ತಿದ್ದಾರೆ. ಇದೇ ಪರಿಸ್ಥಿತಿ ಮುಂದುವರಿದರೆ ಶ್ರೀಲಂಕಾಗೆ ಬಂದಿರುವ ಪರಿಸ್ಥಿತಿ ಭಾರತಕ್ಕೂ ಶೀಘ್ರದಲ್ಲೇ ಬರಲಿದೆ' ಎಂದು ಎಚ್ಚರಿಸಿದರು.

ಕಾರ್ಮಿಕರಿಗಾಗಿ 100 ಹೈಟೆಕ್ ಸಂಚಾರಿ ಕ್ಲಿನಿಕ್

ಬೆಂಗಳೂರು: ಕಟ್ಟಡ ಕಾರ್ಮಿಕರು ಹೆಚ್ಚಿನ ಸಂಖ್ಯೆಯಲ್ಲಿರುವ ಪ್ರಮುಖ ಸ್ಥಳಗಳಲ್ಲಿ ಕಾರ್ಮಿಕರಿಗಾಗಿ 100 ಹೈಟೆಕ್ ಸಂಚಾರಿ ಆರೋಗ್ಯ ಕ್ಲಿನಿಕ್‌ಗಳನ್ನು ಆರಂಭಿಸಲು ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ.

ಪ್ರಸಕ್ತ ಸಾಲಿನ ಬಜೆಟ್‌ನಲ್ಲಿ ಕಟ್ಟಡ ಮತ್ತು ಇತರ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯ ವತಿಯಿಂದ ಈ ಯೋಜನೆಯನ್ನು ಅನುಷ್ಠಾನಗೊಳಿಸುವ ಬಗ್ಗೆ ಮುಖ್ಯಮಂತ್ರಿ ಘೋಷಿಸಿದ್ದರು. ಈ ಉದ್ದೇಶಕ್ಕೆ ₹ 132.40 ಕೋಟಿ ಮೀಸಲಿರಿಸಲಾಗಿದೆ.

2020–21 ಮತ್ತು 2021–22ನೇ ಸಾಲಿನ ಬಜೆಟ್‌ನಲ್ಲಿ ಘೋಷಿಸಿದಂತೆ ಈಗಾಗಲೇ ಒಟ್ಟು 35 ಸಂಚಾರಿ ಆರೋಗ್ಯ ಕ್ಲಿನಿಕ್‌ಗಳನ್ನು ಆರಂಭಿಸಲಾಗಿದೆ.

19 ಹೊಸ ಚಿಕಿತ್ಸಾಲಯ: ಬಜೆಟ್‌ನಲ್ಲಿ ಘೋಷಿಸಿದಂತೆ ಹುಬ್ಬಳ್ಳಿ ಮತ್ತು ದಾವಣಗೆರೆಯಲ್ಲಿರುವ ಕಾರ್ಮಿಕರ ರಾಜ್ಯ ವಿಮಾ ನಿಗಮದ ಆಸ್ಪತ್ರೆಗಳ (ಇಎಸ್ಐ) ಹಾಸಿಗೆಗಳ ಸಾಮರ್ಥ್ಯವನ್ನು 50ರಿಂದ 100ಕ್ಕೆ ಹೆಚ್ಚಿಸುವ ಮತ್ತು ರಾಜ್ಯದ 19 ಕಡೆಗಳಲ್ಲಿ ಕಾರ್ಮಿಕರ ವಿಮಾ ಚಿಕಿತ್ಸಾಲಯಗಳನ್ನು ಆರಂಭಿಸಲು ಕೂಡಾ ಆದೇಶ ಹೊರಡಿಸಲಾಗಿದೆ.

ನಕಲಿ ನೇಮಕಾತಿ ಆದೇಶ: ಸಮಾಜ ಕಲ್ಯಾಣ ಆಯುಕ್ತರಿಂದ ದೂರು

ಬೆಂಗಳೂರು: ಸಮಾಜ ಕಲ್ಯಾಣ ಇಲಾಖೆಯ ಆಯುಕ್ತರ ಹೆಸರಿನಲ್ಲಿ 'ಡಿ' ದರ್ಜೆ ನೌಕರರ ನಕಲಿ ನೇಮಕಾತಿ ಆದೇಶ ಪತ್ರಗಳನ್ನು ವಿತರಿಸಿರುವುದು ಪತ್ತೆಯಾಗಿದ್ದು, ಈ ಕುರಿತು ಇಲಾಖೆಯ ಆಯುಕ್ತ ದಯಾನಂದ ಕೆ.ಎ. ವಿಧಾನಸೌಧ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ.

'ಡಿ' ದರ್ಜೆ ನೌಕರರ ನೇಮಕಾತಿಗೆ ವಿಶೇಷ ಪ್ರಕ್ರಿಯೆ ನಡೆಸಲಾಗಿದೆ ಎಂಬಂತೆ ನಕಲಿ ದಾಖಲೆಗಳನ್ನು ಸೃಷ್ಟಿಸಿರುವ ದುಷ್ಕರ್ಮಿಗಳು, ರಾಜ್ಯ ಸರ್ಕಾರದ ಲಾಂಛನ ಬಳಸಿಕೊಂಡು ಆದೇಶ ಪತ್ರಗಳನ್ನು ಮುದ್ರಿಸಿದ್ದಾರೆ. ಕೌನ್ಸೆಲಿಂಗ್ ಮೂಲಕ ಸ್ಥಳ ನಿಯುಕ್ತಿ ಮಾಡಲಾಗಿದೆ ಎಂಬ ಉಲ್ಲೇಖದೊಂದಿಗೆ ಈ ಆದೇಶದ ಪ್ರತಿಗಳನ್ನು ಕೆಲವರಿಗೆ ನೀಡಿದ್ದಾರೆ.

ಚಿತ್ರದುರ್ಗ ಜಿಲ್ಲೆಯ ಹೊಳಲ್ಕೆರೆ ತಾಲ್ಲೂಕಿನ ಚನ್ನಸಮುದ್ರ ಗ್ರಾಮದ ಪ್ರಮೋದ್ ಸಿ.ಟಿ ಎಂಬುವವರಿಗೆ ಈ ರೀತಿಯ ನಕಲಿ ನೇಮಕಾತಿ ಆದೇಶ ನೀಡಲಾಗಿತ್ತು. ವಿಧಾನಸೌಧದ ಪಕ್ಕದ ಬಹುಮಹಡಿಗಳ ಕಟ್ಟಡದಲ್ಲಿರುವ ಸಮಾಜ ಕಲ್ಯಾಣ ಇಲಾಖೆ ಕಚೇರಿಯಲ್ಲಿ ಹುದ್ದೆ ನೀಡಲಾಗಿದೆ ಎಂಬ ಉಲ್ಲೇಖ ಅದರಲ್ಲಿದೆ.

'ಸಮಾಜಘಾತುಕ ಶಕ್ತಿಗಳು ಇಲಾಖೆಯ ಹೆಸರನ್ನು ಬಳಸಿಕೊಂಡು ಸಾರ್ವಜನಿಕರನ್ನು ವಂಚಿಸುತ್ತಿವೆ. ಇಲಾಖೆಯ ಹೆಸರನ್ನು ದುರ್ಬಳಕೆ ಮಾಡಿಕೊಂಡು ನಕಲಿ ನೇಮಕಾತಿ ಆದೇಶ ನೀಡಿರುವವರ ವಿರುದ್ಧ ಪ್ರಕರಣ ದಾಖಲಿಸಿ, ಕ್ರಮ ಜರುಗಿಸಬೇಕು' ಎಂದು ಸಮಾಜ ಕಲ್ಯಾಣ ಇಲಾಖೆಯ ಆಯುಕ್ತರು ಏಪ್ರಿಲ್ 19ರಂದು ವಿಧಾನಸೌಧ ಪೊಲೀಸ್ ಠಾಣೆಯ ಇನ್‌ಸ್ಪೆಕ್ಟರ್ ಅವರಿಗೆ ಸಲ್ಲಿಸಿರುವ ದೂರಿನಲ್ಲಿ ಕೋರಿದ್ದಾರೆ.

ಉಜಿರೆ ಬಳಿ ಅಮಾನವೀಯ ಕೃತ್ಯ: ದೂರು ದಾಖಲು

ಮಹಿಳೆಯನ್ನು ಅರೆಬೆತ್ತಲೆಗೊಳಿಸಿ ವಿಡಿಯೊ ಚಿತ್ರೀಕರಣ

ಪ್ರಜಾವಾಣಿ ವಾರ್ತೆ

ಬೆಳ್ತಂಗಡಿ: ಸರ್ಕಾರಿ ಜಮೀನಿನಲ್ಲಿ ನಿವೇಶನದ ವಿಚಾರವನ್ನು ಮುಂದಿಟ್ಟು ತಂಡವೊಂದು, ಆದಿವಾಸಿ ಸಮುದಾಯದ ಮಹಿಳೆಯೊಬ್ಬರ ಮೇಲೆ ಹಲ್ಲೆ ನಡೆಸಿ, ಸಾರ್ವಜನಿಕ ರಸ್ತೆಯಲ್ಲಿ ಅವರು ಧರಿಸಿದ್ದ ಬಟ್ಟೆ ಹರಿದು ಅರೆಬೆತ್ತಲೆಗೊಳಿಸಿ, ನಂತರ ವಿಡಿಯೊ ಮಾಡಿದ ಕುರಿತು ಬೆಳ್ತಂಗಡಿ ಪೊಲೀಸ್ ಠಾಣೆಗೆ ದೂರು ನೀಡಲಾಗಿದೆ.

ಈ ಸಂಬಂಧ ಉಜಿರೆಯ ಅಳಕೆ ನಿವಾಸಿಗಳಾದ ಸಂದೀಪ್, ಸಂತೋಷ್, ಗುಲಾಬಿ, ಕುಸುಮಾ, ಲೋಕಯ್ಯ, ಅನಿಲ್, ಲಲಿತಾ, ಚೆನ್ನಕೇಶವ ಎಂಬುವರ ವಿರುದ್ಧ ಪ್ರಕರಣ ದಾಖಲಾಗಿದೆ. ಆರೋಪಿಗಳ ಪೈಕಿ ಚೆನ್ನಕೇಶವ ಎಂಬಾತ ಬಿಜೆಪಿ ಎಸ್ಟಿ ಮೋರ್ಚಾದ ಜಿಲ್ಲಾ ಅಧ್ಯಕ್ಷರಾಗಿದ್ದಾರೆ.

ಹಲ್ಲೆಗೊಳಗಾದ ಮಹಿಳೆಯ ಕುಟುಂಬಸ್ಥರು '94ಸಿ' ಅರ್ಜಿ ಸಲ್ಲಿಸಿದ್ದರು. ಅಳತೆಗೆಂದು ಏ.19ರಂದು ಅಧಿಕಾರಿಗಳು ಸ್ಥಳಕ್ಕೆ ಬಂದಿದ್ದರು. ಈ ಸಂದರ್ಭದಲ್ಲಿ ಜಾಗದ ಬಗ್ಗೆ ಇನ್ನೊಂದು ತಂಡ ತಕರಾರು ತೆಗೆದಾಗ ಅಧಿಕಾರಿಗಳು ವಾಪಸ್ ಹೋಗಿದ್ದಾರೆ. ನಂತರ ಈ ತಂಡ ಮಹಿಳೆಯರ ಮೇಲೆ ಮುಗಿಬಿದ್ದಿದೆ ಎಂದು ದೂರಿನಲ್ಲಿ ಆರೋಪಿಸಲಾಗಿದೆ.

'ಮಹಿಳೆ ಮೇಲೆ ಮೊದಲು ಹಲ್ಲೆ ನಡೆದಿದ್ದು, ತಪ್ಪಿಸಲು ಹೋಗಿದ್ದ ಸಹೋದರಿಯರ ಮೇಲೆಯೂ ಹಲ್ಲೆ ನಡೆದಿದೆ. ಆರೋಪಿಗಳು ಮಹಿಳೆಯ ಬಟ್ಟೆ ಹರಿದು ವಿಡಿಯೊ ಮಾಡಿದ್ದು, ಮನೆಗೆ ಹೋಗಲೂ ಬಿಡದೆ ಅಡ್ಡಗಟ್ಟಿ ಹೀಯಾಳಿಸಿದ್ದಾರೆ. ಅಲ್ಲಿಗೆ ಬಂದ ಮಹಿಳೆಯ ತಾಯಿಯ ಮೇಲೂ ಆರೋಪಿಗಳು ಹಲ್ಲೆ ನಡೆಸಿದ್ದಾರೆ' ಎಂದು ದೂರಿನಲ್ಲಿ ತಿಳಿಸಲಾಗಿದೆ.

ಬಿಜೆಪಿ ಮುಖಂಡನ ನೇತೃತ್ವದ ತಂಡದ ಕೃತ್ಯ: ಆರೋಪ

'ಉಜಿರೆಯಲ್ಲಿ ಆದಿವಾಸಿ ಸಮುದಾಯದ ಮಹಿಳೆಯೊಬ್ಬರನ್ನು ನಡುರಸ್ತೆಯಲ್ಲಿ ಅರೆಬೆತ್ತಲೆಗೊಳಿಸಿ ಹಲ್ಲೆ ನಡೆಸಿರುವ ಕೃತ್ಯ ನಾಗರಿಕ ಸಮಾಜ ತಲೆ ತಗ್ಗಿಸುವಂತಹ ಪ್ರವೃತ್ತಿಯಾಗಿದೆ. ಬಿಜೆಪಿ ಮುಖಂಡನ ನೇತೃತ್ವದ ತಂಡ ಈ ಕೃತ್ಯವನ್ನು ಎಸಗಿದೆ' ಎಂದು ದಲಿತ ನಾಯಕಿ ಈಶ್ವರಿ ಪದ್ಮುಂಜ ಆರೋಪಿಸಿದ್ದಾರೆ.

'ಆರಂಭದಲ್ಲಿ ಹಲವು ಒತ್ತಡಗಳಿಂದ ಪ್ರಕರಣವನ್ನು ರಾಜಿಯಲ್ಲಿ ಮುಗಿಸಲು ಪ್ರಯತ್ನಿಸಿದ್ದರು. ಆದರೆ, ಇದೀಗ ಪೊಲೀಸ್ ಇಲಾಖೆಯ ಮೇಲೆ ಒತ್ತಡ ಹೇರಿದ ಬಳಿಕ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ. ಆರೋಪಿಗಳು ರಾಜಾರೋಷವಾಗಿ ತಿರುಗಾಡುತ್ತಿದ್ದು, ತಕ್ಷಣ ಅವರನ್ನು ಬಂಧಿಸಬೇಕು. ಇಲ್ಲವಾದಲ್ಲಿ ಮುಂದಿನ ದಿನಗಳಲ್ಲಿ ಉಗ್ರ ಹೋರಾಟ ನಡೆಸಲಾಗುವುದು' ಎಂದು ಎಚ್ಚರಿಸಿದ್ದಾರೆ.

ಆರ್ಯವೈಶ್ಯ ಮಹಾಸಭಾಕ್ಕೆ ರವಿಶಂಕರ್ ಅಧ್ಯಕ್ಷ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಆರ್ಯವೈಶ್ಯ ಮಹಾಸಭಾ ಅಧ್ಯಕ್ಷರಾಗಿ ಆರ್.ಪಿ. ರವಿಶಂಕರ್ ಅವಿರೋಧವಾಗಿ ಪುನರಾಯ್ಕೆಯಾಗಿದ್ದಾರೆ.



ಆರ್.ಪಿ. ರವಿಶಂಕರ್

2009ರಿಂದ ಅವರು ಆರ್ಯವೈಶ್ಯ ಮಹಾಸಭಾ ಅಧ್ಯಕ್ಷರಾಗಿದ್ದಾರೆ. 2022–2027ರ ಅವಧಿಯ ಪದಾಧಿಕಾರಿಗಳ ಆಯ್ಕೆಗೆ ನಡೆದ ಚುನಾವಣೆಯಲ್ಲಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ ಎಂದು ಮಹಾಸಭಾ ಪ್ರಕಟಣೆ ತಿಳಿಸಿದೆ.



ತೋಕೂರು ಬಂಡಿ ಉತ್ಸವ

ಮಂಗಳೂರು ಸಮೀಪದ ತೋಕೂರುಗುತ್ತು ಜಾರಂದಾಯ ದೈವಸ್ಥಾನದಲ್ಲಿ ಶನಿವಾರ ಮೂಂದಿ ಬೆಳಕಿನಲ್ಲಿ ತೋಕೂರು ಬಂಡಿ ಉತ್ಸವ ನಡೆಯಿತು

ಪ್ರಜಾವಾಣಿ ಚಿತ್ರ

ಗಲಭೆ ರಾತ್ರಿ ದುಪ್ಪಟ್ಟು ಮೊಬೈಲ್ ಕರೆ

• ನಾಗರಾಜ್ ಬಿ.ಎನ್.

ಹುಬ್ಬಳ್ಳಿ: ಇಲ್ಲಿ ಗಲಭೆ ನಡೆದ ದಿನವಾದ ಶನಿವಾರ ಹಳೇಹುಬ್ಬಳ್ಳಿ ಪೊಲೀಸ್ ಠಾಣೆ ಸುತ್ತಲಿನ ಐದು ಮೊಬೈಲ್ ಟವರ್‌ಗಳಲ್ಲಿ ರಾತ್ರಿ 8 ರಿಂದ 12ರವರೆಗಿನ ಸಮಯದಲ್ಲಿ ಎಂದಿಗಿಂತ ದುಪ್ಪಟ್ಟು ಕರೆಗಳು ದಾಖಲಾಗಿವೆ.

ಠಾಣೆಸುತ್ತ–ಮುತ್ತಲಿನಕೆಲವುಕಟ್ಟಡಗಳಲ್ಲಿ ವಿವಿಧ ಕಂಪನಿಗಳ ಟವರ್‌ಗಳಿದ್ದು, ಗಲಭೆ ವೇಳೆ ದಾಖಲಾದ ಕರೆಗಳ ಮಾಹಿತಿಯನ್ನು ಪೊಲೀಸರು ಕಲೆ ಹಾಕಿದ್ದಾರೆ. ಆ ಮಾಹಿತಿ ಸಂಗ್ರಹಕ್ಕಾಗಿಯೇ ಪ್ರತ್ಯೇಕ ತಂಡ ರಚಿಸಲಾಗಿದೆ.

ನಿತ್ಯ ರಾತ್ರಿ ಆರು ಸಾವಿರ ಕರೆಗಳು ಠಾಣಾ ಸುತ್ತಮುತ್ತಲಿನ ಟವರ್‌ಗಳಲ್ಲಿ ದಾಖಲಾಗುತ್ತಿದ್ದವು. ಆದರೆ, ಗಲಭೆ ನಡೆದ ದಿನ ರಾತ್ರಿ 12 ಸಾವಿರಕ್ಕೂ ಹೆಚ್ಚು ಕರೆಗಳು ದಾಖಲಾಗಿವೆ. ಗಲಭೆ ನಡೆಯುವ ಸ್ಥಳಕ್ಕೆ ಜನರನ್ನು ಕರೆಯಲು ಕರೆ ಮಾಡಲಾಗಿದೆಯೇ? ಭಯಗೊಂಡ ಸಾರ್ವಜನಿಕರು, ಗಲಭೆ ಕುರಿತು ಮಾಹಿತಿ ನೀಡಲು ತಮ್ಮ ಪರಿಚಯದವರು ಹಾಗೂ ಸಂಬಂಧಿಕರಿಗೆ ಕರೆ ಮಾಡಿದ್ದರೇ ಎನ್ನುವ ಮಾಹಿತಿಯನ್ನು ಕಲೆ ಹಾಕಲಾಗುತ್ತಿದೆ.

ವಿದ್ಯುತ್ ವ್ಯತ್ಯಯ: ಗಲಭೆ ವೇಳೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಿದ್ದು ಪೊಲೀಸರ ಅನುಮಾನ ಹೆಚ್ಚಿಸಿದೆ. ಈ ಬಗ್ಗೆಯೂ ತನಿಖೆ ನಡೆಸುತ್ತಿದ್ದಾರೆ.

ವಿದ್ಯುತ್ ಸರಬರಾಜು ವ್ಯತ್ಯಯದ ಬಗ್ಗೆ ಹೆಸ್ಕಾಂ ಅಧಿಕಾರಿಗಳಿಂದ ಮಾಹಿತಿ ಪಡೆದು, ಅಲ್ಲಿರುವ ಸಿಸಿಟಿವಿ ಕ್ಯಾಮೆರಾ ಪರಿಶೀಲನೆ ನಡೆಸಿದ್ದಾರೆ. ಹಳೇ ಹುಬ್ಬಳ್ಳಿ ಪೊಲೀಸ್ ಠಾಣೆಯ ಸಮೀಪದಲ್ಲಿರುವ ಅರವಿಂದನಗರ ಭಾಗದಿಂದ ಬಂದ ಉದ್ರಿಕ್ತರ ಗುಂಪು ಠಾಣೆಯ ಸನಿಹವಿರುವ ಪರಿವರ್ತಕದಿಂದ ವಿದ್ಯುತ್ ಸರಬರಾಜಿಗೆ ಅಡ್ಡಿ ಮಾಡಿದ್ದರು ಎನ್ನುವ ಪ್ರಾಥಮಿಕ ಮಾಹಿತಿ ಪೊಲೀಸರಿಗೆ ಲಭ್ಯವಾಗಿದೆ.

ಗಲಭೆಯಲ್ಲಿ ಪಾಲ್ಗೊಂಡಿದ್ದ ಕೆಲವರು ಗಾಂಜಾ, ಅಫೀಮು ಸೇವನೆ ಮಾಡಿದ್ದರು ಎಂದು ತಿಳಿದು ಬಂದಿದೆ. ಬಂಧಿತ ಕೆಲ ಆರೋಪಿಗಳು ವಿಚಾರಣೆ ವೇಳೆ ಈ ವಿಷಯ ಬಾಯ್ಬಿಟ್ಟಿದ್ದಾರೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಗಲಭೆ ಪ್ರಕರಣವನ್ನು ಎಲ್ಲ ಆಯಾಮಗಳಿಂದಲೂ ತನಿಖೆ ನಡೆಯುತ್ತಿದೆ. ತನಿಖೆ ಪೂರ್ಣಗೊಳ್ಳುವವರೆಗೆ ಏನೂ ಹೇಳಲೂ ಸಾಧ್ಯವಿಲ್ಲ

ಲಾಭೂರಾಮ್, ಕಮಿಷನರ್, ಹು–ಧಾ ಪೊಲೀಸ್ ಕಮಿಷನರೇಟ್

ಪಾಲಿಕೆ ಸದಸ್ಯ ಹೊನ್ಯಾಳ ಬಂಧನ

ಹುಬ್ಬಳ್ಳಿ: ಹಳೇಹುಬ್ಬಳ್ಳಿ ಗಲಭೆಗೆ ಪ್ರಚೋದನೆ ನೀಡಿದ ಆರೋಪದ ಮೇಲೆ ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆಯ ಎಐಎಂಐಎಂ ಸದಸ್ಯ ನಜೀರ್‌ಅಹ್ಮದ್ ಹೊನ್ಯಾಳನನ್ನು ಪೊಲೀಸರು ಶನಿವಾರ ಬಂಧಿಸಿದ್ದಾರೆ.



ನಜೀರ್ ಅಹ್ಮದ ಹೊನ್ಯಾಳ

71ನೇ ವಾರ್ಡ್‌ನ ಸದಸ್ಯ ಹೊನ್ಯಾಳ, ಎಐಎಂಐಎಂ ಧಾರವಾಡ ಜಿಲ್ಲಾ ಘಟಕದ ಅಧ್ಯಕ್ಷರೂ ಆಗಿದ್ದಾರೆ.

'ಹೊನ್ಯಾಳ ಬಂಧನಕ್ಕೆ ಮೂರು ದಿನಗಳಿಂದ ಕಾರ್ಯಾಚರಣೆ ನಡೆಸಲಾಗುತ್ತಿತ್ತು. ಶನಿವಾರ ಕಾರವಾರ ರಸ್ತೆಯ ಯುಕೆಟಿ ಹಿಲ್ಸ್‌ನ ಅವರ ನಿವಾಸದಲ್ಲಿ ಬಂಧಿಸಿದ್ದೇವೆ. ಗಲಭೆಯಲ್ಲಿ ಅವರ ಪಾತ್ರದ ಬಗೆಗೆ ಮಾಹಿತಿ ಕಲೆ ಹಾಕಲಾಗುತ್ತಿದೆ' ಎಂದು ಪೊಲೀಸರು ತಿಳಿಸಿದ್ದಾರೆ. ಗಲಭೆಗೆ ಸಂಬಂಧಿಸಿದ ಆರೀಫ್ ಮಹಮ್ಮದ್ ಎಂಬಾತನನ್ನು ಪೊಲೀಸರು ಬೆಂಗಳೂರಿನಲ್ಲಿ ಶುಕ್ರವಾರ ರಾತ್ರಿ ಬಂಧಿಸಿದ್ದಾರೆ. ಬಂಧಿತರ ಸಂಖ್ಯೆ 141ಕ್ಕೆ ಏರಿದೆ.

ಸ್ಥಳ ಮಹಜರು: ಗಲಭೆಯ ಪ್ರಮುಖ ಆರೋಪಿ ಎನ್ನಲಾಗಿರುವ ವಸೀಂ ಪಠಾಣ್‌ನನ್ನು ಎಸಿಪಿ ಆರ್.ಕೆ. ಪಾಟೀಲ ನೇತೃತ್ವದ ತಂಡ ಗೋಪ್ಯ ಸ್ಥಳಕ್ಕೆ ಕರೆದೊಯ್ದು ತೀವ್ರ ವಿಚಾರಣೆ ನಡೆಸುತ್ತಿದೆ.

ಕುರಿ ಸಾಕಾಣಿಕೆದಾರರ ಮಹಾಮಂಡಳಕ್ಕೆ ಭೀಮಪ್ಪ ಅಧ್ಯಕ್ಷ



ಭೀಮಪ್ಪ ತಳ್ಳೀಕೆರೆ



ಕಾಶೀಲಿಂಗ ಹುಡೇದ

ಬೆಂಗಳೂರು: ಕರ್ನಾಟಕ ಸಹಕಾರ ಕುರಿ ಮತ್ತು ಮೇಕೆ ಸಾಕಾಣಿಕೆದಾರರ ಸಂಘಗಳ ಮಹಾಮಂಡಳದ ನೂತನ ಅಧ್ಯಕ್ಷರಾಗಿ ಭೀಮಪ್ಪ ತಳ್ಳೀಕೆರೆ ಮತ್ತು ಉಪಾಧ್ಯಕ್ಷರಾಗಿ ಕಾಶೀಲಿಂಗ ಬಿ. ಹುಡೇದ ಆಯ್ಕೆಯಾಗಿದ್ದಾರೆ.

ಮಹಾಮಂಡಳದ ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಆಯ್ಕೆಗೆ ಶುಕ್ರವಾರ ಚುನಾವಣೆ ನಡೆಯಿತು. ಭೀಮಪ್ಪ ತಳ್ಳೀಕೆರೆ ಪ್ರತಿಸ್ಪರ್ಧಿ ಪಂಡಿತರಾವ್ ಚಿದ್ರಿ ವಿರುದ್ಧ ಮತ್ತು ಕಾಶೀಲಿಂಗ ಅವರು ಎಂ. ರಮೇಶ್ ವಿರುದ್ಧ ಗೆಲುವು ಸಾಧಿಸಿದರು. ಇಬ್ಬರೂ ಮುಂದಿನ 5 ವರ್ಷಗಳ ಕಾಲ ಮಹಾಮಂಡಳದ ಅಧ್ಯಕ್ಷ ಮತ್ತು ಉಪಾಧ್ಯಕ್ಷರಾಗಿ ಕಾರ್ಯನಿರ್ವಹಿಸಲಿದ್ದಾರೆ.

ಕಟ್ಟಡ ಕಾರ್ಮಿಕರ ಪಾಸ್: ರಾಜ್ಯದಾದ್ಯಂತ ವಿಸ್ತರಣೆ

ಬೆಂಗಳೂರು: ಪ್ರಸ್ತುತ ಬಿಎಂಟಿಸಿಯಲ್ಲಿ ಜಾರಿಯಲ್ಲಿರುವ ಕಟ್ಟಡ ಕಾರ್ಮಿಕರಿಗೆ ರಿಯಾಯಿತಿ ಬಸ್ ಪಾಸ್ ಯೋಜನೆಯನ್ನು ರಾಜ್ಯದಾದ್ಯಂತ ವಿಸ್ತರಿಸಲು ತಾತ್ವಿಕ ಅನುಮೋದನೆ ನೀಡಿ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ.

ಸಂಕ್ಷಿಪ್ತ ಸುದ್ದಿ

ಸಾಹಿತಿ ಗಿರಿಜಮ್ಮ 'ಸಂಸ್ಮರಣ ಗ್ರಂಥ'ಕ್ಕೆ ಲೇಖನ ಆಹ್ವಾನ

ಬೆಂಗಳೂರು: ಸಾಹಿತಿಯಾಗಿದ್ದ ಸ್ತ್ರೀ ರೋಗ ತಜ್ಞೆ ಡಾ.ಎಚ್. ಗಿರಿಜಮ್ಮ ನೆನಪಿನಲ್ಲಿ 'ಸಂಸ್ಮರಣ ಗ್ರಂಥ' ಹೊರತರಲು ನಿರ್ಧರಿಸಿರುವ ಡಾ. ಎಚ್. ಗಿರಿಜಮ್ಮ ಸ್ನೇಹ ಬಳಗ, ಲೇಖನಗಳನ್ನು ಆಹ್ವಾನಿಸಿದೆ.

ಗಿರಿಜಮ್ಮ ಅವರ ಒಡನಾಟದಲ್ಲಿ ಇದ್ದವರು ತಮ್ಮ ಅನುಭವ ಅಥವಾ ಅವರ ಕಥೆ, ಕಾದಂಬರಿ, ಆರೋಗ್ಯ ಸಾಹಿತ್ಯದ ಕುರಿತು ಎರಡು ಪುಟಗಳ ಲೇಖನ ಕಳುಹಿಸಿಕೊಡಬಹುದು. ಅವರು ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದ ಛಾಯಾಚಿತ್ರಗಳನ್ನೂ ಕಳುಹಿಸಿಕೊಡಬಹುದು. ಗ್ರಂಥದ ಪ್ರಧಾನ ಸಂಪಾದಕರಾಗಿ ಡಾ. ಸಿ.ಆರ್. ಚಂದ್ರಶೇಖರ್, ಸಂಪಾದಕರಾಗಿ ಡಾ. ವಸುಂಧರಾ ಭೂಪತಿ ಮತ್ತು ಆರ್. ಪೂರ್ಣಿಮಾ ಕಾರ್ಯನಿರ್ವಹಿಸಲಿದ್ದಾರೆ.

ಲೇಖನ, ಛಾಯಾಚಿತ್ರಗಳನ್ನು ಮೇ 15ರ ಒಳಗೆ ನುಡಿ ತಂತ್ರಾಂಶದಲ್ಲಿ ಇ ಮೇಲ್‌ನಲ್ಲಿ (bhupathivasundhara@gmail.com) ಮತ್ತು 'ಡಾ. ವಸುಂಧರಾ ಭೂಪತಿ, ನಂ. 222, 2ನೇ ಇ ಕ್ರಾಸ್, 3ನೇ ಬ್ಲಾಕ್, 3ನೇ ಹಂತ, ಬಸವೇಶ್ವರನಗರ, ಬೆಂಗಳೂರು– 79' ಈ ವಿಳಾಸಕ್ಕೆ ಕಳುಹಿಸುವಂತೆ ವಸುಂಧರಾ ಭೂಪತಿ ತಿಳಿಸಿದ್ದಾರೆ.

ಪ್ರಶ್ನೆಪತ್ರಿಕೆ ಸೋರಿಕೆ: ಠಾಣೆಗೆ ಕೆಇಎ ದೂರು

ಬೆಂಗಳೂರು: ಸಹಾಯಕ ಪ್ರಾಧ್ಯಾಪಕ ಹುದ್ದೆಗಳ ನೇರ ನೇಮಕಾತಿಗೆ ನಡೆದ ಭೂಗೋಳ ವಿಜ್ಞಾನ ಪರೀಕ್ಷೆಯ ಸುಮಾರು 18 ಪ್ರಶ್ನೆಗಳು ಸೌಮ್ಯಾ ಆರ್. ಎಂಬವರ ಮೊಬೈಲ್ ಸಂಖ್ಯೆಯಿಂದ ಬೇರೆ ಬೇರೆ ಮೊಬೈಲ್‌ಗಳಿಗೆ ವಾಟ್ಸ್‌ಆ್ಯಪ್ ಮೂಲಕ ರವಾನೆ ಆಗಿದೆಯೇ' ಎಂದು ತನಿಖೆ ನಡೆಸುವಂತೆ ಮಲ್ಲೇಶ್ವರ ಪೊಲೀಸ್ ಠಾಣೆಗೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರದ (ಕೆಇಎ) ಕಾರ್ಯನಿರ್ವಾಹಕ ನಿರ್ದೇಶಕಿ ಎಸ್. ರಮ್ಯಾ ದೂರು ನೀಡಿದ್ದಾರೆ.

'ಮಾರ್ಚ್ 14ರಂದು ನಡೆದ ಭೂಗೋಳ ವಿಜ್ಞಾನ ಪರೀಕ್ಷೆ ನಡೆದಿತ್ತು. ಈ ಪರೀಕ್ಷೆಯ ಪ್ರಶ್ನೆ ಪತ್ರಿಕೆ ಅಂದು ಬೆಳಿಗ್ಗೆ 8.30ರ ವೇಳೆಗೆ ವಾಟ್ಸ್‌ಆ್ಯಪ್ ಮೂಲಕ ರವಾನೆ ಆಗಿದೆ ಎಂದು ಅಭ್ಯರ್ಥಿಗಳು ದೂರು ನೀಡಿದ್ದಾರೆ. ಈ ದೂರಿನ ಸತ್ಯಾಸತ್ಯತೆ ತಿಳಿಯಲು ತನಿಖೆ ನಡೆಸುವಂತೆ ದೂರು ನೀಡಲಾಗಿದೆ. ಪ್ರಶ್ನೆಗಳು ವಾಟ್ಸ್‌ಆ್ಯಪ್ ಮೂಲಕ ರವಾನೆ ಆಗಿದ್ದರೆ, ಎಷ್ಟು ಪ್ರಶ್ನೆಗಳು ರವಾನೆ ಆಗಿವೆ ಎಂದು ಪತ್ತೆ ಮಾಡಿ ಅದರಲ್ಲಿ ಭಾಗಿಯಾಗಿರುವವರ ಮೇಲೆ ಕ್ರಮ ತೆಗೆದುಕೊಳ್ಳುವಂತೆ ದೂರಿನಲ್ಲಿ ಮನವಿ ಮಾಡಲಾಗಿದೆ' ಎಂದು ಅವರು ತಿಳಿಸಿದರು.

ಆಹಾರ ಸುರಕ್ಷೆ: ಪ್ರಯೋಗಾಲಯ ತೆರೆಯಲು ನಿರ್ದೇಶನ

ಬೆಂಗಳೂರು: 'ಆಹಾರ ಸುರಕ್ಷಾ ಕಾಯ್ದೆಗಳ ಪರಿಣಾಮಕಾರಿ ಅನುಷ್ಠಾನಕ್ಕಾಗಿ ರಾಜ್ಯದಲ್ಲಿ ಸೂಕ್ತ ಪ್ರಯೋಗಾಲಯಗಳನ್ನು ತೆರೆಯಬೇಕು' ಎಂದು ಹೈಕೋರ್ಟ್, ರಾಜ್ಯ ಸರ್ಕಾರಕ್ಕೆ ನಿರ್ದೇಶಿಸಿದೆ.

'ವಿಜಯಪುರ ಸಕ್ಷಮ ಪ್ರಾಧಿಕಾರ ದಾಖಲಿಸಿಕೊಂಡಿರುವ ಪ್ರಕರಣ ರದ್ದುಗೊಳಿಸಬೇಕು' ಎಂದು ಕೋರಿ ವಿವಿಧ ಆಹಾರ ಪದಾರ್ಥಗಳ ಸಗಟು ವ್ಯಾಪಾರಿಯೊಬ್ಬರು ಸಲ್ಲಿಸಿರುವ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ವಿ.ಶ್ರೀಶಾನಂದ ಅವರಿದ್ದ ಏಕಸದಸ್ಯ ನ್ಯಾಯಪೀಠ, ಈ ಕುರಿತಂತೆ ಆದೇಶಿಸಿದೆ.

'ಪರೀಕ್ಷಾ ಮತ್ತು ಮಾಪನಾಂಕ ನಿರ್ಣಯ ಪ್ರಯೋಗಾಲಯಗಳ ರಾಷ್ಟ್ರೀಯ ಮಾನ್ಯತಾ ಮಂಡಳಿಯ (ಎನ್‌ಎಬಿಎಲ್) ಗುಣಮಟ್ಟಕ್ಕೆ ಅನುಗುಣವಾಗಿ ಈ ಪ್ರಯೋಗಾಲಯಗಳನ್ನು ತೆರೆಯಬೇಕು. ರಾಜ್ಯದ ಪ್ರತಿ ತಾಲ್ಲೂಕಿನಲ್ಲೂ ಆಹಾರ ಸುರಕ್ಷಾ ಅಧಿಕಾರಿಗಳನ್ನು ನೇಮಕ ಮಾಡುವ ದಿಸೆಯಲ್ಲಿ ರಾಜ್ಯ ಸರ್ಕಾರ ಶೀಘ್ರವೇ ಕ್ರಮ ಕೈಗೊಳ್ಳಬೇಕು' ಎಂದು ಸೂಚಿಸಿರುವ ನ್ಯಾಯಪೀಠ ಪ್ರಕರಣದ ವಿಚಾರಣೆಯನ್ನು 2023ರ ಜನವರಿ ಮೊದಲ ವಾರಕ್ಕೆ ಮುಂದೂಡಿದೆ.

ಸೌಮ್ಯತೆ ಕಳೆದುಕೊಂಡ ಹಿಂದೂ ಧರ್ಮ: ಕುಂ.ವೀ.

ಪ್ರಜಾವಾಣಿ ಸೆಲೆಬ್ರಿಟಿ LIVE

ಬೆಂಗಳೂರು: ರಾಮನ ಬಗ್ಗೆ ಗೌರವ ಇದೆ. ಹಾಗೆಂದು ನಾನು ಜೈಶ್ರೀರಾಮ್ ಎಂದು ಕೂಗಲಾಗದು...

– ಹೀಗೆಂದು ಕಥೆಗಾರ ಕುಂ. ವೀರಭದ್ರಪ್ಪ ಹೇಳಿದರು.

'ಪ್ರಜಾವಾಣಿ' ಸೆಲೆಬ್ರಿಟಿ ಲೈವ್ ಕಾರ್ಯಕ್ರಮದಲ್ಲಿ ಶನಿವಾರ ಮಾತನಾಡಿದ ಅವರು, 'ಹಿಂದೂ ಎಂಬ ಪದ ವಿಶ್ವ ಹಿಂದೂ ಪರಿಷತ್, ಪ್ರಮೋದ್ ಮುತಾಲಿಕ್ ಅಂಥವರಿಂದ ಕಲುಷಿತಗೊಂಡಿದೆ. ತನ್ನ ಸೌಮ್ಯತೆಯನ್ನು ಕಳೆದುಕೊಳ್ಳುತ್ತಿದೆ' ಎಂದು ಬೇಸರಿಸಿದರು.

'ನಾನು ಹಿಂದೂ ಅಲ್ಲ. ಲಿಂಗಾಯತ ಎಂದಿದ್ದೇನೆ. ನಾನು ಬಸವಣ್ಣನ ಅನುಯಾಯಿ. ಜಾತಿ ಮೀರಿದ ಚೌಕಟ್ಟಿನ ಧರ್ಮ ಅದು. ಆ ಪಥದಲ್ಲಿ ನಡೆಯುವವನು. ಅದರಂತೆ ನಡೆದುಕೊಂಡಿದ್ದೇನೆ' ಎಂದರು.



ನಾಡಿನ ಪ್ರಸಕ್ತ ಸನ್ನಿವೇಶಗಳಿಗೆ ಪ್ರತಿಕ್ರಿಯಿಸಿದ ಅವರು, 'ನಾಡಿನಲ್ಲಿ ಸಾಕಷ್ಟು ಸಮಸ್ಯೆಗಳಿವೆ. ಆದರೆ, ಚುನಾವಣೆ ಹತ್ತಿರ ಬರುತ್ತಿದೆಯಲ್ಲಾ, ಹಾಗಾಗಿ ಅದರಿಂದ ಗಮನ ಬೇರೆಡೆ ಸೆಳೆಯಲು ಪ್ರಯತ್ನಗಳು ನಡೆಯುತ್ತಿವೆ. ಉದಾಹರಣೆಗೆ ಹಿಜಾಬ್ ವಿವಾದ ನಡೆದ ಉಡುಪಿಯ ಕಾಲೇಜಿನಲ್ಲಿ ಜನವರಿ 1ರಂದು ನಾನು ಹೋಗಿ ಭಾಷಣ ಮಾಡಿ ಬಂದಿದ್ದೆ. ಅದಾಗಿ ಎಂಟೇ ದಿನಗಳಲ್ಲಿ ಈ ವಿವಾದ ಶುರುವಾಗಿದೆ. ಹಾಗಾದರೆ ಇದನ್ನೆಲ್ಲಾ ಸೃಷ್ಟಿಸಿದವರು ಯಾರು' ಎಂದು ಪ್ರಶ್ನಿಸಿದರು.

'ಸಮವಸ್ತ್ರ ಎಂದರೆ ಜೈಲು ಅಲ್ಲ. ಅದು ವಿದ್ಯಾರ್ಥಿಯ ಆಯ್ಕೆಗೆ ಬಿಟ್ಟದ್ದು. ಇಲ್ಲಿ ಶಿಕ್ಷಣ ಮುಖ್ಯ. ಇಂಥದ್ದೊಂದು ಕ್ಷುಲ್ಲಕ ವಿಷಯದಿಂದ ಆರಂಭವಾದದ್ದು ರಾಜ್ಯ, ದೇಶ– ವಿದೇಶಗಳವರೆಗೆ ಹಬ್ಬಿತು. ಅಲ್ಲಿ ವ್ಯಾಪಾರ ಮಾಡಬಾರದು, ಇಲ್ಲಿ ವ್ಯಾಪಾರ ಮಾಡಬಾರದು ಎಂದೆಲ್ಲಾ ಶುರು ಮಾಡಿದ್ದೇವೆ. ಇದೆಲ್ಲಾ ಬೇಕಾ? ಹತಾಶ ಸ್ಥಿತಿಯಲ್ಲಿ ಜನಸಾಮಾನ್ಯ ಇದ್ದಾನೆ. ಲೇಖಕರಾದವರು ಅವನ ಪರ ವಕಾಲತ್ತು ವಹಿಸಬೇಕು' ಎಂದರು.

'ನಾನು ಬದುಕಿನಲ್ಲಿ ಹೋರಾಟಗಾರ. ವ್ಯವಸ್ಥೆಯನ್ನು ಪ್ರಶ್ನಿಸಿದ್ದೇನೆ. ಮಾತು, ಬರಹದ ಮೂಲಕ ಪ್ರತಿಕ್ರಿಯಿಸಿದ್ದೇನೆ. ಹೀಗಾಗಿ ಬದುಕಿನಲ್ಲಿ ಜೀವಂತಿಕೆಯಿದೆ. ಖುಷಿಯಾಗಿದ್ದೇನೆ' ಎಂದರು.

ಮಾನ್ಯತೆ ಹಿಂಪಡೆದ ಶಾಲೆಗಳಿಂದ ಹೈಕೋರ್ಟ್‌ಗೆ ರಿಟ್ ಅರ್ಜಿ

'ಎಸ್ಸೆಸ್ಸೆಲ್ಸಿ ಅಂಕಪಟ್ಟಿಯಲ್ಲಿ ಶಾಲೆ ಹೆಸರು ನಮೂದಿಸಿ'

ಬೆಂಗಳೂರು: 'ಶೈಕ್ಷಣಿಕ ವರ್ಷದ ಕೊನೆಯಲ್ಲಿ ಮಾನ್ಯತೆ ಹಿಂಪಡೆಯಲಾಗಿರುವ ಶಾಲೆಗಳಲ್ಲಿ ವ್ಯಾಸಂಗ ಮಾಡಿರುವ ವಿದ್ಯಾರ್ಥಿಗಳಿಗೆ ಅವರ ಎಸ್ಸೆಸ್ಸೆಲ್ಸಿ ಅಂಕಪಟ್ಟಿಯಲ್ಲಿ ಆಯಾ ಶಾಲೆಗಳ ಹೆಸರು ನಮೂದಿಸಬೇಕು' ಎಂದು ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ನಿರ್ದೇಶಿಸಿದೆ.

ಈ ಸಂಬಂಧ ವಿವೇಕನಗರದ ಶಾಂತಿ ನಿಕೇತನ ಪ್ರೌಢಶಾಲೆ ಸೇರಿದಂತೆ ಎಂಟು ಶಾಲೆಗಳು ಸಲ್ಲಿಸಿದ್ದ ರಿಟ್ ಅರ್ಜಿಗಳ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಪಿ. ಕೃಷ್ಣ ಭಟ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

'ಅರ್ಜಿದಾರರ ಶಾಲೆಗಳಲ್ಲಿ ವ್ಯಾಸಂಗ ಮಾಡಿರುವ ವಿದ್ಯಾರ್ಥಿಗಳ ಎಸ್ಸೆಸ್ಸೆಲ್ಸಿ ಅಂಕಪಟ್ಟಿಗಳಲ್ಲಿ ಅವರ ಶಾಲೆಗಳ ಹೆಸರು ನಮೂದಿಸಲು ನಿರಾಕರಿಸುವುದು ಏಕಪಕ್ಷೀಯ ನಿರ್ಧಾರವಾಗಲಿದೆ' ಎಂದು ಅಭಿಪ್ರಾಯಪಟ್ಟಿರುವ ನ್ಯಾಯಪೀಠ, 'ಎಸ್ಸೆಸ್ಸೆಲ್ಸಿ ವಿದ್ಯಾರ್ಥಿಗಳ ಅಂಕಪಟ್ಟಿ ಹಾಗೂ ಫಲಿತಾಂಶ ಪಟ್ಟಿಯಲ್ಲಿ ಆಯಾ ಶಾಲೆಗಳ ಹೆಸರು ನಮೂದಿಸಬೇಕು' ಎಂದು ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಇಲಾಖೆ, ಸಾರ್ವಜನಿಕ ಶಿಕ್ಷಣ ಇಲಾಖೆ ಆಯುಕ್ತರು ಹಾಗೂ ನಿರ್ದೇಶಕರು ಮತ್ತು ಎಸ್ಸೆಸ್ಸೆಲ್ಸಿ ಪರೀಕ್ಷಾ ಮಂಡಳಿಗೆ ನಿರ್ದೇಶಿಸಿದೆ.

'ಶಾಶ್ವತ ಮಾನ್ಯತೆ ಇದ್ದರೂ ಶೈಕ್ಷಣಿಕ ವರ್ಷದ ಅಂತ್ಯದಲ್ಲಿ ಸರ್ಕಾರವು ನಮ್ಮ ಶಾಲೆಗಳ ಮಾನ್ಯತೆ ಹಿಂಪಡೆದಿದೆ. ಹೀಗಾಗಿ, ನಮ್ಮ ಶಾಲೆಯಲ್ಲಿ ಕಲಿತ ಎಸ್ಸೆಸ್ಸೆಲ್ಸಿ ವಿದ್ಯಾರ್ಥಿಗಳಿಗೆ ಬೇರೆ ಶಾಲೆಗಳಲ್ಲಿ ಪರೀಕ್ಷೆ ಬರೆಸಲಾಗಿದೆ. ಇದರಿಂದ, ಪರೀಕ್ಷಾ ಫಲಿತಾಂಶ ಪಟ್ಟಿ ಹಾಗೂ ಅಂಕಪಟ್ಟಿಯಲ್ಲಿ ನಮ್ಮ ಶಾಲೆಗಳ ಹೆಸರನ್ನು ಕೈಬಿಡುವ ಸಾಧ್ಯತೆ ಇದೆ. ಆದ್ದರಿಂದ, ಸರ್ಕಾರಕ್ಕೆ ಸೂಕ್ತ ನಿರ್ದೇಶನ ನೀಡಬೇಕು' ಎಂದು ಅರ್ಜಿದಾರರು ಕೋರಿದ್ದರು. ಅರ್ಜಿದಾರರ ಪರ ವಕೀಲ ಜಿ.ಆರ್.ಮೋಹನ ವಾದ ಮಂಡಿಸಿದ್ದರು.

ನಿಧನ ವಾರ್ತೆ

ಎಂ.ಎಸ್.ಭೋಜೇಗೌಡ



ಚಿಕ್ಕಮಗಳೂರು: ಕಾಫಿ ಮಂಡಳಿ ಮಾಜಿ ಅಧ್ಯಕ್ಷ ಎಂ.ಎಸ್. ಭೋಜೇಗೌಡ (73) ನಗರದ ಆಶ್ರಯ ಆಸ್ಪತ್ರೆಲ್ಲಿ ಶನಿವಾರ ನಿಧನರಾದರು.


ಶನಿವಾರ ಮಧ್ಯಾಹ್ನ ಕೈಮರ ಸಮೀಪದ ಕೃಷ್ಣಗಿರಿ ಎಸ್ಟೇಟ್‌ನಲ್ಲಿ ಓಡಾಡುವಾಗ ಜೇನುಹುಳುಗಳು ಕಚ್ಚಿ ಅವರು ಅಸ್ವಸ್ಥಗೊಂಡಿದ್ದರು. ಆಸ್ಪತ್ರೆಗೆ ದಾಖಲಾಗಿದ್ದ ಅವರು, ಚಿಕಿತ್ಸೆಗೆ ಸ್ಪಂದಿಸದೆ ಮೃತಪಟ್ಟರು.

ಅವರಿಗೆ ಪತ್ನಿ ಎಚ್.ಎಸ್. ಗೀತಾ, ಪುತ್ರರಾದ ಹಿಮಕೀರ್ತಿ, ಜಯಕೀರ್ತಿ ಇದ್ದಾರೆ. ಕಾಫಿ ಬೆಳೆಗಾರರಾಗಿದ್ದ ಭೋಜೇಗೌಡ ಅವರು ಕಾಫಿ ಮಂಡಳಿಗೆ ಎರಡು ಬಾರಿ ಅಧ್ಯಕ್ಷರಾಗಿದ್ದರು. ಬಿಜೆಪಿ ಜಿಲ್ಲಾ ಘಟಕದ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದ್ದರು. ಹಿಂದೆ ಜನತಾ ಪಕ್ಷ, ಕಾಂಗ್ರೆಸ್ ಪಕ್ಷದಲ್ಲೂ ಕಾರ್ಯನಿರ್ವಹಿಸಿದ್ದರು. ಕೃಷ್ಣಗಿರಿ ಎಸ್ಟೇಟ್‌ನಲ್ಲಿ ಭಾನುವಾರ ಮಧ್ಯಾಹ್ನ ಅಂತ್ಯಕ್ರಿಯೆ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಸ್ವಾತಂತ್ರ್ಯದ ಅಮೃತ ಮಹೋತ್ಸವ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಬೊಮ್ಮಾಯಿ ಭರವಸೆ

ವರದಿ ಬಳಿಕ 2ಎಗೆ ಪಂಚಮಸಾಲಿ

ಪ್ರಜಾವಾಣಿ ವಾರ್ತೆ



ಬಸವರಾಜ ಬೊಮ್ಮಾಯಿ

ಹರಿಹರ: 'ಎಲ್ಲ ಸಮಾಜಗಳನ್ನು ಸಮಾನವಾಗಿ ನೋಡಿಕೊಳ್ಳುವ ಜವಾಬ್ದಾರಿ ನನ್ನ ಮೇಲಿದೆ. ಪಂಚಮಸಾಲಿ ಸಮಾಜಕ್ಕೆ 2ಎ ಮೀಸಲಾತಿ ನೀಡಬೇಕು ಎಂಬ ನಿಮ್ಮ ಒಕ್ಕೊರಲ ಮನವಿಗೆ ಸ್ಪಂದಿಸುವ ಕೆಲಸ ಮಾಡುತ್ತೇನೆ. ಜಯಪ್ರಕಾಶ್ ಹೆಗ್ಡೆ ಅಧ್ಯಕ್ಷರಾಗಿರುವ ಹಿಂದುಳಿದ ವರ್ಗಗಳ ಆಯೋಗದ ಸಮೀಕ್ಷೆಯ ವರದಿ ಬಂದ ಬಳಿಕ ಕ್ರಮ ಕೈಗೊಳ್ಳಲಾಗುವುದು' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಹರಿಹರದ ವೀರಶೈವ ಲಿಂಗಾಯತ ಪಂಚಮಸಾಲಿ ಮಠದಲ್ಲಿ ಶನಿವಾರ ಹಮ್ಮಿಕೊಂಡಿದ್ದ ಸ್ವಾತಂತ್ರ್ಯದ ಅಮೃತ ಮಹೋತ್ಸವ ಕಾರ್ಯಕ್ರಮ ಮತ್ತು ಬೃಹತ್ ಉದ್ಯೋಗ ಮೇಳ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

'ನಾವು ನೇಮಿಸಿದ ಹಿಂದುಳಿದ ವರ್ಗಗಳ ಆಯೋಗಕ್ಕೆ ಸಾಂವಿಧಾನಿಕ ಮಾನ್ಯತೆಯನ್ನು ನೀಡುವ ಕೆಲಸವನ್ನು ಪ್ರಧಾನಿ ನರೇಂದ್ರ ಮೋದಿ ಮಾಡಿದ್ದಾರೆ. ಆಯೋಗವು ಪ್ರತಿ ಜಿಲ್ಲೆಗೆ ಹೋಗಿ ಸಮೀಕ್ಷೆ ನಡೆಸುತ್ತಿದೆ. ಸಮೀಕ್ಷೆ ಮುಗಿದ ಬಳಿಕ ಆಯೋಗದ ವರದಿ ಬರಲಿದ್ದು, ಆಗ 2ಎ ಮೀಸಲಾತಿ ನೀಡುವ ಬಗ್ಗೆ ಕ್ರಮ ಕೈಗೊಳ್ಳಲಾಗುವುದು. ಈ ಸಮಾಜಕ್ಕೆ ಒಳ್ಳೆಯದ ದಿನಗಳು ಬರಲಿವೆ' ಎಂದು ಭರವಸೆ ನೀಡಿದರು.

'ಸಮಾಜ ಶಕ್ತಿಯುತವಾಗಬೇಕಿದ್ದರೆ ಒಂದೇ ಧ್ವನಿ ಇರಬೇಕು. ಭಕ್ತರು ಒಟ್ಟಿಗೆ ಇರಬೇಕು. ಪ್ರತ್ಯೇಕ ಧ್ವನಿಗಳು ಇರಬಾರದು' ಎಂದು ಕಿವಿಮಾತು ಹೇಳಿದರು.

'ಈ ನಾಡಿನ ನೆಲ, ಜಲ, ಭಾಷೆ, ಗಡಿಗಳ ವಿಚಾರ ಬಂದಾಗ ನಾವು ರಾಜಕೀಯವನ್ನು ಮರೆತು ಎಲ್ಲಾ ಪಕ್ಷಗಳು ಒಂದಾಗುತ್ತೇವೆ. ಅದೇ ರೀತಿ ನೀವು ಕೂಡ ಒಂದಾಗಬೇಕು' ಎಂದು ಸಲಹೆ ನೀಡಿದರು.

ಪೀಠಾಧಿಪತಿ ವಚನಾನಂದ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು.

11 ಕೋಟಿ ಉದ್ಯೋಗದಿಂದ 2.5 ಕೋಟಿಗೆ ಇಳಿಕೆ



'2016ರಲ್ಲಿ ನೋಟ್ ಅಮಾನ್ಯ ಆಗುವ ಮುಂಚೆ ದೇಶದಲ್ಲಿ ಸಣ್ಣ ಮತ್ತು ಅತಿ ಸಣ್ಣ ಕೈಗಾರಿಕೆಗಳು 11 ಕೋಟಿ ಉದ್ಯೋಗಗಳನ್ನು ನೀಡುತ್ತಿದ್ದವು. ಈಗ ಅದು 2.5 ಕೋಟಿ ಉದ್ಯೋಗಗಳನ್ನಷ್ಟೇ ನೀಡುತ್ತಿವೆ' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಹೇಳಿದರು.

'ನೋಟು ಅಮಾನ್ಯ ಮತ್ತು ಕೋವಿಡ್ ಪಿಡುಗಿನ ಕಾರಣದಿಂದ ಈ ಸ್ಥಿತಿ ಉಂಟಾಗಿದೆ. ಉದ್ಯೋಗ ನೀಡುವುದು ಸರ್ಕಾರದ ಕರ್ತವ್ಯ. ಆದರೆ, ಇಂದು ಉದ್ಯೋಗ ನಶಿಸಿ ಹೋಗುತ್ತಿದೆ' ಎಂದು ಅವರು ಕಳವಳ ವ್ಯಕ್ತಪಡಿಸಿದರು.

'ಉದ್ಯೋಗ ಸೃಷ್ಟಿಯಾಗದೇ ಇದ್ದರೆ ಪದವಿ ಪಡೆದವರು ನಿರುಪಯುಕ್ತರಾಗುತ್ತಾರೆ. ದೇಶಕ್ಕೆ ಅವರಿಂದ ಕೊಡುಗೆ ಸಿಗುವುದಿಲ್ಲ. ಉದ್ಯೋಗಕ್ಕೂ, ಉದ್ಯಮಕ್ಕೂ, ಕಾನೂನು–ಸುವ್ಯವಸ್ಥೆಗೂ ನೇರ ಸಂಬಂಧ ಇದೆ. ಕಾನೂನು ಸುವ್ಯವಸ್ಥೆ ಇದ್ದರೆ ರಾಜ್ಯಕ್ಕೆ ಉದ್ಯಮಗಳು ಬರುತ್ತವೆ. ಉದ್ಯಮಗಳು ಬಂದರೆ ಉದ್ಯೋಗ ದೊರೆಯುತ್ತವೆ. ಎರಡು ವರ್ಷಗಳಿಂದ ರಾಜ್ಯಕ್ಕೆ ಯಾವುದೇ ಹೂಡಿಕೆದಾರರು ಬಂದಿಲ್ಲ' ಎಂದು ಬೇಸರ ವ್ಯಕ್ತಪಡಿಸಿದರು.

ತೇಜ್‌ಪಾಲ್ ಖುಲಾಸೆ ಪ್ರಶ್ನಿಸಿದ ಅರ್ಜಿ ವಿಚಾರಣೆಗೆ ಸಮ್ಮತಿ

ಪಣಜಿ(ಪಿಟಿಐ): ಪತ್ರಕರ್ತ ತರುಣ್ ತೇಜ್‌ಪಾಲ್ ಅವರು 2013ರ ಲೈಂಗಿಕ ದೌರ್ಜನ್ಯ ಪ್ರಕರಣದಲ್ಲಿ ಖುಲಾಸೆ ಆಗಿದ್ದನ್ನು ಪ್ರಶ್ನಿಸಿ ಗೋವಾ ಸರ್ಕಾರ ಸಲ್ಲಿಸಿದ ಅರ್ಜಿಯ ವಿಚಾರಣೆಗೆ ಬಾಂಬೆ ಹೈಕೋರ್ಟ್‌ನ ಗೋವಾ ಪೀಠ ಸಮ್ಮತಿಸಿದೆ. ಕಳೆದ ವರ್ಷ ಸೆಷನ್ಸ್ ನ್ಯಾಯಾಲಯವೊಂದು ತೇಜ್‌ಪಾಲ್ ಅವರನ್ನು ಎಲ್ಲಾ ಪ್ರಕರಣಗಳಿಂದ ಖುಲಾಸೆಗೊಳಿಸಿತ್ತು. ಇದನ್ನು ಪ್ರಶ್ನಿಸಿ ರಾಜ್ಯ ಸರ್ಕಾರ ಹೈಕೋರ್ಟ್ ಮೊರೆ ಹೋಗಿತ್ತು.

ಅಲ್ಲದೆ 15 ದಿನಗಳ ಒಳಗಾಗಿ ವಿಚಾರಣಾಧೀನ ನ್ಯಾಯಾಲಯದಿಂದ ಜಾಮೀನು ಪಡೆಯುವಂತೆ ತೇಜ್‌ಪಾಲ್‌ಗೆ ಹೈಕೋರ್ಟ್ ಆದೇಶಿಸಿದೆ. 2013ರಲ್ಲಿ ಗೋವಾದ ಪಂಚತಾರಾ ಹೋಟೆಲ್‌ನಲ್ಲಿ ಸಹೋದ್ಯೋಗಿ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ್ದ ಆರೋಪದಲ್ಲಿ ಇವರ ವಿರುದ್ಧ ಆರೋಪಪಟ್ಟಿ ದಾಖಲಿಸಲಾಗಿತ್ತು.

ದೇಶದಲ್ಲಿ ಎರಡೇ ರಾಜಕೀಯ ಪಕ್ಷಗಳಿರಲಿ: ಕೇಂದ್ರಕ್ಕೆ ಮನವಿ



ಬಾಪೂರಾಯ ಕೂಳಪ್ಪ ಲೋನಿ ಅವರು ರಕ್ಷಣಾ ಸಚಿವ ರಾಜನಾಥಸಿಂಗ್ ಅವರಿಗೆ ಮನವಿ ಸಲ್ಲಿಸಿದರು.

ನವದೆಹಲಿ: ದೇಶದಲ್ಲಿ ಎರಡೇ ಪ್ರಮುಖ ರಾಜಕೀಯ ಪಕ್ಷಗಳು ಅಸ್ತಿತ್ವದಲ್ಲಿ ಇರುವಂತಾಗಬೇಕು. ಈ ನಿಟ್ಟಿನಲ್ಲಿ ಸೂಕ್ತ ಕಾನೂನು ರಚಿಸಬೇಕು ಎಂದು ಕರ್ನಾಟಕದ ವಿಜಯಪುರ ಜಿಲ್ಲೆಯ ವ್ಯಕ್ತಿಯೊಬ್ಬರು ಕೇಂದ್ರ ಸರ್ಕಾರವನ್ನು ಒತ್ತಾಯಿಸಿದ್ದಾರೆ.

ಚಡಚಣ ತಾಲ್ಲೂಕಿನ ಬಿ.ಕೆ. ಲೋನಿ ಗ್ರಾಮದ ಬಾಪೂರಾಯ ಕೂಳಪ್ಪ ಲೋನಿ ಎಂಬುವವರೇ ಮಾರ್ಚ್ 2ನೇ ವಾರ ತಮ್ಮ ಗ್ರಾಮದಿಂದ ಪಾದಯಾತ್ರೆ ಮೂಲಕ ಹೊರಟು ರಾಷ್ಟ್ರ ರಾಜಧಾನಿ ನವದೆಹಲಿಗೆ ಬಂದಿದ್ದು, ರಕ್ಷಣಾ ಸಚಿವ ರಾಜನಾಥ ಸಿಂಗ್ ಅವರಿಗೆ ಶುಕ್ರವಾರ ಈ ಕುರಿತ ಮನವಿ ಸಲ್ಲಿಸಿದ್ದಾರೆ.

ಇಂಗ್ಲೆಂಡ್, ಅಮೆರಿಕ ಮತ್ತಿತರ ದೇಶಗಳಲ್ಲಿ ಕೇವಲ ಎರಡು ರಾಜಕೀಯ ಪಕ್ಷಗಳು ಇದೆ. ಎರಡೇ ಪಕ್ಷಗಳಿದ್ದಾಗ ಮತದಾರರಲ್ಲಿ ಗೊಂದಲ ಕಡಿಮೆ ಆಗಲಿದೆ. ಅಲ್ಲದೆ, ಬಹು ಪಕ್ಷಗಳು ಇದ್ದಾಗ ಎದುರಾಗುವ ಅಸ್ಥಿರ ರಾಜಕೀಯ ಸ್ಥಿತಿಯೂ ದೂರವಾಗಲಿದೆ ಎಂದು ಅವರು ಪ್ರತಿಪಾದಿಸಿದ್ದಾರೆ.

ಕಾನೂನು ರಚಿಸುವ ಸಂದರ್ಭ, ಜನೋಪಯೋಗಿ ಯೋಜನೆಗಳ ಜಾರಿಯ ವೇಳೆ ಇದರಿಂದ ಸಹಾಯವಾಗಲಿದೆ ಎಂದೂ ಅವರು ಮನವಿಯಲ್ಲಿ ತಿಳಿಸಿದ್ದಾರೆ.

ಜಹಾಂಗೀರ್‌ಪುರಿ: ಆರೋಪಿಗಳ ಮೇಲೆ ಇ.ಡಿ ಪ್ರಕರಣ

ನವದೆಹಲಿ (ಪಿಟಿಐ): ಜಹಾಂಗೀರ್‌ಪುರಿಯಲ್ಲಿ ಇತ್ತೀಚೆಗೆ ನಡೆದ ಹಿಂಸಾಚಾರದ ಆರೋಪಿಗಳ ವಿರುದ್ಧ ಹಣ ಅಕ್ರಮ ವರ್ಗಾವಣೆ ಪ್ರಕರಣವನ್ನು ಜಾರಿ ನಿರ್ದೇಶನಾಲಯ (ಇ.ಡಿ.) ಶನಿವಾರ ದಾಖಲಿಸಿಕೊಂಡಿದೆ. ಪ್ರಮುಖ ಆರೋಪಿ ಮೊಹಮ್ಮದ್ ಅನ್ಸಾರ್ ವಿರುದ್ಧವೂ ಪ್ರಕರಣ ದಾಖಲಿಸಿಕೊಳ್ಳಲಾಗಿದೆ.

ದೆಹಲಿ ಪೊಲೀಸ್ ಆಯುಕ್ತ ರಾಕೇಶ್ ಅಸ್ತಾನಾ ಅವರು ಆರೋಪಿಗಳ ವಿರುದ್ಧ ತನಿಖೆ ನಡೆಸುವಂತೆ ಇ.ಡಿ.ಗೆ ಇತ್ತೀಚೆಗೆ ಶಿಫಾರಸು ಮಾಡಿದ್ದರು. ಪೊಲೀಸ್ ಅಧಿಕಾರಿಗಳು ನಡೆಸಿದ ಪ್ರಾಥಮಿಕ ತನಿಖೆಯಲ್ಲಿ ಪತ್ತೆಯಾದ ಅಂಶಗಳನ್ನು ಅವರು ಉಲ್ಲೇಖಿಸಿದ್ದರು. ಪೊಲೀಸರು ದಾಖಲಿಸಿಕೊಂಡಿರುವ ಎಫ್‌ಐಆರ್ ಆಧಾರದಲ್ಲಿ ಇ.ಡಿ. ತನಿಖೆ ನಡೆಯಲಿದೆ.

ಇದೇ 16ರಂದು ಹನುಮ ಜಯಂತಿ ಮೆರವಣಿಗೆ ಸಂದರ್ಭದಲ್ಲಿ ವಾಯವ್ಯ ದೆಹಲಿಯ ಜಹಾಂಗೀರ್‌ಪುರಿಯಲ್ಲಿ ಎರಡು ಸಮುದಾಯಗಳ ನಡುವೆ ಸಂಘರ್ಷ ಏರ್ಪಟ್ಟಿತ್ತು. ಎಂಟು ಪೊಲೀಸರು ಮತ್ತು ಸ್ಥಳೀಯ ವ್ಯಕ್ತಿಯೊಬ್ಬರು ಸಂಘರ್ಷದಲ್ಲಿ ಗಾಯಗೊಂಡಿದ್ದರು. ಕಲ್ಲು ತೂರಾಟ ನಡೆದಿತ್ತು ಮತ್ತು ಕೆಲವು ವಾಹನಗಳಿಗೆ ಬೆಂಕಿ ಹಚ್ಚಲಾಗಿತ್ತು ಎಂದು ಪೊಲೀಸರು ಹೇಳಿದ್ದಾರೆ.

ಅನ್ಸಾರ್ ಹಣದ ಕೆಲವು ವ್ಯವಹಾರ ನಡೆಸಿದ್ದಾರೆ ಮತ್ತು ಅವರ ಬಳಿ ಹಲವು ಆಸ್ತಿಗಳಿವೆ. ಜೂಜಾಟದಿಂದ ಬಂದ ಹಣದಲ್ಲಿ ಈ ಆಸ್ತಿ ಖರೀದಿಸಲಾಗಿದೆ ಎಂದು ಪ್ರಾಥಮಿಕ ತನಿಖೆಯಲ್ಲಿ ತಿಳಿದು ಬಂದಿದೆ ಎಂದು ಪೊಲೀಸರು ಹೇಳಿದ್ದಾರೆ. ಆರೋಪಿಗಳನ್ನು ಇ.ಡಿ. ವಿಚಾರಣೆಗೆ ಒಳಪಡಿಸಲಿದೆ.

ಹಣ ಅಕ್ರಮ ವರ್ಗಾವಣೆ ಪ್ರಕರಣದ ತನಿಖೆಯ ಸಂದರ್ಭದಲ್ಲಿ ಆರೋಪಿಗಳನ್ನು ಬಂಧಿಸುವ ಮತ್ತು ಅವರ ಆಸ್ತಿಯನ್ನು ಮುಟ್ಟುಗೋಲು ಹಾಕಿಕೊಳ್ಳುವ ಅಧಿಕಾರ ಇ.ಡಿ.ಗೆ ಇದೆ.

ಹಿಂಸಾಚಾರ ಪ್ರಕರಣದಲ್ಲಿ ಈವರೆಗೆ 25 ಮಂದಿಯನ್ನು ಬಂಧಿಸಲಾಗಿದೆ. ಇಬ್ಬರು ಬಾಲಕರನ್ನೂ ವಶಕ್ಕೆ ಪಡೆಯಲಾಗಿದೆ. ಅನ್ಸಾರ್ ಸೇರಿ ಐವರ ವಿರುದ್ಧ ರಾಷ್ಟ್ರೀಯ ಭದ್ರತಾ ಕಾಯ್ದೆಯ (ಎನ್‌ಎಸ್‌ಎ) ಅಡಿಯಲ್ಲಿ ಪ್ರಕರಣ ದಾಖಲಿಸಲಾಗಿದೆ.

ವ್ಯಾಪಾರಕ್ಕೆ ಅಡ್ಡಿ

ಜಹಾಂಗೀರ್‌ಪುರಿಯಲ್ಲಿನ ಹೆಚ್ಚಿನ ಅಂಗಡಿ ಮತ್ತು ಇತರ ವ್ಯಾಪಾರ ಕೇಂದ್ರಗಳು ಶನಿವಾರವೂ ಮುಚ್ಚಿದ್ದವು. ಚಲನೆಗೆ ಇರುವ ನಿರ್ಬಂಧ ಮತ್ತು ಬ್ಯಾರಿಕೇಡ್‌ಗಳು ವ್ಯಾಪಾರಕ್ಕೆ ತೊಡಕಾಗಿ ಪರಿಣಮಿಸಿವೆ ಎಂದು ವರ್ತಕರು ಹೇಳಿದ್ದಾರೆ. ಜನರ ಸಂಚಾರ ಮತ್ತು ಅಂಗಡಿ ತೆರೆಯಲು ಯಾವುದೇ ನಿರ್ಬಂಧ ಇಲ್ಲ ಎಂದು ಪೊಲೀಸರು ಶುಕ್ರವಾರವೇ ಹೇಳಿದ್ದರು. ಆದರೆ, ವಾಹನ ಸಂಚಾರಕ್ಕೆ ನಿರ್ಬಂಧ ಇದೆ ಎಂದು ಸ್ಥಳೀಯರು ಹೇಳಿದ್ದಾರೆ.

'ಜನರಿಗೆ ಬಂಧನದಂತಹ ಸ್ಥಿತಿ'

ಜಹಾಂಗೀರ್‌ಪುರಿಯ ನಿವಾಸಿಗಳಿಗೆ ಅಗತ್ಯ ವಸ್ತುಗಳು ಲಭ್ಯವಾಗುತ್ತಿಲ್ಲ. ಈ ಪ್ರದೇಶದಲ್ಲಿ ಹೇರಿರುವ ನಿರ್ಬಂಧದಿಂದ ಜನರು ಸಂಕಷ್ಟಕ್ಕೆ ಒಳಗಾಗಿದ್ದಾರೆ. ಅಲ್ಲಿನ ಜನರನ್ನು ಪಂಜರದಲ್ಲಿ ಇರಿಸಿದಂತೆ ಆಗಿದೆ. ಹೊರಗೆ ಬರಲು ಅವಕಾಶ ಕೊಡುತ್ತಿಲ್ಲ. ಅಗತ್ಯ ಪ್ರಮಾಣದಲ್ಲಿ ನೀರು ಕೂಡ ಲಭ್ಯವಿಲ್ಲ ಎಂದು ಜನರು ದೂರಿದ್ದಾರೆ ಎಂದು ತೃಣಮೂಲ ಕಾಂಗ್ರೆಸ್ ಸಂಸದೆ ಕಾಕೋಲಿ ಘೋಷ್ ದಸ್ತಿದಾರ್ ಹೇಳಿದ್ದಾರೆ.

ಸತ್ಯಶೋಧನೆಗಾಗಿ ಜಹಾಂಗೀರ್‌ಪುರಿಗೆ ಭೇಟಿ ನೀಡಿದ್ದ ಟಿಎಂಸಿಯ ಮಹಿಳಾ ನಿಯೋಗದ ನೇತೃತ್ವವನ್ನು ಕಾಕೋಲಿ ವಹಿಸಿದ್ದರು.

ಜಹಾಂಗೀರ್‌ಪುರಿಯ ಸಿ ಬ್ಲಾಕ್‌ನಲ್ಲಿ ಭಾರಿ ಬಂದೋಬಸ್ತ್ ಏರ್ಪಡಿಸಲಾಗಿದೆ. ಎಲ್ಲೆಡೆಯೂ ಬ್ಯಾರಿಕೇಡ್‌ಗಳನ್ನು ಹಾಕಲಾಗಿದೆ. ಎಲ್ಲ ನಿರ್ಬಂಧಗಳನ್ನು ಮೀರಿ ಟಿಎಂಸಿ ನಿಯೋಗವು ಜಹಾಂಗೀರ್‌ಪುರಿಗೆ ಹೋಗಿದೆ. ಅಲ್ಲಿನ ನಿವಾಸಿಗಳ ಜತೆಗೆ ಮಾತನಾಡಿದೆ ಎಂದು ಕಾಕೋಲಿ ಹೇಳಿದ್ದಾರೆ.

'ಪೊಲೀಸರು ತಡೆಯುವುದಕ್ಕೆ ಮುನ್ನವೇ ನಾವು ಹಲವು ಮಂದಿಯ ಜತೆಗೆ ಮಾತನಾಡಿದ್ದೇವೆ.ಹಿಂಸಾಚಾರ ನಡೆದಾಗ ಅಲ್ಲಿ ಇದ್ದ ಜನರನ್ನೂ ಮಾತನಾಡಿಸಿದ್ದೇವೆ. ಜನರು ಭೀತಿಯಲ್ಲಿದ್ದಾರೆ' ಎಂದು ಅವರು ತಿಳಿಸಿದ್ದಾರೆ.

'ಜಹಾಂಗೀರ್‌ಪುರಿ ಘಟನೆಯ ಬಗ್ಗೆ ತನಿಖೆ ನಡೆಸಲು ಮಮತಾ ಬ್ಯಾನರ್ಜಿ ಅವರು ಕಳುಹಿಸಿದ್ದ ಮಹಿಳೆಯರೇ ಇದ್ದ ತಂಡವನ್ನು ಪೊಲೀಸರು ತಡೆದಿದ್ದಾರೆ. ತಂಡವು ಜನರನ್ನು ಮಾತನಾಡಿಸಿದರೆ, ಹಿಂಸಾಚಾರದ ಕುರಿತ ಸತ್ಯ ಬಯಲಿಗೆ ಬರುತ್ತದೆ ಎಂದು ಬಿಜೆಪಿ ಸರ್ಕಾರ ಹಾಗೂ ದೆಹಲಿ ಪೊಲೀಸರು ಭಯಗೊಂಡಿದ್ದಾರೆ' ಎಂದು ನಿಯೋಗದಲ್ಲಿದ್ದ ಅಪೂರೂಪ ಪೊದ್ದಾರ್ ಟ್ವೀಟ್ ಮಾಡಿದ್ದಾರೆ.



ಜಗ್ಗಿ ವಾಸುದೇವ್ ಅವರ 'ಮಣ್ಣಿನ ಸಂರಕ್ಷಣೆ' ಆಂದೋಲನಕ್ಕೆ ಕೈಜೋಡಿಸುವ ಒಡಂಬಡಿಕೆಗೆ ಬುಕಾರೆಸ್ಟ್‌ನಲ್ಲಿ ಕೃಷಿ ಸಚಿವ ಆಡ್ರಿಯನ್ ಅಯೋನು ಚೆಸ್ನೊಯಿಯು ಅವರು ಸಹಿ ಹಾಕಿದರು. ಭಾರತದ ರಾಯಭಾರಿ ರಾಹುಲ್ ಶ್ರೀವಾಸ್ತವ ಕೂಡ ಇದ್ದರು.

ಮಣ್ಣು ಸಂರಕ್ಷಣೆ ಆಂದೋಲನಕ್ಕೆ ರೊಮೇನಿಯಾ ಸಹಭಾಗಿತ್ವ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸದ್ಗುರು ಜಗ್ಗಿ ವಾಸುದೇವ್ ಅವರು ಕೈಗೊಂಡಿರುವ 'ಮಣ್ಣಿನ ಸಂರಕ್ಷಣೆ' ಆಂದೋಲನಕ್ಕೆ ರೊಮೇನಿಯಾ ಕೈಜೋಡಿಸಿದೆ.

ದಿನದ ಹಿಂದೆ, ವಾಸುದೇವ್ ಅವರು ರೊಮೇನಿಯಾದ ರಾಜಧಾನಿ ಬುಕಾರೆಸ್ಟ್‌ನಲ್ಲಿ ಕೃಷಿ ಸಚಿವಾಲಯಕ್ಕೆ ಭೇಟಿ ನೀಡಿ 'ಮಣ್ಣು ಸಂರಕ್ಷಣೆ' ಆಂದೋಲನದ ಕುರಿತು ಅಲ್ಲಿನ ಕೃಷಿ ಸಚಿವ ಆಡ್ರಿಯನ್ ಅಯೋನು ಚೆಸ್ನೊಯಿಯು ಅವರಿಗೆ ಮಾಹಿತಿ ನೀಡಿದ್ದರು. ಭೂಮಿ ಮತ್ತು ಜೀವಿಗಳನ್ನು ರಕ್ಷಿಸುವ ನೀತಿಗಳ ಅನುಷ್ಠಾನದ ಮಹತ್ವದ ಬಗ್ಗೆ ಒತ್ತಿ ಹೇಳಿದ್ದರು. ನಂತರ, ಕೃಷಿ ಸಚಿವರು, ಈ ಆಂದೋಲನಕ್ಕೆ ಕೈಜೋಡಿಸುವ ಒಡಂಬಡಿಕೆಗೆ ಸಹಿ ಹಾಕಿದರು. ರೊಮೇನಿಯಾದಲ್ಲಿ ಭಾರತದ ರಾಯಭಾರಿ ರಾಹುಲ್ ಶ್ರೀವಾಸ್ತವ ಕೂಡ ಇದ್ದರು.

ರೊಮೇನಿಯಾದ ಜನಪ್ರಿಯ ಕೊಳಲು ವಾದಕ ಗಿಯಾರ್ಗೆ ಝಂಫಿರ್ ಅವರು ವಾಸುದೇವ್ ಭೇಟಿಯಾಗಿ, ಪ್ಯಾನ್ ಫ್ಲ್ಯೂಟ್ ಉಡುಗೊರೆ ನೀಡಿದರು.

ವಾಸುದೇವ್ ಅವರು ಬುಕಾರೆಸ್ಟ್‌ನಲ್ಲಿ ಶಿಕ್ಷಣ ಸಚಿವರನ್ನು ಶನಿವಾರ ಭೇಟಿಯಾಗಿದ್ದರು. ಬಳಿಕ, ಟರ್ಕಿ ಮಾರ್ಗವಾಗಿ ಭಾರತಕ್ಕೆ ಮರಳಿದರು.

ಅದಿರು ರಫ್ತು ನಿಷೇಧ ತೆರವಿಗೆ ವಿರೋಧ

ಸುಪ್ರೀಂ ಕೋರ್ಟ್‌ಗೆ ರಾಜ್ಯ ಸರ್ಕಾರದಿಂದ ಲಿಖಿತ ಹೇಳಿಕೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಕರ್ನಾಟಕದ ಬಳ್ಳಾರಿ, ಚಿತ್ರದುರ್ಗ ಮತ್ತು ತುಮಕೂರು ಜಿಲ್ಲೆಗಳಲ್ಲಿರುವ ಗಣಿಗಳಿಂದ ಹೊರತೆಗೆಯಲಾದ ಕಬ್ಬಿಣದ ಅದಿರು ರಫ್ತಿನ ಮೇಲೆ ಹೇರಿರುವ ನಿಷೇಧ ತೆರವುಗೊಳಿಸುವಂತೆ ಕೋರಲಾದ ಮೇಲ್ಮನವಿಗೆ ಕರ್ನಾಟಕ ವಿರೋಧ ವ್ಯಕ್ತಪಡಿಸಿದೆ.

ಅದಿರು ರಫ್ತಿಗೆ ಅನುವು ಮಾಡಿಕೊಡುವಂತೆ ಗಣಿ ಮಾಲೀಕರು ಸಲ್ಲಿಸಿರುವ ಮೇಲ್ಮನವಿಯ ಕುರಿತು ಸುಪ್ರೀಂ ಕೋರ್ಟ್‌ಗೆ ಲಿಖಿತ ಹೇಳಿಕೆ ಸಲ್ಲಿಸಿರುವ ರಾಜ್ಯ ಸರ್ಕಾರವು, ಕೇಂದ್ರದ ಗಣಿ ಮತ್ತು ಉಕ್ಕು ಸಚಿವಾಲಯ ಹಾಗೂ ಸುಪ್ರೀಂ ಕೋರ್ಟ್ ನಿರ್ದೇಶಿತ ಕೇಂದ್ರ ಉನ್ನತಾಧಿಕಾರ ಸಮಿತಿ (ಸಿಇಸಿ)ಗಳು ಕೈಗೊಂಡಿರುವ ನಿಲುವನ್ನು ವಿರೋಧಿಸಿದೆ.

ರಫ್ತು ನಿಷೇಧ ಹಿಂದಕ್ಕೆ ತೆಗೆದುಕೊಳ್ಳದಂತೆ ಒತ್ತಾಯಿಸಿ, 2021ರ ಮೇ ತಿಂಗಳಲ್ಲಿ ತಾಳಿದ್ದ ನಿಲುವಿಗೆ ಅಂಟಿಕೊಂಡಿರುವ ಸರ್ಕಾರ, ರಫ್ತು ಮೇಲಿನ ಎಲ್ಲ ರೀತಿಯ ನಿಬಂಧನೆಗಳನ್ನು ತೆಗೆದು ಹಾಕುವುದಕ್ಕೆ ಸದ್ಯದ ಪರಿಸ್ಥಿತಿ ಪೂರಕವಾಗಿಲ್ಲ ಎಂದು ಹೇಳಿದೆ.

ದೇಶೀ ಮಾರುಕಟ್ಟೆಯ ಅವಶ್ಯಕತೆಗೆ ಅನುಗುಣವಾಗಿ ಉತ್ಪಾದನೆಯನ್ನು ಗಣನೆಗೆ ತೆಗೆದುಕೊಳ್ಳಬೇಕಿದೆ. ಅಲ್ಲದೆ, ಅನಿಯಂತ್ರಿತವಾದ ರಫ್ತು ಕ್ರಮದಿಂದ ಅನೇಕ ಸಮಸ್ಯೆಗಳು ಉದ್ಭವವಾಗುವ ಸಾಧ್ಯತೆ ಇದೆ ಎಂದೂ ಸರ್ಕಾರ ವಿವರಿಸಿದೆ.

ಗಣಿಗಾರಿಕೆಯಿಂದ ಉಂಟಾಗಿರುವ ಸಮಸ್ಯೆ ಹಾಗೂ ಗಣಿಬಾಧಿತ ಜನರ ಪುನರ್ವಸತಿಗೆ ಸಂಬಂಧಿಸಿದ ಅರ್ಜಿಗಳ ವಿಚಾರಣೆ ನಡೆಸಿ ನ್ಯಾಯಪೀಠ ಈ ಹಿಂದೆ ನೀಡಿರುವ ಅನೇಕ ಆದೇಶಗಳಲ್ಲಿ ರಫ್ತನ್ನು ವಿರೋಧಿಸಲಾಗಿದೆ ಎಂದೂ ಸರ್ಕಾರ ತನ್ನ ಹೇಳಿಕೆಯಲ್ಲಿ ತಿಳಿಸಿದೆ.

ಸಾರ್ವಜನಿಕ ಹಿತಾಸಕ್ತಿಯನ್ನು ಉದ್ದೇಶವಾಗಿ ಇರಿಸಿಕೊಂಡೇ ಆ ಎಲ್ಲ ಅರ್ಜಿಗಳನ್ನು ವಿಲೇವಾರಿ ಮಾಡಲಾಗಿದ್ದು, ಪುನರ್ವಸತಿ ಕ್ರಮಕ್ಕಾಗಿ ನಿರ್ದಿಷ್ಟ ಮೊತ್ತವನ್ನು ಮೀಸಲಿರಿಸುವಂತೆ ಸೂಚಿಸಿಯೇ ಆದೇಶ ಹೊರಡಿಸಲಾಗಿದೆ ಎಂದೂ ಹೇಳಲಾಗಿದೆ.

ಸಿಇಸಿ ಹಾಗೂ ಕೇಂದ್ರ ಗಣಿ ಮತ್ತು ಉಕ್ಕು ಸಚಿವಾಲಯವು ರಾಜ್ಯದ ಗಣಿಗಳಿಂದ ಅದಿರು ರಫ್ತಿನ ಮೇಲೆ ಹೇರಿದ ನಿಷೇಧವನ್ನು ತೆಗೆದು ಹಾಕುವಂತೆ ಸಲ್ಲಿಸಲಾದ ಮೇಲ್ಮನವಿಯನ್ನು ಬೆಂಬಲಿಸಿವೆ. ಆದರೆ, ಸ್ಥಳೀಯ ಉಕ್ಕು ಉತ್ಪಾದನಾ ಘಟಕಗಳು ಹಾಗೂ ಧಾರವಾಡದ ಸಮಾಜ ಪರಿವರ್ತನಾ ಸಮುದಾಯಗಳು ಅದಕ್ಕೆ ತೀವ್ರ ವಿರೋಧ ವ್ಯಕ್ತಪಡಿಸಿವೆ.

ರಾಜ್ಯದ ಗಣಿಗಳ ಅದಿರನ್ನು ರಫ್ತು ಮಾಡಲು ಅವಕಾಶ ಕೋರಿರುವ ಹಾಗೂ ಇ–ಹರಾಜು ಮೂಲಕ ಅದಿರು ಮಾರಾಟ ವ್ಯವಸ್ಥೆಯನ್ನು ಕೈಬಿಡುವಂತೆ ಕೋರಲಾದ ಮೇಲ್ಮನವಿಯ ವಿಚಾರಣೆ ಪೂರ್ಣಗೊಳಿಸಿರುವ ನ್ಯಾಯಪೀಠ ಈ ಕುರಿತ ತನ್ನ ಆದೇಶವನ್ನು ಕಾಯ್ದಿರಿಸಿದೆ.

ಕರ್ನಾಟಕ ಹೊರತುಪಡಿಸಿ ದೇಶದ ಇತರ ರಾಜ್ಯಗಳಲ್ಲಿನ ಗಣಿಗಳಲ್ಲಿ ಹೊರತೆಗೆಯಲಾದ ಅದಿರು ರಫ್ತಿಗೆ ಯಾವುದೇ ರೀತಿಯ ನಿರ್ಬಂಧ ಹೇರಲಾಗಿಲ್ಲ ಎಂಬುದು ಗಮನಾರ್ಹ.

ದಂಪತಿ ವಿರುದ್ಧ ಶಿವಸೇನಾ ಕಾರ್ಯಕರ್ತರ ಪ್ರತಿಭಟನೆ

ಪಕ್ಷೇತರ ಶಾಸಕ ರವಿ ರಾಣಾ, ಸಂಸದೆ ನವನೀತ್ ರಾಣಾ ಬಂಧನ

ಮುಂಬೈ (ಪಿಟಿಐ): ಬಾಂದ್ರಾದಲ್ಲಿರುವ ಮಹಾರಾಷ್ಟ್ರ ಮುಖ್ಯಮಂತ್ರಿ ಉದ್ಧವ್ ಠಾಕ್ರೆ ಅವರ ನಿವಾಸ 'ಮಾತೋಶ್ರೀ' ಹೊರಗೆ ಹನುಮಾನ್ ಚಾಲೀಸಾ ಪಠಿಸುವುದಾಗಿ ಘೋಷಿಸಿದ್ದ ಪಕ್ಷೇತರ ಶಾಸಕ ರವಿ ರಾಣಾ ಮತ್ತು ಅವರ ಪತ್ನಿ, ಸಂಸದೆ ನವನೀತ್ ರಾಣಾ ಅವರನ್ನು ಖಾರ್ ಉಪನಗರ ಠಾಣೆ ಪೊಲೀಸರು ಶನಿವಾರ ಸಂಜೆ ಬಂಧಿಸಿದ್ದಾರೆ.

ವಿವಿಧ ಸಮುದಾಯಗಳು ಹಾಗೂ ಗುಂಪುಗಳ ನಡುವೆ ದ್ವೇಷವನ್ನು ಸೃಷ್ಟಿಸಿದ್ದಾರೆ ಎಂದು ಆರೋಪಿಸಿ ರಾಣಾ ದಂಪತಿಯನ್ನು ಇಲ್ಲಿನ ಖಾರ್ ಉಪನಗರದಲ್ಲಿರುವ ಅವರ ನಿವಾಸದಿಂದ ಬಿಗಿ ಭದ್ರತೆಯಲ್ಲಿ ಕರೆದುಕೊಂಡು ಹೋಗಿದ್ದ ಪೊಲೀಸರು, ಸಂಜೆ ಬಂಧಿಸಿದ್ದಾರೆ.

ಮಹಾರಾಷ್ಟ್ರ ಮುಖ್ಯಮಂತ್ರಿ ಉದ್ಧವ್ ಠಾಕ್ರೆ ಅವರ ಖಾಸಗಿ ನಿವಾಸದ ಹೊರಗೆ ಹನುಮಾನ್ ಚಾಲೀಸಾವನ್ನು ಪಠಿಸುವ ನಿರ್ಧಾರವನ್ನು ರಾಣಾ ದಂಪತಿ ಕೈಬಿಟ್ಟ ನಂತರ ಈ ಬೆಳವಣಿಗೆ ನಡೆದಿದೆ.

ಬಂಧನಕ್ಕೂ ಮುನ್ನ ತಮ್ಮ ನಿವಾಸದಲ್ಲಿ ಶನಿವಾರ ಮಧ್ಯಾಹ್ನ ಸುದ್ದಿಗಾರರೊಂದಿಗೆ ಮಾತನಾಡಿದ ರವಿ ರಾಣಾ, ಪ್ರಧಾನಿ ನರೇಂದ್ರ ಮೋದಿ ಅವರು ಭಾನುವಾರ ನಗರಕ್ಕೆ ಆಗಮಿಸುತ್ತಿರುವ ಹಿನ್ನೆಲೆಯಲ್ಲಿ ಕಾನೂನು ಸುವ್ಯವಸ್ಥೆಗೆ ಧಕ್ಕೆಯಾಗಬಾರದು ಎಂಬ ಉದ್ದೇಶದಿಂದ ತಮ್ಮ ನಿರ್ಧಾರವನ್ನು ಕೈಬಿಟ್ಟಿರುವುದಾಗಿ ಹೇಳಿದ್ದರು.

ಬಾಂದ್ರಾದಲ್ಲಿರುವ ಮುಖ್ಯಮಂತ್ರಿ ಉದ್ಧವ್ ಠಾಕ್ರೆ ಅವರ ನಿವಾಸದ ಹೊರಗೆ ಶನಿವಾರ ಬೆಳಗ್ಗೆ 9ಕ್ಕೆ ಹನುಮಾನ್ ಚಾಲೀಸಾ ಪಠಿಸುವುದಾಗಿ ರಾಣಾ ದಂಪತಿ ಶುಕ್ರವಾರ ಹೇಳಿದ್ದರು. ರಾಣಾ ದಂಪತಿಯ ಈ ಹೇಳಿಕೆಗೆ ತೀವ್ರ ಆಕ್ಷೇಪ ವ್ಯಕ್ತಪಡಿಸಿದ್ದ ಶಿವಸೇನಾ ಕಾರ್ಯಕರ್ತರು ಬೆಳಗ್ಗೆಯಿಂದಲೇ 'ಮಾತೋಶ್ರೀ' ಬಳಿ ಜಮಾಯಿಸಿದ್ದರು. ಮತ್ತೊಂದು ಗುಂಪು ರಾಣಾ ದಂಪತಿ ನಿವಾಸದ ಮುಂದೆ ಪ್ರತಿಭಟನೆ ನಡೆಸಿತ್ತು.



ಶಾಸಕ ರವಿ ರಾಣಾ ವಿರುದ್ಧ ಶಿವಸೇನಾ ಕಾರ್ಯಕರ್ತರ ಪ್ರತಿಭಟನೆ –ಪಿಟಿಐ ಚಿತ್ರ

ಪ್ರತಿಭಟನೆ: ಶಿವಸೇನಾ ಕಾರ್ಯಕರ್ತರು ಬ್ಯಾರಿಕೇಡ್‌ಗಳನ್ನು ಮುರಿದು ಮಹಾರಾಷ್ಟ್ರ ಶಾಸಕ ರವಿ ರಾಣಾ ಅವರ ನಿವಾಸಕ್ಕೆ ನುಗ್ಗಲು ಶನಿವಾರ ಯತ್ನಿಸಿದರು. ಆದರೆ, ಪೊಲೀಸರು ಶಿವಸೇನಾ ಕಾರ್ಯಕರ್ತರನ್ನು ತಡೆದು, ಪರಿಸ್ಥಿತಿಯನ್ನು ಹತೋಟಿಗೆ ತಂದರು ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ರವಿ ರಾಣಾ ಅವರು ಬಡ್ನೇರಾ ವಿಧಾನಸಭಾ ಕ್ಷೇತ್ರದ ಪಕ್ಷೇತರ ಶಾಸಕರಾಗಿದ್ದರೆ, ಪತ್ನಿ ನವನೀತ್ ರಾಣಾ ಅವರು ಅಮರಾವತಿ ಲೋಕಸಭಾ ಕ್ಷೇತ್ರದಿಂದ ಆಯ್ಕೆಯಾಗಿರುವ ಪಕ್ಷೇತರ ಸಂಸದೆ.

'ಉದ್ರಿಕ್ತ ಕಾರ್ಯಕರ್ತರು ಬೆಳಿಗ್ಗೆ 8.45ರ ಸುಮಾರಿಗೆ ರಾಣಾ ದಂಪತಿಯ ಅಪಾರ್ಟ್‌ಮೆಂಟ್‌ನಿಂದ ಸುಮಾರು 50 ಮೀಟರ್ ದೂರದಲ್ಲಿ ಹಾಕಲಾಗಿದ್ದ ಬ್ಯಾರಿಕೇಡ್‌ಗಳನ್ನು ಭೇದಿಸಿದರು. ಘೋಷಣೆಗಳನ್ನು ಕೂಗುತ್ತಾ ಅಪಾರ್ಟ್‌ಮೆಂಟ್ ಆವರಣಕ್ಕೆ ಪ್ರವೇಶಿಸಲು ಪ್ರಯತ್ನಿಸಿದರು' ಎಂದು ಪೊಲೀಸ್ ಅಧಿಕಾರಿ ತಿಳಿಸಿದ್ದಾರೆ.

ಈ ನಡುವೆ, 'ಸಿಎಂ ನಿವಾಸದ ಎದುರು ಹನುಮಾನ್ ಚಾಲೀಸಾ ಪಠಣಕ್ಕೆ ಮುಂದಾದರೆ ರಾಣಾ ದಂಪತಿಗೆ 'ಪ್ರಸಾದ' ಕೊಡದೇ ಕಳುಹಿಸುವುದಿಲ್ಲ' ಎಂದು ಶಿವಸೇನಾ ಕಾರ್ಯಕರ್ತರು ಮತ್ತು ಮುಖಂಡರು ಎಚ್ಚರಿಕೆ ನೀಡಿದ್ದರು.

ಬೇಡ ಜಂಗಮ ಸುಳ್ಳು ಪ್ರಮಾಣಪತ್ರ: ಮಾಹಿತಿ ಸಂಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೇಡ ಜಂಗಮ ಜಾತಿಯ ಹೆಸರಿನಲ್ಲಿ ಸುಳ್ಳು ಪ್ರಮಾಣಪತ್ರ ಪಡೆದಿರುವವರ ಮಾಹಿತಿ ಸಂಗ್ರಹಿಸಲು ಕಂದಾಯ ಇಲಾಖೆ ನಿರ್ಧರಿಸಿದೆ.

ಹೊನ್ನಾಳಿ ಕ್ಷೇತ್ರದ ಬಿಜೆಪಿ ಶಾಸಕ ಎಂ.ಪಿ. ರೇಣುಕಾಚಾರ್ಯ ತಮ್ಮ ಪ್ರಭಾವ ಬಳಸಿ ತಮ್ಮ ಪುತ್ರಿ ಹಾಗೂ ಸಹೋದರರಿಗೆ ಬೇಡ ಜಂಗಮ ಜಾತಿ ಪ್ರಮಾಣಪತ್ರ ಕೊಡಿಸಿದ್ದಾರೆ ಎಂಬ ಆರೋಪದ ಹಿನ್ನೆಲೆಯಲ್ಲಿ ಸಮಗ್ರ ಮಾಹಿತಿ ಪಡೆಯಲು ಇಲಾಖೆ ಮುಂದಾಗಿದೆ.

'2010ರಿಂದ ಇಲ್ಲಿಯವರೆಗೆ ಬೇಡ ಜಂಗಮ ಜಾತಿಯ ಎಷ್ಟು ಪ್ರಮಾಣಪತ್ರಗಳನ್ನು ನೀಡಲಾಗಿದೆ, ತಮ್ಮ ವ್ಯಾಪ್ತಿಯಲ್ಲಿರುವ ಎಲ್ಲ ತಾಲ್ಲೂಕುಗಳಲ್ಲಿ ಬೇಡ ಜಂಗಮ ಪ್ರಮಾಣಪತ್ರಗಳನ್ನು ನೀಡಿದವರು ಮತ್ತು ಪಡೆದುಕೊಂಡಿರುವವರ ವಿವರ ಮತ್ತು ಪ್ರಮಾಣಪತ್ರದ ನಕಲು ಪ್ರತಿಗಳನ್ನು ಕ್ರೋಡೀಕರಿಸಿ ತಕ್ಷಣ ಕಳುಹಿಸಬೇಕು' ಎಂದು ಎಲ್ಲ ಪ್ರಾದೇಶಿಕ ಆಯುಕ್ತರುಗಳಿಗೆ ಕಂದಾಯ ಇಲಾಖೆ ಪ್ರಧಾನ ಕಾರ್ಯದರ್ಶಿ ಪತ್ರ ಬರೆದಿದ್ದಾರೆ.

'ರಾಜ್ಯದಲ್ಲಿ ಹಲವು ಕಡೆ ಅನರ್ಹರು ಬೇಡ ಜಂಗಮ ಜಾತಿ ಪ್ರಮಾಣಪತ್ರ ಪಡೆದುಕೊಂಡಿರುವ ಬಗ್ಗೆ ಇತ್ತೀಚೆಗೆ ನಡೆದ ವಿಧಾನಮಂಡಲದ ಅನುಸೂಚಿತ ಪಂಗಡಗಳ ಕಲ್ಯಾಣ ಸಮಿತಿಯ ಸಭೆಯಲ್ಲಿ ಚರ್ಚೆಯಾಗಿತ್ತು. ಜಾತಿ ಹೆಸರಿನಲ್ಲಿ ಸುಳ್ಳು ಪ್ರಮಾಣಪತ್ರವನ್ನು ಪಡೆದಿರುವವರ ಮೇಲೆ ಕ್ರಮ ತೆಗೆದುಕೊಳ್ಳಲು ತೀರ್ಮಾನಿಸಲಾಗಿದೆ. ಸುಳ್ಳು ಪ್ರಮಾಣಪತ್ರಗಳನ್ನು ನೀಡಿರುವ ಅಧಿಕಾರಿ, ನೌಕರರನ್ನು ತಕ್ಷಣ ಅಮಾನತುಗೊಳಿಸಲು ಮತ್ತು ಅಂಥವರ ವಾರ್ಷಿಕ ವೇತನ ಬಡ್ತಿ ಕಡಿತಗೊಳಿಸುವ ವಿಷಯವನ್ನು ಅವರ ಸೇವಾ ಪುಸ್ತಕದಲ್ಲಿ ನಮೂದಿಸುವಂತೆ ನಿರ್ದೇಶನ ನೀಡಲು ಈ ಸಭೆಯಲ್ಲಿ ನಿರ್ಧರಿಸಲಾಗಿದೆ' ಎಂದೂ ಈ ಪತ್ರದಲ್ಲಿ ಉಲ್ಲೇಖಿಸಲಾಗಿದೆ.

ದೆಹಲಿ:'ಆರ್‌-ವ್ಯಾಲ್ಯೂ' 2.1 ದಾಖಲು: ಐಐಟಿ-ಮದ್ರಾಸ್‌ನಿಂದ ಅಧ್ಯಯನ

ಪ್ರತಿ ಸೋಂಕಿತ ವ್ಯಕ್ತಿಯಿಂದ ಇಬ್ಬರಿಗೆ ಸೋಂಕು ಪ್ರಸರಣ

ನವದೆಹಲಿ (ಪಿಟಿಐ): ಸೋಂಕಿತ ವ್ಯಕ್ತಿಯು ಎಷ್ಟು ಜನರಿಗೆ ಸೋಂಕು ಹರಡಿಸಬಲ್ಲ ಎಂದು ತಿಳಿಸುವ 'ಆರ್–ವ್ಯಾಲ್ಯೂ', ರಾಷ್ಟ್ರ ರಾಜಧಾನಿಯಲ್ಲಿ ಈ ವಾರ 2.1ರಷ್ಟು ದಾಖಲಾಗಿದೆ.

ಅಂದರೆ, ದೆಹಲಿಯಲ್ಲಿ ಸೋಂಕಿತ ಪ್ರತಿ ವ್ಯಕ್ತಿಯಿಂದ ಇಬ್ಬರಿಗೆ ಸೋಂಕು ತಗುಲುತ್ತಿದೆ ಎಂಬುದನ್ನು ಈ 'ಆರ್–ವ್ಯಾಲ್ಯೂ' ತೋರಿಸುತ್ತದೆ ಎಂದು ಐಐಟಿ ಮದ್ರಾಸ್‌ನ ತಜ್ಞರು ನಡೆಸಿರುವ ವಿಶ್ಲೇಷಣೆ ಹೇಳುತ್ತದೆ.

ಐಐಟಿ-ಮದ್ರಾಸ್‌ನ ಗಣಿತ ವಿಭಾಗದ ಪ್ರೊ.ನೀಲೇಶ್ ಎಸ್. ಉಪಾಧ್ಯೆ ಹಾಗೂ ಪ್ರೊ. ಎಸ್.ಸುಂದರ್ ನೇತೃತ್ವದ ತಜ್ಞರು ಈ ವಿಶ್ಲೇಷಣೆ ನಡೆಸಿದ್ದು, ಅಧ್ಯಯನದ ವಿವರಗಳನ್ನು ಪಿಟಿಐ ಸುದ್ದಿಸಂಸ್ಥೆಗೆ ಅವರು ಹಂಚಿಕೊಂಡಿದ್ದಾರೆ.

ದೇಶದಲ್ಲಿ ಕೋವಿಡ್–19 ಪ್ರಸರಣಕ್ಕೆ ಸಂಬಂಧಿಸಿದ 'ಆರ್–ವ್ಯಾಲ್ಯೂ' 1.3ರಷ್ಟಿದೆ ಎಂಬುದು ಅಧ್ಯಯನದಿಂದ ತಿಳಿದುಬಂದಿದೆ. 'ಆರ್–ವ್ಯಾಲ್ಯೂ' 1ಕ್ಕಿಂತ ಕಡಿಮೆ ದಾಖಲಾದರೆ ಕೋವಿಡ್–19 ಪಿಡುಗು ಅಂತ್ಯಗೊಂಡಿದೆ ಎಂದು ಹೇಳಲಾಗುತ್ತದೆ.

'ಆರ್–ವ್ಯಾಲ್ಯೂ 2.1ರಷ್ಟು ದಾಖಲಾಗಿರುವುದು ದೇಶದಲ್ಲಿ ಕೋವಿಡ್‌ನ ನಾಲ್ಕನೇ ಅಲೆ ಕಾಣಿಸಿಕೊಳ್ಳುವುದರ ಸೂಚನೆ ಎಂಬುದನ್ನು ಈಗಲೇ ಹೇಳಲು ಆಗುವುದಿಲ್ಲ. ಇದಕ್ಕೆ ಇನ್ನೂ ಸಮಯಬೇಕು' ಎಂದು ಐಐಟಿ–ಮದ್ರಾಸ್‌ನ ಗಣಿತ ವಿಭಾಗದ ಸಹಾಯಕ ಪ್ರಾಧ್ಯಾಪಕ ಡಾ.ಜಯಂತ್ ಝಾ ಅವರು ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದ್ದಾರೆ.

ಸಿ.ಎಂಗಳೊಂದಿಗೆ 27ಕ್ಕೆ ಪ್ರಧಾನಿ ಸಭೆ

ನವದೆಹಲಿ: ಕೋವಿಡ್–19 ಉಲ್ಬಣಗೊಳ್ಳುತ್ತಿರುವ ಕಾರಣ, ಏ. 27ರಂದು (ಬುಧವಾರ) ಪ್ರಧಾನಿ ನರೇಂದ್ರ ಮೋದಿ ಅವರು ವಿವಿಧ ರಾಜ್ಯಗಳ ಮುಖ್ಯಮಂತ್ರಿಗಳ ಜತೆ ವಿಡಿಯೊ ಕಾನ್ಫರೆನ್ಸ್ ಮೂಲಕ ಸಭೆ ನಡೆಸಲಿದ್ದಾರೆ ಎಂದು ಅಧಿಕೃತ ಮೂಲಗಳು ಶನಿವಾರ ತಿಳಿಸಿವೆ.

ಕೇಂದ್ರ ಆರೋಗ್ಯ ಕಾರ್ಯದರ್ಶಿ ರಾಜೇಶ್ ಭೂಷಣ್ ಅವರು ಕೋವಿಡ್ ಪರಿಸ್ಥಿತಿ ಕುರಿತು ಸಭೆಯಲ್ಲಿ ಮಾಹಿತಿ ನೀಡಲಿದ್ದಾರೆ ಎಂದೂ ಮೂಲಗಳು ಹೇಳಿವೆ.

ಒಂದೇ ದಿನದಲ್ಲಿ 2,527 ಹೊಸ ಪ್ರಕರಣ

ನವದೆಹಲಿ: ದೇಶದಲ್ಲಿ ಮತ್ತೆ ಕೋವಿಡ್ ಉಲ್ಬಣಗೊಂಡಿದ್ದು, ಒಂದೇ ದಿನದಲ್ಲಿ 2,527 ಹೊಸ ಕೋವಿಡ್ ಪ್ರಕರಣಗಳು ವರದಿಯಾಗಿವೆ. ಇದರೊಂದಿಗೆ ಒಟ್ಟು ಪ್ರಕರಣಗಳ ಸಂಖ್ಯೆ 4,30,54,952ಕ್ಕೆ ಏರಿಕೆಯಾಗಿದೆ. ಇದೇ ವೇಳೆ ಸಕ್ರಿಯ ಪ್ರಕರಣಗಳೂ 15,079ಕ್ಕೆ ಹೆಚ್ಚಿದೆ ಎಂದು ಕೇಂದ್ರ ಆರೋಗ್ಯ ಸಚಿವಾಲಯ ಹೇಳಿದೆ.

ಶನಿವಾರ ಬೆಳಿಗ್ಗೆ 8 ಗಂಟೆಗೆ ಕೊನೆಗೊಂಡಂತೆ ಕಳೆದ 24 ಗಂಟೆಗಳಲ್ಲಿ 33 ಮಂದಿ ಮೃತಪಟ್ಟಿದ್ದು, ಸೋಂಕಿನಿಂದ ಅಸುನೀಗಿದವರ ಸಂಖ್ಯೆ 5,22,149ಕ್ಕೆ ಏರಿಕೆಯಾಗಿದೆ ಎಂದು ಸಚಿವಾಲಯ ತಿಳಿಸಿದೆ.

ಒಟ್ಟು ಪ್ರಕರಣಗಳ ಪೈಕಿ ಸಕ್ರಿಯ ಪ್ರಕರಣಗಳು ಶೇಕಡ 0.04 ರಷ್ಟು ಪಾಲನ್ನು ಹೊಂದಿದೆ. ರಾಷ್ಟ್ರೀಯ ಚೇತರಿಕೆ ಪ್ರಮಾಣವು ಶೇಕಡ 98.75 ರಷ್ಟಿದೆ. ದೈನಂದಿನ ಸೋಂಕು ದೃಢ ಪ್ರಮಾಣವು ಶೇಕಡ 0.56 ರಷ್ಟಿದೆ ಎಂದು ಸಚಿವಾಲಯ ಮಾಹಿತಿ ನೀಡಿದೆ.

ಇಬ್ಬರ ಸಾವು: ದೆಹಲಿಯಲ್ಲಿ ಶನಿವಾರ 1,094 ಹೊಸ ಕೋವಿಡ್ ಪ್ರಕರಣಗಳು ವರದಿಯಾಗಿದ್ದು, ಇಬ್ಬರು ಸಾವಿಗೀಡಾಗಿದ್ದಾರೆ. ಕೋವಿಡ್ ದೃಢಪಡುವಿಕೆ ಪ್ರಮಾಣವು ಶೇ 4.82ರಷ್ಟಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಶಾಂಘೈ ಲಾಕ್‌ಡೌನ್ ಬವಣೆಯ ವಿಡಿಯೊ ಪ್ರಸಾರಕ್ಕೆ ಚೀನಾ ನಿರ್ಬಂಧ



ಬೀಜಿಂಗ್(ಎಎಫ್‌ಪಿ): ಕೊರೊನಾ ವೈರಸ್ ನಿಯಂತ್ರಣಕ್ಕಾಗಿ ಚೀನಾ ಸರ್ಕಾರ ಹೇರಿದ ಸುದೀರ್ಘ ಲಾಕ್‌ಡೌನ್ ಪರಿಣಾಮದಿಂದ ಶಾಂಘೈ ಜನತೆ ಮೇಲಾಗಿರುವ ಪರಿಣಾಮಗಳನ್ನು ಎತ್ತಿ ತೋರಿಸುವಂತಿರುವ ವಿಡಿಯೊವನ್ನು ಇಂಟರ್ನೆಟ್ ವೇದಿಕೆಯಿಂದ ತೆಗೆದು ಹಾಕಲಾಗಿದೆ. ದೇಶದ ಅತಿದೊಡ್ಡ ಹಾಗೂ ವಾಣಿಜ್ಯ ರಾಜಧಾನಿಯಾದ ಶಾಂಘೈನಲ್ಲಿ ಏಪ್ರಿಲ್ ಆರಂಭದಿಂದಲೂ ಲಾಕ್‌ಡೌನ್ ಕ್ರಮ ಕೈಗೊಳ್ಳಲಾಗಿದೆ. ಇದರಿಂದಾಗಿ 2.5 ಕೋಟಿ ನಗರದ ಜನರು ತಮ್ಮ ಮನೆಯಿಂದ ಹೊರಬರಲಾಗದೆ ಮನೆಯಲ್ಲೇ ಕುಳಿತುಕೊಳ್ಳುವ ಅನಿವಾರ್ಯತೆ ಎದುರಾಗಿದೆ.

ಲಾಕ್‌ಡೌನ್ ಕ್ರಮದಿಂದ ಶಾಂಘೈನಲ್ಲಿ ಜನರು ಅನುಭವಿಸುತ್ತಿರುವ ಬವಣೆಗಳನ್ನು ಒಳಗೊಂಡ 'ವಾಯ್ಸ್ ಆಫ್ ಏಪ್ರಿಲ್' ಎಂಬ 6 ನಿಮಿಷಗಳ ವಿಡಿಯೊ ವೀಬೊ ಮತ್ತು ವಿಚಾಟ್ ಇನ್ನಿತರ ಸಾಮಾಜಿಕ ಮಾಧ್ಯಮಗಳಲ್ಲಿ ಭಾರಿ ವೈರಲ್ ಆಗಿದೆ. ಆ ಬಳಿಕವೇ ಈ ವಿಡಿಯೊವನ್ನು ಇಂಟರ್ನೆಟ್‌ನಿಂದ ಚೀನಾ ಅಳಿಸಿ ಹಾಕಿದೆ.

ಏಪ್ರಿಲ್ ಆರಂಭದಿಂದಲೂ ಮನೆಯಲ್ಲೇ ಇರುವ ಜನರಿಗೆ ತಾಜಾ ತರಕಾರಿಗಳು ಮತ್ತಿತರ ಮೂಲಭೂತ ವಸ್ತುಗಳನ್ನು ಪೂರೈಸುವುದು ದುಸ್ತರವಾಗಿದೆ. ಅಲ್ಲದೆ ಕೋವಿಡ್ ಪರೀಕ್ಷೆ ಮತ್ತು ಕೋವಿಡ್ ರೋಗಿಗಳ ಚಿಕಿತ್ಸೆಗಾಗಿ ಸಾವಿರಾರು ಆರೋಗ್ಯ ಸಿಬ್ಬಂದಿಯನ್ನು ನಿಯೋಜಿಸಿಕೊಳ್ಳಲಾಗಿದ್ದು, ಸಾವಿರಾರು ಜನರು ಆರೋಗ್ಯ ಚಿಕಿತ್ಸೆ ಸೌಲಭ್ಯದಿಂದ ವಂಚಿತರಾಗಿದ್ದಾರೆ ಎಂಬಂಥ ಅಂಶಗಳನ್ನು ವಾಯ್ಸ್ ಆಫ್ ಏಪ್ರಿಲ್ ಒಳಗೊಂಡಿತ್ತು ಎನ್ನಲಾಗಿದೆ.

ಶಾಂಘೈನಲ್ಲಿ 12 ಸೋಂಕಿತರ ಸಾವು: ಶಾಂಘೈ: ಚೀನಾದ ಎರಡನೇ ಅತಿ ದೊಡ್ಡ ನಗರ ಶಾಂಘೈನಲ್ಲಿ ಕೋವಿಡ್–19 ಪರಿಸ್ಥಿತಿ ಬಿಗಡಾಯಿಸಿದ್ದು, ಹೊಸದಾಗಿ 12 ಜನರು ಶುಕ್ರವಾರ ಮೃತಪಟ್ಟಿದ್ದಾರೆ. ಗುರುವಾರ (ಏ.21) 11 ಸೋಂಕಿತರು ಮೃತಪಟ್ಟಿದ್ದರು. ಶಾಂಘೈನಲ್ಲಿ ಕಠಿಣ ಲಾಕ್‌ಡೌನ್ ಜಾರಿಯಲ್ಲಿದ್ದರೂ, ಕೋವಿಡ್ ಪ್ರಕರಣಗಳು ದಿನದಿಂದ ದಿನಕ್ಕೆ ಹೆಚ್ಚಾಗುತ್ತಿವೆ.ನಗರದಲ್ಲಿ ಶುಕ್ರವಾರ ಲಕ್ಷಣ ರಹಿತ 20,634 ಹೊಸ ಪ್ರಕರಣಗಳು ವರದಿಯಾಗಿವೆ.

'ನೀರು ಕಟ್ಟು, ಗೊಬ್ಬರ ಹಾಕು' ಎನ್ನುವ ಸ್ಥಿತಿಯಲ್ಲಿ ರೈತರು

ಕಬ್ಬು ಬೆಳೆಯುವ ಭೂಮಿಯೂ ರಸ ಹೀನ

● ಎಂ.ಎನ್.ಯೋಗೇಶ್

ಮಂಡ್ಯ: ಜಿಲ್ಲೆಯಲ್ಲಿ ಕಬ್ಬು, ಭತ್ತ ಬೆಳೆಯುವ ಭೂಮಿ ಸವಳಾಗಿದ್ದು ಬೆಳೆಯ ಇಳುವರಿ ತಗ್ಗಿದೆ. 'ನೀರು ಕಟ್ಟು, ಗೊಬ್ಬರ ಹಾಕು' ಎಂಬ ಸ್ಥಿತಿಯಿಂದ ಭೂಮಿಯ ಮೇಲ್ಪದರ ಶಕ್ತಿಹೀನವಾಗಿದೆ. ರಸಸಾರ ಹಾಳಾಗಿದೆ.

2014ರಲ್ಲಿ ತಾಲ್ಲೂಕಿನ ವಿ.ಸಿ. ಫಾರಂ ಕೃಷಿ ವಿಜ್ಞಾನ ಕೇಂದ್ರದ ತಜ್ಞರು ಸವಳಾಗುತ್ತಿರುವ ಕೃಷಿ ಭೂಮಿಯ ಬಗ್ಗೆ ಅಧ್ಯಯನ ನಡೆಸಿದ್ದಾರೆ. ಕೆಆರ್‌ಎಸ್ ನೀರು ವ್ಯಾಪಕವಾಗಿ ಹರಿಯುವ ಶ್ರೀರಂಗಪಟ್ಟಣ, ಪಾಂಡವಪುರ, ಮಂಡ್ಯ ಹಾಗೂ ಮದ್ದೂರು ತಾಲ್ಲೂಕಿನಲ್ಲಿ ಭೂಮಿ ಹೆಚ್ಚು ಸವಳಾಗಿದೆ. ಕೇಂದ್ರದ ಮಣ್ಣು ತಜ್ಞರು ಮದ್ದೂರು ತಾಲ್ಲೂಕಿನ ದೊಡ್ಡರಸಿನಕೆರೆ ಗ್ರಾಮದ 50 ಎಕರೆ ಕೃಷಿ ಭೂಮಿ, ಹೊಸಹಳ್ಳಿಯ 20 ಎಕರೆ ಭೂಮಿಯಲ್ಲಿ ಪ್ರಯೋಗ ನಡೆಸಿದ್ದು ಭೂಮಿಯ ಎರಡೂವರೆ ಅಡಿ ಮೇಲ್ಪದರ ಶಕ್ತಿಹೀನಗೊಂಡಿರುವುದು ಪತ್ತೆಯಾಗಿದೆ.

ಚೌಳು ಹಾಗೂ ಕ್ಷಾರ ಮಣ್ಣಿನಲ್ಲಿರುವ ಉಪ್ಪಿನಾಂಶ ತೆರವಿಗೆ 'ಬಸಿಗಾಲುವೆ' ವ್ಯವಸ್ಥೆ ಮಾಡಿ ಉಪ್ಪಿನಾಂಶ ಹೊರಹಾಕಬೇಕು ಎಂಬುದು ಕೇಂದ್ರದ ಸಲಹೆ.

ಕಡಿಮೆ ನೀರಿನಿಂದ ಬೆಳೆಯಬಹುದಾದ ಕೆಎಂಪಿ- 175 (ಕರ್ನಾಟಕ ಮಂಡ್ಯ ಪ್ಯಾಡಿ) ಭತ್ತದ ತಳಿಯನ್ನು ವಿ.ಸಿ ಫಾರಂ ತಜ್ಞರು ಅಭಿವೃದ್ಧಿಪಡಿಸಿದ್ದಾರೆ. ಒಂದು ವರ್ಷದಿಂದ 25 ಕ್ವಿಂಟಲ್ ಬಿತ್ತನೆ ಬೀಜ ಮಾರಾಟವಾಗಿದೆ.



ಕಬ್ಬು (ಸಾಂದರ್ಭಿಕ ಚಿತ್ರ)



ಅತಿ ರಸಗೊಬ್ಬರ ಬಳಸಿ ಎರಡೂವರೆ ಅಡಿ ಕೆಳಗಿನ ಭೂಪದರ ಗಟ್ಟಿಯಾಗಿದೆ. ಮೇಲ್ಪದರಕ್ಕೆ ಪೋಷಕಾಂಶಗಳು ದೊರೆಯದೇ ಭೂಮಿ ಸವಳಾಗುತ್ತಿದೆ.
ಡಾ.ಅತೀಫಾ ಮುನಾವರಿ, ವಿ.ಸಿ.ಫಾರಂ ಕೃಷಿ ವಿಜ್ಞಾನ ಕೇಂದ್ರದ ತಜ್ಞೆ



20 ಎಕರೆಗೆ ಬಳಸುವ ನೀರನ್ನು ಮಂಡ್ಯದಲ್ಲಿ ಎಕರೆಗೆ ಬಳಸುತ್ತಾರೆ. ನೀರು ಹೀರುವ ಸಾಮರ್ಥ್ಯ ಹೋಗಿ ಭೂಮಿ ಸವಳಾಗುತ್ತಿದೆ.
ಡಿ.ಸೋಮಶೇಖರ್, ಪ್ರಗತಿಪರ ರೈತ, ಹನಿಯಂಬಾಡಿ ಗ್ರಾಮ, ಮಂಡ್ಯ ಜಿಲ್ಲೆ

ಸವಳು ಮಣ್ಣು ಗೆದ್ದವರು!

● ಗಾಣಧಾಳು ಶ್ರೀಕಂಠ

ಬೆಂಗಳೂರು/ಬಳ್ಳಾರಿ/ಬಾಗಲಕೋಟೆ: ಸವಳು ಮಣ್ಣಿನ ಸಮಸ್ಯೆಯನ್ನು ಪರಿಸರ ಸ್ನೇಹಿ ಕೃಷಿಯ ಮೂಲಕ ಎದುರಿಸಿದ ರೈತರೂ ನಮ್ಮ ನಡುವೆ ಇದ್ದಾರೆ. ಬಳ್ಳಾರಿ ಜಿಲ್ಲೆಯ ಸಿರುಗುಪ್ಪ ತಾಲ್ಲೂಕಿನ ಬೈರಾಪುರದ ರೈತ ಬಿ.ಎಂ.ಈರಪ್ಪಯ್ಯ ಎರಡು ದಶಕಗಳ ಹಿಂದೆಯೇ ಹಳೆ ಪದ್ಧತಿಗೆ ವಿದಾಯ ಹೇಳಿದ್ದಾರೆ. ರಸಗೊಬ್ಬರ, ಕೀಟನಾಶಕ ಬಳಸದೇ ಸಾವಯವ ಜೀವಾಮೃತವನ್ನಷ್ಟೇ ಹಾಕುತ್ತಿದ್ದಾರೆ. ಎರೆಹುಳು ಸಮೃದ್ಧವಾಗಿವೆ.

ಪ್ರವೃತ್ತಿಯಲ್ಲಿ ವಕೀಲರಾಗಿರುವ ಅವರು, ಸಮಯವನ್ನು ಸಂಪೂರ್ಣವಾಗಿ ಕೃಷಿಗೆ ಮೀಸಲಿಟ್ಟಿದ್ದಾರೆ. 25 ಎಕರೆ ಜಮೀನು ಹೊಂದಿರುವ ಅವರು, ಪ್ರತಿ ಎಕರೆಯಲ್ಲಿ ಕನಿಷ್ಠ 20 ಕ್ವಿಂಟಲ್ ಭತ್ತ ಬೆಳೆಯುತ್ತಾರೆ.

'ಗದ್ದೆಯಲ್ಲಿ ನೀರು ನಿಲ್ಲದಂತೆ ಬಸಿ ಕಾಲುವೆಗಳನ್ನು ಮಾಡಿಸಿದ್ದಾರೆ. ಹೆಚ್ಚಾದ ನೀರು ಕಾಲುವೆಗೆ ಹೋಗುತ್ತದೆ. ಕಾಲುವೆಗಳ ಪಕ್ಕದಲ್ಲೇ ಜಮೀನು ಇರುವುದರಿಂದ ನಿರೀಕ್ಷಿತ ಪ್ರಮಾಣಕ್ಕಿಂತ ಹೆಚ್ಚು ನೀರು ಇರುತ್ತದೆ. ಹೀಗಾಗಿ, ಕಾಲುವೆ ಅನುಕೂಲವಾಗಿದೆ. ನಮ್ಮ ಅಕ್ಕಪಕ್ಕದ ಜಮೀನು ಸವಳಾಗಿದೆ' ಎನ್ನುತ್ತಾರೆ ಅವರು.

ಅದೇ ತಾಲ್ಲೂಕಿನ ರೈತ ಸೂರ್ಯಭಾಸ್ಕರ್ ಏಳು ವರ್ಷಗಳಿಂದ ಸವಳು ಮಣ್ಣಿನೊಂದಿಗೆ ಹೋರಾಡುತ್ತಿದ್ದಾರೆ. 2014ರಲ್ಲಿ ಅವರು ಖರೀದಿಸಿದ 35 ಎಕರೆ ಜಮೀನು ಅಚ್ಚುಕಟ್ಟು ಪ್ರದೇಶದ ಕೆಳಭಾಗದಲ್ಲಿರುವುದರಿಂದ ಮೇಲ್ಭಾಗದ ಗದ್ದೆಗಳಲ್ಲಿ ನಿಲ್ಲಿಸಿದ ನೀರು, ಬಸಿದು, ಅವರ ಗದ್ದೆಗೆ ಹರಿದು, ಮಣ್ಣು ಸವಳಾಗುತ್ತಿತ್ತು. ಅದನ್ನು ಗುರುತಿಸಿದ ಅವರು, ಮಣ್ಣಿಗೆ ಹೆಚ್ಚುವರಿ ಪೋಷಕಾಂಶಗಳನ್ನು ಕೊಟ್ಟು ಭತ್ತ ಬೆಳೆಯುತ್ತಿದ್ದರು. ಸಮಸ್ಯೆ ತೀವ್ರಗೊಂಡಾಗ ನೆರವಿಗೆ ಬಂದ ಗಂಗಾವತಿ ಕೃಷಿ ವಿಜ್ಞಾನ ಕೇಂದ್ರದ ವಿಜ್ಞಾನಿಗಳು, ಬಸಿಗಾಲುವೆ ಮಾಡಿಸಿದರು.

ಈ ರೈತರಿಬ್ಬರೂ ಪ್ರತಿ ವರ್ಷ ಯಥೇಚ್ಛವಾಗಿ ಹಸಿರೆಲೆ ಗೊಬ್ಬರ, ಕುರಿ ಗೊಬ್ಬರ, ಹಟ್ಟಿ ಗೊಬ್ಬರ ನೀಡುತ್ತಾರೆ. ನೀರು ನಿಲ್ಲದ ಅವಧಿಯಲ್ಲಿ ಬೇರೆ ಬೆಳೆ ಬೆಳೆಯುತ್ತಾರೆ.

ಬಾಗಲಕೋಟೆ ಜಿಲ್ಲೆಯ ಮುಧೋಳ, ಜಮಖಂಡಿ ತಾಲ್ಲೂಕಿನ ರೈತರೂ ಬಸಿಗಾಲುವೆ ನಿರ್ಮಿಸಿ ಪರಿಹಾರ ಕಂಡುಕೊಂಡಿದ್ದಾರೆ.

'ಅಕ್ಕಿಮರಡಿ ಗ್ರಾಮವೊಂದರಲ್ಲೇ 120 ಎಕರೆಯ ಸವಳು ಭೂಮಿಯನ್ನು ಯೋಗ್ಯಭೂಮಿಯಾಗಿಸಿದ್ದೇವೆ. ನಾವು ಸಂಘವನ್ನು ಕಟ್ಟಿಕೊಂಡಿಲ್ಲ. ಸರ್ಕಾರದ ನೆರವಿಲ್ಲ ಸಲಹೆ, ಮಾರ್ಗದರ್ಶನ, ಮಾಹಿತಿ ವಿನಿಮಯದ ಮೂಲಕವೇ ಕೆಲಸ ನಡೆದಿದೆ' ಎನ್ನುತ್ತಾರೆ ಮಹಾಲಿಂಗಪುರದ ರೈತ ಮಹಾಂತೇಶ ಹಿಟ್ಟಿನಮಠ.

ಡಿಎಸ್‌ಆರ್ ಪದ್ಧತಿ

ಸವಳು ಮಣ್ಣಿನ ಸಮಸ್ಯೆಗೆ ಪರಿಹಾರವಾಗಿ ತುಂಗಭದ್ರಾ ಜಲಾಶಯದ (ಎರೆಭೂಮಿ) ಕೆಲ ರೈತರು ಭತ್ತದ ಬೀಜವನ್ನು ನೇರವಾಗಿ ಗದ್ದೆಗೆ ನಾಟಿ ಮಾಡುವ 'ಡಿಎಸ್‌ಆರ್' (Direct seeded rice) ಪದ್ಧತಿಯನ್ನು ಅನುಸರಿಸುತ್ತಿದ್ದಾರೆ.

ಮೂರು ಎಕರೆಯಲ್ಲಿ ಇದೇ ವಿಧಾನ ಅಳವಡಿಸಿರುವ ಗಂಗಾವತಿ ಸಮೀಪದ ಜಂತಕಲ್ ಗ್ರಾಮದ ಕೃಷಿಕ ಮೆಹಬೂಬ್, 'ನೇರ ನಾಟಿಯಿಂದ ಬೀಜದ ಪ್ರಮಾಣವೂ ಕಡಿಮೆಯಾಗುತ್ತದೆ. ನೀರು ನಿಲ್ಲಿಸಬೇಕಿಲ್ಲ. ತೆಂಡೆಗಳು ಚೆನ್ನಾಗಿ ಒಡಮೂಡಿ, ಉತ್ತಮ ಇಳುವರಿಯೂ ಬರುತ್ತದೆ' ಎನ್ನುತ್ತಾರೆ.

'ಮೊದಲು ಎಕರೆಗೆ ₹25 ಸಾವಿರದವರೆಗೂ ಖರ್ಚಾಗುತ್ತಿತ್ತು. ಡಿಎಸ್‌ಆರ್ ವಿಧಾನದ ನಂತರ ₹ 15 ಸಾವಿರವಷ್ಟೇ ಖರ್ಚಾಗುತ್ತಿದೆ. ಮಣ್ಣು ಚೆನ್ನಾಗಿದೆ' ಎಂದು ಹರ್ಷ ವ್ಯಕ್ತಪಡಿಸುತ್ತಾರೆ.



ಸಿರುಗುಪ್ಪ ತಾಲ್ಲೂಕಿನ ಬೈರಾಪುರದ ಈರಪ್ಪಯ್ಯ ಅವರ ಗದ್ದೆಯಲ್ಲಿ ಸಾವಯವ ಪದ್ಧತಿಯಲ್ಲಿ ಬೆಳೆದಿರುವ ಭತ್ತ ನಳನಳಿಸುತ್ತಿರುವುದು

ಜನಪ್ರಿಯವಾಗದ 'ಶ್ರೀ' ಪದ್ಧತಿ

ಸವಳು ಮಣ್ಣಿಗೆ ಪರಿಹಾರವಾಗಿ ದಶಕಗಳ ಹಿಂದೆ 'ಶ್ರೀ' (SRI-System of Rice Intensification) ಪದ್ಧತಿ, ಏರೋಬಿಕ್ ಪದ್ಧತಿಯಂತಹ ಕೆಲವು ಪರಿಸರ ಸ್ನೇಹಿ ಪದ್ಧತಿಗಳನ್ನು ಪರಿಚಯಿಸಲಾಯಿತು.

ಅಗತ್ಯವಿರುವಷ್ಟೇ ನೀರಿನಿಂದ ನೆಲವನ್ನು ತೇವಗೊಳಿಸಿ ಬೀಜವನ್ನು ನೇರವಾಗಿ ನಾಟಿ ಮಾಡಿ ಭತ್ತ ಬೆಳೆಸುವಂತಹ 'ಶ್ರೀ' ಪದ್ಧತಿ ಮಣ್ಣು ಸವಳಾಗುವುದನ್ನು ತಪ್ಪಿಸಿ, ಬಿತ್ತನೆ ಬೀಜ ಮತ್ತು ನೀರನ್ನು ಉಳಿಸುತ್ತಿತ್ತು.

'ಆದರೆ, ಇದಕ್ಕೆ ಹೆಚ್ಚು ಕಾರ್ಮಿಕರು ಬೇಕೆಂಬ ಕಾರಣಕ್ಕೋ ಏನೋ, ಜನಪ್ರಿಯವಾಗಲಿಲ್ಲ' ಎನ್ನುತ್ತಾರೆ ರೈತರು. ಆದರೂ, ಸಾವಯವ, ನೈಸರ್ಗಿಕ ಕೃಷಿ ಮಾಡುತ್ತಿರುವವರು ಈ ಪದ್ಧತಿಯನ್ನೇ ಅನುಸರಿಸುತ್ತಿದ್ದಾರೆ.

ಬರಡಾಗುವತ್ತ ಭತ್ತದ ನೆಲ

ಒಂದನೇ ಪುಟದಿಂದ

ಈ ಎಚ್ಚರಿಕೆಯ ನಂತರವೂ, ತುಂಗಭದ್ರಾ, ಮಲಪ್ರಭಾ-ಘಟಪ್ರಭಾ, ಕೃಷ್ಣಾ, ಭದ್ರಾ, ಕಾವೇರಿ ನದಿ ನೀರು ಅಚ್ಚುಕಟ್ಟು ವ್ಯಾಪ್ತಿಯ ಭತ್ತ ಮತ್ತು ಕಬ್ಬು ಕೃಷಿ ಪ್ರದೇಶದಲ್ಲಿ ಸವಳು ಮಣ್ಣಿನ ಸಮಸ್ಯೆ ಹೆಚ್ಚಾಗುತ್ತಲೇ ಇದೆ. ಎರೆಮಣ್ಣು ಪ್ರಧಾನವಾದ ತುಂಗಭದ್ರಾ ಜಲಾಶಯದ ಅಚ್ಚುಕಟ್ಟು ಪ್ರದೇಶದಲ್ಲಿ 3 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ 90 ಸಾವಿರದಿಂದ 1 ಲಕ್ಷ ಹೆಕ್ಟೇರ್‌ವರೆಗೆ ಜಮೀನು ಸವಳಾಗಿದೆ ಎಂದು ಅಂದಾಜಿಸಲಾಗಿದೆ. ಮಲಪ್ರಭಾ-ಘಟಪ್ರಭಾ ಪ್ರದೇಶದ (ಬಹುತೇಕ ಕಬ್ಬು ಬೆಳೆಯುವ ಪ್ರದೇಶ) 85,525 ಹೆಕ್ಟೇರ್ ಸವಳು-ಜವಳಾಗಿದೆ. ಕಾವೇರಿ ಅಚ್ಚುಕಟ್ಟು ಪ್ರದೇಶದ 7,707 ಹೆಕ್ಟೇರ್‌ನಲ್ಲಿ ಜವಳು ಸಮಸ್ಯೆಯಿದೆ. ಮಲೆನಾಡಿನ ಚಿಕ್ಕಮಗಳೂರು ಜಿಲ್ಲೆಯ ಎನ್.ಆರ್.ಪುರ, ಕೊಪ್ಪ, ಮೂಡಿಗೆರೆ, ಶೃಂಗೇರಿ ಭಾಗದಲ್ಲಿ ಭತ್ತ ಬೆಳೆಯುತ್ತಿರುವ 10 ಸಾವಿರ ಹೆಕ್ಟೇರ್ ಪೈಕಿ 5 ಸಾವಿರ ಹೆಕ್ಟೇರ್‌ನಲ್ಲಿ ಈ ಸಮಸ್ಯೆ ಇದೆ. ಕೆಂಪು ಮಣ್ಣು ಹೆಚ್ಚಾಗಿರುವ ಭಾಗದಲ್ಲಿ ತೀವ್ರತೆ ಕಡಿಮೆ.

ಕಾರಣವೇನು? : ಅತಿಯಾಗಿ ನೀರು ನಿಲ್ಲಿಸಿ, ನಿರಂತರವಾಗಿ ಏಕ ಬೆಳೆ ಬೆಳೆಯುತ್ತಿರುವುದೇ (ವರ್ಷದಲ್ಲಿ ಎರಡು ಬೆಳೆ) ಪ್ರಮುಖ ಕಾರಣ. ನೀರಾವರಿ ಯೋಜನೆಗಳ ವ್ಯಾಪ್ತಿಯ ಕೃಷಿ ಜಮೀನು ಸಾಮಾನ್ಯವಾಗಿ ಸವಳು, ಕ್ಷಾರ ಮತ್ತು ಜವುಳಾಗುತ್ತದೆ. ಭತ್ತ, ಕಬ್ಬು ಬೆಳೆಯುವಲ್ಲಿ ಹೆಚ್ಚು ನೀರು ಬಳಕೆಯಿಂದ ಸವಳಿನ ತೀವ್ರತೆ ಹೆಚ್ಚು.

'ನೀರು ನಿಲ್ಲಿಸುವುದರಿಂದ ಬಿಸಿಲಿಗೆ ಸಿಹಿನೀರಿನ ಅಂಶ ಆವಿಯಾಗಿ ಮೇಲೆ ಮಣ್ಣಿನಲ್ಲಿರುವ ಮತ್ತು ಮಣ್ಣಿನ ಸ್ತರದ ಕೆಳಗಿರುವ ಲವಣಾಂಶಗಳು ಮೇಲ್ಮಣ್ಣಿನಲ್ಲಿ ಸಂಗ್ರಹವಾಗುತ್ತವೆ. ಹಾಗಾಗಿ ಮಣ್ಣು ಸವುಳು (ಮಣ್ಣಿನಲ್ಲಿ ಕ್ಯಾಲ್ಸಿಯಂ ಮುಂತಾದ ಲವಣಗಳ ಹೆಚ್ಚುವಿಕೆ) ಮತ್ತು ಕ್ಷಾರ (ಲವಣಗಳು ಹೋಗಿ ಸೋಡಿಯಂ ಅಂಶ ಹೆಚ್ಚಾಗುವುದರಿಂದ) ವಾಗುತ್ತದೆ. ತಗ್ಗು ಪ್ರದೇಶಗಳಲ್ಲಿ ನೀರು ಬಸಿಯುವಿಕೆ ಇಲ್ಲದೆ, ಗದ್ದೆಗಳಲ್ಲಿ ಜವಳು-ಸವಳಿನ ಸಮಸ್ಯೆ ಹೆಚ್ಚು' ಎನ್ನುತ್ತಾರೆ ನಿವೃತ್ತ ಕೃಷಿ ಜಂಟಿ ನಿರ್ದೇಶಕ ಆರ್.ಜಿ.ಗೊಲ್ಲರ್.

ಪರಿಣಾಮವೇನು?: ಸವಳು-ಜವಳಿನಿಂದ ಬೆಳೆಗಳಿಗೆ ಪೋಷಕಾಂಶ ಗಳ ಕೊರತೆಯಾಗುತ್ತಿದೆ. ಮಿತಿಯಿಲ್ಲದೇ ರಸಗೊಬ್ಬರ ಬಳಸಿದ್ದರಿಂದ ಮಣ್ಣಿನ ರಚನೆಯೇ ಹಾಳಾಗಿದೆ. ಇಳುವರಿ ಕಡಿಮೆಯಾಗಿದೆ.

'ತುಂಗಭದ್ರಾ ಜಲಾಶಯದ ಭಾಗದಲ್ಲಿ ಎಕರೆಗೆ 40 ರಿಂದ 45 ಕ್ವಿಂಟಲ್ ಭತ್ತದ ಇಳುವರಿ ತೆಗೆಯುತ್ತಾರೆ. ಆದರೆ, ಸವಳು ಮಣ್ಣು ಹೆಚ್ಚಾದ ಗದ್ದೆಗಳಲ್ಲಿ ಎಕರೆಗೆ 20-25 ಕ್ವಿಂಟಲ್‌ಗೆ ಇಳಿದಿದೆ' ಎನ್ನುತ್ತಾರೆ ಗಂಗಾವತಿ ಕೃಷಿ ವಿಜ್ಞಾನ ಕೇಂದ್ರದ ಹಿರಿಯ ವಿಜ್ಞಾನಿ ಡಾ.ರವಿ.

'ಪೋಷಕಾಂಶಗಳ ಕೊರತೆ ನೀಗಿಸಲು ರಸಗೊಬ್ಬರ ಮತ್ತಿತರ ಒಳಸುರಿಗಳಿಗೆ (Inputs) ರೈತರು ತುಂಬಾ ಖರ್ಚು ಮಾಡುತ್ತಿದ್ದಾರೆ. ಇದೂ ರೈತರಿಗೆ ಹೊರೆಯಾಗಿದೆ. ಅವು ಮಣ್ಣಿನ ಫಲವತ್ತತೆ ಹಾಳು ಮಾಡಿದ್ದು, ಆಹಾರ ಭದ್ರತೆ ಮೇಲೂ ದುಷ್ಪರಿಣಾಮ ಉಂಟು ಮಾಡುವ ಸಾಧ್ಯತೆ ಇದೆ' ಎಂದು ವಿಜ್ಞಾನಿಗಳು ಅಂದಾಜಿಸುತ್ತಾರೆ.

ಪರಿಹಾರ? : ಭತ್ತದ ಗದ್ದೆಗಳ ವ್ಯಾಪ್ತಿಯಲ್ಲಿ ಬಸಿಗಾಲುವೆ ನಿರ್ಮಿಸಿ, ಲವಣಾಂಶ ಯುಕ್ತ ನೀರು (ಕೇಡು ನೀರು) ಹರಿದು ಹೊರ ಹೋಗುವ ವ್ಯವಸ್ಥೆ ಮಾಡಬೇಕು. ಬೆಳೆ ಪರಿವರ್ತನೆ, ಗದ್ದೆಗಳಿಗೆ ಹಸಿರೆಲೆ ಗೊಬ್ಬರದಂತಹ ಸಾವಯವ ಅಂಶಗಳನ್ನು ನೀಡುವುದು ಸದ್ಯದ ಪರಿಹಾರ.

'ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರಗಳ (ಕಾಡಾ) ವ್ಯಾಪ್ತಿಯಲ್ಲಿ ಇಂಥ ಚಟುವಟಿಕೆಗಳು ನಡೆಯುತ್ತಿವೆ' ಎನ್ನುತ್ತಾರೆ ಅಧಿಕಾರಿಗಳು. ಆದರೆ, 'ಅವು ಹೇಳಿಕೊಳ್ಳುವ ಮಟ್ಟದಲ್ಲಿಲ್ಲ' ಎಂದೂ ಹೇಳಲಾಗುತ್ತಿದೆ. ಕೆಲವು ರೈತರು ವೈಯಕ್ತಿಕ ವಾಗಿಯೂ ತಮ್ಮ ಜಮೀನುಗಳಲ್ಲಿ 'ಚಿಕಿತ್ಸಾ' ಕ್ರಮಗಳನ್ನು ಅನುಸರಿಸುತ್ತಿದ್ದಾರೆ. ಈ ಪ್ರಮಾಣ ತೀರಾ ಕಡಿಮೆ.

'ಎರೆಮಣ್ಣಿನಲ್ಲಿ ಭತ್ತ ಲಾಭದಾಯಕವಾಗಿಲ್ಲ. ಆದ್ದರಿಂದ ಎರಡನೇ ಬೆಳೆಯಾಗಿ ಅಲಸಂದೆ, ಸಾಸಿವೆ, ಸಜ್ಜೆ, ಹೆಸರು, ಎಳ್ಳು ಬೆಳೆಯುವಂತೆ ಸಲಹೆ ನೀಡಿದ್ದೇವೆ. ಅದರಿಂದ ಇಳುವರಿ ಕಡಿಮೆಯಾಗುವುದಿಲ್ಲ' ಎಂದು ಯಾದಗಿರಿ ಜಿಲ್ಲೆಯ ಸುರಪುರ ತಾಲ್ಲೂಕಿನ ಕವಡಿಮಟ್ಟಿ ಕೃಷಿ ವಿಜ್ಞಾನ ಕೇಂದ್ರದ ಮುಖ್ಯಸ್ಥ ಅಮರೇಶ ಹೇಳುತ್ತಾರೆ. ಆದರೆ, ಈ ಬೆಳೆ ಪರಿವರ್ತನೆಯ ಸಲಹೆಯನ್ನು ರೈತರು ಒಪ್ಪುವುದಿಲ್ಲ. 'ಈ ಮಣ್ಣಿನಲ್ಲಿ ಭತ್ತ ಬಿಟ್ಟು ಬೇರೆ ಬರುವುದಿಲ್ಲ' ಎಂಬುದು ಅವರ ವಾದ. ಹೀಗಾಗಿ ಕೆಲವು ರೈತರು ಸವಳಿಗೆ ಹೊಂದುವ ಭತ್ತದ ತಳಿಗಳನ್ನೇ ಬೆಳೆಯುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ 'ಸವಳು ಮಣ್ಣು ನಿರೋಧಕ ಭತ್ತದ ತಳಿ' ಅಭಿವೃದ್ಧಿಪಡಿಸುವ ಪ್ರಯತ್ನಗಳೂ ನಡೆದಿವೆ.

ಸಹಭಾಗಿತ್ವದ 'ದಾರಿ' : ಮತ್ತೊಂದೆಡೆ, 'ಸವಳು ನಿವಾರಣೆಗಾಗಿ ಬಸಿಗಾಲುವೆ ನಿರ್ಮಿಸುವುದು ದುಬಾರಿ ಕಾಮಗಾರಿ. ಇದಕ್ಕೆ ಸರ್ಕಾರ, ಹೆಚ್ಚಿನ ಅನುದಾನ ನೀಡಿ, ರೈತರ ಸಹಭಾಗಿತ್ವದಲ್ಲೇ ಸಮಸ್ಯೆಯನ್ನು ತ್ವರಿತಗತಿಯಲ್ಲಿ ಬಗೆಹರಿಸಬೇಕು' ಎಂಬುದು ಅಚ್ಚುಕಟ್ಟು ಭಾಗದ ಕೆಲ ರೈತರ ಬೇಡಿಕೆ.

ರೈತರು ಹಾಗೂ ಗ್ರಾಮ ಪಂಚಾಯಿತಿಯ ಸಹಭಾಗಿತ್ವದಲ್ಲಿ ನರೇಗ ಯೋಜನೆಯಡಿ ಬಸಿಗಾಲುವೆ ನಿರ್ಮಾಣದಂತಹ ಚಟುವಟಿಕೆಗಳನ್ನು ಕೈಗೊಳ್ಳಬಹುದು. ಇದರಿಂದ ಭವಿಷ್ಯದಲ್ಲಾಗುವ ಅನಾಹುತ ತಪ್ಪಿಸಬಹುದು. ಸವಳು ಮಣ್ಣಿಗೆ ಸಕಾಲದಲ್ಲಿ ಚಿಕಿತ್ಸೆ ದೊರೆಯದಿದ್ದರೆ, ಮಣ್ಣು ಫಲವತ್ತತೆ ಕಳೆದುಕೊಳ್ಳುತ್ತದೆ. 'ಭತ್ತದ ಕಣಜ' ವಾಗಿರುವ ಪ್ರದೇಶ ಭವಿಷ್ಯದಲ್ಲಿ 'ಮರುಭೂಮಿ'ಯಾಗುತ್ತದೆ ಎಂದು ಎಚ್ಚರಿಸುತ್ತಾರೆ ವಿಜ್ಞಾನಿಗಳು.

ಪೂರಕ ಮಾಹಿತಿ: (ಕೆ.ಎಸ್.ಗಿರೀಶ್-ಮೈಸೂರು, ನಾಗರಾಜ ಚಿನಗುಂಡಿ-ರಾಯಚೂರು, ಬಿ.ಜಿ.ಪ್ರವೀಣಕುಮಾರ-ಯಾದಗಿರಿ, ಸಿದ್ದನಗೌಡ ಪಾಟೀಲ-ಕೊಪ್ಪಳ, ಎಂ.ಮಹೇಶ್-ಬೆಳಗಾವಿ, ರವಿ ಬಳೂಟಗಿ- ಹುಬ್ಬಳ್ಳಿ, ಬಾಲಚಂದ್ರ ಎಚ್.-ಉಡುಪಿ, ಬಿ.ಜೆ. ಧನ್ಯಪ್ರಸಾದ್- ಚಿಕ್ಕಮಗಳೂರು, ಚಿದಂಬರಪ್ರಸಾದ-ಮಂಗಳೂರು, ಹೊನಕೆರೆ ನಂಜುಂಡೇಗೌಡ-ಬಳ್ಳಾರಿ, ಎಂ.ಎಸ್.ಸದಾಶಿವ-ಕಾರವಾರ)



ಗಂಗಾವತಿ ತಾಲ್ಲೂಕಿನ ವ್ಯಾಪ್ತಿಯಲ್ಲಿ ಸವಳಾದ ಜಮೀನಿನಲ್ಲಿ ಜೆಸಿಬಿ ಮೂಲಕ ತೋಡು ತೆಗೆಯುತ್ತಿರುವ ದೃಶ್ಯ

ಪ್ರಾಯೋಗಿಕ ಅಧ್ಯಯನ

ಸವಳು-ಜವಳು' ಸಮಸ್ಯೆಯ ಸಮಗ್ರ, ವೈಜ್ಞಾನಿಕ ವಿಶ್ಲೇಷಣೆಗೆ ಮಲಪ್ರಭಾ-ಘಟಪ್ರಭಾ ಯೋಜನೆಗಳ ಅಚ್ಚುಕಟ್ಟು ಪ್ರದೇಶ ಅಭಿವೃದ್ಧಿ ಪ್ರಾಧಿಕಾರವು (ಕಾಡಾ) ಪ್ರಾಯೋಗಿಕ ಯೋಜನೆಯೊಂದನ್ನು ರೂಪಿಸಿದೆ.

ಬಾಗಲಕೋಟೆ ಜಿಲ್ಲೆಯ ಇಂಗಳಗಿ ಹಾಗೂ ಯಡಹಳ್ಳಿಯನ್ನು ಆಯ್ಕೆ ಮಾಡಿದ್ದು, ಕಾಡಾ ಹಾಗೂ ಧಾರವಾಡದ ನೆಲ ಮತ್ತು ಜಲ ನಿರ್ವಹಣಾ ಸಂಸ್ಥೆ (ವಾಲ್ಮಿ) ಸಹಯೋಗದಲ್ಲಿ 2 ಸಾವಿರ ಹೆಕ್ಟೇರ್‌ನಲ್ಲಿ ಅಧ್ಯಯನ ನಡೆಯಲಿದೆ.

'ಭೂಮಿ ಸವಳಾಗಲು ಕಾರಣಗಳ ಬಗ್ಗೆ ಸುಧಾರಿತ ತಂತ್ರಜ್ಞಾನ ಬಳಸಿ ಅಧ್ಯಯನ ನಡೆಯಲಿದೆ' ಎನ್ನುತ್ತಾರೆ ಕಾಡಾ ಆಯುಕ್ತ ಶಶಿಧರ ಕುರೇರ.

ಅಲಿಪ್ತ ನೀತಿ, ಮೊಘಲ್ ಚರಿತ್ರೆಗೆ ಕತ್ತರಿ

ಒಂದನೇ ಪುಟದಿಂದ

10ನೇ ತರಗತಿಯ ಪಠ್ಯದ 'ಧರ್ಮ, ಕೋಮುವಾದ ಮತ್ತು ರಾಜಕಾರಣ–ಕೋಮುವಾದ, ಜಾತ್ಯತೀತ ಸರ್ಕಾರ' ಎಂಬ ವಿಭಾಗದಲ್ಲಿ ಇದ್ದ ಫೈಜ್ ಅವರ ಎರಡು ಕವಿತೆಗಳನ್ನು ಕೈಬಿಡಲಾಗಿದೆ.

ಶೈಕ್ಷಣಿಕ ಸಂಶೋಧನೆ ಮತ್ತು ತರಬೇತಿಯ ರಾಷ್ಟ್ರೀಯ ಪರಿಷತ್ (ಎನ್‌ಸಿಇಆರ್‌ಟಿ) ಶಿಫಾರಸು ಅನ್ವಯ ಬದಲಾವಣೆಗಳನ್ನು ಮಾಡಲಾಗಿದೆ. ಇಂತಹ ಬದಲಾವಣೆ ಸಾಮಾನ್ಯ ಪ್ರಕ್ರಿಯೆ ಎಂದು ಅಧಿಕಾರಿಯೊಬ್ಬರು ಹೇಳಿದ್ದಾರೆ. ಈ ಹಿಂದೆ, 2012 ಮತ್ತು 2020ರಲ್ಲಿ ಮಾಡಲಾಗಿದ್ದ ಕೆಲವು ಬದಲಾವಣೆಗಳು ಆಕ್ರೋಶಕ್ಕೆ ಕಾರಣವಾಗಿದ್ದವು.

10ನೇ ತರಗತಿಯ ಪಠ್ಯದಿಂದ 'ಪ್ರಜಾಪ್ರಭುತ್ವ ಮತ್ತು ವೈವಿಧ್ಯ' ಎಂಬ ಅಧ್ಯಾಯವನ್ನು ಕೈಬಿಡಲಾಗಿದೆ. ಜಾತಿ ಅಸಮಾನತೆಯ ಬಗ್ಗೆ ಈ ಅಧ್ಯಾಯದಲ್ಲಿ ವಿವರಗಳು ಇದ್ದವು. ಜನಪ್ರಿಯ ಹೋರಾಟಗಳು ಮತ್ತು ಚಳವಳಿಗಳು ಎಂಬ ಅಧ್ಯಾಯವನ್ನು ತೆಗೆಯಲಾಗಿದೆ. ಈ ಅಧ್ಯಾಯದಲ್ಲಿ ಬೊಲಿವಿಯಾ ಮತ್ತು ನೇಪಾಳದ ರಾಜಕಾರಣದ ಬಗ್ಗೆ ವಿವರಗಳು ಇವೆ.

ಮುಂದಿನ ಶೈಕ್ಷಣಿಕ ವರ್ಷದಿಂದ ಒಂದೇ ಪರೀಕ್ಷೆ ವ್ಯವಸ್ಥೆಗೆ ಹಿಂದಿರುಗಲಾಗುವುದು. ಕೋವಿಡ್ ಸಾಂಕ್ರಾಮಿಕದ ಕಾರಣಕ್ಕೆ ಎರಡು ಬಾರಿ ಪರೀಕ್ಷೆ ನಡೆಸುವ ವ್ಯವಸ್ಥೆ ಇತ್ತು ಎಂದು ಸಿಬಿಎಸ್‌ಇ ಹೇಳಿದೆ.

ವರ್ಗಾವಣೆ ತಡೆಗೆ ವಿದ್ಯಾರ್ಥಿನಿಯರನ್ನು ಒತ್ತೆಯಾಳಾಗಿರಿಸಿದ ಶಿಕ್ಷಕಿಯರು

ಪ್ರಜಾವಾಣಿ ವಾರ್ತೆ

ಲಖನೌ: ಬೇರೆ ಜಿಲ್ಲೆಗೆ ವರ್ಗಾವಣೆಯಾಗಿದ್ದ ತಮ್ಮ ಆದೇಶವನ್ನು ರದ್ದುಗೊಳಿಸುವ ಸಲುವಾಗಿ ಇಬ್ಬರು ಶಿಕ್ಷಕಿಯರು, 20 ವಿದ್ಯಾರ್ಥಿನಿಯರನ್ನು ಶಾಲೆಯಲ್ಲೇ ಒತ್ತೆಯಾಳಾಗಿರಿಸಿಕೊಂಡ ಆಘಾತಕಾರಿ ಘಟನೆ ಉತ್ತರಪ್ರದೇಶದ ಲಖಿಂಪುರ ಖೇರಿ ಜಿಲ್ಲೆಯ ಬೆಹ್ಜಾಮ್‌ನಲ್ಲಿನ ಕಸ್ತೂರ ಬಾ ಗಾಂಧಿ ಬಾಲಕಿಯರ ವಸತಿ ಶಾಲೆಯಲ್ಲಿ ಈಚೆಗೆ ನಡೆದಿದೆ.

ಶಿಕ್ಷಕಿಯರಾದ ಮನೋರಮಾ ಮಿಶ್ರಾ ಮತ್ತು ಗೋಲ್ಡಿ ಕಟಿಯಾರ್ ಅವರನ್ನು ಬೇರೆ ಜಿಲ್ಲೆಗೆ ವರ್ಗಾವಣೆ ಮಾಡಲಾಗಿತ್ತು. ಇದರಿಂದ ಅಸಮಾಧಾನಗೊಂಡಿದ್ದ ಶಿಕ್ಷಕಿಯರು, ರಾತ್ರಿ ಊಟದ ಬಳಿಕ 20 ವಿದ್ಯಾರ್ಥಿನಿಯರನ್ನು ವಸತಿಶಾಲೆಯ ಮಹಡಿಗೆ ಕರೆದೊಯ್ದಿದ್ದರು. ಬಳಿಕ ಅವರಿಗೆ ತಮ್ಮ ವರ್ಗಾವಣೆಯ ಕುರಿತು ತಿಳಿಸಿ, ವಿದ್ಯಾರ್ಥಿನಿಯರು ಮಹಡಿಯಲ್ಲಿನ ಕೊಠಡಿಯಲ್ಲೇ ಬಿಟ್ಟು ಹೊರಗಿನಿಂದ ಬಾಗಿಲು ಹಾಕಿದ್ದರು ಎಂದು ಮೂಲಗಳು ತಿಳಿಸಿವೆ.

'ಭಯಭೀತರಾಗಿದ್ದ ವಿದ್ಯಾರ್ಥಿನಿಯರು ಜೋರಾಗಿ ಅತ್ತು, ಸಹಾಯಕ್ಕಾಗಿ ಸ್ಥಳೀಯ ಗಮನ ಸೆಳೆದಿದ್ದಾರೆ. ಸ್ಥಳೀಯರು ಪೊಲೀಸರಿಗೆ ಮಾಹಿತಿ ನೀಡಿದ ಬಳಿಕ ಮಧ್ಯರಾತ್ರಿ ವೇಳೆಗೆ ವಿದ್ಯಾರ್ಥಿನಿಯರನ್ನು ರಕ್ಷಿಸಲಾಗಿದೆ. ತಮ್ಮ ವರ್ಗಾವಣೆ ಆದೇಶವನ್ನು ರದ್ದುಗೊಳಿಸುವಂತೆ ಜಿಲ್ಲಾಧಿಕಾರಿಗಳಿಗೆ ಒತ್ತಡ ಹೇರಲು ಶಿಕ್ಷಕಿಯರು ಈ ತಂತ್ರ ಮಾಡಿದ್ದಾರೆ' ಎಂದು ಶಿಕ್ಷಣ ಇಲಾಖೆಯ ಅಧಿಕಾರಿಯೊಬ್ಬರು ಮಾಹಿತಿ ನೀಡಿದ್ದಾರೆ

ಈ ಕುರಿತು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಶಿಕ್ಷಕಿಯರ ವಿರುದ್ಧ ಇಲಾಖಾ ತನಿಖೆಗೂ ಆದೇಶಿಸಲಾಗಿದೆ ಎಂದು ಜಿಲ್ಲಾ ಶಿಕ್ಷಣಾಧಿಕಾರಿ ಲಕ್ಷ್ಮೀಕಾಂತ ಪಾಂಡೆ ತಿಳಿಸಿದ್ದಾರೆ.

ಗುಂಡಣ್ಣ



25 ವರ್ಷಗಳ ಹಿಂದೆ

ಭಾನುವಾರ, 24-4-1997

● **ಎಪಿಎಂಸಿಗಳಿಗೆ ಮೂವರು ಸದಸ್ಯರ ನಾಮಕರಣ: ಸುಗ್ರೀವಾಜ್ಞೆ ಜಾರಿ**

ಬೆಂಗಳೂರು, ಮೇ 23– ರಾಜ್ಯದ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳಿಗೆ ಮೂವರು ಸದಸ್ಯರನ್ನು ನಾಮಕರಣ ಮಾಡಲು ಸರ್ಕಾರ ಗುರುವಾರ ಸುಗ್ರೀವಾಜ್ಞೆ ಹೊರಡಿಸಿದೆ.

ಈ ವಿಚಾರದಲ್ಲಿ ರಾಜ್ಯ ಸಚಿವ ಸಂಪುಟ ನಿರ್ಧಾರ ತಳೆದು ಕರಡನ್ನು ರಾಜ್ಯಪಾಲರ ಒಪ್ಪಿಗೆಗೆ ಕಳುಹಿಸಿದ ಕೂಡಲೇ ಕಾಂಗ್ರೆಸ್ ಪಕ್ಷದವರು, ನಿಯೋಗದಲ್ಲಿ ರಾಜ್ಯಪಾಲ ಖುರ್ಷಿದ್ ಆಲಂ ಖಾನ್ ಅವರನ್ನು ಭೇಟಿ ಮಾಡಿ ಸರ್ಕಾರ ಸುಗ್ರೀವಾಜ್ಞೆ ತರುವುದಕ್ಕೆ ಅವಕಾಶ ಕೊಡಬಾರದು ಎಂದು ಒತ್ತಾಯಪೂರ್ವಕ ಮನವಿ ಮಾಡಿಕೊಂಡಿದ್ದರು.

50 ವರ್ಷಗಳ ಹಿಂದೆ

ಬುಧವಾರ, 24-4-1972

● **2 ಪುಟ್ಟ ಒಪ್ಪಂದಗಳ ಮೂಲಕ ಕ್ರೆಮ್ಲಿನ್ ಶೃಂಗಸಭೆ ಆರಂಭ**

ಮಾಸ್ಕೋ, ಮೇ 23– ಅಮೆರಿಕ ಮತ್ತು ರಷ್ಯಾವು ಕ್ಯಾನ್ಸರ್ ಮತ್ತು ಹೃದ್ರೋಗದ ವಿರುದ್ಧ ಹೋರಾಡಲು ಹಾಗೂ ಗಾಳಿ ಮತ್ತು ನೀರನ್ನು ಕಲುಷಿತಗೊಳಿಸುವುದನ್ನು ತಪ್ಪಿಸಲು ಜಂಟಿ ಯತ್ನಕ್ಕಾಗಿ ಇಂದು 2 ಒಪ್ಪಂದಗಳನ್ನು ಮಾಡಿಕೊಂಡವು.

ಅಮೆರಿಕ ಅಧ್ಯಕ್ಷ ನಿಕ್ಸನ್ ಮತ್ತು ಸೋವಿಯತ್ ಅಧ್ಯಕ್ಷ ನಿಕೊಲಾಯ್ ಪೋಡ್ಗೋರ್ನಿ ಅವರು ಕ್ರೆಮ್ಲಿನ್‌ನಲ್ಲಿ ಒಂದು ಒಪ್ಪಂದಕ್ಕೆ ಸಹಿ ಹಾಕಿದರು. ಇನ್ನೊಂದು ಒಪ್ಪಂದಕ್ಕೆ ಅಮೆರಿಕದ ವಿದೇಶಾಂಗ ಕಾರ್ಯದರ್ಶಿ ಮತ್ತು ಸೋವಿಯತ್ ಆರೋಗ್ಯ ಸಚಿವರು ಸಹಿ ಹಾಕಿದರು.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಭಾನುವಾರ ಏಪ್ರಿಲ್ 24, 2022

ಶ್ರೀ ಶುಭಕೃತ್ ನಾಮ ಸಂವತ್ಸರ ಉತ್ತರಾಯಣ - ವಸಂತ ಋತು ತಿಥಿ: ಚೈತ್ರ ಕೃಷ್ಣ ನವಮಿ **ಗಂ. 26-53 ನಕ್ಷತ್ರ:** ಶ್ರವಣ ಗಂ. 17-52 ಯೋಗ: ಶುಭ ಗಂ. 23-03, ಕರಣ: ತೈತಿಲ **ಗಂ. 15-39, ಮೇಷ ಮಾಸದ 10 ನೇ ದಿನ.**
ರಾಹುಕಾಲ: ಸಾಯಂಕಾಲ 04:30 - 06:00
ಸೂರ್ಯೋದಯ: 06-16 ಸೂರ್ಯಾಸ್ತ : 06-41
ಮುಸ್ಲಿಂ ದಿನಾಂಕ: 22 ರಂಜಾನ್
ದಿನ ವಿಶೇಷ: ಲೋ ಸಂಡೆ (ಕ್ರಿಶ್ಚಿಯನ್), ಅದೃಷ್ಟ ಸಂಖ್ಯೆ: 5, 9

ಮೇಷ: ನೀವು ಅಪೇಕ್ಷೆ ಪಟ್ಟಿದ್ದ ಹೊಸ ಉದ್ಯೋಗವನ್ನು ಸಂಪಾದಿಸುವಲ್ಲಿ ರಾಜಕೀಯ ವ್ಯಕ್ತಿಗಳ ಮೂಲಕ ಯಶಸ್ಸು ಗಳಿಸುವಿರಿ. ನೆಚ್ಚಿನ ಹವ್ಯಾಸಗಳಲ್ಲಿ ತೊಡಗುವುದಕ್ಕೆ ಸಮಯ ಸಿಗುವುದು.

ವೃಷಭ: ಹೊಸ ವ್ಯವಹಾರದಲ್ಲಿ ಸ್ನೇಹಿತರ ಹಿತವಚನ, ಸಹಾಯ , ಸಹಕಾರ ದೊರೆಯಲಿದೆ. ಖಾದಿ ಉದ್ಯಮದವರಿಗೆ ಸರಕಾರದಿಂದ ಸಹಾಯ ಸೌಲಭ್ಯ ದೊರೆಯಲಿದೆ.

ಮಿಥುನ: ಉದ್ಯೋಗರಂಗದಲ್ಲಿ ಅನಿರೀಕ್ಷಿತ ಬೆಳವಣಿಗೆ ಕಂಡು ಬರುವುದು. ಮನೆಯಲ್ಲಿ ವಿವಾಹಕ್ಕೆ ಸಂಬಂಧವಾದ ಮಾತುಕತೆಗಳು ಹಿರಿಯರಲ್ಲಿ ಚರ್ಚೆಗೆ ಬರಲಿದೆ. ಕೇಟರಿಂಗ್ ಮತ್ತು ಹೊಟೆಲ್ ಉದ್ಯಮ ನಡೆಸುವವರಿಗೆ ಶುಭದಿನ.

ಕರ್ಕಾಟಕ: ವ್ಯಾಪಾರ ಹಾಗೂ ವಾಣಿಜ್ಯದ ಸುಧಾರಣೆಗೆ ಸಾಕಷ್ಟು ಅಡೆತಡೆಗಳು ಒದಗಿ ಬರುವುವು. ನೆರೆ-ಹೊರೆಯವರೊಂದಿಗಿನ ವ್ಯಾವಹಾರಿಕ ಸಂಬಂಧದಲ್ಲಿ ಸಣ್ಣಪುಟ್ಟ ವಿಚಾರಗಳಿಗೆ ದೊಡ್ಡ ಮಟ್ಟದಲ್ಲಿ ಭಿನ್ನಾಭಿಪ್ರಾಯ ಮೂಡಬಹುದು.

ಸಿಂಹ: ವಕೀಲೀ ವೃತ್ತಿಯವರಿಗೆ ಗೆಲುವು ಸಾಧಿಸಲು ಬೇಕಾದ ಅವಕಾಶ ಸಿಗಲಿದೆ. ಗಣಪತಿಗೆ ಸಂಬಂಧಿಸಿದಂತೆ ಹರಿಕೆಯ ರೂಪದಲ್ಲಿರುವ ಅಥವಾ ಅಂದುಕೊಂಡಿದ್ದ ದೇವರ ಕೆಲಸಗಳನ್ನು ಮುಗಿಸುವ ಪ್ರಯತ್ನಮಾಡಿ.

ಕನ್ಯಾ: ನಿಮ್ಮ ಯೋಜನೆ ಹಾಗೂ ಅವುಗಳ ಬೆಳವಣಿಗೆಯ ಬಗ್ಗೆ ಸಂಬಂಧಪಟ್ಟವರಲ್ಲಿ ಅಗತ್ಯವಾಗಿ ಚರ್ಚೆ ನಡೆಸಿ, ದಿನನಿತ್ಯದ ಆಗುಹೋಗುಗಳ ಬಗ್ಗೆ ಪ್ರತಿನಿತ್ಯವು ಗಮನಹರಿಸಿ.

ತುಲಾ: ಮನೆಯಲ್ಲಿನ ಸಣ್ಣ ಮಕ್ಕಳ ಆರೋಗ್ಯದ ವಿಚಾರವಾಗಿ ಹೆಚ್ಚಿನ ಖರ್ಚು ವೆಚ್ಚಗಳು ಕಾಣುವುದು. ಕಾರ್ಮಿಕ ವರ್ಗದವರ ಹೆಚ್ಚಿನ ಬೇಡಿಕೆಗಳು ವ್ಯವಸ್ಥಾಪಕರಿಂದ ಈಡೇರಲಿವೆ. ದಿನಾಂತ್ಯದಲ್ಲಿ ಅಲ್ಪ ನೆಮ್ಮದಿಯು ಪ್ರಾಪ್ತಿಯಾಗಲಿದೆ.

ವೃಶ್ಚಿಕ: ನಿಮ್ಮ ಜೀವನದ ಹಳೆಯ ನೆನಪುಗಳನ್ನು ಮರೆತು ಭವಿಷ್ಯದತ್ತ ಗಮನಹರಿಸುವುದು ಉತ್ತಮ. ಹೂಡಿಕೆ ವಿಚಾರದಲ್ಲಿ ಆಳವಾಗಿ ಯೋಚಿಸಿ ತೀರ್ಮಾನ ಕೈಗೊಳ್ಳುವಂತೆ ಮಿತ್ರರಿಂದ ಸಲಹೆ ಬರುವುದು.

ಧನು: ಏಕ ಕಾಲದಲ್ಲಿ ಹತ್ತಾರು ಕೆಲಸಗಳನ್ನು ಮಾಡುವ ಉತ್ಸಾಹ ನಿಮ್ಮಲ್ಲುಂಟಾಗುವುದು. ಸದ್ಯದ ನಿಮ್ಮ ಜೀವನ ಶೈಲಿಯಲ್ಲಿ ಯಾವುದೇ ಬದಲಾವಣೆ ಬೇಡವೆಂದು ನಿಶ್ಚಯಿಸುವುದು ಉತ್ತಮ.

ಮಕರ: ವದಂತಿಗಳಿಗೆ ಬೆಲೆಕೊಟ್ಟು ಯಾವುದೇ ತೀರ್ಮಾನಕ್ಕೆ ಬರುವುದು ಸರಿಯಲ್ಲ. ಇತರರೊಂದಿಗೆ ಜೊತೆಗೂಡಿ ಕೆಲಸ ಮಾಡುವುದು, ನಾಲ್ಕಾರು ಜನರ ಜೊತೆಯಲ್ಲಿ ಬೆರೆಯುವುದನ್ನು ಅಭ್ಯಾಸ ಮಾಡಿಕೊಳ್ಳಿ.

ಕುಂಭ: ನಿರುದ್ಯೋಗಿಗಳಿಗೆ ಹಂಗಾಮಿ ನೌಕರಿ ದೊರೆಯುವುದು. ನಿಮ್ಮ ಉದ್ಯೋಗದ ಬದುಕಿನಲ್ಲಿ ತಪ್ಪಿ ಹೋಗಿದ್ದ ಅವಕಾಶಗಳು ಮತ್ತೆ ದೊರೆಯುವ ಸಂಭವವಿದೆ.


ಮೀನ: ವೈಯಕ್ತಿಕ ಸಮಸ್ಯೆಗಳು ಏನೇ ಇದ್ದರೂ, ನಿಮ್ಮ ಈ ದಿನದ ಮೊದಲ ಆದ್ಯತೆ ವೃತ್ತಿ ವಿಷಯಗಳಿಗೆ ಮಾತ್ರ ಇರಲಿ. ನಿಮ್ಮ ಕರ್ತವ್ಯದ ಕೊರತೆಯು ಮೇಲಧಿಕಾರಿಗಳಿಗೆ ಎದ್ದು ಕಾಣಲಿದೆ.

ಪದಬಂಧ 4937

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ವಿಶೇಷವಾದ ದ್ರೋಹ (3)
3.ನಿಘಂಟು ಇಲ್ಲಿದೆ (4)
5.ರಸ ಒಸರುವ ಜಿಹ್ವೆ (3)
7.ಕನ್ನಡಿಗನಾಡಿದ 'ಚೆಸ್' (4)
9.ಒಳ್ಳೆಯ ನಡತೆಯನ್ನು ಹೀಗೆನ್ನಿ (4)
11.ಲೋಹ ದ್ರವ್ಯವನ್ನು ಅಚ್ಚಿಗೆ ಎರೆಯುವಿಕೆ (3)
14.ಸುತ್ತಲಿನ ಜನ (4)
15.ತಲೆಗೆ ಸುತ್ತಿಕೊಳ್ಳುವ ಬಟ್ಟೆ (3)

ಮೇಲಿಂದ ಕೆಳಕ್ಕೆ
1.ಹೆಂಡತಿಯನ್ನು ಕಳೆದು ಕೊಂಡವನು (3)
2.ವನದ ಕೊನೆಗೆ ಮಾಡಿದ ಯಜ್ಞ (3)
3.ಹೀನ ಬಯಕೆಯು ಉಲ್ಟಾಪಲ್ಟಾ ಆಗಿದೆ (4)
4.ಹೊದೆಯುವ ತೆಳ್ಳನೆಯ ವಸ್ತ್ರ (2)
6.ಸೂಕ್ತವಾದುದನ್ನು ಹೀಗೆ ಹೇಳಿ (4)
7.ಈತ ಚರ್ಮದ ಕೆಲಸಗಾರ (3)
8.ಗರದೊಳಗಿರುವ ಅನ್ಯಮಾರ್ಗ (4)
10.ಚಾಡಿ ಹೇಳುವ ಸ್ವಭಾವದವನು (4)
11.ಅಡ್ಡಿಯು ಎಡದಿಂದ ಪ್ರಾರಂಭವಾಗಿದೆಯಲ್ಲಾ! (3)
12.ಈ ರೀತಿ ಕೋಪಗೊಳ್ಳು (3)
13.ಕೆಡುಕಾಗಲೆಂದು ಬಯಸಿ ಹೇಳುವ ಮಾತು (2)



4936 ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಜಬರ್ದಸ್ತು 3.ಮೋಸಗಾರ 5.ಸುಭಿಕ್ಷ 7.ರಾಣಿ 8.ತತಿ 11.ರಿಪು 13.ಕಲಿ 14.ಗಡಸು 16.ಗರ್ಭಗುಡಿ 17.ಮರಕತ
ಮೇಲಿಂದ ಕೆಳಕ್ಕೆ: 1.ಜಲಪಾತ 2.ಸ್ತುಸು 3.ಮೋಕ್ಷ 4.ರಮಣಿ 6.ಭಿಕಾರಿ 7.ರಾಯಭಾರಿ 9.ತಿಲಾಂಜಲಿ 10.ಪಾಕಡ 12.ಪುರೋಹಿತ 13.ಕಡಗ 14.ಗಡಿ 15.ಸುಮ

ಸುಡೊಕು 5323

	6		8	7			9	3
								4
	8	4	5	2		1	6	
1		5					8	9
4			2	9	5			1
	9						2	
		9	3		2		4	
7			9		8	5		2
	5			4			3	

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5322 ಸುಡೊಕು

4	6	5	3	9	8	7	1	2
2	7	1	4	6	5	3	8	9
9	8	3	7	1	2	5	4	6
7	1	9	5	8	3	2	6	4
5	2	6	9	4	7	1	3	8
3	4	8	6	2	1	9	7	5
6	3	4	1	5	9	8	2	7
8	5	7	2	3	4	6	9	1
1	9	2	8	7	6	4	5	3

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

10ಕ್ಕೂ ಹೆಚ್ಚು ಅಣು ಸಿಡಿತಲೆ ಸಾಗಿಸುವ ಸಾಮರ್ಥ್ಯದ ಖಂಡಾಂತರ ಕ್ಷಿಪಣಿ: ರಷ್ಯಾ ಶಕ್ತಿಪ್ರದರ್ಶನ

‘ಸರ್‌ಮ್ಯಾಟ್ ಕ್ಷಿಪಣಿ ಶೀಘ್ರ ಸೇನೆಗೆ’

ಮಾಸ್ಕೊ (ರಾಯಿಟರ್ಸ್‌): ರಷ್ಯಾವು ಇತ್ತೀಚೆಗಷ್ಟೇ ಪರೀಕ್ಷಿಸಿದ ‘ಸರ್‌ಮ್ಯಾಟ್’ ಖಂಡಾಂತರ ಕ್ಷಿಪಣಿಯನ್ನು ಸೇನೆಗೆ ಶೀಘ್ರವೇ ಸೇರಿಸಿಕೊಳ್ಳಲಾಗುವುದು ಎಂದು ಆ ದೇಶವು ಶನಿವಾರ ಹೇಳಿದೆ. ಹತ್ತು ಅಣ್ವಸ್ತ್ರಗಳನ್ನು ಹೊತ್ತೊಯ್ಯಬಲ್ಲ ಸಾಮರ್ಥ್ಯವನ್ನು ಇದು ಹೊಂದಿದೆ. ಜತೆಗೆ, ಸಾವಿರಾರು ಕಿಲೋಮೀಟರ್ ದೂರದ ಅಮೆರಿಕ ಮತ್ತು ಯುರೋಪ್ ವರೆಗೆ ತಲುಪುವ ಸಾಮರ್ಥ್ಯ ಹೊಂದಿದೆ.

ಈ ಕ್ಷಿಪಣಿ ನಿಯೋಜನೆಯು ತನ್ನ ‘ಅಣ್ವಸ್ತ್ರ ಪಡೆಯ ಐತಿಹಾಸಿಕ ಉನ್ನತೀಕರಣ’ ಎಂದು ರಷ್ಯಾ ಬಣ್ಣಿಸಿದೆ.

ಸರ್‌ಮ್ಯಾಟ್ ಕ್ಷಿಪಣಿಯನ್ನು ಈ ವರ್ಷದೊಳಗೆ ಸೇನೆಗೆ ಸೇರಿಸಿಸುವ ಗುರಿಯನ್ನು ರಷ್ಯಾದ ಬಾಹ್ಯಾಕಾಶ ಸಂಸ್ಥೆ ‘ರೊಸ್ಕೊಸ್‌ಮೊಸ್’ ಮುಖ್ಯಸ್ಥ ಡಿಮಿಟ್ರಿ ರೊಗೊಜಿನ್ ನಿಗದಿಪಡಿಸಿಕೊಂಡಿದ್ದಾರೆ. ರಷ್ಯಾದ ಮಹತ್ವಾಕಾಂಕ್ಷೆಯ ಅಸ್ತ್ರವೆಂದು ಬಣ್ಣಿಸಿರುವ ‘ಸರ್‌ಮ್ಯಾಟ್’ ಕ್ಷಿಪಣಿಯ ಮೊದಲ ಪ್ರಯೋಗ ಬುಧವಾರಷ್ಟೇ ನಡೆದಿದೆ. ಇದನ್ನು ಸೇನೆಗೆ ಸೇರಿಸುವ ಮೊದಲು ಇನ್ನಷ್ಟು ಪ್ರಯೋಗಕ್ಕೆ ಒಳಪಡಿಸುವ ಅಗತ್ಯವಿದೆ ಎಂದು ಪಾಶ್ಚಾತ್ಯಾ ದೇಶಗಳ ಸೇನಾ ತಜ್ಞರು ವಿಶ್ಲೇಷಿಸಿದ್ದಾರೆ.

ರಷ್ಯಾದ ಸರ್ಕಾರಿ ಸ್ವಾಮ್ಯದ ಸುದ್ದಿವಾಹಿನಿಗೆ ನೀಡಿದ ಸಂದರ್ಶನದಲ್ಲಿ ರೊಗೊಜಿನ್ ಅವರು, ‘ಮಾಸ್ಕೊ ಪೂರ್ವಕ್ಕೆ ಸುಮಾರು 3,000 ಕಿ.ಮೀ (1,860 ಮೈಲುಗಳು) ದೂರದಲ್ಲಿ ಸೈಬೀರಿಯಾದ ಕ್ರಸ್ನಾಯಾರ್‌ಸ್ಕ್ ಪ್ರದೇಶದಲ್ಲಿ ಈ ಕ್ಷಿಪಣಿಗಳನ್ನು ನಿಯೋಜಿಸಲಾಗುವುದು’ ಎಂದು ಹೇಳಿದರು.


ಕೀವ್ ಸಮೀಪದ ಗೊಸ್ಟೊಮೆಲ್ ಹಳ್ಳಿಯಲ್ಲಿ ನಿರಾಶ್ರಿತರೊಬ್ಬರು ಬಹುಮಹಡಿಗಳ ವಸತಿ ಕಟ್ಟಡದ ಆವರಣದಲ್ಲಿ ಶನಿವಾರ ಅಡುಗೆ ತಯಾರಿಸಿದರು – ಎಎಫ್‌ಪಿ ಚಿತ್ರ

ಸೋವಿಯತ್ ಯುಗದ ‘ವೊಯೆವೊಡಾ’ ಕ್ಷಿಪಣಿಗಳನ್ನು ಇರಿಸಿದ್ದ ಇದೇ ಸ್ಥಳದಲ್ಲಿ ಈ ಅತ್ಯಾಧುನಿಕ ಕ್ಷಿಪಣಿಗಳನ್ನು ಇರಿಸುವುದರಿಂದ ಸಮಯ ಮತ್ತು ಸಂಪನ್ಮೂಲ ಉಳಿಯುತ್ತದೆ ಎಂದರು.

‘ಅತ್ಯಂತ ಶಕ್ತಿಶಾಲಿ ಅಸ್ತ್ರ’ದ ಪರೀಕ್ಷೆ ಒಂದು ಐತಿಹಾಸಿಕ ಘಟನೆ. ಅದು ಮುಂದಿನ 30ರಿಂದ 40 ವರ್ಷಗಳವರೆಗೆ ರಷ್ಯಾದ ನವ ಪೀಳಿಗೆಯ ಸುರಕ್ಷತೆ ಖಾತರಿಪಡಿಸುತ್ತದೆ ಎಂದು ರೊಗೊಜಿನ್ ವಿಶ್ವಾಸ ವ್ಯಕ್ತಪಡಿಸಿದರು.



ಉಕ್ರೇನ್ ಜತೆಗಿನ ಯುದ್ಧದ ಸಂದರ್ಭದಲ್ಲಿಯೇ ಈ ಕ್ಷಿಪಣಿಯ ಪರೀಕ್ಷೆ ನಡೆಸಿದ್ದನ್ನು ರಷ್ಯಾದ ಬಲ ಪ್ರದರ್ಶನ ಎಂದು ಪರಿಗಣಿಲಾಗಿದೆ. ಉಕ್ರೇನ್–ರಷ್ಯಾ ಸಂಘರ್ಷವು ಅಮೆರಿಕ ಮತ್ತು ಅದರ ಮಿತ್ರ ರಾಷ್ಟ್ರಗಳಲ್ಲಿ ಕಳವಳ ತೀವ್ರಗೊಳಿಸಿದೆ. ಪುಟಿನ್ ಅವರು ಇದೇ ವರ್ಷದ ಫೆಬ್ರುವರಿ 24ರಂದು ಉಕ್ರೇನ್ ಮೇಲೆ ವಿಶೇಷ ಸೇನಾ ಕಾರ್ಯಾಚರಣೆಗೆ ಆದೇಶಿಸಿದಾಗ, ‘ನಮ್ಮ ದಾರಿಗೆ ಯಾರೇ ಅಡ್ಡಿಪಡಿಸಿದರೂ ನಿಮ್ಮ ಇತಿಹಾಸದಲ್ಲಿ ಎಂದಿಗೂ ಕಂಡರಿಯದ ಪರಿಣಾಮ ಎದುರಿಸಬೇಕಾಗುತ್ತದೆ’ ಎಂದು ಎಚ್ಚರಿಕೆ ನೀಡಿದ್ದರು. ಸೇನಾ ಕಾರ್ಯಾಚರಣೆ ಶುರುವಾದಾಗಿನಿಂದಲೂ ಅಣ್ವಸ್ತ್ರ ಯುದ್ಧ ಸಾಧ್ಯತೆಯ ಬಗ್ಗೆ ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಆತಂಕ ಹೆಚ್ಚಿದೆ.

‘ಅಣ್ವಸ್ತ್ರ ಯುದ್ಧ ನಡೆಯವ ಸ್ಥಿತಿ ಇದೆ’ ಎಂದು ವಿಶ್ವಸಂಸ್ಥೆಯ ಮುಖ್ಯಸ್ಥ ಆಂಟೋನಿಯೊ ಗುಟೆರೆಸ್ ಇತ್ತೀಚೆಗೆ ಕಳವಳ ವ್ಯಕ್ತಪಡಿಸಿದ್ದರು.

‘ಮತ್ತೊಂದು ಸಾಮೂಹಿಕ ಸಮಾಧಿ ಪತ್ತೆ’

ಕೀವ್ (ಎಪಿ): ಮತ್ತೊಂದು ಸಾಮೂಹಿಕ ಸಮಾಧಿ ಮರಿಯುಪೊಲ್ ನಗರದ ವಿನೊಹ್ರದ್ನೆ ಗ್ರಾಮದ ಬಳಿ ಪತ್ತೆಯಾಗಿರುವುದಾಗಿ ಸಿಟಿ ಕೌನ್ಸಿಲ್ ಹೇಳಿದೆ.

45 ಮೀಟರ್ ಉದ್ದ ಮತ್ತು 25 ಮೀಟರ್ ಅಗಲದ ಈ ಸಮಾಧಿಯಲ್ಲಿ ಒಂದು ಸಾವಿರಕ್ಕೂ ಹೆಚ್ಚು ನಾಗರಿಕರ ಶವಗಳನ್ನು ಹೂಳಲಾಗಿದೆ ಎಂದು ಹೇಳಿರುವ ಸಿಟಿ ಕೌನ್ಸಿಲ್ ಅಧಿಕಾರಿಗಳು, ಪ್ಲಾನೆಟ್ ಲ್ಯಾಬ್ಸ್ ಬಿಡುಗಡೆ ಮಾಡಿರುವ ಉಪಗ್ರಹ ಚಿತ್ರವನ್ನು ಹಂಚಿಕೊಂಡಿದ್ದಾರೆ.

ರಷ್ಯಾ–ಉಕ್ರೇನ್‌ಗೆ ಗುಟೆರೆಸ್ ಭೇಟಿ

ವಿಶ್ವಸಂಸ್ಥೆ (ಪಿಟಿಐ): ಉಕ್ರೇನ್‌ನಲ್ಲಿ ಸಂಘರ್ಷ ಕೊನೆಗೊಳಿಸಿ, ಶಾಂತಿ ಸ್ಥಾಪಿಸುವ ಉದ್ದೇಶದಿಂದ ವಿಶ್ವಸಂಸ್ಥೆ ಮಹಾಪ್ರಧಾನ ಕಾರ್ಯದರ್ಶಿ ಅಂಟೊನಿಯೊ ಗುಟೆರೆಸ್ ಅವರು ಮುಂದಿನ ವಾರ ರಷ್ಯಾ ಹಾಗೂ ಉಕ್ರೇನ್‌ಗೆ ಭೇಟಿ ನೀಡಲಿದ್ದಾರೆ. ‘ಉಕ್ರೇನ್‌ನಲ್ಲಿ ಶಾಂತಿ ನೆಲಸಲು, ಜೀವಗಳನ್ನು ಉಳಿಸಲು, ಮಾನವ ಸಂಕಟ ಕೊನೆಗೊಳಿಸಲು ತುರ್ತು ಕ್ರಮಗಳ ಅಗತ್ಯವಿದೆ’ ಎಂದು ಗುಟೆರೆಸ್ ಶನಿವಾರ ಟ್ವೀಟ್ ಮಾಡಿದ್ದಾರೆ. ಇದೇ 26ರಂದು ಗುಟೆರೆಸ್ ಅವರು ಮಾಸ್ಕೊದಲ್ಲಿ ಪುಟಿನ್ ಮತ್ತು ಇದೇ 28ರಂದು ಉಕ್ರೇನ್‌ನಲ್ಲಿ ಝೆಲೆನ್‌ಸ್ಕಿ ಅವರನ್ನು ಭೇಟಿ ಮಾಡಿ ಚರ್ಚಿಸಲಿದ್ದಾರೆ.

‘ಗಡಿ ದಾಟಲೂ ಹಿಂಜರಿಯಲ್ಲ’

ಗುವಾಹಟಿ (ಪಿಟಿಐ): ಗಡಿಯಾಚೆಯಿಂದ ದೇಶವನ್ನು ಗುರಿಯಾಗಿಸುವ ಭಯೋತ್ಪಾದಕರ ವಿರುದ್ಧ ಕ್ರಮ ಕೈಗೊಳ್ಳಲು ಭಾರತ ಹಿಂಜರಿಯುವುದಿಲ್ಲ ಎಂದು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಶನಿವಾರ ತಿಳಿಸಿದರು.

ಭಾರತ– ಪಾಕಿಸ್ತಾನ ಯುದ್ಧದಲ್ಲಿ (1971) ಪಾಲ್ಗೊಂಡಿದ್ದ ಅಸ್ಸಾಂ ಮೂಲದ ಯೋಧರನ್ನು ಸನ್ಮಾನಿಸುವ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ದೇಶದಿಂದ ಭಯೋತ್ಪಾದನೆಯನ್ನು ತೊಡೆದು ಹಾಕುವ ನಿಟ್ಟಿನಲ್ಲಿ ಸರ್ಕಾರ ಕಾರ್ಯ ನಿರ್ವಹಿಸುತ್ತಿದೆ ಎಂದರು.

‘ಭಯೋತ್ಪಾದನೆಯನ್ನು ಸಮರ್ಥವಾಗಿ ಎದುರಿಸಲಾಗುವುದು ಎಂಬ ಸಂದೇಶವನ್ನು ನೀಡುವಲ್ಲಿ ಭಾರತ ಯಶಸ್ವಿಯಾಗಿದೆ. ಗಡಿಯಾಚೆಯಿಂದ ದೇಶವನ್ನು ಗುರಿಯಾಗಿಸಿಕೊಂಡರೆ, ನಾವು ಗಡಿ ದಾಟಲೂ ಹಿಂಜರಿಯುವುದಿಲ್ಲ’ ಎಂದು ಅವರು ಎಚ್ಚರಿಸಿದರು.

‘ಪಶ್ಚಿಮ ಗಡಿಗೆ ಹೋಲಿಸಿದರೆ ದೇಶದ ಪೂರ್ವ ಗಡಿ ಭಾಗ ಪ್ರಸ್ತುತ ಹೆಚ್ಚು ಶಾಂತಿ ಮತ್ತು ಸ್ಥಿರತೆಯನ್ನು ಅನುಭವಿಸುತ್ತಿದೆ. ಬಾಂಗ್ಲಾದೇಶವು ಸ್ನೇಹಪರ ನೆರೆಯ ರಾಷ್ಟ್ರವಾಗಿದೆ. ಹೀಗಾಗಿ ಇಲ್ಲಿ ಒಳನುಸುಳುವಿಕೆಯು ಬಹುತೇಕ ಅಂತ್ಯವಾಗಿದೆ’ ಎಂದು ಸಿಂಗ್ ತಿಳಿಸಿದರು.

ರಷ್ಯಾದಿಂದ ರಕ್ಷಣಾ ಸಾಮಗ್ರಿ ಖರೀದಿ; ಅಮೆರಿಕ ವಿರೋಧ

ವಾಷಿಂಗ್ಟನ್ (ಪಿಟಿಐ): ತನ್ನ ರಕ್ಷಣಾ ಅಗತ್ಯಗಳಿಗಾಗಿ ಭಾರತವು ರಷ್ಯಾ ಮೇಲೆ ಅವಲಂಬಿತವಾಗುವುದನ್ನು ಅಮೆರಿಕ ವಿರೋಧಿಸುತ್ತದೆ ಎಂದು ಪೆಂಟಗನ್ ಶುಕ್ರವಾರ ಹೇಳಿದೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅಮೆರಿಕದ ರಕ್ಷಣಾ ಇಲಾಖೆಯ (ಪೆಂಟಗನ್) ಪತ್ರಿಕಾ ಕಾರ್ಯದರ್ಶಿ ಜಾನ್ ಕಿರ್ಬಿ, ‘ಭಾರತ ಹಾಗೂ ಇತರ ದೇಶಗಳು ರಷ್ಯಾದಿಂದ ರಕ್ಷಣಾ ಸಾಮಗ್ರಿಗಳನ್ನು ಖರೀದಿಸಬಾರದು ಎಂಬುದು ನಮ್ಮ ಸ್ಪಷ್ಟ ನಿಲುವಾಗಿದೆ. ಈ ಕುರಿತು ನಮ್ಮಲ್ಲಿ ಯಾವುದೇ ಗೊಂದಲ ಇಲ್ಲ. ಈ ವಿಷಯದಲ್ಲಿ ಭಾರತದ ನಡೆಯನ್ನು ನಾವು ವಿರೋಧಿಸುತ್ತೇವೆ’ ಎಂದರು.

‘ರಕ್ಷಣಾ ವಿಷಯದಲ್ಲಿ ಭಾರತ ಮತ್ತು ಅಮೆರಿಕದ ಪಾಲುದಾರಿಕೆಯನ್ನು ನಾವು ಗೌರವಿಸುತ್ತೇವೆ. ಈ ಪಾಲುದಾರಿಕೆಯನ್ನು ಮತ್ತಷ್ಟು ಗಟ್ಟಿಗೊಳಿಸಲು ಇರುವ ಮಾರ್ಗಗಳನ್ನು ಹುಡುಕುತ್ತಿದ್ದು, ಈ ಪ್ರಕ್ರಿಯೆ ನಿರಂತರವಾಗಿರಲಿದೆ’ ಎಂದೂ ಅವರು ಹೇಳಿದರು.

ಅಮೆರಿಕದ ವಿರೋಧದ ನಡುವೆಯೂ ಭಾರತ 2018ರಲ್ಲಿ ಐದು ಅತ್ಯಾಧುನಿಕ ‘ಎಸ್–400 ಟ್ರಯಂಫ್’ ರಕ್ಷಣಾ ಕ್ಷಿಪಣಿ ವ್ಯವಸ್ಥೆಗಳ ಖರೀದಿಗೆ ಒಪ್ಪಂದ ಮಾಡಿಕೊಂಡಿತ್ತು. ಈ ಒಪ್ಪಂದದ ಹಿನ್ನೆಲೆಯಲ್ಲಿ ನಿರ್ಬಂಧ ಹೇರುವುದಾಗಿ ಭಾರತಕ್ಕೆ ಅಮೆರಿಕ ಎಚ್ಚರಿಕೆಯನ್ನೂ ನೀಡಿತ್ತು.

ಏಕರೂಪ ನಾಗರಿಕ ಸಂಹಿತೆ ಜಾರಿಗೆ ಚಿಂತನೆ

ಲಖನೌ (ಪಿಟಿಐ): ‘ರಾಜ್ಯದಲ್ಲಿ ಏಕರೂಪ ನಾಗರಿಕ ಸಂಹಿತೆಯನ್ನು (ಯುಸಿಸಿ) ಜಾರಿಗೊಳಿಸಲು ಉತ್ತರಪ್ರದೇಶ ಸರ್ಕಾರವು ಗಂಭೀರವಾಗಿ ಚಿಂತನೆ ನಡೆಸುತ್ತಿದೆ’ ಎಂದು ಅಲ್ಲಿನ ಉಪ ಮುಖ್ಯಮಂತ್ರಿ ಕೇಶವ ಪ್ರಸಾದ್ ಮೌರ್ಯ ಶನಿವಾರ ಹೇಳಿದ್ದಾರೆ.

‘ಒಂದು ದೇಶದಲ್ಲಿ ಎಲ್ಲರಿಗೂ ಒಂದೇ ರೀತಿಯ ಕಾನೂನು ಇಂದಿನ ಅಗತ್ಯವಾಗಿದೆ. ಒಬ್ಬ ವ್ಯಕ್ತಿಗೆ ಒಂದು ಮತ್ತು ಇತರರಿಗೆ ಇನ್ನೊಂದು ಕಾನೂನು ಎಂಬ ವ್ಯವಸ್ಥೆಯಿಂದ ನಾವು ಹೊರಬರಬೇಕು. ಹಾಗಾಗಿ, ಉತ್ತರಪ್ರದೇಶವು ಏಕರೂಪ ನಾಗರಿಕ ಸಂಹಿತೆಯ ಪರವಾಗಿದೆ’ ಎಂದು ಅವರು ಸುದ್ದಿಗಾರರಿಗೆ ತಿಳಿಸಿದ್ದಾರೆ.

‘ಉತ್ತರಾಖಂಡ ಸರ್ಕಾರವು ಕ್ರಮಗಳನ್ನು ಕೈಗೊಂಡಂತೆ, ಉತ್ತರಪ್ರದೇಶ ಮತ್ತು ಬಿಜೆಪಿ ಸರ್ಕಾರವಿರುವ ಇತರ ರಾಜ್ಯಗಳಲ್ಲಿಯೂ ಏಕರೂಪ ನಾಗರಿಕ ಸಂಹಿತೆ ಜಾರಿಯಾಗಬೇಕು. ಬಿಜೆಪಿಯೇತರ ಸರ್ಕಾರವಿರುವ ರಾಜ್ಯಗಳಲ್ಲೂ ಎಲ್ಲರನ್ನೂ ಒಳಗೊಳ್ಳುವ ಬೆಳವಣಿಗೆಗೆ ಯುಸಿಸಿಯ ಅನುಷ್ಠಾನವು ಅವಶ್ಯಕ. ಇದನ್ನು ಎಲ್ಲರೂ ಸ್ವಾಗತಿಸಬೇಕು’ ಎಂದೂ ಅವರು ಹೇಳಿದ್ದಾರೆ.

ಶೀಘ್ರವೇ ಕರಡು ಸಮಿತಿ ರಚನೆ: ಧಾಮಿ

ಡೆಹ್ರಾಡೂನ್ (ಪಿಟಿಐ): ‘ಏಕರೂಪ ನಾಗರಿಕ ಸಂಹಿತೆಯ (ಯುಸಿಸಿ) ಕರಡು ರಚಿಸಲು ಶೀಘ್ರದಲ್ಲಿಯೇ ಉನ್ನತಮಟ್ಟದ ಸಮಿತಿಯನ್ನು ರಚಿಸಲಾಗುವುದು’ ಎಂದು ಉತ್ತರಾಖಂಡದ ಮುಖ್ಯಮಂತ್ರಿ ಪುಷ್ಕರ್ ಸಿಂಗ್ ಧಾಮಿ ಶನಿವಾರ ಹೇಳಿದ್ದಾರೆ.

‘ಸಚಿವ ಸಂಪುಟದ ಮೊದಲ ಸಭೆಯಲ್ಲಿ ಯುಸಿಸಿಯನ್ನು ರೂಪಿಸಲು ಉನ್ನತ ಮಟ್ಟದ ತಜ್ಞರ ಸಮಿತಿಯನ್ನು ರಚಿಸುವ ಪ್ರಸ್ತಾವನೆಗೆ ಅನುಮೋದನೆ ನೀಡಿದೆ. ಉತ್ತರಾಖಂಡದಲ್ಲಿ ಯುಸಿಸಿ ಜಾರಿಗೆ ಬಂದ ನಂತರ, ಇತರ ರಾಜ್ಯಗಳು ಅದನ್ನು ಅನುಸರಿಸಬೇಕು’ ಎಂದೂ ಅವರು ತಿಳಿಸಿದ್ದಾರೆ.

ಕುಲ್ಗಾಂ ಎನ್‌ಕೌಂಟರ್: ಪಾಕ್ ಉಗ್ರ ಸೇರಿ ಇಬ್ಬರ ಹತ್ಯೆ

ಶ್ರೀನಗರ: ದಕ್ಷಿಣ ಕಾಶ್ಮೀರದ ಕುಲ್ಗಾಂ ಜಿಲ್ಲೆಯ ಮಿರ್ಹಾಮ ಪ್ರದೇಶದಲ್ಲಿ ಶನಿವಾರ ಭದ್ರತಾ ಪಡೆಗಳು ನಡೆಸಿದ ಎನ್‌ಕೌಂಟರ್‌ನಲ್ಲಿ ಪಾಕಿಸ್ತಾನದ ಜೈಶ್–ಮೊಹಮ್ಮದ್ (ಜೆಇಎಂ)ನ ಒಬ್ಬ ಸೇರಿ ಇಬ್ಬರು ಉಗ್ರರು ಹತರಾಗಿದ್ದಾರೆ.

‘ಭಾರತೀಯ ಸೇನೆ, ಜಮ್ಮು ಮತ್ತು ಕಾಶ್ಮೀರ ಪೊಲೀಸ್ ಹಾಗೂ ಕೇಂದ್ರೀಯ ಮೀಸಲು ಪೊಲೀಸ್ ಪಡೆ ಜಂಟಿ ಶೋಧ ಕಾರ್ಯಾಚರಣೆ ನಡೆಸುತ್ತಿದ್ದ ವೇಳೆ ಉಗ್ರರು ಗುಂಡಿನ ದಾಳಿ ನಡೆಸಿದ್ದು, ಭದ್ರತಾ ಪಡೆಗಳ ಪ್ರತಿದಾಳಿಗೆ ಇಬ್ಬರು ಉಗ್ರರು ಹತರಾಗಿದ್ದಾರೆ’.

‘ಹತ್ಯೆಯಾದವರಲ್ಲಿ ಒಬ್ಬ ಪಾಕಿಸ್ತಾನದ ಪ್ರಜೆಯಾಗಿದ್ದು, ಜೆಇಎಂ ಸಂಘಟನೆಗೆ ಸೇರಿದ್ದಾನೆ’ ಎಂದು ಕಾಶ್ಮೀರ ವಲಯ ಐಜಿಪಿ ವಿಜಯಕುಮಾರ್ ಟ್ವೀಟ್ ಮಾಡಿದ್ದಾರೆ.

‘ಬುಲ್ಡೋಜರ್ ಬಳಸಿ ಸರ್ಕಾರಿ ಜಾಗ ವಶ’

ಕನೌಜ್ (ಪಿಟಿಐ): ಇಲ್ಲಿನ ಸ್ಥಳೀಯ ಸಮಾಜವಾದಿ ಪಕ್ಷದ ಮುಖಂಡ ರಜನಿಕಾಂತ್ ಯಾದವ್ ಅಕ್ರಮವಾಗಿ ವಶಕ್ಕೆ ಪಡೆದಿದ್ದ ₹24 ಲಕ್ಷ ಮೌಲ್ಯದ 4800 ಚದರ ಮೀಟರ್ ಸರ್ಕಾರಿ ಜಾಗವನ್ನು ಉತ್ತರ ಪ್ರದೇಶದ ಸರ್ಕಾರ ಬುಲ್ಡೋಜರ್ ಬಳಸಿ ಸ್ವಾಧೀನಕ್ಕೆ ಪಡೆದಿದೆ.

ಅಕ್ರಮ ಕಟ್ಟಡವನ್ನು ಜಿಲ್ಲಾಡಳಿತ ನೆಲಸಮಗೊಳಿಸಿದ ಒಂದು ವಾರದ ಬೆನ್ನಲ್ಲೇ, ಉತ್ತರ ಪ್ರದೇಶ ಸರ್ಕಾರ ಈ ಕ್ರಮ ಕೈಗೊಂಡಿದೆ.

ಮೊದಲನೇ ವರ್ಷದ ಸವಿನೆನಪು



ಜಿ. ತಿಮ್ಮ ನಾಯ್ಕ
(ನಿವೃತ್ತ ಅರಣ್ಯ ಇಲಾಖೆ, ಬೀರನಹಳ್ಳಿ, ಕಡೂರು)
ಜನನ: 08-08-1936 – ಮರಣ: 24-04-2021
ನೀವು ನಮ್ಮನ್ನಗಲಿ ಇಂದಿಗೆ 1 ವರ್ಷವಾದರೂ ನಿಮ್ಮ ನೆನಪು ಮತ್ತು ಮಾರ್ಗದರ್ಶನ ನಮಗೆ ದಿವ್ಯ ಚೇತನ.
ಇಂತಿ ಸ್ಮರಿಸುವ:
ಧರ್ಮಪತ್ನಿ ಶ್ರೀಮತಿ ಸುಶೀಲ ಟಿ. ನಾಯ್ಕ, ಮಕ್ಕಳು, ಅಳಿಯಂದಿರು ಮತ್ತು ಮೊಮ್ಮಕ್ಕಳು.

ಪ್ರಜಾವಾಣಿ ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Graphic Designers

BANGALORE ONE Magazine:Wanted DTP Operator/Graphic Designer: experience in Coreldraw, Photoshop, Indesign (Kannada-English Typing must): 8088602616 : bangaloreonenews@gmail.com

General

TVS ಬ್ರಿಟಾನಿಯಾ ವಿಡಿಯೋಕಾನ್ ಗಳಿಗೆ 7th,SSLC,PUC, ಡಿಗ್ರಿಯವರು ITI ನವರುಗಳು ಕರ್ನಾಟಕದ ಎಲ್ಲಾ ಜಿಲ್ಲೆಗಳಿಗೆ ನೇರನೇಮಕಾತಿಯಿರುತ್ತದೆ. ESI, PF ನೊಂದಿಗೆ 16,600-60,000/- ವಸತಿಯೂಟವಿರುತ್ತದೆ. ಸಂಪರ್ಕಿಸಿ: 7760014526, 9739544856

ಕೆಲಸಕ್ಕೆ ಬೇಕಾಗಿದ್ದಾರೆ:ನಿವೃತ್ತ ರಾಜ್ಯ ಮತ್ತು ಕೇಂದ್ರ ಸರ್ಕಾರಿ ನೌಕರರು ಹಾಗೂ ಗೃಹಿಣಿಯರು,25 ವರ್ಷ ಮೇಲ್ಪಟ್ಟವರು, SSLC ಹಾಗೂ DEGREE ಪಾಸಾದವರು ಬೇಕಾಗಿದ್ದಾರೆ, ಸಂಬಳ, E.S.I., P.F.ಸೌಲಭ್ಯವಿದೆ. ಮಧ್ಯವರ್ತಿಗಳಿಗೆ ಅವಕಾಶವಿಲ್ಲ. ಸಂಪರ್ಕಿಸಿರಿ:9663987757.

ಬೆಂಗಳೂರು ನಗರದಲ್ಲಿರುವ : BSNL, BANK EMPLOYEES & OTHERS WELFARE SOCIETY(R). ಸಂಸ್ಥೆಗೆ Marketing Executives, Telecallers, Receptionist ಅಭ್ಯರ್ಥಿಗಳು ಬೇಕಾಗಿದ್ದಾರೆ. ವಯಸ್ಸು:20ರಿಂದ 30ವರ್ಷ, ಸಂಬಳ: 15ರಿಂದ 20ಸಾವಿರದವರೆಗೆ +Incentives. ಕೂಡಲೇ ಸಂಪರ್ಕಿಸಿ:8884072500

CMG, URGENTLY Required Boys/ Girls, 10th, 2nd PUC (Pass/ Fail) Any Degree (Room/ Food Available) 7338404970/ 9916331164

Marketing & Sales

WANTED SALES Representative for surgical industry .Must travel across the state. Email: info.albat@gmail.com . Ph: +91-9560096877 / 9448992997

FRESHERS, DIPLOMA Graduates, Sales & Service for Construction Equipments Salary + Incentives Two Wheeler compulsory contact 9900134592 info@techlitecorp.co.in

Accounts & Finance

ಎಂಎನ್‌ಸಿಗೆ ಅಕೌಂಟೆಂಟ್ ರಿಸೆಪ್ಷನಿಸ್ಟ್ ಆಫೀಸ್/ ಅಕೌಂಟ್ಸ್ ಅಸಿಸ್ಟೆಂಟ್ಸ್ ಕಂಪ್ಯೂಟರ್ ಆಪರೇಟರ್ಸ್ ಕ್ಲಾರ್ಕ್ಸ್ ಟೆಲಿಕಾಲರ್ಸ್ ಪರ್‌ಛೇಸ್/ ಸ್ಟೋರ್‌ಕೀಪರ್ಸ್. ರಮ್ಯ 7204367465/ 8050107101

Part-Time Jobs

ಕನ್ನಡ ಮತ್ತು ಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ, ಗೃಹಿಣಿಯರಿಗೆ,ಮನೆಯಲ್ಲೆ ಕುಳಿತು,ಬುಕ್ ಬರೆಯುವ ಮೂಲಕ ತಿಂಗಳಿಗೆ 14,000-16,000/-ರ ವರೆಗೆ ಸಂಪಾದಿಸಿ.(ಕೊರಿಯರ್ ಇದೆ).8884686861, 8884686860.

Teachers/ Professors

VACANCY for HM position in Jnanasiri English School Hosakere,Madhugiri Taluk Contact- 7829334875

Wanted

ಕರ್ನಾಟಕದಾದ್ಯಂತ ಹೆಸರಾಂತ ಕಂಪನಿ, ಆಫೀಸ್ ಕೆಲಸಕ್ಕೆ ಯುವಕ/ ಯುವತಿಯರು ಬೇಕಾಗಿದ್ದಾರೆ. ವಸತಿಯೂಟದೊಂದಿಗೆ Salary+ OT. 17800-68000. 9538811223, 9538811104

ರಿಯಲ್ ಎಸ್ಟೇಟ್ ಸೆಲ್ಲಿಂಗ್

Flat

Anekal

ಇಂಡ್ಯಾ ದಿ ಗ್ರೀನ್ಸ್, ಅತ್ತಿಬೆಲೆ ಆನೇಕಲ್ ರೋಡ್‌ನಲ್ಲಿ 3 ರೂಂ ವುಳ್ಳ ಅನ್‌ಫರ್ನಿಶ್ಡ್ ಅಪಾರ್ಟಮೆಂಟ್ ದೊರೆಯುತ್ತದೆ. ಮೊದಲನೇ ಮಹಡಿ ಬಿಲ್ಡ್‌ಅಪ್ ಏರಿಯಾ 1118 sqft. 2 ಬಾತ್ ರೂಂ, 1 ಬಾಲ್ಕನಿ, 1 ಒಪನ್ ಪಾರ್ಕಿಂಗ್ ಇದೆ. 9377277272 bhagadia.sagar@gmail.com

Yelahanka

ONE BHK for Sale 15/1 B,S MIG flat fifth phase New Town yelahanka. Contact -9632540801.

Sites

Mysore

CORNER SITE east 300 Sqft Muda First Allottee. posh location Vijayanagar-II Stage Suitable for Shops and PGs. 23 lakhs Contact Raghavendra 9606866368

ರೆಂಟಲ್ ಪ್ರಾಪರ್ಟೀಸ್

Accommodation Available

Commercial

SPACE AVAILABLE for rent suitable for bar & restaurant @ Kammanahalli - ORR.Also available for sale utensils & accessories suitable for bar & restaurant. Contact : 8722971275

ಬಿಲ್ಡರ್ ಎಸೆನ್ಷಿಯಲ್

Water Proofing

ಲೀಕೇಜ್.. ಲೀಕೇಜ್.. ನಿಮ್ಮಮನೆ, ಕಛೇರಿಯ ಮೇಲ್ಛಾವಣಿ, ಸಂಪ್‌ಟ್ಯಾಂಕ್, ಬಾತ್‌ರೂಂ ಹಾಗೂ ಗೋಡೆಯ ಬಿರುಕುಗಳನ್ನು ನೂತನ ತಂತ್ರಜ್ಞಾನದಿಂದ ಸ್ಥಗಿತಗೊಳಿಸಲಾಗುವುದು. ಸಂಪರ್ಕಿಸಿ: 9880916988

ಭವಿಷ್ಯ

Astrology

ಒಂದೇ ಕರೆಯಲ್ಲಿ ಶಾಶ್ವತ ಪರಿಹಾರ ಸ್ತ್ರೀಪುರುಷ ವಶೀಕರಣ ಸ್ಪೆಷಲಿಸ್ಟ್ 100%ಗ್ಯಾರಂಟಿ ಪರಿಹಾರ ಪಂಡಿತ್.ಕೃಷ್ಣಪ್ರಸಾದ್. ಉಚಿತ ಭವಿಷ್ಯ ಖಚಿತ ಪರಿಹಾರ, ದಕ್ಷಿಣಕನ್ನಡ ಮಾಂತ್ರಿಕರು, ಶ್ರೀಕ್ಷೇತ್ರಧರ್ಮಸ್ಥಳ: 7022443071

★ದೈವಜ್ಞ ಶ್ರೀದೇವಾನಂದನ್★ ರವರಿಂದ ಸರ್ವತೋಮುಖ ಅಭಿವೃದ್ಧಿ ಸುಖಶಾಂತಿ ಮಹಾವಶೀಕರಣ ಆಕರ್ಷಣ ಮತ್ತು ಶತ್ರು ಕೃತವ್ಯಾಧಿಗಳ ಪರಿಹಾರಕ್ಕೆ ಇಂದೇ ಸಂಪರ್ಕಿಸಿ: 9845005009

ನಂ.1 ವಶೀಕರಣ ಸ್ಪೆಷಲಿಸ್ಟ್ ತಾಂತ್ರಿಕ್: ಸ್ತ್ರೀಪುರುಷ ವಶೀಕರಣ, ಪ್ರೀತಿಯಲ್ಲಿ ನಂಬಿಮೋಸ, ಗಂಡಹೆಂಡತಿ ಕಲಹ, ನಾಗಸಾಧುಗಳಿಂದ ವಶೀಕರಣ 3ದಿನಗಳಲ್ಲಿ ಪರಿಹಾರ 6360611244

ವೈವಾಹಿಕ

Brides Wanted

Kannada

46 YEAR old CA/ MBA Gowda boy working in a Prominent Designation in a reputed MNC is seeking an alliance for marriage.Caste/ Marital Status No Bar. (080-69103054)

WE, LINGAYATH Family,searching for a bride for our 1967 born son,B.Com +MBA/working as a Class 1 Officer for State Govt. Father- Retd.Central Govt.Employee (080-69103054)

WE ARE looking for a bride for our 31 year old B.E only son working Abroad as a Data Scientist.Father- Retired Engineer/ Mother- Finance Professional (080-69103046)

WANTED BRIDE for 1991 born balija boy, BE(NHC, Bangalore)/ MS Computer Science (IIT, Chicago) working as a Senior Software Professional in USA / 60 LPA. (080-69144008)

Second Marriage

ವಧು ಬೇಕಾಗಿದೆ. ಸರ್ಕಾರಿ ನೌಕರಿಯಲ್ಲಿರುವ 45 ವರ್ಷದ ವಿಚ್ಛೇದಿತನಿಗೆ ಯಾವುದೇ ಜಾತಿಯ ವಧು ಬೇಕಾಗಿದೆ. ವಿಧವೆಯರು ಸಂಪರ್ಕಿಸಬಹುದು. ಮೊ. 9035557109.

Telugu

55/5.5 WHITE, energetic, Industrialist- Vja- Well Settled ; for only Rich, SLOW & SOFT EDU-9246411595.

Grooms Wanted

Kannada

ALLIANCE INVITED for re-marraige of our 1983 born Vishwakarma Daughter BE, Electronics working in an MNC,Father Class 1 Officer (080-69103046)

ALLIANCE REQUIRED for early re-marriage of 1992 born Lingayath girl MBBS/ MS in Opthalmology/ Doctor. (080-69144008)

ಪ್ರವಾಸ

Travel

ಪಶುಪತಿ, ಸ್ವಯಂಭೂ, ಮನಕಾಮನ, ಚಂದ್ರಗಿರಿ, ಗುಪ್ತೇಶ್ವರ, ಮುಕ್ತಿನಾಥ್, ಚಿತ್ವಾನ್ ಇತ್ಯಾದಿ ನೇಪಾಳದ ಯಾವುದೇ ಸ್ಥಳಗಳಿಗೂ ಪ್ರವಾಸ ಏರ್ಪಡಿಸುವ ಏಕೈಕ ಸಂಸ್ಥೆ ನಾಲಂದಾ ಟ್ರಾವೆಲ್ಸ್ ಕುಂದಾಪುರ. ಸಂಪರ್ಕಿಸಿ: 8310028157.

03.05.2022 6ದಿನಗಳು ದಕ್ಷಿಣಕನ್ನಡ ಪ್ರವಾಸ. 10.05.2022, 4 ದಿನಗಳು ಗೋವಾ ದೂದ್‌ಸಾಗರ್ ಪ್ರವಾಸ. 11.05.2022, 4 ದಿನಗಳು ಮಂತ್ರಾಲಯ,ಶ್ರೀಶೈಲ ಪ್ರವಾಸ 10.5.2022 7 ದಿನಗಳು ಕೇರಳ ಪ್ರವಾಸ. 11.05.2022, 5 ದಿನಗಳು ತಮಿಳುನಾಡು ಪ್ರವಾಸ.12.05.2022 3 ದಿನಗಳು ಚಿಕ್ಕಮಂಗಳೂರು ಪ್ರವಾಸ 04.05,2022 6 ದಿನಗಳು ಕಾಶಿಯಾತ್ರೆ. 05.07.2022 12.07.2022 19.07.2022 6 ದಿನಗಳು ಅಮರನಾಥಯಾತ್ರೆ ಶ್ರೀಮಲ್ಲಿಕಾರ್ಜುನ ಟ್ರಾವೆಲ್ಸ್ ಬೆಂಗಳೂರು-40. 9880847001 9342848791

★ಜುಲೈ 13ರಿಂದ 12 ದಿನಗಳ* ಅಮರನಾಥ, ಜಮ್ಮು, ಶ್ರೀನಗರ, ವೈಷ್ಣೋದೇವಿ, ಅಮೃತಸರ್, ಕುರುಕ್ಷೇತ್ರ, ಸಂಪರ್ಕಿಸಿ: ಶ್ರೀಗಂಗಾ ಟೂರಿಸ್ಟ್. ಬೆಂಗಳೂರು. 9480253807


CONNECT

ಪುರಾತನ ಶ್ರೀ ಮುನೇಶ್ವರಸ್ವಾಮಿ ದೇವಸ್ಥಾನದ ಜಾತ್ರೆ ಮಹೋತ್ಸವ

ಬೆಂಗಳೂರು ಪೂರ್ವ ತಾಲ್ಲೂಕು, ಬಿದರಹಳ್ಳಿ ಹೋಬಳಿ, ಆವಲಹಳ್ಳಿ ಗ್ರಾಮ.



ಶ್ರೀ ಮುನೇಶ್ವರಸ್ವಾಮಿ



ಶ್ರೀ ಮುನೇಶ್ವರಸ್ವಾಮಿ ರಥೋತ್ಸವ 27.04.2022ನೇ ಬುಧವಾರ ಮಧ್ಯಾಹ್ನ 02.00 ಗಂಟೆಗೆ

ದಿನಾಂಕ : 25.04.2022ನೇ ಸೋಮವಾರದಿಂದ 28.04.2022ನೇ ಗುರುವಾರದ ವರೆಗೆ

ಸರ್ವರಿಗೂ ಆದರದ ಸ್ವಾಗತ

ನೀವು ಅಂಗವೈಕಲ್ಯ ಹೊಂದಿರುವ ಮತ್ತು ಉದ್ಯೋಗವನ್ನು ಹುಡುಕುತ್ತಿರುವ ವ್ಯಕ್ತಿಯೇ?
ಡಾ. ರೆಡ್ಡಿ ಫೌಂಡೇಶನ್ ಅವರ ಪ್ರತಿಷ್ಠಾನದೊಂದಿಗೆ ಅವಕಾಶವನ್ನು ಕಂಡುಕೊಳ್ಳಿ.
ಕೆಳಗಿನ ಕೌಶಲ್ಯಗಳ ಬಗ್ಗೆ ತರಬೇತಿ ನೀಡಲಾಗುವುದು:
ಆಂಗ್ಲ ಭಾಷೆ, ವಾಕ್ ಸಾಮರ್ಥ್ಯ, ಕಂಪ್ಯೂಟರ್ ಕಾರ್ಯಾಚರಣೆಗಳು, ಆಪ್ಟಿಟ್ಯೂಡ್, ವ್ಯಕ್ತಿತ್ವ ಅಭಿವೃದ್ಧಿಸಂದರ್ಶನ ಕೌಶಲ್ಯಗಳು.
ತರಬೇತಿ 2 ರಿಂದ 3 ತಿಂಗಳುಗಳು, ಉತ್ತಮ ಕೌಶಲ್ಯಗಳು, ಉದ್ಯೋಗಾವಕಾಶಗಳಲ್ಲಿ ಸಂಸ್ಥೆಯ ನೆರವು.
ದಯವಿಟ್ಟು ನಮ್ಮ ಹತ್ತಿರದ GROW ಕೇಂದ್ರಕ್ಕೆ ಭೇಟಿ ನೀಡಿ ಮತ್ತು ಬ್ಯಾಚ್ ಶೀಘ್ರದಲ್ಲೇ ಪ್ರಾರಂಭವಾಗುತ್ತದೆ .
ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ :
+91 8688817679 / 6366485786 / 9353978054

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹375
12 ಮೊಟ್ಟೆಗೆ	₹54
ಮೈಸೂರು	
100 ಮೊಟ್ಟೆಗೆ	₹375

ಖಾದ್ಯ ತೈಲ ಮುಂಬೈ (10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1640 (---)
ಸೋಯಾ (ರಿಫೈನ್ಡ್)	₹1600 (---)
ಸೂರ್ಯಕಾಂತಿ (ರಿಫೈನ್ಡ್)	₹1870 (---)
ಪಾಮೋಲಿನ್	₹1525 (---)

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)



ಆರ್‌ಎಸ್‌ಎಸ್-4	₹168
ಆರ್‌ಎಸ್‌ಎಸ್-5	₹162.50
ಗುಡ್ ಲಾಟ್	₹158.50

ಚಿನ್ನ, ಬೆಳ್ಳಿ ಬೆಂಗಳೂರು

ಸ್ಟ್ಯಾಂಡರ್ಡ್ ಚಿನ್ನ (10ಗ್ರಾಂ)	₹54140
ಆಭರಣ ಚಿನ್ನ (1 ಗ್ರಾಂ)	₹5050
ಬೆಳ್ಳಿ (ಕೆ.ಜಿಗೆ)	₹68600

ಶೇ 1.1ರವರೆಗೆ ಬೆಲೆ ಹೆಚ್ಚಳ: ಟಾಟಾ ಮೋಟರ್ಸ್

ಮುಂಬೈ (ಪಿಟಿಐ): ಟಾಟಾ ಮೋಟರ್ಸ್ ಕಂಪನಿಯು ಶನಿವಾರದಿಂದಲೇ ಜಾರಿಗೆ ಬರುವಂತೆ ಪ್ರಯಾಣಿಕ ವಾಹನಗಳ ಬೆಲೆಯನ್ನು ಶೇ 1.1ರವರೆಗೆ ಹೆಚ್ಚಿಸಿದೆ.

ತಯಾರಿಕಾ ವೆಚ್ಚ ಹೆಚ್ಚಾಗುತ್ತಿದ್ದು, ಅದನ್ನು ಭಾಗಶಃ ಸರಿದೂಗಿಸುವ ಸಲುವಾಗಿ ಬೆಲೆ ಏರಿಕೆಯ ನಿರ್ಧಾರಕ್ಕೆ ಬರಲಾಗಿದೆ ಎಂದು ಕಂಪನಿಯು ಪ್ರಕಟಣೆಯಲ್ಲಿ ತಿಳಿಸಿದೆ.

ಎಲ್‌ಐಸಿ ಐಪಿಒ: ಶೇ 3.5ರಷ್ಟು ಷೇರು ಮಾರಾಟ ಸಾಧ್ಯತೆ



ನವದೆಹಲಿ: ಕೇಂದ್ರ ಸರ್ಕಾರವು ಐಪಿಒ ಮೂಲಕ ಭಾರತೀಯ ಜೀವ ವಿಮಾ ನಿಗಮದ (ಎಲ್‌ಐಸಿ) ಶೇ 3.5ರಷ್ಟು ಷೇರುಗಳನ್ನು ಮಾರಾಟ ಮಾಡುವ ಸಾಧ್ಯತೆ ಇದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಐಪಿಒ ಗಾತ್ರವು ₹ 21 ಸಾವಿರ ಕೋಟಿಗಳಷ್ಟು ಇರುವ ಅಂದಾಜು ಮಾಡಲಾಗಿದೆ. ಕಂಪನಿಯು ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿಗೆ (ಸೆಬಿ) ಬುಧವಾರ ಅಂತಿಮ ಕರಡು ಪತ್ರ ಸಲ್ಲಿಸುವ ಸಾಧ್ಯತೆ ಇದ್ದು, ಮೇ ತಿಂಗಳ ಮೊದಲ ವಾರದಲ್ಲಿ ಮಾರುಕಟ್ಟೆ ಪ್ರವೇಶಿಸುವ ನಿರೀಕ್ಷೆ ಇದೆ ಎಂದು ಹೇಳಿದ್ದಾರೆ.

ಮುಂಬೈ ಧಾರಣೆ

ಶೇಂಗಾ

23-4-2022

ಜಾವಾ 70/80(ಹೊಸ)	10450-10500
ಜಾವಾ 80/90(ಹೊಸ)	9950-10000
ದಪ್ಪ ಮಧ್ಯಪ್ರದೇಶ(ಹೊಸ)	10950-11000
ದಪ್ಪ ಗುಜರಾತ್(ಹೊಸ)	9950-10000

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1650 (---)
ಒಂದು ವಾರದ ಡೆಲಿವರಿ	1645 (---)
ಸೋಯಾ ಕಚ್ಚಾ	1580 (---)
ಪಾಮ್ ವಾರದ ಡೆಲಿವರಿ	1523 (---)
ಸೂರ್ಯಕಾಂತಿ ಎಣ್ಣೆ ಕಚ್ಚಾ	1850 (---)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
52,300 (---)
ಬೆಳ್ಳಿ ಕೆ.ಜಿ 66,500 (---)

ತಾಳೆ ಎಣ್ಣೆ ರಫ್ತು ನಿಷೇಧ ಇಂಡೊನೇಷ್ಯಾ ನಿರ್ಧಾರ

ಇದೇ 27ರಿಂದ ಜಾರಿಗೆ: ಅಧ್ಯಕ್ಷ ಜೋಕೊ ವಿಡೊಡೊ

ಜಕಾರ್ತ (ರಾಯಿಟರ್ಸ್): ಇಂಡೊನೇಷ್ಯಾದಲ್ಲಿ ತಾಳೆ ಎಣ್ಣೆ ಬೆಲೆ ಏರಿಕೆಯನ್ನು ನಿಯಂತ್ರಿಸಲು ತಾಳೆ ಎಣ್ಣೆ ಮತ್ತು ಕಚ್ಚಾ ತಾಳೆ ಎಣ್ಣೆ ರಫ್ತು ಮಾಡುವುದನ್ನು ಏಪ್ರಿಲ್ 28ರಿಂದ ಜಾರಿಗೆ ಬರುವಂತೆ ನಿಷೇಧಿಸಲಾಗಿದೆ.

‘ಈ ನೀತಿಯ ಅನುಷ್ಠಾನವನ್ನು ನಾನು ಮೇಲ್ವಿಚಾರಣೆ ಮಾಡುತ್ತೇನೆ ಮತ್ತು ಮೌಲ್ಯಮಾಪನ ಮಾಡುತ್ತೇನೆ. ಹೀಗೆ ಮಾಡುವುದರಿಂದ ದೇಶಿ ಮಾರುಕಟ್ಟೆಯಲ್ಲಿ ಅಡುಗೆ ಎಣ್ಣೆಯ ಲಭ್ಯತೆ ಹೆಚ್ಚಾಗುವ ಜೊತೆಗೆ ಕೈಗೆಟುಕುವಂತಾಗುತ್ತದೆ’ ಎಂದು ಇಂಡೊನೇಷ್ಯಾ ಅಧ್ಯಕ್ಷ ಜೋಕೊ ವಿಡೊಡೊ ತಿಳಿಸಿದ್ದಾರೆ.

ಇಂಡೊನೇಷ್ಯಾದ ರಫ್ತು ನಿರ್ಧಾರದಿಂದ ಅಮೆರಿಕದ ಸೋಯಾ ಎಣ್ಣೆಯ ದರವು ಶೇ 3ರಷ್ಟು ಹೆಚ್ಚಾಗಿ ಪ್ರತಿ ಪೌಂಡ್‌ಗೆ ದಾಖಲೆಯ 84.03 ಸೆಂಟ್ಸ್‌ಗೆ ತಲುಪಿದೆ.

ಇಂಡೊನೇಷ್ಯಾದಲ್ಲಿ ಅಡುಗೆ ಎಣ್ಣೆಯ ಸರಾಸರಿ ರಿಟೇಲ್ ದರವು ಲೀಟರಿಗೆ ₹ 139.84ಕ್ಕೆ ತಲುಪಿದೆ. ಈ ವರ್ಷದಲ್ಲಿ ಈವರೆಗೆ ಬೆಲೆಯು ಶೇ 40ರಷ್ಟು ಹೆಚ್ಚಾಗಿದೆ. ಕಳೆದೊಂದು ತಿಂಗಳಿನಲ್ಲಿ ಕೆಲವು ಪ್ರದೇಶಗಳಲ್ಲಿ ಬೆಲೆಯು ಎರಡು ಪಟ್ಟು ಏರಿಕೆ ಆಗಿದೆ.

ರಷ್ಯಾ-ಉಕ್ರೇನ್ ಸಂಘರ್ಷದಿಂದಾಗಿ ಜಾಗತಿಕ ಅಡುಗೆ ಎಣ್ಣೆ ಮಾರುಕಟ್ಟೆಯು ಹೆಚ್ಚು ಸಮಸ್ಯೆಗೆ ಸಿಲುಕಿದೆ. ಈ ಎರಡೂ ದೇಶಗಳಿಂದ ಸೂರ್ಯಕಾಂತಿ ಎಣ್ಣೆ ಪೂರೈಕೆ ನಿಂತಿದೆ.

‘ಭಾರತದ ಮೇಲೂ ಪರಿಣಾಮ’



ರಫ್ತು ನಿಷೇಧ ಕ್ರಮವು ದುರದೃಷ್ಟಕರವಾಗಿದ್ದು, ಸಂಪೂರ್ಣವಾಗಿ ಅನಿರೀಕ್ಷಿತವಾಗಿದೆ ಎಂದು ಸಾಲ್ವೆಂಟ್ ಎಕ್ಸ್‌ಟ್ರ್ಯಾಕ್ಟರ್ಸ್ ಅಸೋಸಿಯೇಷನ್ ಆಫ್ ಇಂಡಿಯಾದ (ಎಸ್‌ಇಎ) ಅಧ್ಯಕ್ಷ ಅತುಲ್ ಚತುರ್ವೇದಿ ಪ್ರತಿಕ್ರಿಯೆ ನೀಡಿದ್ದಾರೆ.

ಅತಿ ಹೆಚ್ಚಿನ ಪ್ರಮಾಣದಲ್ಲಿ ಖರೀದಿ ಮಾಡುವ ಭಾರತಕ್ಕೆ ಅಷ್ಟೇ ಅಲ್ಲದೆ, ಜಾಗತಿಕವಾಗಿಯೂ ಬಳಕೆದಾರರ ಮೇಲೆ ತೀವ್ರ ಪರಿಣಾಮ ಉಂಟುಮಾಡಲಿದೆ ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ.

ಭಾರತವು ವಾರ್ಷಿಕವಾಗಿ 85 ಲಕ್ಷ ಟನ್‌ಗಳಷ್ಟು ತಾಳೆ ಎಣ್ಣೆ ಆಮದು ಮಾಡಿಕೊಳ್ಳುತ್ತಿದ್ದು ಇದರಲ್ಲಿ ಅರ್ಧದಷ್ಟನ್ನು ಇಂಡೊನೇಷ್ಯಾದಿಂದ ತರಿಸಿಕೊಳ್ಳುತ್ತಿದೆ.

ಫ್ಯೂಚರ್ ಜತೆಗಿನ ಒಪ್ಪಂದ ಕೈಬಿಟ್ಟ ರಿಲಯನ್ಸ್ ಇಂಡಸ್ಟ್ರೀಸ್

ನವದೆಹಲಿ (ಪಿಟಿಐ): ಫ್ಯೂಚರ್ ಸಮೂಹದೊಂದಿಗೆ ಮಾಡಿಕೊಂಡಿರುವ ₹24,713 ಕೋಟಿ ಮೌಲ್ಯದ ಒಪ್ಪಂದವನ್ನು ಮುಂದುವರಿಸಲು ಸಾಧ್ಯವಿಲ್ಲ ಎಂದು ರಿಲಯನ್ಸ್ ಇಂಡಸ್ಟ್ರೀಸ್ ಶನಿವಾರ ಹೇಳಿದೆ.

ಫ್ಯೂಚರ್ ರಿಟೇಲ್ ಲಿಮಿಟೆಡ್‌ಗೆ ಅಡಮಾನ ಸಾಲ ನೀಡಿರುವವರಲ್ಲಿ ಬಹುತೇಕರು ರಿಲಯನ್ಸ್ ರಿಟೇಲ್ ಜೊತೆ ಕಂಪನಿಯು ಮಾಡಿಕೊಂಡಿರುವ ಒಪ್ಪಂದಕ್ಕೆ ವಿರೋಧ ವ್ಯಕ್ತಪಡಿಸಿದ್ದಾರೆ. ಹೀಗಾಗಿ ಈ ನಿರ್ಧಾರಕ್ಕೆ ಬರಲಾಗಿದೆ ಎಂದು ರಿಲಯನ್ಸ್ ಕಂಪನಿಯು ಷೇರುಪೇಟೆಗೆ ಮಾಹಿತಿ ನೀಡಿದೆ.

ಫ್ಯೂಚರ್ ರಿಟೇಲ್‌ನ ಷೇರುದಾರರು ಹಾಗೂ ಅಡಮಾನ ಇಲ್ಲದೆ ಸಾಲ ನೀಡಿದವರ ಪೈಕಿ ಶೇಕಡ 75ಕ್ಕಿಂತ ಹೆಚ್ಚಿನವರು ಈ ಒಪ್ಪಂದಕ್ಕೆ ಅನುಮೋದನೆ ನೀಡಿದ್ದಾರೆ. ಅಡಮಾನ ಸಾಲ ನೀಡಿರುವ ಶೇ 75ಕ್ಕಿಂತ ಹೆಚ್ಚಿನವರ ಒಪ್ಪಿಗೆ ಪಡೆಯಲು ಫ್ಯೂಚರ್ ರಿಟೇಲ್‌ಗೆ ಸಾಧ್ಯವಾಗಿಲ್ಲ.



ಅಡಮಾನ ಸಾಲ ಕೊಟ್ಟವರ ಪೈಕಿ ಶೇ 69.29ರಷ್ಟು ಜನ ಒಪ್ಪಂದವನ್ನು ತಿರಸ್ಕರಿಸಿದ್ದಾರೆ. ಶೇ 30.71ರಷ್ಟು ಜನ ಒಪ್ಪಿದ್ದಾರೆ ಎಂದು ಫ್ಯೂಚರ್ ರಿಟೇಲ್ ಲಿಮಿಟೆಡ್ ಷೇರುಪೇಟೆಗೆ ಮಾಹಿತಿ ನೀಡಿದೆ.

ರಿಲಯನ್ಸ್ ಜೊತೆಗಿನ ಒಪ್ಪಂದಕ್ಕೆ ಫ್ಯೂಚರ್ ಸಮೂಹದ ಅಂಗಸಂಸ್ಥೆಯಾಗಿರುವ ಫ್ಯೂಚರ್ ಲೈಫ್‌ಸ್ಟೈಲ್ ಫ್ಯಾಷನ್ ಲಿಮಿಟೆಡ್‌ಗೆ ಕೂಡ ಅಡಮಾನ ಸಾಲ ನೀಡಿದ ಬಹುತೇಕರಿಂದ ಒಪ್ಪಿಗೆ ಪಡೆಯಲು ಸಾಧ್ಯವಾಗಿಲ್ಲ.

ಫ್ಯೂಚರ್ ಸಮೂಹವು ತನ್ನ ರಿಟೇಲ್, ಸಗಟು, ಸರಕು ಸಾಗಣೆ ವಲಯಗಳಲ್ಲಿನ ಒಟ್ಟು 19 ಕಂಪನಿಗಳನ್ನು ರಿಲಯನ್ಸ್ ರಿಟೇಲ್ ವೆಂಚರ್ಸ್ ಲಿಮಿಟೆಡ್‌ಗೆ ಮಾರಾಟ ಮಾಡುವ ಘೋಷಣೆಯನ್ನು 2020ರ ಆಗಸ್ಟ್‌ನಲ್ಲಿ ಮಾಡಿತು. ಆದರೆ ಇದಕ್ಕೆ ಅಮೆಜಾನ್ ವಿರೋಧ ವ್ಯಕ್ತಪಡಿಸಿತ್ತು.

ಫ್ಯೂಚರ್ ವಿರುದ್ಧ ದಿವಾಳಿ ಪ್ರಕ್ರಿಯೆ ನಡೆಸುವಂತೆ ಬ್ಯಾಂಕ್ ಆಫ್ ಇಂಡಿಯಾ ಕಳೆದ ವಾರವಷ್ಟೇ ರಾಷ್ಟ್ರೀಯ ಕಂಪನಿ ಕಾನೂನು ನ್ಯಾಯಮಂಡಳಿಯ (ಎನ್‌ಸಿಎಲ್‌ಟಿ) ಮುಂಬೈ ಪೀಠ ಮನವಿ ಸಲ್ಲಿಸಿದೆ.

ವಿಶೇಷ ಸ್ಥಾನಮಾನ ರದ್ದುಪಡಿಸಿದ ನಂತರ ಮೊದಲ ಬಾರಿಗೆ ಕಣಿವೆಗೆ ಭೇಟಿ

ಸಾಂಬಾ ಜಿಲ್ಲೆಗೆ ಪ್ರಧಾನಿ ಭೇಟಿ ಇಂದು

ಪ್ರಜಾವಾಣಿ ವಾರ್ತೆ

ಶ್ರೀನಗರ: ಪ್ರಧಾನಿ ನರೇಂದ್ರ ಮೋದಿ ಭಾನುವಾರ (ಏ. 24) ಸಾಂಬಾ ಜಿಲ್ಲೆಗೆ ಭೇಟಿ ನೀಡುತ್ತಿರುವ ಹಿನ್ನೆಲೆಯಲ್ಲಿ ಜಮ್ಮು–ಕಾಶ್ಮೀರದಾದ್ಯಂತ ಭಾರಿ ಬಿಗಿ ಬಂದೋಬಸ್ತ್ ಮಾಡಲಾಗಿದ್ದು, ಗಡಿಯಲ್ಲಿ ಕಟ್ಟೆಚ್ಚರ ವಹಿಸುವಂತೆ ಸೂಚಿಸಲಾಗಿದೆ.

‘ಭಯೋತ್ಪಾದಕ ದಾಳಿಯ ಶಂಕೆಯ ಹಿನ್ನೆಲೆಯಲ್ಲಿ ಪ್ರಧಾನಿ ಮೋದಿ ಅವರ ರ‍್ಯಾಲಿ ನಡೆಯುವ ಸಾಂಬಾ ಜಿಲ್ಲೆಯ ಪಲ್ಲಿ ಎಂಬ ಗ್ರಾಮದಲ್ಲಿ ಭದ್ರತಾಲೋಪ ಆಗದಂತೆ ಮುನ್ನಚ್ಚರಿಕೆಯ ಕ್ರಮವಾಗಿ ಬಹುಹಂತದ ಭದ್ರತಾ ವ್ಯವಸ್ಥೆಯನ್ನು ಮಾಡಲಾಗಿದೆ. 700 ಗ್ರಾಮ ಪಂಚಾಯಿತಿಗಳನ್ನು ಉದ್ದೇಶಿಸಿ ವರ್ಚ್ಯುವಲ್ ಮೂಲಕ ಭಾಷಣ ಮಾಡುವರು’ ಎಂದು ಅಧಿಕಾರಿಗಳು ತಿಳಿಸಿದರು.

‘ಮೋದಿ ಅವರ ಭೇಟಿ ಸಮಯದಲ್ಲಿ ಉಗ್ರರು ಬೇರೆಡೆ ದಾಳಿ ನಡೆಸುವ ಮೂಲಕ ಸುದ್ದಿಯಾಗಲು ಯತ್ನಿಸುವ ಸಾಧ್ಯತೆಯಿದೆ. ಹೀಗಾಗಿ ಗಡಿಗಳಲ್ಲಿ ಭದ್ರತೆಯನ್ನು ಹೆಚ್ಚಿಸಲಾಗಿದೆ. ಅಲ್ಲದೇ ಉಗ್ರರ ಯತ್ನವನ್ನು ವಿಫಲಗೊಳಿಸಲು ಭದ್ರತಾಪಡೆಗಳು ಸನ್ನದ್ಧವಾಗಿವೆ. ಸಂಪೂರ್ಣ ಭದ್ರತೆಯನ್ನು ಖಚಿತಪಡಿಸಲು ಉತ್ಕೃಷ್ಟ ಮಟ್ಟದ ಕಣ್ಗಾವಲು ಸಾಧನಗಳನ್ನು ಅಳವಡಿಸಲಾಗಿದೆ’ ಎಂದು ಅಧಿಕಾರಿಗಳು ತಿಳಿಸಿದರು.

‘ಶುಕ್ರವಾರ (ಏ.23) ಜಮ್ಮುವಿನ ಸುಂಜ್ವಾನ್ ಸೇನಾ ನೆಲೆ ಬಳಿ ಆತ್ಮಾಹುತಿ ಬಾಂಬ್ ದಾಳಿಕೋರರ ದಾಳಿಯ ಹಿನ್ನೆಲೆಯಲ್ಲಿ ಶುಕ್ರವಾರದಿಂದಲೇ ಹೆಚ್ಚುವರಿ ಸಿಬ್ಬಂದಿಯನ್ನು ನಿಯೋಜಿಸಿ ಬಿಗಿಭದ್ರತೆ ಕೈಗೊಳ್ಳಲಾಗಿದೆ. ಗಡಿಯಲ್ಲಿ ಕಟ್ಟೆಚ್ಚರ ಘೋಷಿಸಲಾಗಿದೆ. ಕಣಿವೆಯಾದ್ಯಂತ ಪ್ರಮುಖ ಸೇನಾ ನೆಲೆ ಹಾಗೂ ಭದ್ರತಾ ಪಡೆ ಶಿಬಿರಗಳ ಮೇಲೆ ತೀವ್ರ ನಿಗಾ ವಹಿಸಲಾಗಿದೆ’ ಎಂದು ಅವರು ಹೇಳಿದರು.

ಜಮ್ಮು ಮತ್ತು ಕಾಶ್ಮೀರಕ್ಕೆ ವಿಶೇಷ ಸ್ಥಾನಮಾನ ರದ್ದುಪಡಿಸಿದ ನಂತರ ಇದೇ ಮೊದಲ ಬಾರಿಗೆ ಪ್ರಧಾನಿ ನರೇಂದ್ರ ಮೋದಿ ಅವರು ಕಣಿವೆ ಪ್ರದೇಶಕ್ಕೆ ಭೇಟಿ ನೀಡುತ್ತಿದ್ದು, ಈ ವೇಳೆ ₹ 70,000 ಕೋಟಿ ಕೈಗಾರಿಕಾ ಹೂಡಿಕೆಯನ್ನು ಘೋಷಣೆ ಮಾಡುವ ಸಾಧ್ಯತೆಯಿದ್ದು, ಎರಡು ವಿದ್ಯುತ್ ಯೋಜನೆಗಳು ಸೇರಿದಂತೆ ಕೆಲವು ಅಭಿವೃದ್ಧಿ ಯೋಜನೆಗಳಿಗೆ ಚಾಲನೆ ನೀಡಲಿದ್ದಾರೆ.

‘ರಾಜಕೀಯಕ್ಕೂ ಇಫ್ತಾರ್ ಕೂಟಕ್ಕೂ ಸಂಬಂಧ ಇಲ್ಲ’

ಪಟ್ನಾ (ಪಿಟಿಐ): ಆರ್‌ಜೆಡಿ ಮುಖಂಡರಾದ ರಾಬ್ಡಿದೇವಿ ಅವರ ನಿವಾಸದಲ್ಲಿ ಶುಕ್ರವಾರ ನಡೆದ ಇಫ್ತಾರ್ ಕೂಟದಲ್ಲಿ ಪಾಲ್ಗೊಂಡಿದ್ದಕ್ಕೂ ರಾಜಕೀಯಕ್ಕೂ ಯಾವುದೇ ಸಂಬಂಧ ಇಲ್ಲ ಎಂದು ಬಿಹಾರ ಮುಖ್ಯಮಂತ್ರಿ ನಿತೀಶ್ ಕುಮಾರ್ ಶನಿವಾರ ಹೇಳಿದರು.

‘ಕಾರ್ಯಕ್ರಮದಲ್ಲಿ ಭಾಗವಹಿಸಲು ನನಗೆ ಆಹ್ವಾನ ಬಂದಿತ್ತು, ನಾನು ಹಾಜರಾಗಿದ್ದೆ. ನಾವು ಕೂಡ ಇಫ್ತಾರ್ ಕೂಟಗಳನ್ನು ಆಯೋಜಿಸುತ್ತೇವೆ ಮತ್ತು ಎಲ್ಲರನ್ನೂ ಆಹ್ವಾನಿಸುತ್ತೇವೆ’ ಎಂದು ತಿಳಿಸಿದರು.

ಸ್ವಾತಂತ್ರ್ಯ ಹೋರಾಟಗಾರ ವೀರ್ ಕುಂವರ್ ಸಿಂಗ್ ಅವರ ಜನ್ಮ ಶತಮಾನೋತ್ಸವ ಕಾರ್ಯಕ್ರಮದ ಬಳಿಕ ಸುದ್ದಿಗಾರರಿಗೆ ಈ ವಿಷಯ ತಿಳಿಸಿದರು. ನಿತೀಶ್ ಕುಮಾರ್ ಅವರು ಆರ್‌ಜೆಡಿ ಮುಖಂಡರು ಆಯೋಜಿಸಿದ್ದ ಇಫ್ತಾರ್ ಕೂಟದಲ್ಲಿ ಭಾಗವಹಿಸಿದ್ದು ಬಿಹಾರದ ರಾಜಕೀಯ ವಲಯದಲ್ಲಿ ಸಂಚಲನ ಮೂಡಿಸಿದೆ.

ಐಸಿಐಸಿಐ ಬ್ಯಾಂಕ್ ಲಾಭ ಹೆಚ್ಚಳ

ಮುಂಬೈ(ಪಿಟಿಐ): ಐಸಿಐಸಿಐ ಬ್ಯಾಂಕ್‌ನ ಒಟ್ಟಾರೆ ಲಾಭವು 2021–22ನೇ ಹಣಕಾಸು ವರ್ಷದ ನಾಲ್ಕನೇ ತ್ರೈಮಾಸಿಕದಲ್ಲಿ ₹ 7,719 ಕೋಟಿಗೆ ತಲುಪಿದೆ.

2020–21ನೇ ಹಣಕಾಸು ವರ್ಷಕ್ಕೆ ಹೋಲಿಸಿದರೆ ಲಾಭವು ಶೇ 58ರಷ್ಟು ಹೆಚ್ಚಾಗಿದೆ. ವರಮಾನ ₹ 27,412 ಕೋಟಿಗಳಿಗೆ ಏರಿಕೆ ಆಗಿದೆ ಎಂದು ಷೇರುಪೇಟೆಗೆ ತಿಳಿಸಿದೆ.

ಯೆಸ್ ಬ್ಯಾಂಕ್- ಡಿಎಚ್‌ಎಫ್‌ಎಲ್ ಪ್ರಕರಣ: ₹5,050 ಕೋಟಿ ವಂಚನೆ

ಮುಂಬೈ (ಪಿಟಿಐ): ಯೆಸ್ ಬ್ಯಾಂಕ್ ಸಹ ಪ್ರವರ್ತಕ ರಾಣಾ ಕಪೂರ್ ಮತ್ತು ದಿವಾನ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್ (ಡಿಎಚ್‌ಎಫ್‌ಎಲ್) ಪ್ರವರ್ತಕರಾದ ಕಪಿಲ್ ಮತ್ತು ಧೀರಜ್ ವಾಧವನ್ ಅವರು ಅನುಮಾನಾಸ್ಪದ ವಹಿವಾಟುಗಳ ಮೂಲಕ ₹5,050 ಕೋಟಿ ಮೌಲ್ಯದ ಹಣವನ್ನು ವಂಚಿಸಿದ್ದಾರೆ ಎಂದು ಜಾರಿ ನಿರ್ದೇಶನಾಲಯ (ಇ.ಡಿ) ಆರೋಪಿಸಿದೆ.

ಅಕ್ರಮ ಹಣ ವರ್ಗಾವಣೆ ಪ್ರಕರಣದಲ್ಲಿ ರಾಣಾ ಕಪೂರ್ ಮತ್ತು ಅವರ ಕುಟುಂಬ, ವಾಧವಾನ್ ಮತ್ತು ಇತರರ ವಿರುದ್ಧ ಇತ್ತೀಚೆಗೆ ಇಲ್ಲಿನ ವಿಶೇಷ ನ್ಯಾಯಾಲಯದಲ್ಲಿ ಸಲ್ಲಿಸಿದ ಎರಡನೇ ಪೂರಕ (ಒಟ್ಟಾರೆ ಮೂರನೇ) ಚಾರ್ಜ್ ಶೀಟ್‌ನಲ್ಲಿ ಇ.ಡಿ ಈ ಕುರಿತು ಪ್ರಸ್ತಾಪಿಸಿದೆ.

ಆಂಧ್ರದಲ್ಲಿ ಇ–ಸ್ಕೂಟರ್ ಬ್ಯಾಟರಿ ಸ್ಫೋಟ: ವ್ಯಕ್ತಿ ಸಾವು

ಅಮರಾವತಿ (ಪಿಟಿಐ): ವಿದ್ಯುತ್ ಚಾಲಿತ ದ್ವಿಚಕ್ರ ವಾಹನದ ಬ್ಯಾಟರಿ ಸ್ಫೋಟಗೊಂಡ ಮತ್ತೊಂದು ಪ್ರಕರಣ ಆಂಧ್ರ ಪ್ರದೇಶದ ವಿಜಯವಾಡದಲ್ಲಿ ಶನಿವಾರ ಬೆಳಿಗ್ಗೆ ನಡೆದಿದೆ. ವ್ಯಕ್ತಿಯೊಬ್ಬರು ಮೃತಪಟ್ಟು ಮೂವರು ಗಭೀರವಾಗಿ ಗಾಯಗೊಂಡಿದ್ದಾರೆ.

ಬ್ಯಾಟರಿಯನ್ನು ಮಲಗುವ ಕೋಣೆಯಲ್ಲಿ ಚಾರ್ಜಿಂಗ್‌ಗೆ ಹಾಕಲಾಗಿತ್ತು. ಈ ವೇಳೆ ಬ್ಯಾಟರಿ ಸ್ಫೋಟಗೊಂಡಿದ್ದು, ಕೆ. ಶಿವಕುಮಾರ್ (40) ಮೃತಪಟ್ಟಿದ್ದಾರೆ. ಅವರ ಪತ್ನಿಗೆ ಸುಟ್ಟ ಗಾಯಗಳಾಗಿದ್ದು, ಗಂಭೀರ ಸ್ಥಿತಿಯಲ್ಲಿದ್ದಾರೆ. ಇಬ್ಬರು ಮಕ್ಕಳು ಗಾಯಗೊಂಡಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಚೀರಾಟದ ಶಬ್ದ ಕೇಳಿ ನೆರೆಹೊರೆಯವರು ರಕ್ಷಣೆಗೆ ಧಾವಿಸಿದ್ದು, ಆಸ್ಪತ್ರೆಗೆ ದಾಖಲಿಸಿದ್ದಾರೆ. ಶಿವಕುಮಾರ್ ಅವರು ಶುಕ್ರವಾರವಷ್ಟೇ ಇ–ಸ್ಕೂಟರ್ ಖರೀದಿಸಿದ್ದರು.

ಮೂರು ದಿನಗಳ ಹಿಂದೆ ನೆರೆಯ ತೆಲಂಗಾಣದ ನಿಜಾಮಾಬಾದ್ ಪಟ್ಟಣದಲ್ಲಿ ವಿದ್ಯುತ್ ವಾಹನದ ಬ್ಯಾಟರಿ ಸ್ಫೋಟಗೊಂಡು 80 ವರ್ಷದ ವ್ಯಕ್ತಿ ಸಾವನ್ನಪ್ಪಿದ ಘಟನೆಯಂತೆಯೇ ಇದೂ ನಡೆದಿದೆ.

‘ಸ್ಫೋಟಕ್ಕೆ ನಿಖರ ಕಾರಣ ತಿಳಿದುಬಂದಿಲ್ಲ. ಅಗ್ನಿಶಾಮಕ ದಳದ ಸಿಬ್ಬಂದಿ ಸಹ ಸ್ಥಳಕ್ಕೆ ಭೇಟಿ ನೀಡಿದ್ದಾರೆ. ಬ್ಯಾಟರಿ ಸ್ಫೋಟಕ್ಕೆ ವಿದ್ಯುತ್ ಶಾರ್ಟ್ ಸರ್ಕ್ಯೂಟ್ ಕಾರಣವೇ ಎಂದು ಪರಿಶೀಲಿಸಲಾಗುತ್ತಿದೆ’ ಎಂದು ಪೊಲೀಸ್ ಅಧಿಕಾರಿ ತಿಳಿಸಿದ್ದಾರೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ ಸಕಲೇಶಪುರ

ಕೂಳೆ	430-450
ನಡುಗೋಲು	500-550
ರಾಶಿ	600-650
ರಾಶಿ ಉತ್ತಮ	650-700
ಜರಡಿ	750-800
ಹೆರಕಿದ್ದು	1100-1150
ಹಸಿರು ಸಾಧಾರಣ	600-700
ಹಸಿರು ಉತ್ತಮ	900-950
ಹಸಿರು ಅತಿ ಉತ್ತಮ	1200-1250
ಕಾಳು ಮೆಣಸು	510

ತಿಪಟೂರು ಕೊಬ್ಬರಿ

ಕನಿಷ್ಠ	16200
ಗರಿಷ್ಠ	17150
ಮಾದರಿ	17000
ಒಟ್ಟು ಆವಕ(ಕ್ವಿಂಟಲ್)	1265.92

ರಾಮನಗರ ರೇಷ್ಮೆಗೂಡು

ಮಿಶ್ರ ತಳಿ	400-725
ದ್ವಿತಳಿ	311-871

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

ಮೂಡಿಗೆರೆ	ಹಾಸನ			
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	16200	16000	16100	227.15ಸೆಂಟ್ಸ್
ಎಸಿ	8540	8200	8600	
ಆರ್‌ಪಿ	9500	9500	9550	ಲಂಡನ್
ಆರ್‌ಸಿ	4265	4100	4300	2116 ಡಾಲರ್ಸ್



ಜರ್ಜರಿತ ಮುಂಬೈಗೆ ಲಖನೌ ಸವಾಲು

ಮುಂಬೈ (ಪಿಟಿಐ): ಐದು ಬಾರಿಯ ಚಾಂಪಿಯನ್ ಮುಂಬೈ ಇಂಡಿಯನ್ಸ್ ತಂಡಕ್ಕೆ ಈ ಸಲದ ಐಪಿಎಲ್‌ನಲ್ಲಿ ಗೆಲುವಿನ ಖಾತೆ ತೆರೆಯಲು ಇದುವರೆಗೂ ಸಾಧ್ಯವಾಗಿಲ್ಲ. ಆಡಿರುವ ಏಳೂ ಪಂದ್ಯಗಳಲ್ಲಿ ಸೋತಿರುವ ರೋಹಿತ್ ಶರ್ಮಾ ಬಳಗಕ್ಕೆ ಪ್ಲೇ ಆಫ್ ಹಾದಿ ಬಹುತೇಕ ಮುಚ್ಚಿದೆ.

ಇನ್ನುಳಿದಿರುವ ಏಳು ಪಂದ್ಯಗಳಲ್ಲಿ ಎಲ್ಲವನ್ನೂ ಉತ್ತಮ ರನ್ ರೇಟ್‌ನೊಂದಿಗೆ ಜಯಿಸಿದರೆ ಮಾತ್ರ ಒಂದು ಸಣ್ಣ ಅವಕಾಶ ಇದೆ. ಈ ಕಠಿಣ ಹಾದಿಯಲ್ಲಿ ಭಾನುವಾರ ಮುಂಬೈ ತಂಡವು ಲಖನೌ ಸೂಪರ್ ಜೈಂಟ್ಸ್ ತಂಡದ ಸವಾಲು ಎದುರಿಸಲಿದೆ.

ಪಂದ್ಯ ಆರಂಭ: ರಾತ್ರಿ 7.30
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್, ಹಾಟ್ ಸ್ಟಾರ್

ಪ್ಲೇ ಆಫ್, ಫೈನಲ್‌ಗೆ ಪೂರ್ಣಪ್ರಮಾಣದಲ್ಲಿ ಪ್ರೇಕ್ಷಕರು

ಮುಂಬೈ (ಪಿಟಿಐ): ಐಪಿಎಲ್‌ನ ಪ್ಲೇ ಆಫ್ ಮತ್ತು ಫೈನಲ್ ಪಂದ್ಯಗಳಿಗೆ ಪೂರ್ಣಪ್ರಮಾಣದಲ್ಲಿ ಪ್ರೇಕ್ಷಕರಿಗೆ ಅವಕಾಶ ಕಲ್ಪಿಸಲಾಗುವುದು ಎಂದು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯ (ಬಿಸಿಸಿಐ) ಅಧ್ಯಕ್ಷ ಸೌರವ್ ಗಂಗೂಲಿ ಹೇಳಿದ್ದಾರೆ.

ಮೊದಲ ಪ್ಲೇ ಆಫ್ ಮತ್ತು ಎಲಿಮಿನೇಟರ್ ಪಂದ್ಯಗಳು ಕ್ರಮವಾಗಿ ಮೇ 24 ಮತ್ತು 26ರಂದು ಕೋಲ್ಕತ್ತಾದಲ್ಲಿ, ಎರಡನೇ ಪ್ಲೇ ಆಫ್ ಮತ್ತು ಫೈನಲ್ ಪಂದ್ಯಗಳು ಕ್ರಮವಾಗಿ ಮೇ 27 ಮತ್ತು 29ರಂದು ಅಹಮದಾಬಾದ್‌ನಲ್ಲಿ ನಡೆಯಲಿವೆ ಎಂದು ಶನಿವಾರ ನಡೆದ ಬಿಸಿಸಿಐ ಅಪೆಕ್ಸ್ ಕೌನ್ಸಿಲ್ ಸಭೆಯ ನಂತರ ಅವರು ತಿಳಿಸಿದರು.

ಮೂರು ತಂಡಗಳ ಮಹಿಳಾ ಚಾಲೆಂಜರ್ ಟೂರ್ನಿಯು ಮೇ 24ರಿಂದ 28ರವರೆಗೆ ಲಖನೌನಲ್ಲಿ ನಡೆಯಲಿವೆ ಎಂದು ಗಂಗೂಲಿ ತಿಳಿಸಿದರು.

ಕರ್ನಾಟಕಕ್ಕೆ ಕಂಚು

ಬೆಂಗಳೂರು: ಕರ್ನಾಟಕ ಪುರುಷರ ತಂಡವು ಫೆಡರೇಷನ್ ಕಪ್ ರಾಷ್ಟ್ರೀಯ ನೆಟ್‌ಬಾಲ್ ಚಾಂಪಿಯನ್‌ಷಿಪ್‌ನಲ್ಲಿ ಕಂಚಿನ ಪದಕ ಗೆದ್ದುಕೊಂಡಿದೆ.

ಹರಿಯಾಣದ ಭಿವಾನಿಯಲ್ಲಿ ನಡೆಯುತ್ತಿರುವ ಚಾಂಪಿಯನ್‌ಷಿಪ್‌ನಲ್ಲಿ ಶನಿವಾರ ಛತ್ತೀಸಗಡ ತಂಡದೊಂದಿಗೆ ಕರ್ನಾಟಕ ಡ್ರಾ ಸಾಧಿಸಿತು. ಇದರೊಂದಿಗೆ ಜಂಟಿ ಮೂರನೇ ಸ್ಥಾನ ಗಳಿಸಿತು.

ವಿರಾಟ್ ಕೊಹ್ಲಿ ಗೋಲ್ಡನ್ ಡಕ್; ಮಿಂಚಿದ ಮಾರ್ಕೊ ಜಾನ್ಸೆನ್, ನಟರಾಜನ್

‘ಸನ್’ ಬಿಸಿಗೆ ಕುಸಿದ ಚಾಲೆಂಜರ್ಸ್

ಮುಂಬೈ: ಫಫ್ ಡುಪ್ಲೆಸಿ, ವಿರಾಟ್ ಕೊಹ್ಲಿ, ಗ್ಲೆನ್ ಮ್ಯಾಕ್ಸ್‌ವೆಲ್ ಮತ್ತು ದಿನೇಶ್ ಕಾರ್ತಿಕ್ ಅವರ ವೈಯಕ್ತಿಕ ಸ್ಕೋರು ಎರಡಂಕಿ ಮುಟ್ಟಲಿಲ್ಲ. ಇದರಿಂದಾಗಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವು ಶನಿವಾರ ರಾತ್ರಿ ಮೂರಂಕಿ ಮೊತ್ತ ತಲುಪಲಿಲ್ಲ.

ಬ್ರೆಬೋರ್ನ್ ಕ್ರೀಡಾಂಗಣದಲ್ಲಿ ನಡೆದ ಈ ಪಂದ್ಯವು ಆರ್‌ಸಿಬಿ ಬ್ಯಾಟರ್‌ಗಳು ಮತ್ತು ಸನ್‌ರೈಸರ್ಸ್ ಹೈದರಾಬಾದ್ ಬೌಲರ್‌ಗಳ ನಡುವಣ ಕದನ ಎಂದೇ ಬಿಂಬಿತವಾಗಿತ್ತು. ಇದರಲ್ಲಿ ಸನ್‌ರೈಸರ್ಸ್ ತಂಡದ ಬೌಲರ್‌ಗಳು ಮೇಲುಗೈ ಸಾಧಿಸಿದರು. ಕೇನ್ ವಿಲಿಯಮ್ಸನ್ ಬಳಗವು 9 ವಿಕೆಟ್‌ಗಳಿಂದ ಗೆದ್ದಿತು.

ಟಾಸ್ ಗೆದ್ದ ಸನ್‌ರೈಸರ್ಸ್ ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ತಲಾ ಮೂರು ವಿಕೆಟ್ ಗಳಿಸಿದ ‘ಎಡಗೈ ಜೋಡಿ’ ಮಾರ್ಕೊ ಜಾನ್ಸೆನ್ ಮತ್ತು ಟಿ. ನಟರಾಜನ್ ಅವರ ಸ್ವಿಂಗ್ ದಾಳಿಗೆ ಆರ್‌ಸಿಬಿ 16.1 ಓವರ್‌ಗಳಲ್ಲಿ 68 ರನ್‌ಗಳ ಅಲ್ಪಮೊತ್ತಕ್ಕೆ ಕುಸಿಯಿತು. ಸನ್‌ರೈಸರ್ಸ್ ತಂಡವು ಕೇವಲ 8 ಓವರ್‌ಗಳಲ್ಲಿ 1 ವಿಕೆಟ್ ನಷ್ಟಕ್ಕೆ 72 ರನ್ ಗಳಿಸಿ ಜಯಿಸಿತು.

ಇನಿಂಗ್ಸ್‌ನ ಎರಡನೇ ಓವರ್‌ನಲ್ಲಿಯೇ ಮಾರ್ಕೊ ಎಸೆತದಲ್ಲಿ ನಾಯಕ ಫಫ್ ಡುಪ್ಲೆಸಿ ಕ್ಲೀನ್‌ಬೌಲ್ಡ್ ಆಗುವುದರೊಂದಿಗೆ ಬೆಂಗಳೂರು ಬ್ಯಾಟರ್‌ಗಳ ಪರೇಡ್ ಆರಂಭವಾಯಿತು. ನಂತರದ ಎಸೆತದಲ್ಲಿಯೇ ವಿರಾಟ್ ಕೊಹ್ಲಿ ಕೊಟ್ಟ ಕ್ಯಾಚ್ ಅನ್ನು ಏಡನ್ ಮರ್ಕರಂ ತಮ್ಮ ಕೈಗಳಲ್ಲಿ ಗಟ್ಟಿಯಾಗಿ ಬಂಧಿಸಿದರು. ಸತತ ಎರಡನೇ ಪಂದ್ಯದಲ್ಲಿ ‘ಗೋಲ್ಡನ್ ಡಕ್’ ಆಘಾತಕ್ಕೊಳಗಾದ ಹತಾಶೆಯ ಛಾಯೆ ವಿರಾಟ್ ಮುಖದಲ್ಲಿ ಎದ್ದು ಕಂಡಿತು. ಭಾರವಾದ ಹೆಜ್ಜೆಗಳೊಂದಿಗೆ ಡಗ್‌ಔಟ್‌ನತ್ತ ಹೆಜ್ಜೆ ಹಾಕಿದರು. ಸನ್ ತಂಡದ ಮಾಲೀಕರಾದ ಕಾವ್ಯಾ ಮಾರನ್ ವಿಐಪಿ ಗ್ಯಾಲರಿಯಲ್ಲಿ ಕುಣಿದು ಕುಪ್ಪಳಿಸಿದರು.

ಇತ್ತ ಮಾರ್ಕೊ ದಾಳಿ ಮುಂದುವರಿಯಿತು. ಅದೇ ಓವರ್‌ನ ಕೊನೆಯ ಎಸೆತದಲ್ಲಿ ಅನುಜ್ ರಾವತ್‌ಗೂ ಡಗ್‌ಔಟ್ ದಾರಿ ತೋರಿಸಿದರು. ಈ ಹಂತದಲ್ಲಿ ಗ್ಲೆನ್ ಮ್ಯಾಕ್ಸ್‌ವೆಲ್ ಮತ್ತು ಸುಯಶ್ ಪ್ರಭುದೇಸಾಯಿ ತುಸು ಭರವಸೆ ಮೂಡಿಸಿದರು. ಆದರೆ ಅವರನ್ನೂ ಹೆಚ್ಚು ಹೊತ್ತು ನಿಲ್ಲಲು ಬೌಲರ್‌ಗಳು ಬಿಡಲಿಲ್ಲ. ಐದನೇ ಓವರ್‌ನಲ್ಲಿ ನಟರಾಜನ್ ಎಸೆತದಲ್ಲಿ ಮ್ಯಾಕ್ಸ್‌ವೆಲ್ ಆಟ ಮುಗಿಯಿತು. ಸುಯಶ್ (15; 20ಎ) ಅವರಿಗೆ ಒಂಬತ್ತನೇ ಓವರ್‌ನಲ್ಲಿ ಮೈಸೂರು ಹುಡುಗ ಜೆ. ಸುಚಿತ್ ಔಟ್ ಮಾಡಿದರು. ಈ ಪಂದ್ಯದಲ್ಲಿ ಆರ್‌ಸಿಬಿ ಪರ ಅತಿ ಹೆಚ್ಚು ರನ್ ಗಳಿಸಿದ ಮತ್ತು ಎಸೆತ ಎದುರಿಸಿದವರು ಸುಯಶ್ ಒಬ್ಬರೇ! ಭರವಸೆಯ ಬ್ಯಾಟರ್ ದಿನೇಶ್ ಕಾರ್ತಿಕ್ ವಿಕೆಟ್ ಕೂಡ ಸುಚಿತ್ ಪಾಲಾಯಿತು. ಶಾಬಾಜ್ ಅಹಮದ್ ಕೂಡ ಏಳು ರನ್ ಗಳಿಸಿ ಔಟಾದರು.



ವಿರಾಟ್ ಕೊಹ್ಲಿ (ಬಲತುದಿ) ತಾವೆದುರಿಸಿದ ಮೊದಲ ಎಸೆತದಲ್ಲಿ ಔಟಾಗಿ ನಿರ್ಗಮಿಸಿದರು. ವಿಕೆಟ್ ಗಳಿಸಿದ ಸನ್‌ರೈಸರ್ಸ್ ತಂಡದ ಬೌಲರ್ ಮಾರ್ಕೊ ಜಾನ್ಸೆನ್ ಅವರನ್ನು ಸಹ ಆಟಗಾರರು ಅಭಿನಂದಿಸಿದರು –ಪಿಟಿಐ ಚಿತ್ರ

ಐಪಿಎಲ್‌ನಲ್ಲಿ ಕನಿಷ್ಠ ಮೊತ್ತ ಗಳಿಕೆ

ತಂಡ	ಮೊತ್ತ	ಎದುರಾಳಿ	ಸ್ಥಳ	ವರ್ಷ
ಬೆಂಗಳೂರು	49	ಕೋಲ್ಕತ್ತ	ಕೋಲ್ಕತ್ತ	2017
ರಾಜಸ್ಥಾನ	58	ಬೆಂಗಳೂರು	ಕೇಪ್‌ಟೌನ್	2009
ಡೇರ್‌ಡೆವಿಲ್ಸ್	66	ಮುಂಬೈ	ದೆಹಲಿ	2017
ಡೇರ್‌ಡೆವಿಲ್ಸ್	67	ಪಂಜಾಬ್	ಮೊಹಾಲಿ	2017
ಕೋಲ್ಕತ್ತ	67	ಮುಂಬೈ	ವಾಂಖೆಡೆ	2008
ಬೆಂಗಳೂರು	68	ಸನ್‌ರೈಸರ್ಸ್	ಮುಂಬೈ	2022
ಬೆಂಗಳೂರು	70	ಸೂಪರ್‌ಕಿಂಗ್ಸ್	ಚೆನ್ನೈ	2019
ಬೆಂಗಳೂರು	70	ರಾಜಸ್ಥಾನ	ಅಬುಧಾಬಿ	2014

ಸ್ಕೋರ್ ಕಾರ್ಡ್

ರಾಯಲ್ ಚಾಲೆಂಜರ್ಸ್ ಬೆಂಗಳೂರು 68 (16.1 ಓವರ್)
ಡುಪ್ಲೆಸಿ ಬಿ ಜಾನ್ಸೆನ್ 5 (7 ಎ, 4x1), ಅನುಜ್ ಸಿ ಮರ್ಕರಮ್ ಬಿ ಜಾನ್ಸೆನ್ 0 (2 ಎ), ವಿರಾಟ್ ಸಿ ಮರ್ಕರಮ್ ಬಿ ಜಾನ್ಸೆನ್ 0 (1 ಎ), ಮ್ಯಾಕ್ಸ್‌ವೆಲ್ ಸಿ ವಿಲಿಯಮ್ಸನ್ ಬಿ ನಟರಾಜನ್ 12 (11 ಎ, 4x2) ಸುಯಶ್ ಸ್ಟಂಪ್ಡ್ ಪೂರನ್ ಬಿ ಸುಚಿತ್ 15 (20 ಎ, 4x1), ಶಹಬಾಜ್ ಸಿ ಪೂರನ್ ಬಿ ಉಮ್ರನ್ 7 (12 ಎ, 4x1), ದಿನೇಶ್ ಸಿ ಪೂರನ್ ಬಿ ಸುಚಿತ್ 0 (3 ಎ), ಹರ್ಷಲ್ ಬಿ ನಟರಾಜನ್ 4 (8 ಎ), ವನಿಂದು ಬಿ ನಟರಾಜನ್ 8 (19 ಎ, 4x1), ಹ್ಯಾಜಲ್‌ವುಡ್ ಔಟಾಗದೆ 3 (11 ಎ), ಸಿರಾಜ್ ಸಿ ವಿಲಿಯಮ್ಸನ್ ಬಿ ಭುವನೇಶ್ವರ್ 2 (4 ಎ)
ಇತರೆ (ನೋಬಾಲ್ 1, ವೈಡ್ 11) 12
ವಿಕೆಟ್ ಪತನ: 1-5 (ಫಫ್ ಡುಪ್ಲೆಸಿ, 1.2), 2-5 (ವಿರಾಟ್ ಕೊಹ್ಲಿ, 1.3), 3-8 (ಅನುಜ್ ರಾವತ್, 1.6), 4-20 (ಗ್ಲೆನ್ ಮ್ಯಾಕ್ಸ್‌ವೆಲ್, 4.2), 5-47 (ಸುಯಶ್ ಪ್ರಭುದೇಸಾಯಿ, 8.2), 6-47 (ದಿನೇಶ್ ಕಾರ್ತಿಕ್, 8.5), 7-49 (ಶಹಬಾಜ್ ಅಹಮ್ಮದ್, 9.2), 8-55 (ಹರ್ಷಲ್ ಪಟೇಲ್, 12.1), 9-65 (ವನಿಂದು ಹಸರಂಗ, 15.2), 10-68 (ಮೊಹಮ್ಮದ್ ಸಿರಾಜ್, 16.1)
ಬೌಲಿಂಗ್: ಭುವನೇಶ್ವರ್ ಕುಮಾರ್ 2.1–0–8–1, ಮಾರ್ಕೊ ಜಾನ್ಸೆನ್ 4–0–25–3, ಟಿ.ನಟರಾಜನ್ 3–0–10–3, ಜಗದೀಶ ಸುಚಿತ್ 3–0–12–2, ಉಮ್ರಾನ್ ಮಲಿಕ್ 4–0–13–1

ಸನ್‌ರೈಸರ್ಸ್ ಹೈದರಾಬಾದ್ 1ಕ್ಕೆ 72 (8 ಓವರ್)
ಅಭಿಷೇಕ್ ಸಿ ಅನುಜ್ ಬಿ ಪಟೇಲ್ 47 (28 ಎ, 4x8, 4x1), ವಿಲಿಯಮ್ಸನ್ ಔಟಾಗದೆ 16 (17 ಎ, 4x2), ರಾಹುಲ್ ಔಟಾಗದೆ 7 (3 ಎ, 6x1
ಇತರೆ (ಲೆಗ್‌ಬೈ 1, ವೈಡ್ 1) 2
ವಿಕೆಟ್ ಪತನ: 1-64 (ಅಭಿಷೇಕ್ ಶರ್ಮಾ, 7.2)
ಬೌಲಿಂಗ್: ಮೊಹಮ್ಮದ್ ಸಿರಾಜ್ 2–0–15–0, ಜೋಶ್ ಹ್ಯಾಜಲ್‌ವುಡ್ 3–0–31–0, ಹರ್ಷಲ್ ಪಟೇಲ್ 2–0–18–1, ವನಿಂದು ಹಸರಂಗ 1–0–7–0

ಫಲಿತಾಂಶ: ಸನ್‌ರೈಸರ್ಸ್ ಹೈದರಾಬಾದ್‌ಗೆ 9 ವಿಕೆಟ್ ಜಯ

ರಿಷಭ್ ಪಂತ್‌ಗೆ ಭಾರಿ ದಂಡ

ನೋಬಾಲ್ ವಿವಾದ; ಪ್ರವೀಣ್ ಆಮ್ರೆ ಅಮಾನತು

ಮುಂಬೈ (ಪಿಟಿಐ): ಡೆಲ್ಲಿ ಕ್ಯಾಪಿಟಲ್ಸ್ ತಂಡದ ನಾಯಕ ರಿಷಭ್ ಪಂತ್ ಮತ್ತು ಸಹಾಯಕ ಕೋಚ್ ಪ್ರವೀಣ ಆಮ್ರೆ ಅವರಿಗೆ ಶುಕ್ರವಾರ ರಾತ್ರಿಯ ಪಂದ್ಯದಲ್ಲಿ ನಡೆದ ನೋಬಾಲ್ ವಿವಾದಕ್ಕೆ ಸಂಬಂಧಿಸಿದಂತೆ ಭಾರಿ ಮೊತ್ತದ ದಂಡ ವಿಧಿಸಲಾಗಿದೆ.

ರಾಜಸ್ಥಾನ ರಾಯಲ್ಸ್ ಎದುರಿನ ಪಂದ್ಯದ ಕೊನೆಯ ಓವರ್‌ನಲ್ಲಿ ನಡೆದ ಈ ವಿವಾದದಲ್ಲಿ ಪಂತ್ ಮತ್ತು ಆಮ್ರೆ ಅವರ ನಡವಳಿಕೆಯನ್ನು ಕ್ರೀಡಾಸ್ಫೂರ್ತಿಗೆ ವಿರುದ್ಧ ಎಂದು ಪರಿಗಣಿಸಲಾಗಿದೆ. ಆದ್ದರಿಂದ ಇಬ್ಬರಿಗೂ ಪಂದ್ಯದ ಸಂಪೂರ್ಣ ಶುಲ್ಕವನ್ನು ದಂಡವಾಗಿ ನೀಡಲು ಸೂಚಿಸಲಾಗಿದೆ. ಆಮ್ರೆ ಅವರನ್ನು ಒಂದು ಪಂದ್ಯದಿಂದ ಅಮಾನತು ಕೂಡ ಮಾಡಲಾಗಿದೆ. ಮಧ್ಯಮವೇಗಿ ಶಾರ್ದೂಲ್ ಠಾಕೂರ್ ಅವರಿಗೆ ಪಂದ್ಯ ಶುಲ್ಕದ ಶೇ 50ರಷ್ಟು ಮೊತ್ತವನ್ನು ದಂಡ ವಿಧಿಸಲಾಗಿದೆ. ಮೂವರೂ ತಮ್ಮ ತಪ್ಪುಗಳನ್ನು ಒಪ್ಪಿಕೊಂಡಿದ್ದು, ಕ್ಷಮಾಪಣೆ ಕೇಳಿದ್ದಾರೆ.

ಡೆಲ್ಲಿ ತಂಡಕ್ಕೆ ಪಂದ್ಯ ಜಯಿಸಲು ಕೊನೆಯ ಓವರ್‌ನಲ್ಲಿ 36 ರನ್‌ಗಳು ಬೇಕಾಗಿದ್ದವು. ಒಬೆದ್ ಮೆಕಾಯ್ ಹಾಕಿದ ಈ ಓವರ್‌ನ ಮೊದಲ ಮೂರು ಎಸೆತಗಳಲ್ಲಿಯೂ ಬ್ಯಾಟರ್ ರೊವ್ಮನ್ ಪೊವೆಲ್ ಸಿಕ್ಸರ್ ಎತ್ತಿದರು. ಅದರಲ್ಲಿ ಮೂರನೇ ಎಸೆತವು ಬ್ಯಾಟರ್ ಸೊಂಟದೆತ್ತರದ ಫುಲ್‌ಟಾಸ್ ಆಗಿತ್ತು. ನಿಯಮದ ಪ್ರಕಾರ ನೋಬಾಲ್ ಘೋಷಿಸಬೇಕು ಎಂದು ನಾನ್‌ಸ್ಟ್ರೈಕರ್‌ನಲ್ಲಿದ್ದ ಬ್ಯಾಟರ್ ಕುಲದೀಪ್ ಯಾದವ್ ಅವರು ಅಂಪೈರ್ ನಿತಿನ್ ಮೆನನ್ ಅವರಿಗೆ ಸಂಜ್ಞೆಯ ಮೂಲಕ ಮನವಿ ಸಲ್ಲಿಸಿದರು. ಅವರಿಗೆ ಪೊವೆಲ್ ಕೂಡ ಜೊತೆ ನೀಡಿದರು.

ಆದರೆ ಮೆನನ್ ಘೋಷಿಸಲಿಲ್ಲ. ಅತ್ತ ಡಗ್‌ಔಟ್‌ನಲ್ಲಿದ್ದ ನಾಯಕ ಪಂತ್ ಈ ಬಗ್ಗೆ ಕ್ರುದ್ಧರಾಗಿ, ಬ್ಯಾಟರ್‌ಗಳನ್ನು ಮರಳಿ ಬರುವಂತೆ ಕರೆದರು. ಅವರಿಗೆ ಆಮ್ರೆ ಮತ್ತು ಶಾರ್ದೂಲ್ ಕೂಡ ಜತೆ ನೀಡಿದರು. ಸಹಾಯಕ ಕೋಚ್ ಶೇನ್ ವಾಟ್ಸನ್, ಪಂತ್ ಅವರನ್ನು ಸಮಾಧಾನ ಪಡಿಸಲು ಯತ್ನಿಸಿದರು. ಅಷ್ಟರಲ್ಲಿ ಕೋಚ್ ಆಮ್ರೆ, ಮೈದಾನದೊಳಗೆ ಧಾವಿಸಿ, ಅಂಪೈರ್ ಜೊತೆ ವಾಗ್ವಾದ ನಡೆಸಿದರು.

ಹೊರನಡೆಯುತ್ತಿದ್ದ ಕುಲದೀಪ್ ಅವರನ್ನು ರಾಯಲ್ಸ್ ಬೌಲರ್ ಚಾಹಲ್ ತಡೆದರು. ಇತ್ತ ಜಾಸ್ ಬಟ್ಲರ್ ಕೂಡ ಡೆಲ್ಲಿ ಡಗ್‌ಔಟ್‌ನತ್ತ ತೆರಳಿ ಪಂತ್ ಜೊತೆ ಮಾತನಾಡಿ ಪರಿಸ್ಥಿತಿ ತಿಳಿಗೊಳಿಸುವ ಯತ್ನ ಮಾಡಿದರು.

> **ಬ್ಯಾಟರ್ ಸೊಂಟದೆತ್ತರಕ್ಕೆ ಇದ್ದ ಫುಲ್ ಟಾಸ್ ಅನ್ನು ನೋಬಾಲ್ ಕೊಡುವ ಕುರಿತು 3ನೇ ಅಂಪೈರ್ ಪರಿಶೀಲನೆ ನಡೆಸಬೇಕಿತ್ತು. ನೋಬಾಲ್ ಆಗಿದ್ದರೆ ನಮಗೆ ಗೆಲ್ಲುವ ಅವಕಾಶಗಳು ಹೆಚ್ಚುತ್ತಿದ್ದವು,**
> **ರಿಷಭ್ ಪಂತ್** ಡೆಲ್ಲಿ ಕ್ಯಾಪಿಟಲ್ಸ್ ನಾಯಕ

> **ಅಂಪೈರ್ ತೀರ್ಪು ಏನೇ ಇದ್ದರೂ ಒಪ್ಪಿಕೊಳ್ಳಬೇಕು. ಅದನ್ನು ವಿರೋಧಿಸಿ ಮೈದಾನವನ್ನು ಪ್ರವೇಶಿಸುವುದು ಒಪ್ಪಿಕೊಳ್ಳಲಾಗದು. ಈ ಘಟನೆಗೆ ಡೆಲ್ಲಿ ಕ್ಯಾಪಿಟಲ್ಸ್ ಬೆಂಬಲಿಸುವುದಿಲ್ಲ,**
> **ಶೇನ್ ವಾಟ್ಸನ್** ಸಹಾಯಕ ಕೋಚ್


ರಿಷಭ್ ಪಂತ್

ಪಾಯಿಂಟ್ ಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಟೈ	ಅಂಕ	ರನ್‌ರೇಟ್
ಗುಜರಾತ್	7	6	1	0	0	12	0.396
ಹೈದರಾಬಾದ್	7	5	2	0	0	10	0.691
ರಾಜಸ್ಥಾನ	7	5	2	0	0	10	0.432
ಬೆಂಗಳೂರು	8	5	3	0	0	10	0.472
ಲಖನೌ	7	4	3	0	0	8	0.124
ಡೆಲ್ಲಿ	7	3	4	0	0	6	0.715
ಕೋಲ್ಕತ್ತ	8	3	5	0	0	6	0.080
ಪಂಜಾಬ್	7	3	4	0	0	6	-0.562
ಚೆನ್ನೈ	7	2	5	0	0	4	-0.534
ಮುಂಬೈ	7	0	7	0	0	0	-1.892

*ಶನಿವಾರದ ಪಂದ್ಯಗಳ ಅಂತ್ಯಕ್ಕೆ

ಐಪಿಎಲ್ ಮತ್ತು ಕ್ರೀಡಾ ಸುದ್ದಿಗಳ ವಿಸ್ತೃತ ವರದಿ, ಮಾಹಿತಿಗಾಗಿ ಭೇಟಿ ನೀಡಿ
https://www.prajavani.net/cricket

ಪರ್ಪಲ್ ಕ್ಯಾಪ್
(ಹೆಚ್ಚು ವಿಕೆಟ್ ಗಳಿಸಿದವರು)

ಆಟಗಾರ	ತಂಡ	ವಿಕೆಟ್
ಯಜುವೇಂದ್ರ	ರಾಜಸ್ಥಾನ	18
ನಟರಾಜನ್	ಹೈದರಾಬಾದ್	15
ಕುಲದೀಪ್	ಡೆಲ್ಲಿ	13

ಆರೆಂಜ್ ಕ್ಯಾಪ್
(ಹೆಚ್ಚು ರನ್ ಗಳಿಸಿದವರು)

ಆಟಗಾರ	ತಂಡ	ರನ್
ಜೋಸ್ ಬಟ್ಲರ್	ರಾಜಸ್ಥಾನ	491
ಹಾರ್ದಿಕ್ ಪಾಂಡ್ಯ	ಗುಜರಾತ್	295
ರಾಹುಲ್	ಲಖನೌ	265

ರಸೆಲ್ ಹೋರಾಟ ವ್ಯರ್ಥ; ಟೈಟನ್ಸ್ ಜಯಭೇರಿ

ಮುಂಬೈ (ಪಿಟಿಐ): ವೆಸ್ಟ್ ಇಂಡೀಸ್‌ನ ಆ್ಯಂಡ್ರೆ ರಸೆಲ್ ಮತ್ತು ಅಲ್ಜರಿ ಜೋಸೆಫ್ ಅಂತಿಮ ಓವರ್‌ನಲ್ಲಿ ಜಿದ್ದಾಜಿದ್ದಿಯ ಹೋರಾಟಕ್ಕೆ ಇಳಿದರು. ಕೊನೆಯಲ್ಲಿ ಅಲ್ಜರಿ ಅವರ ವೇಗದ ಬೌಲಿಂಗ್ ದಾಳಿ ಮೇಲುಗೈ ಸಾಧಿಸಿತು. ಇದರಿಂದಾಗಿ ಗುಜರಾತ್ ಟೈಟನ್ಸ್ ಗೆಲುವಿನ ನಗೆ ಬೀರಿತು.


ಇಲ್ಲಿನ ಡಿ.ವೈ.ಪಾಟೀಲ್ ಕ್ರೀಡಾಂಗಣದಲ್ಲಿ ಶನಿವಾರ ಸಂಜೆ ನಡೆದ ಪಂದ್ಯದಲ್ಲಿ ಕೋಲ್ಕತ್ತ ನೈಟ್ ರೈಡರ್ಸ್ ತಂಡವನ್ನು ಟೈಟನ್ಸ್ 8 ರನ್‌ಗಳಿಂದ ಮಣಿಸಿತು. 158 ರನ್‌ಗಳ ಸಾಧಾರಣ ಗುರಿ ಬೆನ್ನತ್ತಿದ ಕೋಲ್ಕತ್ತ ಆರಂಭದಿಂದಲೇ ವಿಕೆಟ್‌ಗಳನ್ನು ಕಳೆದುಕೊಂಡು ಸಂಕಷ್ಟಕ್ಕೆ ಸಿಲುಕಿತು. ಹೀಗಾಗಿ 8ಕ್ಕೆ 148 ರನ್ ಗಳಿಸಲಷ್ಟೇ ತಂಡಕ್ಕೆ ಸಾಧ್ಯವಾಯಿತು.

34ಕ್ಕೆ 4 ವಿಕೆಟ್ ಕಳೆದುಕೊಂಡಿದ್ದಾಗ ಜೊತೆಗೂಡಿದ ರಿಂಕು ಸಿಂಗ್ ಮತ್ತು ವೆಂಕಟೇಶ್ ಅಯ್ಯರ್ 45 ರನ್‌ಗಳ ಜೊತೆಯಾಟವಾಡಿ ಭರವಸೆ ಮೂಡಿಸಿದರು. ಆದರೆ 100 ರನ್ ಗಳಿಸುವಷ್ಟರಲ್ಲಿ ಅವರಿಬ್ಬರೂ ವಿಕೆಟ್ ಕಳೆದುಕೊಂಡರು. ಈ ಸಂದರ್ಭದಲ್ಲಿ ಆ್ಯಂಡ್ರೆ ರಸೆಲ್ ತಂಡಕ್ಕೆ ಆಸರೆಯಾದರು. ಅವರ ಭರ್ಜರಿ ಆಟದಿಂದಾಗಿ ಕೊನೆಯ ವರೆಗೂ ಪಂದ್ಯ ಕುತೂಹಲ ಉಳಿಸಿಕೊಂಡಿತು. ಅಂತಿಮ ಓವರ್‌ನಲ್ಲಿ ತಂಡದ ಗೆಲುವಿಗೆ 17 ರನ್ ಬೇಕಾಗಿತ್ತು. ಅಲ್ಜರಿ ಹಾಕಿದ ಓವರ್‌ನ ಮೊದಲ ಎಸೆತವನ್ನು ರಸೆಲ್ ಸಿಕ್ಸರ್‌ಗೆ ಎತ್ತಿದರು. ಮುಂದಿನ ಎಸೆತದಲ್ಲಿ ಅವರ ವಿಕೆಟ್ ಪಡೆದು ಅಲ್ಜರಿ ಸಂಭ್ರಮಿಸಿದರು. ಇದು, ಪಂದ್ಯಕ್ಕೆ ಮಹತ್ವದ ತಿರುವು ನೀಡಿತು.

ಟಾಸ್ ಗೆದ್ದ ಗುಜರಾತ್ ನಾಯಕ ಹಾರ್ದಿಕ್ ಪಾಂಡ್ಯ ಬ್ಯಾಟಿಂಗ್ ಆಯ್ಕೆ ಮಾಡಿಕೊಂಡರು. ಶುಭಮನ್ ಗಿಲ್ ಬೇಗನೇ ಔಟಾದರು. ನಂತರ ವೃದ್ಧಿಮಾನ್ ಸಹಾ (25; 25 ಎಸೆತ, 2 ಬೌಂಡರಿ, 1 ಸಿಕ್ಸರ್) ಮತ್ತು ಹಾರ್ದಿಕ್ ಪಾಂಡ್ಯ (67; 49 ಎ, 4 ಬೌಂ, 2 ಸಿ) 75 ರನ್‌ಗಳ ಜೊತೆಯಾಟವಾಡಿದರು. ಡೇವಿಡ್ ಮಿಲ್ಲರ್ ಜೊತೆ ಹಾರ್ದಿಕ್ 50 ರನ್‌ಗಳ ಜೊತೆಯಾಟವಾಡಿ ತಂಡ ಗೌರವಾರ್ಹ ಮೊತ್ತ ಗಳಿಸಲು ನೆರವಾದರು.

ಕೊನೆಯ ಓವರ್‌ನಲ್ಲಿ ನಾಲ್ಕು ವಿಕೆಟ್ ಕಬಳಿಸಿ ರಸೆಲ್ ಮಿಂಚಿದರು. ನಾಲ್ಕು ಕ್ಯಾಚ್‌ಗಳನ್ನು ಪಡೆದ ರಿಂಕು ಸಿಂಗ್ ರಂಜಿಸಿದರು.

ಸಂಕ್ಷಿಪ್ತ ಸ್ಕೋರು: ಗುಜರಾತ್ ಟೈಟನ್ಸ್: 20 ಓವರ್‌ಗಳಲ್ಲಿ 9ಕ್ಕೆ 156 (ವೃದ್ಧಿಮಾನ್ ಸಹಾ 25, ಹಾರ್ದಿಕ್ ಪಾಂಡ್ಯ 67, ಡೇವಿಡ್ ಮಿಲ್ಲರ್ 27; ಉಮೇಶ್ ಯಾದವ್ 31ಕ್ಕೆ1, ಟಿಮ್ ಸೌಥಿ 24ಕ್ಕೆ3, ಶಿವಂ ಮಾವಿ 36ಕ್ಕೆ1, ಆ್ಯಂಡ್ರೆ ರಸೆಲ್ 5ಕ್ಕೆ4); ಕೋಲ್ಕತ್ತ ನೈಟ್ ರೈಡರ್ಸ್: 20 ಓವರ್‌ಗಳಲ್ಲಿ 20 ಓವರ್‌ಗಳಲ್ಲಿ 8ಕ್ಕೆ 148 (ರಿಂಕು ಸಿಂಗ್ 35, ಆ್ಯಂಡ್ರೆ ರಸೆಲ್ 48; ಮೊಹಮ್ಮದ್ ಶಮಿ 20ಕ್ಕೆ2, ಯಶ್ ದಯಾಳ್ 42ಕ್ಕೆ2, ಅಲ್ಜರಿ ಜೋಸೆಫ್ 31ಕ್ಕೆ1, ಲಾಕಿ ಫರ್ಗ್ಯುಸನ್ 33ಕ್ಕೆ1, ರಶೀದ್ ಖಾನ್ 22ಕ್ಕೆ2). ಫಲಿತಾಂಶ: ಗುಜರಾತ್ ಟೈಟನ್ಸ್‌ಗೆ 8 ರನ್‌ಗಳ ಜಯ.


ವಿಕೆಟ್ ಗಳಿಸಿದ ಆ್ಯಂಡ್ರೆ ರಸೆಲ್ ಸಂಭ್ರಮ –ಪಿಟಿಐ ಚಿತ್ರ

ವಿಶ್ವ ಟೆನ್–ಕೆಯಲ್ಲಿ 89ರ ರಘುನಾಥ್ ಕಣಕ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಾಸನ ಜಿಲ್ಲೆ ಬೈಲಹಳ್ಳಿಯ 89 ವರ್ಷದ ರಘುನಾಥ್ ಜನಾರ್ದನ್ ಅವರು ಈ ಬಾರಿಯ ಟಿಸಿಎಸ್ ವಿಶ್ವ ಟೆನ್‌–ಕೆ ಓಟದಲ್ಲಿ ಗಮನ ಸೆಳೆಯಲಿದ್ದಾರೆ. ಭಾರತೀಯ ರೈಲ್ವೆಯ ನಿವೃತ್ತ ಅಧಿಕಾರಿಯಾಗಿರುವ ಅವರು ಪದಕದ ಕನಸು ಹೊತ್ತು ಕಣಕ್ಕೆ ಇಳಿಯಲಿದ್ದಾರೆ.

ವಿಶ್ವ ಟೆನ್‌–ಕೆ ಓಟದ 14ನೇ ಆವೃತ್ತಿ ಮೇ 15ರಿಂದ ಬೆಂಗಳೂರಿನ ಕಂಠೀರವ ಕ್ರೀಡಾಂಗಣದಲ್ಲಿ ನಡೆಯಲಿದೆ. ಮೈದಾನ ಮತ್ತು ವರ್ಚುವಲ್ ಮಾದರಿಯಲ್ಲಿ ಸ್ಪರ್ಧೆಗಳು ನಡೆಯಲಿವೆ. ವಿಶ್ವದ ಪ್ರಮುಖ ದೂರ ಅಂತರದ ಓಟಗಾರರು ಪಾಲ್ಗೊಳ್ಳುವ ಸ್ಪರ್ಧೆಯಲ್ಲಿ ದೇಶದ ವಿವಿಧ ಭಾಗಗಳ ಓಟಗಾರರು ಗುಂಪು ಓಟದಲ್ಲೂ ಕಾಣಿಸಿಕೊಳ್ಳಲಿದ್ದಾರೆ.ರಘುನಾಥ್ ಅವರು ಕೆಲವು ತಿಂಗಳ ಹಿಂದೆ ಬೆನ್ನುನೋವಿಗೆ ಒಳಗಾಗಿದ್ದರು. ಅದರಿಂದ ಈ ವರೆಗೆ ಸಂಪೂರ್ಣವಾಗಿ ಚೇತರಿಸಿಕೊಳ್ಳಲಿಲ್ಲ. ಆದರೂ ಓಟದಲ್ಲಿ ಪಾಲ್ಗೊಳ್ಳುವ ಉತ್ಸಾಹ ಕಳೆದುಕೊಂಡಿಲ್ಲ. ಬ್ಯಾಕ್ ಸಪೋರ್ಟ್ ಬೆಲ್ಟ್ ಧರಿಸಿಕೊಂಡು ಅವರು ಓಡಲು ಸಜ್ಜಾಗಿದ್ದಾರೆ.

ಯುವಶಕ್ತಿಯ ಕಣ; ಚಿನ್ನಕ್ಕೆ ಪಣ

ಖೇಲೊ ಇಂಡಿಯಾ ವಿಶ್ವವಿದ್ಯಾಲಯಗಳ ಕ್ರೀಡಾಕೂಟಕ್ಕೆ ಇಂದು ಅಧಿಕೃತ ಚಾಲನೆ

• ವಿಕ್ರಂ ಕಾಂತಿಕೆರೆ

ಬೆಂಗಳೂರು: ಸಾಧನೆಯ ಹೊಸ ಮಜಲಿನತ್ತ ದಾಪುಗಾಲು ಇರಿಸುವ ಕನಸು ಹೊತ್ತು ಬಂದಿರುವ ದೇಶದ ‘ಯುವಶಕ್ತಿ’ಯ ಸಾಮರ್ಥ್ಯ ಪರೀಕ್ಷೆಗೆ ಇನ್ನು 10 ದಿನ ಉದ್ಯಾನ ನಗರಿ ವೇದಿಕೆಯಾಗಲಿದೆ. ಖೇಲೊ ಇಂಡಿಯಾ ವಿಶ್ವವಿದ್ಯಾಲಯಗಳ ಕ್ರೀಡಾಕೂಟಕ್ಕೆ (ಕೆಐಯುಜಿ) ಭಾನುವಾರ ಸಂಜೆ ಅಧಿಕೃತ ಚಾಲನೆ ಸಿಗಲಿದ್ದು ದೇಶದ ಎಲ್ಲ ದಿಕ್ಕುಗಳ ವಿವಿ ವಿದ್ಯಾರ್ಥಿಗಳು ತಮ್ಮ ಬಲವನ್ನು ನಿಕಷಕ್ಕೆ ಒಡ್ಡಲಿದ್ದಾರೆ.

ಕೆಐಯುಜಿಯ ಮೊದಲ ಆವೃತ್ತಿ ಎರಡು ವರ್ಷಗಳ ಹಿಂದೆ ಒಡಿಶಾದಲ್ಲಿ ನಡೆದಿತ್ತು. ಎರಡನೇ ಆವೃತ್ತಿಗೆ ಕೋವಿಡ್–19 ಕಾಡಿತ್ತು. ಹೀಗಾಗಿ ಎರಡು ವರ್ಷಗಳ ನಂತರ ಮತ್ತೆ ಕ್ರೀಡಾ ಕಲರವ ಗರಿಗೆದರಿದೆ. ಕರ್ನಾಟಕದ 16 ವಿವಿಗಳು ಸೇರಿದಂತೆ ದೇಶದ 190 ವಿವಿಗಳ 4500 ಕ್ರೀಡಾಪಟುಗಳು ಪದಕಗಳಿಗಾಗಿ ಸೆಣಸಲಿದ್ದಾರೆ.

- **ನೇರ ಪ್ರಸಾರ:** ಡಿಡಿ ಸ್ಪೋರ್ಟ್ಸ್, ಪ್ರಸಾರ ಭಾರತಿ ಯುಟ್ಯೂಬ್ ಚಾನಲ್
- **ಸಮಯ:** ಬೆಳಿಗ್ಗೆ 9ರಿಂದ ಸಂಜೆ 6
- **ಉದ್ಘಾಟನಾ ಸಮಾರಂಭದ ನೇರ ಪ್ರಸಾರ:** ಡಿಡಿ ಸ್ಪೋರ್ಟ್ಸ್, ದೂರದರ್ಶನ
- **ಸಮಯ:** ಸಂಜೆ 4.00



ಕ್ರೀಡಾಕೂಟ ನಡೆಯುವ ಅವಧಿ ಏಪ್ರಿಲ್ 24ರಿಂದ ಮೇ 3

ಯಾವ ಅಂಗಣದಲ್ಲಿ ಯಾವ ಕ್ರೀಡೆ?

ಕಂಠೀರವ ಕ್ರೀಡಾಂಗಣ	ಅಥ್ಲೆಟಿಕ್ಸ್, ಬ್ಯಾಸ್ಕೆಟ್‌ಬಾಲ್
ಜೈನ್ ಕ್ರೀಡಾ ಶಾಲೆ	ಫುಟ್‌ಬಾಲ್, ಟೇಬಲ್ ಟೆನಿಸ್, ಬ್ಯಾಡ್ಮಿಂಟನ್, ಟೆನಿಸ್
ಜೈನ್ ವಿವಿ ಆವರಣ	ಕುಸ್ತಿ, ವೇಟ್‌ಲಿಫ್ಟಿಂಗ್, ಜೂಡೊ, ಕಬಡ್ಡಿ, ವಾಲಿಬಾಲ್, ಈಜು, ಮಲ್ಲಕಂಬ, ಯೋಗಾಸನ, ಆರ್ಚರಿ, ಫೆನ್ಸಿಂಗ್, ಕರಾಟೆ, ಬಾಕ್ಸಿಂಗ್, ಫುಟ್‌ಬಾಲ್
ಭಾರತ ಕ್ರೀಡಾ ಪ್ರಾಧಿಕಾರ (ಸಾಯ್)	ಶೂಟಿಂಗ್
ಫೀಲ್ಡ್ ಮಾರ್ಷಲ್ ಕಾರ್ಯಪ್ಪ ಅಂಗಣ	ಹಾಕಿ



ಕಳೆದ ಬಾರಿಯ ಅಗ್ರ 4 ವಿಶ್ವವಿದ್ಯಾಲಯಗಳು

ವಿಶ್ವವಿದ್ಯಾಲಯ	ಪದಕ	ಚಿನ್ನ	ಬೆಳ್ಳಿ	ಕಂಚು
ಪಂಜಾಬ್	46	17	19	10
ಸಾವಿತ್ರಿಬಾಯಿಫುಲೆ	37	17	11	9
ಪಂಜಾಬಿ, ಪಟಿಯಾಲ	33	13	6	14
ಎಂಡಿಯು ಹರಿಯಾಣ	33	11	11	11

16 ಕರ್ನಾಟಕದಿಂದ ಪಾಲ್ಗೊಳ್ಳುವ ವಿಶ್ವವಿದ್ಯಾಲಯಗಳು
303 ಕರ್ನಾಟಕದಿಂದ ಭಾಗವಹಿಸುವ ಕ್ರೀಡಾಪಟುಗಳು
163 ಕರ್ನಾಟಕದ ಪುರುಷ ಕ್ರೀಡಾಪಟುಗಳು
140 ಕರ್ನಾಟಕದ ಮಹಿಳಾ ಕ್ರೀಡಾಪಟುಗಳು
261 ಕ್ರೀಡಾಕೂಟದಲ್ಲಿ ನೀಡಲಾಗುವ ಚಿನ್ನ, ಬೆಳ್ಳಿ
365 ಕ್ರೀಡಾಕೂಟದಲ್ಲಿ ನೀಡಲಾಗುವ ಕಂಚಿನ ಪದಕ

KHELO INDIA


ಕ್ರೀಡಾಕೂಟದ ಅಂಗವಾಗಿ ಶನಿವಾರ ನಡೆದ ಬ್ಯಾಸ್ಕೆಟ್‌ಬಾಲ್ ಸ್ಪರ್ಧೆಯಲ್ಲಿ ಪಂಜಾಬ್‌ನ ಗುರುನಾನಕ್ ವಿವಿಯ ಪೂಜಾ (ಎಡ) ಮತ್ತು ಮದ್ರಾಸ್ ವಿವಿಯ ಐಶ್ವರ್ಯ ಚೆಂಡಿಗಾಗಿ ಪೈಪೋಟಿ ನಡೆಸಿದರು –ಪ್ರಜಾವಾಣಿ ಚಿತ್ರ/ಎಸ್.ಕೆ.ದಿನೇಶ್

ಯುವ ಕ್ರೀಡಾಪಟುಗಳಿಗೆ ಅಂತರರಾಷ್ಟ್ರೀಯ ಮಟ್ಟದ ಪ್ರಮುಖ ಕೂಟಗಳಲ್ಲಿ ಅವಕಾಶ ಗಿಟ್ಟಿಸಿಕೊಳ್ಳಲು ಕೆಐಯುಜಿ ಚಿಮ್ಮುಹಲಗೆಯಾಗಿದೆ. ಆದ್ದರಿಂದ ಇಲ್ಲಿ ಸಂಪೂರ್ಣ ಶಕ್ತಿಯನ್ನು ಹೊರಹೊಮ್ಮಿಸಿ ಸ್ಪರ್ಧಿಸಲು ಮುಂದಾಗಲಿದ್ದಾರೆ. ಈ ಹಿನ್ನೆಲೆಯಲ್ಲಿ ಪ್ರತಿ ಸ್ಪರ್ಧೆಯೂ ರೋಮಾಂಚಕಾರಿಯಾಗುವ ನಿರೀಕ್ಷೆ ಇದೆ.

ಕಳೆದ ಬಾರಿ ಸ್ಪ್ರಿಂಟ್‌ನಲ್ಲಿ ಚಿನ್ನ ಗೆದ್ದ ಒಲಿಂಪಿಯನ್ ಹಾಗೂ 100 ಮೀಟರ್ಸ್ ಓಟದ ಹಾಲಿ ರಾಷ್ಟ್ರೀಯ ಚಾಂಪಿಯನ್ ಒಡಿಶಾದ ದ್ಯುತಿ ಚಾಂದ್, ವೇಟ್‌ಲಿಫ್ಟಿಂಗ್‌ನಲ್ಲಿ ರಾಷ್ಟ್ರೀಯ ದಾಖಲೆ ಮಾಡಿರುವ ಕೇರಳದ ಆ್ಯನ್ ಮರಿಯಾ, ಈಜುಕೊಳದ ಚಿನ್ನದ ಮೀನು, ಆತಿಥೇಯ ಜೈನ್ ವಿವಿಯ ಶ್ರೀಹರಿ ನಟರಾಜ್, ಟ್ರ್ಯಾಕ್‌ನಲ್ಲಿ ಮಿಂಚು ಮೂಡಿಸುತ್ತಿರುವ ಸ್ಥಳೀಯ ಪ್ರತಿಭೆ ಪ್ರಿಯಾ ಮೋಹನ್ ಮುಂತಾದವರಿಗೆ ಈ ಕ್ರೀಡಾಕೂಟ ಹೊಸಹಾದಿ ತೆರೆಯಲಿದೆ.

ಶೂಟಿಂಗ್ ಜೋಡಿ ದಿವ್ಯಾಂಶ್ ಸಿಂಗ್ ಪನ್ವಾರ್, ಐಶ್ವರ್ಯ ಪ್ರತಾಪ್ ಸಿಂಗ್ ತೋಮರ್, ಟಾಪ್ಸ್ ಯೋಜನೆಯಡಿ ಆಯ್ಕೆಯಾಗಿರುವ ಜೆಸ್ವಿನ್ ಆಲ್ಡ್ರಿನ್ (ಲಾಂಗ್‌ಜಂಪ್), ಯಶ್‌ವೀರ್ (ಜಾವೆಲಿನ್ ಥ್ರೋ), ಸಾಂಡ್ರಾ ಬಾಬು, ಆ್ಯನ್ಸ್ ಸೋಜನ್ (ಲಾಂಗ್ ಜಂಪ್), ಅಮಾನ್ (ಕುಸ್ತಿ), ಮಧು ವೇದ್ವಾನ್ (ಆರ್ಚರಿ), ಉನ್ನತಿ (ಜೂಡೊ), ಸಚಿನ್ ಸಿವಾಚ್ (ಬಾಕ್ಸಿಂಗ್), ಒಯಿನಮ್ ಯುವರಾಜ್ (ಫೆನ್ಸಿಂಗ್) ಮುಂತಾದವರ ಮೇಲೆಯೂ ದೃಷ್ಟಿ ನೆಟ್ಟಿದೆ.

ಪ್ರತಿಭೆಗೆ ಸಾಣೆ; ಸೌಲಭ್ಯ ಅಭಿವೃದ್ಧಿಗೆ ದಾರಿ

ಪ್ರಾದೇಶಿಕ ಮಟ್ಟದಲ್ಲಿ ಕ್ರೀಡಾಸೌಲಭ್ಯಗಳನ್ನು ಹೆಚ್ಚಿಸುವುದು ಖೇಲೊ ಇಂಡಿಯಾ ಯೋಜನೆಯ ಪ್ರಮುಖ ಗುರಿ. ಈ ಹಿನ್ನೆಲೆಯಲ್ಲಿ ರಾಜ್ಯದ ಕ್ರೀಡಾಭಿವೃದ್ಧಿಯ ಮೇಲೆ ಕೆಯುಐಜಿ ಪರಿಣಾಮ ಬೀರುವ ನಿರೀಕ್ಷೆ ಇದೆ. ಸ್ಥಳೀಯ ಕ್ರೀಡಾಪಟುಗಳ ಪ್ರತಿಭೆಗೆ ಸಾಣೆ ಹಿಡಿಯುವುದಕ್ಕೂ ಈ ಕ್ರೀಡಾಕೂಟ ನೆರವಾಗುವ ಭರವಸೆ ಇದೆ. ಕಳೆದ ಬಾರಿ ಕರ್ನಾಟಕದ 10 ವಿವಿಗಳು ಕನಿಷ್ಠ ಒಂದು ಪದಕವನ್ನಾದರೂ ಗೆದ್ದುಕೊಂಡಿವೆ. ಈ ಬಾರಿಯೂ ರಾಜ್ಯದ ವಿವಿಗಳು ಗಣನೀಯ ಸಂಖ್ಯೆಯಲ್ಲಿ ಸ್ಪರ್ಧಿಗಳನ್ನು ಕಣಕ್ಕೆ ಇಳಿಸಿವೆ.

ಅಥ್ಲೆಟಿಕ್ಸ್‌ನಲ್ಲಿ ಕಳೆದ ಬಾರಿ ಕರ್ನಾಟಕ ಮೊದಲ ಸ್ಥಾನ ಗಳಿಸಿತ್ತು. ಮಂಗಳೂರು ವಿವಿ 7 ಚಿನ್ನದೊಂದಿಗೆ 18 ಪದಕ ಗೆದ್ದುಕೊಂಡಿತ್ತು. ಈಜಿನಲ್ಲಿ ಜೈನ್ ವಿವಿ 7 ಚಿನ್ನದೊಂದಿಗೆ 14 ಪದಕ, ರಾಜೀವ ಗಾಂಧಿ ವಿವಿ 3 ಚಿನ್ನದೊಂದಿಗೆ 6 ಪದಕ ಗೆದ್ದಿತ್ತು. ಕುಸ್ತಿಯಲ್ಲಿ ರಾಣಿ ಚೆನ್ನಮ್ಮ ವಿವಿ ಕಂಚು ಗಳಿಸಿತ್ತು. ವೇಟ್‌ಲಿಫ್ಟಿಂಗ್‌ನಲ್ಲಿ 2 ಚಿನ್ನ ಸೇರಿದಂತೆ 4 ಪದಕಗಳು ಮಂಗಳೂರು ವಿವಿ ಪಾಲಾಗಿದ್ದವು. ವಾಲಿಬಾಲ್‌ನಲ್ಲಿ ಮೈಸೂರು ವಿವಿ ಚಿನ್ನ ಗೆದ್ದುಕೊಂಡಿತ್ತು. ಕಬಡ್ಡಿಯಲ್ಲಿ ಮಂಗಳೂರು ವಿವಿ ಕಂಚು ಗಳಿಸಿತ್ತು. ಬ್ಯಾಡ್ಮಿಂಟನ್‌ನಲ್ಲಿ ಜೈನ್ ವಿವಿಗೆ ಚಿನ್ನ, ಹಾಕಿಯಲ್ಲಿ ಬೆಂಗಳೂರು ವಿವಿಗೆ ಬೆಳ್ಳಿ ಗೆದ್ದುಕೊಂಡಿತ್ತು. ಈ ಬಾರಿ ಮನೆಯಂಗಳದಲ್ಲೇ ಕೂಟ ನಡೆಯುತ್ತಿದೆ. ಆದ್ದರಿಂದ ಪದಕಗಳ ಬೇಟೆಗೆ ಇನ್ನಷ್ಟು ಬಲ ತುಂಬಿದೆ.

ಕಳೆದ ಬಾರಿ ಕರ್ನಾಟಕದ ಸಾಧನೆ

ವಿಶ್ವವಿದ್ಯಾಲಯ	ಪದಕ	ಚಿನ್ನ	ಬೆಳ್ಳಿ	ಕಂಚು	ಸ್ಥಾನ
ಮಂಗಳೂರು	25	9	7	9	5
ಜೈನ್	16	8	6	2	7
ರಾಜೀವಗಾಂಧಿ	9	4	3	2	16
ಮೈಸೂರು	2	1	1	-	45
ರಾಣಿಚನ್ನಮ್ಮ	2	1	-	1	50
ಬೆಂಗಳೂರು	1	1	-	-	56
ವಿಶ್ವೇಶ್ವರಯ್ಯ	2	-	2	-	72
ಕ್ರೈಸ್ಟ್	2	-	1	1	76
ಕಾನೂನು ವಿವಿ	1	-	-	1	97
ಗುಲ್ಬರ್ಗ	1	-	-	1	97


ಉದ್ಘಾಟನಾ ಸಮಾರಂಭದಲ್ಲಿ ನೃತ್ಯ ಪ್ರದರ್ಶನ ನೀಡಲಿರುವ ಕಲಾವಿದರು ಕಂಠೀರವ ಕ್ರೀಡಾಂಗಣದಲ್ಲಿ ಶನಿವಾರ ಅಭ್ಯಾಸ ನಡೆಸಿದರು –ಪ್ರಜಾವಾಣಿ ಚಿತ್ರ

77,700 ಭಾರತೀಯರಿಂದ ಏಕಕಾಲದಲ್ಲಿ ಧ್ವಜಾರೋಹಣ

ಜಗದೀಶ್‌ಪುರ, ಬಿಹಾರ (ಪಿಟಿಐ): ಬಿಹಾರದ ಜಗದೀಶ್‌ಪುರದಲ್ಲಿ ಶನಿವಾರ 77,700 ಭಾರತೀಯರಿಂದ ಏಕಕಾಲದಲ್ಲಿ ಧ್ವಜ ಹಾರಿಸುವ ಮೂಲಕ ಮೂಲಕ ಬಿಜೆಪಿಯು ಪಾಕಿಸ್ತಾನದ 18 ವರ್ಷದ ಹಿಂದಿನ ದಾಖಲೆಯನ್ನು ಮುರಿದಿದೆ. ಈ ಘಟನೆಗೆ ಕೇಂದ್ರ ಗೃಹ ಸಚಿವ ಅಮಿತ್ ಶಾ ಸಾಕ್ಷಿಯಾಗಿದ್ದರು.

75ನೇ ವರ್ಷದ ಸ್ವಾತಂತ್ರ್ಯ ಅಮೃತ ಮಹೋತ್ಸವದ ಅಂಗವಾಗಿ, ಜಗದೀಶ್‌ಪುರದ ರಾಜ, 1857ರ ಭಾರತದ ಮೊದಲ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಹೋರಾಡಿದ ನಾಯಕ, ವೀರ ಕುನ್ವರ್ ಸಿಂಗ್ ಅವರ ಜನ್ಮದಿನದ ಆಚರಣೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಈ ಕಾರ್ಯಕ್ರಮದಲ್ಲಿಯೇ ಭಾರತೀಯರು ಧ್ವಜಾರೋಹಣ ಮಾಡಿದರು.

ಬಿಹಾರದ ಮುಖ್ಯಮಂತ್ರಿ ನಿತೀಶ್ ಕುಮಾರ್, ಉಪಮುಖ್ಯಮಂತ್ರಿಗಳಾದ ತಾರ್‌ಕಿಶೋರ್ ಪ್ರಸಾದ್ ಮತ್ತು ರೇಣು ದೇವಿ, ಕೇಂದ್ರ ಸಚಿವರಾದ ಆರ್‌.ಕೆ. ಸಿಂಗ್ ಹಾಗೂ ನಿತ್ಯಾನಂದ ರೈ ಅವರೊಂದಿಗೆ ಆಗಮಿಸಿದ ಅಮಿತ್ ಶಾ ಕಾರ್ಯಕ್ರಮಕ್ಕೆ ಆಗಮಿಸಿದರು. ರಾಷ್ಟ್ರೀಯ ಗೀತೆ ‘ವಂದೇ ಮಾತರಂ’ ಪ್ರಸಾರದ ವೇಳೆ ಒಟ್ಟು 5 ನಿಮಿಷಗಳ ಕಾಲ ರಾಷ್ಟ್ರೀಯ ಧ್ವಜವನ್ನು ಹಾರಿಸಲಾಯಿತು.

ಗಿನ್ನಿಸ್ ಬುಕ್ ಆಫ್ ವರ್ಲ್ಡ್ ರೆಕಾರ್ಡ್ಸ್ ಅವರ ಮೇಲ್ವಿಚಾರಣೆಯಲ್ಲಿ, ಕಾರ್ಯಕ್ರಮಕ್ಕೆ ಹಾಜರಾದವರ ಭೌತಿಕ ಗುರುತಿಗೆ, ಗುರುತಿನ ಚಿಹ್ನೆ, ಹಾಗೂ ಕ್ಯಾಮರಾದ ಕಣ್ಗಾವಲನ್ನು ರಚಿಸಲಾಗಿತ್ತು. ಧ್ವಜಾರೋಹಣದ ದೃಶ್ಯ ಎಲ್ಲರಿಗೂ ಕಾಣಿಸುವಂತೆ ದೈತ್ಯ ಪರದೆಯನ್ನು ಸಿದ್ಧಪಡಿಸಲಾಗಿತ್ತು.

2004ರಲ್ಲಿ 56 ಸಾವಿರ ಪಾಕಿಸ್ತಾನಿಯರು ಲಾಹೋರ್‌ನಲ್ಲಿ ಪಾಕ್ ಧ್ವಜವನ್ನು ಹಾರಿಸಿದ್ದರು. ಈ ದಾಖಲೆಯನ್ನು ಈಗ ಭಾರತ ಮುರಿದಿದೆ.

‘ಪ್ರಧಾನಿ ಮೋದಿ ಅವರು 2047ರ ವೇಳೆಗೆ ಭಾರತವನ್ನು ವಿಶ್ವದಲ್ಲಿಯೇ ಮೊದಲ ಸ್ಥಾನಕ್ಕೆ ತರಬೇಕೆಂಬ ಗುರಿ ಹೊಂದಿದ್ದಾರೆ’ ಎಂದು ಅಮಿತ್ ಶಾ ಹೇಳಿದರು. 2047ಕ್ಕೆ ಭಾರತಕ್ಕೆ ಸ್ವಾತಂತ್ರ್ಯ ಬಂದು 100 ವರ್ಷಗಳು ತುಂಬಲಿದೆ.

‘ಕ್ವಾಡ್’ ಚೀನಾ ವಿರುದ್ಧವಾಗಿದೆ ಎಂದಿದ್ದ ಷಿ’

ವಾಷಿಂಗ್ಟನ್ (ಪಿಟಿಐ): ‘ಚೀನಾದ ವಿರುದ್ಧ ‘ಕ್ವಾಡ್’ ಅನ್ನು ಬಲಪಡಿಸಲಾಗುತ್ತಿದೆ ಎಂದು ಚೀನಾದ ಅಧ್ಯಕ್ಷ ಷಿ ಜಿನ್‌ಪಿಂಗ್ ಅವರು ಒಮ್ಮೆ ನನ್ನ ಬಳಿ ಕೇಳಿದ್ದರು’ ಎಂದು ಅಮೆರಿಕ ಅಧ್ಯಕ್ಷ ಜೋ ಬೈಡನ್ ಹೇಳಿದ್ದಾರೆ.

ತಮ್ಮ ಖಾಸಗಿ ನಿವಾಸ ಸಿಯಾಟಲ್‌ನಲ್ಲಿ ಶುಕ್ರವಾರ ಡೆಮಾಕ್ರಟಿಕ್ ಪಕ್ಷದ ನಿಧಿಸಂಗ್ರಹಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ‘ನಾನು ಕ್ವಾಡ್ ಮೂಲಕ ಆಸ್ಟ್ರೇಲಿಯಾ, ಭಾರತ, ಜಪಾನ್, ಅಮೆರಿಕವನ್ನು ಒಟ್ಟಿಗೆ ಕರೆದೊಯ್ಯಲಿದ್ದೇನೆ’ ಎಂದು ಷಿ ಅವರಿಗೆ ಸೂಚಿಸಿದೆ. ಆಗ ಅವರು, ‘ನಮ್ಮ ಮೇಲೆ ಒತ್ತಡ ಹೇರಲು ನೀವು ಹೀಗೆ ಮಾಡುತ್ತಿದ್ದೀರಿ ಎಂದು ಹೇಳಿದ್ದಾಗಿ’ ತಿಳಿಸಿದರು.

‘ಅದಕ್ಕೆ ಇಲ್ಲ ಎಂದು ಪ್ರತಿಕ್ರಿಯಿಸಿದ ನಾನು, ಇಂಡೊ– ಪೆಸಿಫಿಕ್‌ನಲ್ಲಿ ಒಟ್ಟಿಗೆ ಕೆಲಸ ಮಾಡಲು ಅವಕಾಶವಿರುವ ಜನರನ್ನು ಒಟ್ಟಿಗೆ ಸೇರಿಸಲು ಪ್ರಯತ್ನಿಸುತ್ತಿದ್ದೇವೆ’ ಎಂದು ಅವರಿಗೆ ಸ್ಪಷ್ಟಪಡಿಸಿದ್ದಾಗಿ ಹೇಳಿದರು. ‘ಕ್ವಾಡ್’ ಮೈತ್ರಿ ರಚನೆಯನ್ನು ಆರಂಭದಿಂದಲೂ ಚೀನಾ ವಿರೋಧಿಸುತ್ತಿದೆ.

ಪ್ರಜಾವಾಣಿ

ಭಾನುವಾರದ ಪುರವಣಿ

ಭಾನುವಾರ, 24 ಏಪ್ರಿಲ್ 2022



ಕೃಷ್ಣಾಕುಮಾರಿಗೆ 100

13



ಶೇಕ್ಸ್‌ಪಿಯರ್‌ನ ನಿಜ ಬಣ್ಣ ಬಯಲು ಮಾಡಿದ ಶ್ರೀಮತಿ

15

ಲಂಕಾ ಡೈರಿ



ಆರ್ಥಿಕವಾಗಿ ದಿವಾಳಿ ಎದ್ದಿರುವ ಶ್ರೀಲಂಕಾ ಈಗ ಭರ್ಜರಿ ಸುದ್ದಿಯಲ್ಲಿದೆ. ವಾಸ್ತವವಾಗಿ ಈ ದ್ವೀಪರಾಷ್ಟ್ರದ ಇಂದಿನ ಸಂಕಷ್ಟಕ್ಕೆ ಕಾರಣವೇನು? ಅದು ಹೇಗೆಲ್ಲ ಬಾಹ್ಯ ಒತ್ತಡವನ್ನು ಅನುಭವಿಸುತ್ತಿದೆ? ಅಲ್ಲಿನ ಆಂತರಿಕ ಬೇಗುದಿ ಏನು? ಕಳೆದ ವಾರವಷ್ಟೇ ಶ್ರೀಲಂಕಾ ಪ್ರವಾಸ ಮುಗಿಸಿ ಬಂದಿರುವ ಲೇಖಕರು ಮಾಡಿಕೊಂಡ ಒಳನೋಟ ಬೀರುವ ಕೆಲವು ಟಿಪ್ಪಣಿಗಳು ಇಲ್ಲಿವೆ...

ಎಂ.ವೆಂಕಟಸ್ವಾಮಿ

ಶ್ರೀಲಂಕಾದ ಆರ್ಥಿಕ ಪರಿಸ್ಥಿತಿ ಈಗ ಹದಗೆಟ್ಟು ಅದರ ರೂಪಾಯಿ ಮೌಲ್ಯ ನೆಲಕಚ್ಚಿದೆ. ನಮ್ಮ ಒಂದು ರೂಪಾಯಿ ಅದರ ನಾಲ್ಕು ರೂಪಾಯಿಗೆ ಸಮ. ಸುದ್ದಿ ಚಾನೆಲ್‌ಗಳು ಶ್ರೀಲಂಕಾದಲ್ಲಿ ಒಂದು ಲೀಟರ್ ಹಾಲಿಗೆ 700 ರೂಪಾಯಿ, ಒಂದು ಕೆ.ಜಿ. ಅಕ್ಕಿಗೆ 500 ರೂಪಾಯಿ, ಒಂದು ಲೀಟರ್ ಪೆಟ್ರೋಲ್‌ಗೆ 350 ರೂಪಾಯಿ ಎಂದೆಲ್ಲಾ ಮಾಹಿತಿ ನೀಡುತ್ತಿದ್ದವು. ಶ್ರೀಲಂಕಾದಲ್ಲಿ ಎಲ್ಲೆಲ್ಲೂ ಪ್ರಕ್ಷುಬ್ಧ ವಾತಾವರಣವಿದ್ದು, ಕೊಲಂಬೊ ವಿಮಾನ ನಿಲ್ದಾಣ 13 ಗಂಟೆಗಳಿಂದ ವಿದ್ಯುತ್ ಇಲ್ಲದೆ ಕತ್ತಲಲ್ಲಿ ಮುಳುಗಿದೆ ಎಂಬ ಮಾಹಿತಿಯನ್ನೂ ಬಿತ್ತರಿಸುತ್ತಿದ್ದವು. ಇಂತಹ ಸುದ್ದಿಗಳ ಅಬ್ಬರದ ಮಧ್ಯೆ ಬೆಂಗಳೂರಿನಿಂದ 12 ಜನರಿದ್ದ ನಮ್ಮ ಗುಂಪು ಬಡಕಲು ಶ್ರೀಲಂಕಾ ಏರ್‌ಲೈನ್ಸ್ ವಿಮಾನದಲ್ಲಿ ಬೆಳಗಿನ 4.30ಕ್ಕೆ ಕೊಲಂಬೊ ನಿಲ್ದಾಣದಲ್ಲಿ ಇಳಿಯಿತು. ವಿಮಾನದಲ್ಲಿ ಒಂದು ಬಿಸಿ ಪಫ್ ತಿನ್ನಲು ಕೊಟ್ಟು, ಸೇಬು ಜ್ಯೂಸು ಮತ್ತು ನೀರು ಕುಡಿಸಿದ್ದರು.

ವಿಮಾನ ನಿಲ್ದಾಣದಲ್ಲಿ ವಿದ್ಯುತ್ ದೀಪಗಳು ಉರಿಯುತ್ತಿದ್ದುದನ್ನು ನೋಡಿ ಸ್ವಲ್ಪ ಸಮಾಧಾನಗೊಂಡೆವು. ಆಶ್ಚರ್ಯವೆಂದರೆ ನಾವು ಹೋದಾಗ ವಿಮಾನ ನಿಲ್ದಾಣದ ಇಮಿಗ್ರೇಷನ್ ವಿಭಾಗದಲ್ಲಿ ನೂರಕ್ಕೆ 90ರಷ್ಟು ಯುರೋಪಿಯನ್ನರೇ ತುಂಬಿಕೊಂಡಿದ್ದರು. ಶ್ರೀಲಂಕಾದ ಪರಿಸ್ಥಿತಿ ಇವರಿಗೆ ಗೊತ್ತಿಲ್ಲವೇ ಎನ್ನುವ ಅನುಮಾನದ ಜೊತೆಗೆ ನಮ್ಮ ಸುದ್ದಿ ಚಾನೆಲ್‌ಗಳು ಶ್ರೀಲಂಕಾದ ಬಗ್ಗೆ ಇಲ್ಲಸಲ್ಲದ ವಿಷಯವನ್ನು ಪ್ರಸಾರ ಮಾಡುತ್ತಿವೆಯೇ ಎನ್ನುವ ಅನುಮಾನವೂ ಹುಟ್ಟಿಕೊಂಡಿತು. ನಾವು ಶ್ರೀಲಂಕಾಕ್ಕೆ ಹೋಗುತ್ತಿದ್ದೇವೆ ಎಂದು ತಿಳಿದ ಕೆಲವು ಗೆಳೆಯರು/ನೆಂಟರು ಹೌಹಾರಿ, 'ಅಯ್ಯೋ ಅಲ್ಲಿಗ್ಯಾಕೆ ಹೋಗ್ತಾ ಇದ್ದೀರ? ಅಲ್ಲಿ ಅನ್ನ, ನೀರು ಏನೂ ಸಿಗಲ್ವಂತೆ' ಎಂದಿದ್ದರು. ಪ್ಯಾಕೇಜ್ ಟೂರ್ ಬುಕ್ ಮಾಡಿ ಹಣಕಟ್ಟಿದ ಮೇಲೆ ಅದು ಹಿಂದಕ್ಕೆ ಬರುವುದಿಲ್ಲ ಎಂಬ ಕಾರಣಕ್ಕೆ ನಾನು ನಿರ್ಧಾರವನ್ನು ಬದಲಿಸಲಿಲ್ಲ.

ವಿಮಾನ ನಿಲ್ದಾಣದಲ್ಲಿ ಕಾಯುತ್ತಿದ್ದ ಗೈಡ್ ನಟರಾಜನ್ ನಮ್ಮನ್ನು ಟೆಂಪೊದಲ್ಲಿ ಹತ್ತಿಸಿಕೊಂಡು ಕೊಲಂಬೊ ಪಕ್ಕದ ಮೀನುಗಾರರ ಪಟ್ಟಣ ನುಗುಂಬೊ ಕಡೆಗೆ ಕರೆದೊಯ್ಯುವಾಗ 'ನೀವೇನೂ ಭಯ ಪಡಬೇಡಿ, ನಿಮಗೆ ಯಾವುದೇ ತೊಂದರೆಯಾಗುವುದಿಲ್ಲ. ಶ್ರೀಲಂಕಾ ಜನರು ತುಂಬಾ ಒಳ್ಳೆಯವರು, ಶಾಂತಿಪ್ರಿಯರು, ಸ್ನೇಹಪರರು. ಆದರೆ, ಹೋಟೆಲುಗಳಲ್ಲಿ ಅಥವಾ ಪ್ರವಾಸಿ ತಾಣಗಳಲ್ಲಿ ಯಾರಾದರೂ ನಿಮ್ಮ ಪರಿಚಯ ಮಾಡಿಕೊಳ್ಳಲು ಬರಬಹುದು. ಅದು ಇದೂ ಮಾತನಾಡಿ ಕೊನೆಗೆ ಹಣ ಕೇಳಬಹುದು' ಎಂದಿದ್ದ. ಶ್ರೀಲಂಕಾದಲ್ಲಿ ಈಗ ಆರ್ಥಿಕ ಪರಿಸ್ಥಿತಿ ಚೆನ್ನಾಗಿಲ್ಲ ಎನ್ನುವುದು ನಿಜ. ಒಂದು ಲೀಟರ್ ಪೆಟ್ರೋಲ್‌ಗೆ 350 ರೂಪಾಯಿ, ಅಡುಗೆ ಅನಿಲದ ಸಿಲಿಂಡರ್‌ಗೆ 3,700 ರೂಪಾಯಿ ಇದೆ. ಆದರೆ, ಭಾರತಕ್ಕೆ ಹೋಲಿಸಿದರೆ ಇದು ಕಡಿಮೆ ಎಂದ.

ನಾವು ಹೊರಟಾಗ ಸಮಯ ಬೆಳಗಿನ ಆರು ಗಂಟೆ. ಸಣ್ಣಸಣ್ಣ ಟಾರ್ ರಸ್ತೆಗಳು. ಎರಡೂ ಕಡೆ ಮಾವು, ತೆಂಗು, ಹಲಸು, ಅಡಿಕೆ ಮರಗಳಲ್ಲದೆ ವಿವಿಧ ರೀತಿಯ ಸಸ್ಯರಾಶಿ ತುಂಬಿಕೊಂಡಿತ್ತು. ನನಗೆ ಅಸ್ಸಾಂನ ಬ್ರಹ್ಮಪುತ್ರಾ ನದಿ ಕಣಿವೆಯ ಹಳ್ಳಿಗಳು ಮತ್ತು ಹಸಿರು ತೋಟಗಳ ಮಧ್ಯೆ ಹೋಗುತ್ತಿರುವಂತೆ ಭಾಸವಾಯಿತು. ಮನೆ ಬಾಗಿಲುಗಳು ಇನ್ನೂ ಮುಚ್ಚಿಕೊಂಡೇ ಇದ್ದವು. ಅಲ್ಲಿಂದ ಹೋಟೆಲ್ ತಲುಪಿದಾಗ ಎಲ್ಲವೂ ಸಾಮಾನ್ಯವಾಗಿತ್ತು. ಕೋಣೆಯಲ್ಲಿ ಎರಡು ಲೀಟರ್ ನೀರು, ಹಾಲಿನ ಪುಡಿ, ಕಾಫಿ, ಟೀ ಪ್ಯಾಕೆಟ್‌ಗಳು ಇದ್ದವು. ನೀರು ಕುಡಿದು, ಒಳ್ಳೆಯ ಶ್ರೀಲಂಕಾ ಟೀ ಮಾಡಿಕೊಂಡು ಕುಡಿದೆವು. ಎ.ಸಿ. ಚಾಲೂ ಆಗಿತ್ತು. ಸ್ನಾನದ ಕೋಣೆಯಲ್ಲಿ ಬಿಸಿನೀರು ಬರುತ್ತಿತ್ತು. ಕಾಂಪ್ಲಿಮೆಂಟ್ ಬ್ರೇಕ್‌ಫಾಸ್ಟ್‌ಗೆ ಹೋದಾಗ ಲೆಕ್ಕವಿಲ್ಲದಷ್ಟು ವೆಜ್, ನಾನ್‌ವೆಜ್ ತಿಂಡಿಗಳು, ಹಣ್ಣು, ಬೇಕರಿ ತಿನಿಸುಗಳು ಇದ್ದವು. ಡೈನಿಂಗ್ ಹಾಲ್ ತುಂಬಾ ಯುರೋಪಿಯನ್ನರೇ ತುಂಬಿಕೊಂಡಿದ್ದರು.

* * *

ಸುಮಾರು ಏಳು ಕೋಟಿ ವರ್ಷಗಳ ಹಿಂದೆ ಅಂಟಾರ್ಕಟಿಕದಿಂದ ಬೇರ್ಪಟ್ಟ ಭಾರತ ಉಪಖಂಡದ ಭೂಫಲಕದ ಬಾಲವಾಗಿದ್ದ ಶ್ರೀಲಂಕಾ, ಕೇವಲ ಕೆಲವು ಸಾವಿರ ವರ್ಷಗಳ ಹಿಂದೆ ರಾಮೇಶ್ವರ ಮತ್ತು ಜಾಫ್ನಾ ಮಧ್ಯೆ ಹಿಂದೂ ಮಹಾಸಾಗರದಲ್ಲಿ ಜಲಸಂಧಿ ಕಾಣಿಸಿಕೊಂಡು ಪ್ರತ್ಯೇಕಗೊಂಡಿತು. ಇಂದಿಗೂ ಎರಡೂ ದೇಶಗಳು ಭೌಗೋಳಿಕ-ಭೂ ಐತಿಹಾಸಿಕ, ಸಸ್ಯ-ಪ್ರಾಣಿ-ಪಕ್ಷಿ ಸಂಕುಲದ ವಿಷಯದಲ್ಲಿ ಬಹಳಷ್ಟು ಸಾಮ್ಯತೆ ಹೊಂದಿವೆ. ಕಲೆ-ಸಂಸ್ಕೃತಿ ಪುರಾಣಗಳನ್ನೂ ಹಂಚಿಕೊಂಡಿವೆ. ರಾಮಾಯಣದ ಕಥೆಗೆ ಬಂದಾಗಲಂತೂ ಭಾರತ-ಶ್ರೀಲಂಕಾವನ್ನು ಪ್ರತ್ಯೇಕಿಸಲು ಸಾಧ್ಯವಿಲ್ಲ.

ಶ್ರೀಲಂಕಾದಲ್ಲಿ 1.25 ಲಕ್ಷ ವರ್ಷಗಳ ಹಿಂದಿನ ಪ್ರಾಗ್‌ಜೀವಿ ಸೈಟ್‌ಗಳು ದೊರಕಿವೆ. ಇಲ್ಲಿನ ಮೂಲ ಜನ ಆಫ್ರಿಕಾದಿಂದ ಕಡಲ ಮೇಲೆ ತೆಪ್ಪಗಳಲ್ಲಿ ಬಂದವರು ಎನ್ನಲಾಗಿದೆ. ದ್ರಾವಿಡರೂ ಮೂಲವಾಗಿ ಆಫ್ರಿಕಾ ಖಂಡದಿಂದ ಬಂದವರೇ. ಪಾಲಿ ಭಾಷೆಯಲ್ಲಿ ದಾಖಲಾಗಿರುವ ಬುದ್ಧನ ಬಗೆಗಿನ ವಿವರಣೆಗಳನ್ನು 'ಪೋಲಿಕಾನನ್' ಎಂದು ಕರೆಯಲಾಗಿದ್ದು, ನಾಲ್ಕನೇ ಬೌದ್ಧ ಕೌನ್ಸಿಲ್ ಕ್ರಿ.ಪೂ. 29ರಲ್ಲಿ ಶ್ರೀಲಂಕಾದಲ್ಲಿ ನಡೆದಿರುವುದಾಗಿ ದಾಖಲೆಗಳು ದೊರಕಿವೆ. ಬೌದ್ಧ ರಾಜ ಅಶೋಕನ ಮಗ ಮಹೇಂದ್ರ ಮತ್ತು ಮಗಳು ಸಂಘಮಿತ್ರಾ ಶ್ರೀಲಂಕಾಕ್ಕೆ ಬಂದು ಬೌದ್ಧ ಧಮ್ಮವನ್ನು ಸ್ಥಾಪಿಸಿದರು ಎನ್ನುವ ದಾಖಲೆಗಳಿವೆ.

ಶ್ರೀಲಂಕಾ ಭೂವಿಸ್ತೀರ್ಣದಲ್ಲಿ ಕರ್ನಾಟಕದ ಸುಮಾರು ಮೂರನೇ ಒಂದು ಭಾಗದಷ್ಟಿದೆ. ಇಲ್ಲಿ ಶೇ 75ರಷ್ಟು ಸಿಂಹಳೀಯರು ಶೇ 11ರಷ್ಟು ಶ್ರೀಲಂಕಾ ತಮಿಳರು, ಶೇ 9.2ರಷ್ಟು ತಮಿಳುನಾಡಿನ ತಮಿಳರು ಮತ್ತು ಶೇ 4ರಷ್ಟು ಉಳಿದವರು ಇದ್ದಾರೆ. ಶ್ರೀಲಂಕಾ ಭೌಗೋಳಿಕವಾಗಿ ಹಿಂದೂ ಮಹಾಸಾಗರದಲ್ಲಿ ವ್ಯೂಹಾತ್ಮಕವಾಗಿ ಮಹತ್ವ ಪಡೆದುಕೊಂಡಿದ್ದು ಮೂರು ದಶಕಗಳ ಹಿಂದೆಯೇ ಚೀನಾದ ವಕ್ರಕಣ್ಣು ಇದರ ಮೇಲೆ ಬಿದ್ದಿದೆ. ಶ್ರೀಲಂಕಾ ಹಿಂದಿನ ಕಾಲದಲ್ಲಿ ರೇಷ್ಮೆ ರಸ್ತೆಯ ದಾರಿಯಲ್ಲಿತ್ತು. ಈಗಲೂ ಅದು ಬಹಳ ಮುಖ್ಯವಾದ ಜಲ ವ್ಯಾಪಾರ ಮಾರ್ಗದಲ್ಲಿದೆ. ಪೂರ್ವ ಏಷ್ಯಾದಿಂದ ಯುರೋಪ್‌ವರೆಗೂ ನಡೆಯುತ್ತಿದ್ದ ವ್ಯಾಪಾರದ ಅವಧಿಯನ್ನು ಅನುರಾಧಾಪುರ (ಬೌದ್ಧಕೇಂದ್ರ) ಕಾಲವೆಂದು ಪರಿಗಣಿಸಲಾಗಿದೆ.

ಚೀನಾ ಈಗ ಅದೇ ಕಾರಣಕ್ಕೆ ಶ್ರೀಲಂಕಾಕ್ಕೆ ಹೇರಳ ಸಾಲ ಕೊಟ್ಟು ಶೂಲಕ್ಕೆ ಏರಿಸಿ ಕುಳಿತುಕೊಂಡಿದೆ. ಚೀನಾದ ಮುಖ್ಯ ಉದ್ದೇಶ ಹಿಂದೂ ಮಹಾಸಾಗರವನ್ನು ತನ್ನ ಹತೋಟಿಯಲ್ಲಿ ಇಟ್ಟುಕೊಳ್ಳುವುದು. ಈಗಾಗಲೇ ಅದು ಸಮುದ್ರಕ್ಕೆ ಸಾಕಷ್ಟು ಮರಳು-ಮಣ್ಣು ತುಂಬಿ ಮಾತ್ರಾ ಎಂಬ ಪ್ರದೇಶದಲ್ಲಿ ಒಂದು ದೊಡ್ಡ ಪಟ್ಟಣವನ್ನೇ ನಿರ್ಮಿಸಿ ಅದರಲ್ಲಿ ಚೀನೀಯರನ್ನು ತುಂಬಿಸಿ ಇಟ್ಟುಕೊಂಡಿದೆ. ಚೀನಾ, ಕೊಲಂಬೊದಿಂದ ಮಾತ್ರಾವರೆಗೆ 300 ಕಿ.ಮೀ. ಉದ್ದದ ಎಕ್ಸ್‌ಪ್ರೆಸ್ ರಸ್ತೆ ನಿರ್ಮಿಸಿದ್ದು, ಅದರಲ್ಲಿ ಬರುವ ವಾಹನಗಳ ತೆರಿಗೆಯ ಶೇ 90ರಷ್ಟು ಹಣ ಚೀನಾ ಸರ್ಕಾರಕ್ಕೆ ಹೋಗುತ್ತಿದೆ. ರಸ್ತೆ ತೆರಿಗೆಯ ಕೇವಲ ಶೇ 10ರಷ್ಟು ಪಾಲು ಶ್ರೀಲಂಕಾ ಸರ್ಕಾರಕ್ಕೆ ದೊರಕುತ್ತಿದೆ. ಇದು 30 ವರ್ಷಗಳ ಒಪ್ಪಂದದ ಪರಿಣಾಮವಂತೆ.

ಆರು ದಿನಗಳವರೆಗೆ ನಾವು ಓಡಾಡಿದ ರಸ್ತೆಗಳು ತುಂಬಾ ಚೆನ್ನಾಗಿದ್ದು ಒಂದೇ ಒಂದು ಹಂಪ್ ಕೂಡ ಕಾಣಿಸಲಿಲ್ಲ. 'ಇದ್ಹೇಗೆ ಸಾಧ್ಯ' ಎಂದು ನಟರಾಜನ್‌ಗೆ ಕೇಳಿದಾಗ, ಕೆಲವು ಕುತೂಹಲಕರ ವಿಷಯಗಳು ಹೊರಬಿದ್ದವು. ಚೀನಾ ತನ್ನ ದೇಶದ ಜೈಲುಗಳಲ್ಲಿದ್ದ ಸಾವಿರಾರು ಕೈದಿಗಳು ಮತ್ತು ಬಡವರನ್ನು ಶ್ರೀಲಂಕಾಕ್ಕೆ ಕರೆದುತಂದು ಖುದ್ದಾಗಿ ಅದೇ ನಿಂತು ರಸ್ತೆಗಳನ್ನು ನಿರ್ಮಿಸಿದೆಯಂತೆ. ಕೊಲಂಬೊದಲ್ಲಿ ಒಂದೂವರೆ ಸಾವಿರ ಜನರು ಹಿಡಿಯುವ ಸಾಂಸ್ಕೃತಿಕ ಕೇಂದ್ರ ನಿರ್ಮಿಸಿ ದಾನ ಮಾಡಿದೆಯಂತೆ. ಅದೇ ರೀತಿ ಜಪಾನ್, ಹೊಸ ಪಾರ್ಲಿಮೆಂಟ್ ಕಟ್ಟಡ ಕಟ್ಟಿಕೊಟ್ಟಿರುವುದಾಗಿ ತಿಳಿಯಿತು.



ಕ್ಯಾಂಡಿ ದಾರಿಯಲ್ಲಿ ಆನೆಗಳ ಹಿಂಡು



ಶ್ರೀಲಂಕಾದಲ್ಲಿ ಸಾವಯವ ಭತ್ತದ ಗದ್ದೆಯಲ್ಲಿ ರೈತ



ಕರೆಂಟು ಹೋದ ಟೈಮಲಿ... ಬುಡ್ಡಿ ದೀಪದ ಬೆಳಕಿನಲ್ಲಿ ಶ್ರೀಲಂಕಾ ರೆಸ್ಟೋರೆಂಟ್

ಕೊಲಂಬೊದಲ್ಲಿರುವ ಅನೇಕ ಕಟ್ಟಡಗಳನ್ನು ಯಾರ್‍ಯಾರಿಗೋ ಮಾರಿಕೊಂಡಿರುವುದಾಗಿಯೂ ಗೈಡ್ ಹೇಳಿದ.

* * *


ಈ ದ್ವೀಪ ರಾಷ್ಟ್ರದ ಇತಿಹಾಸವನ್ನು ಸ್ವಲ್ಪ ಕೆದಕಿದರೆ, ಮೊದಲಿಗೆ ಪೋರ್ಚುಗೀಸರು ಬಂದು ದ್ವೀಪವನ್ನು ತಮ್ಮ ವಶಕ್ಕೆ ತೆಗೆದುಕೊಂಡುಬಿಟ್ಟರು. ಸಿಂಹಳಿಯರು ಮತ್ತು ಪೋರ್ಚುಗೀಸರ ನಡುವೆ ಯುದ್ಧ ನಡೆದ ಕಾಲದಲ್ಲಿಯೇ ಡಚ್ಚರು ಕ್ಯಾಂಡಿ ರಾಜಧಾನಿಯನ್ನು ನಿಯಂತ್ರಣಕ್ಕೆ ಪಡೆದುಕೊಂಡರು. ಮುಂದೆ ಡಚ್ಚರನ್ನು ಸೋಲಿಸಿದ ಬ್ರಿಟಿಷರು (1815-1948) ಆಡಳಿತ ನಡೆಸಿದರು. ಸಿಂಹಳಿಯರು ರಾಷ್ಟ್ರೀಯ ಆಂದೋಲನ ನಡೆಸಿ 1948ರಲ್ಲಿ ಬ್ರಿಟಿಷರಿಂದ ಸ್ವಾತಂತ್ರ್ಯ ಪಡೆದುಕೊಂಡರು.

13ನೇ ಪುಟಕ್ಕೆ

ಈ ಶೆಟ್ಟರ ಮಂಡೆಯಲ್ಲಿ ಬುದ್ಧಿ ಉಂಟೋ!

ರಘುರಾಮ ಶೆಟ್ಟರು ನಾಯಕನೋ ಅಥವಾ ದುರಂತ ನಾಯಕನೋ ಅಂತ ಕನ್‌ಫ್ಯೂಷನ್ ಇದೆ. ಆದರೆ, ಈ ಶೆಟ್ಟರು ಎಂದರೆ ಕರಾವಳಿ ಜನರು ಆರಾಧಿಸುವ ಭೂತದೈವದಂತೆ. ಅವರು ಕಟ್ಟಿಕೊಂಡು ಬಂದಿದ್ದ ಬಾಲಕರು ಅಭಿಮನ್ಯುಗಳಂತೆ.

ದೇವನೂರ ಮಹಾದೇವ



ನಾನೀಗ ಅಷ್ಟಾಗಿ ಎಲ್ಲಿಗೂ ಹೋಗುತ್ತಿಲ್ಲ. ಆರೋಗ್ಯ ಕೈ ಕೊಡುತ್ತಿದೆ. ಆದರೂ ಇಲ್ಲಿಗೆ ಬಂದೆ. ಕಾರಣ – ರಘುರಾಮ ಶೆಟ್ಟರು 'ಪ್ರಜಾವಾಣಿ'ಯಲ್ಲಿ ಇದ್ದಾಗಿನಿಂದಲೂ ನನಗೆ ಗೊತ್ತು. 'ಮುಂಗಾರು' ಪತ್ರಿಕೆ ನಡೆಸುತ್ತಿರುವಾಗಲೂ ನನಗೆ ಗೊತ್ತು. ಅವರು ಇವತ್ತು ಕಣ್ಮರೆಯಾಗುತ್ತಿರುವ ಸಾಮಾಜಿಕ ನ್ಯಾಯದ ಪ್ರತೀಕವಾಗಿದ್ದರು. ದಲಿತರು, ಹಿಂದುಳಿದವರು, ಹಳ್ಳಿಗರು, ಅಸಹಾಯಕರು ಎಲ್ಲಾ ಕ್ಷೇತ್ರಗಳಲ್ಲಿ ಭಾಗವಹಿಸುವಂತೆ ಆಗಬೇಕೆಂದು ತಹತಹಿಸುತ್ತಿದ್ದರು. ಇದನ್ನೇ ತಮ್ಮ ಕಾರ್ಯಕ್ಷೇತ್ರದಲ್ಲೂ ಅಳವಡಿಸಿಕೊಂಡಿದ್ದ ವಡ್ಡರ್ಸೆಯವರು ದಕ್ಷಿಣ ಕನ್ನಡ ಜಿಲ್ಲೆಯ ಬಂಟ ಸಮುದಾಯಕ್ಕೆ ಸೇರಿದವರು. ಈಗ ಅವರು ಇಲ್ಲ. ಬಂಟರೂ ನೆನಪಿಸಿಕೊಳ್ಳುತ್ತಿಲ್ಲ, ಶೆಟ್ಟರು ತಮ್ಮ ಹೃದಯದಲ್ಲಿಟ್ಟುಕೊಂಡಿದ್ದ ತಳಸಮುದಾಯದವರೂ ನೆನಪಿಸಿಕೊಳ್ಳುತ್ತಿಲ್ಲ. ಈ ಸಂಕಟಕ್ಕಾಗಿ ಬಂದೆ.

ವಡ್ಡರ್ಸೆಯವರ 'ಮುಂಗಾರು' ಪತ್ರಿಕೆಯನ್ನು ನಾನು ಬಿಡುಗಡೆ ಮಾಡಿದ್ದೆ. ರಘುರಾಮ ಶೆಟ್ಟರು ನನ್ನನ್ನು ಬಿಡದೆ ಹೆಚ್ಚೂಕಮ್ಮಿ ಎಳೆದುಕೊಂಡೇ ಹೋಗಿ ನನ್ನಿಂದ ಬಿಡುಗಡೆ ಮಾಡಿಸಿದರು. ಅದು ನಡೆದದ್ದು 1984ರ ಸೆಪ್ಟೆಂಬರ್ 9ರಂದು. ತೇಜಸ್ವಿ ಅಧ್ಯಕ್ಷತೆ ವಹಿಸಿದ್ದರು. ಅಂತೂ ಬಿಡುಗಡೆ ಮಾಡಿದೆ. ಐದಾರು ವಾಕ್ಯಗಳನ್ನೂ ಮಾತಾಡಿದೆ. ಐದಾರು ಅಂದರೆ ಐದಾರು ವಾಕ್ಯಗಳು ಮಾತ್ರವೇ. ಅಲ್ಲಿ ಹೇಗೆ ಮಾತಾಡಿದೆನೋ ಹಾಗಾಗೇ ಈಗಲೂ ನೆನಪಿದೆ. ಬಹುಶಃ ನನ್ನ ಆ ಮಾತುಗಳ ಮೋಹಕ್ಕೆ ನಾನೇ ಒಳಗಾಗಿಬಿಟ್ಟಿದ್ದೆ ಅನ್ನಿಸುತ್ತದೆ.

ನಾನು ಅಲ್ಲಿ ಮಾತಾಡಿದ್ದು ಇಷ್ಟು: 'ದಕ್ಷಿಣ ಕನ್ನಡ ಜಿಲ್ಲೆಯವರು ವಿದ್ಯಾವಂತರು, ಬುದ್ಧಿವಂತರು ಎಂಬ ಮಾತು ನಮ್ಮ ಕಡೆ ಪ್ರಚಲಿತವಿದೆ. ಜೊತೆಗೆ ಇದು ಭೂತಾರಾಧನೆ, ಯಕ್ಷಗಾನದ ನೆಲ. ಇಲ್ಲಿನವರಿಗೆ ರಘುರಾಮ ಶೆಟ್ಟರ 'ಮುಂಗಾರು' ಪತ್ರಿಕೆ ಸಾಹಸ ಹೇಗೆ ಕಾಣಿಸಬಹುದು ಎಂಬ ಕುತೂಹಲ ನನಗೆ. ನೀವು ಹೀಗೆ ಅಂದುಕೊಳ್ಳಬಹುದು: 'ಈ ರಘುರಾಮ ಶೆಟ್ಟರ ಮಂಡೆಯಲ್ಲಿ ಬುದ್ಧಿ ಉಂಟೋ? ಈ ಬಾಲಕರನ್ನು ಕಟ್ಟಿಕೊಂಡುಬಂದು ಸಮರಕ್ಕೆ ಹೊರಟಿದ್ದಾರಲ್ಲ!' ಅಂತ. ಆದರೆ ನೆನಪಿಡಿ - ಈ ರಘುರಾಮ ಶೆಟ್ಟಿ ಎಂಬ ವ್ಯಕ್ತಿ ನೀವು ಆರಾಧಿಸುವ ಭೂತದೈವದಂತೆ. ಈ ಬಾಲಕರು ಅಭಿಮನ್ಯುಗಳು'– ಇದಷ್ಟೇ ಅಂದು ನಾನು ಮುಂಗಾರು ಪತ್ರಿಕೆ ಬಿಡುಗಡೆ ಮಾಡಿ ಮಾತಾಡಿದ್ದು!

ನಿಜ, ಮುಂಗಾರು ಪತ್ರಿಕೆಯ ಸಂಪಾದಕ ಮಂಡಲಿಯಲ್ಲಿದ್ದ ಆ ಬಾಲಕರು ಅಭಿಮನ್ಯುಗಳೇ ಆಗಿದ್ದರು. ಅವರು ಚಕ್ರವ್ಯೂಹ ಭೇದಿಸಬಲ್ಲವರಾಗಿದ್ದರು ಕೂಡ. ಆದರೆ ಅವರು ತಮ್ಮ ಅಪಕ್ವ ಆದರ್ಶಕ್ಕೆ ಬಲಿಯಾಗಿ ಕೆಲವೇ ತಿಂಗಳುಗಳಲ್ಲಿ ಮುಂಗಾರುವಿನಿಂದಲೇ ನಿರ್ಗಮನರಾದರು. ಇದನ್ನೆಲ್ಲಾ ನೋಡಿದಾಗ ಅನ್ನಿಸಿತು- ಆ ಬಾಲಕರು ಚಕ್ರವ್ಯೂಹ ಭೇದಿಸಬಲ್ಲವರಾಗಿದ್ದರು, ನಿಜ. ಆದರೆ ಚಕ್ರವ್ಯೂಹವನ್ನು ಸದೆಬಡಿದು ಹೊರಬಂದು ಯುದ್ಧ ಗೆಲ್ಲುವುದು ಗೊತ್ತಿರಲಿಲ್ಲ. ಹುಲಿಯಂತಾಡುವುದು ಗೊತ್ತಿತ್ತು. ಬೆಕ್ಕಿನಂತೆ ಮರ ಹತ್ತಿ ಉಳಿಯುವುದು ಗೊತ್ತಿರಲಿಲ್ಲ. ಬಹುಶಃ ಈಗ ಆ ಮಾಜಿ ಬಾಲಕರಿಗೂ ಹೀಗೇ ಅನ್ನಿಸುತ್ತಿರಬಹುದು.

ಈ ಎಲ್ಲಾ ಆಗಿ ಮುಂಗಾರು ಪತ್ರಿಕೆಯಿಂದ ನಿರ್ಗಮಿಸಿದ ಈ ಬಾಲಕರು ನನಗೂ ಅಚ್ಚುಮೆಚ್ಚಿನವರೇ ಆಗಿದ್ದರು. ಆಗ ತುಂಬಾ ತೊಳಲಾಟಕ್ಕೆ ಒಳಗಾದೆ. ಹೆಚ್ಚೂ ಕಮ್ಮಿ ಒಂಟಿಯಾದ ರಘುರಾಮ ಶೆಟ್ಟರ ಮನಃಸ್ಥಿತಿಯನ್ನು ಊಹಿಸಿಕೊಳ್ಳಲಾರದಾದೆ ಅಥವಾ ಅದನ್ನು ನೆನಪಿಸಿಕೊಳ್ಳಲೂ ಇಷ್ಟಪಡಲಾರೆನೇನೊ.

ಆಗ ಆದ ಒಂದು ಪ್ರಕರಣವನ್ನು ಪ್ರಸ್ತಾಪಿಸುವೆ. ಪತ್ರಿಕೆ ಆರಂಭಿಸಿದ ಕೆಲವೇ ದಿನಗಳಲ್ಲಿ ಆರ್ಥಿಕ ಮುಗ್ಗಟ್ಟು ತತ್ತರಿಸುವಂತೆ ಮಾಡಿತ್ತು. ಪತ್ರಿಕೆ ಉಳಿಸಿ ನಡೆಸಲು ರಘುರಾಮ ಶೆಟ್ಟರು ಹೆಣಗಾಡತೊಡಗಿದ್ದರು. ಇದನ್ನು ಮಾಜಿ ಬಾಲಕ ದಿನೇಶ್ ಅಮಿನ್ ಮಟ್ಟು ಈಗ ಬಿಡುಗಡೆಯಾಗುತ್ತಿರುವ 'ಬೇರೆಯೇ ಮಾತು' ಪುಸ್ತಕದ ತಮ್ಮ 'ಗುರುನಮನ'ದಲ್ಲಿ ಬರೆಯುತ್ತಾರೆ: 'ಈ ಶೀತಲ ಸಮರ ನಡೆಯುತ್ತಿದ್ದ ದಿನಗಳಲ್ಲಿಯೇ ಒಮ್ಮೆ ವಡ್ಡರ್ಸೆಯವರು ನ್ಯೂಸ್ ಪ್ರಿಂಟ್ ಖರೀದಿ ಸಮಸ್ಯೆ ಬಗೆಹರಿಸಲು ಎಸ್. ಬಂಗಾರಪ್ಪನವರನ್ನು ಬೆಂಗಳೂರಿನಲ್ಲಿ ಭೇಟಿಯಾಗಿದ್ದರು. ಬಂಗಾರಪ್ಪನವರು ತಮಗೆ ಗೊತ್ತಿದ್ದ ಅಬಕಾರಿ ಉದ್ಯಮಿಯೊಬ್ಬರಿಗೆ ಫೋನ್ ಮಾಡಿ, ಒಂದು ಲಾರಿ ನ್ಯೂಸ್ ಪ್ರಿಂಟ್ ಕಳಿಸಲು ಹೇಳಿದ್ದರು. ಅದರ ಮರುದಿನದ ಮುಂಗಾರು ಪತ್ರಿಕೆಯ ಮುಖಪುಟದಲ್ಲಿ ಸೀರೆ ಉಟ್ಟು, ಬಳೆ ತೊಟ್ಟು, ಇಂದಿರಾ ಗಾಂಧಿಯವರ ಮನೆ ಮುಂದೆ ನಿಂತ ಬಂಗಾರಪ್ಪನವರ ವ್ಯಂಗ್ಯಚಿತ್ರ ಪ್ರಕಟವಾಗಿತ್ತು. ಅದು ಬಂಗಾರಪ್ಪನವರು ಮರಳಿ ಕಾಂಗ್ರೆಸ್ ಪಕ್ಷ ಸೇರಲು ಮಾತುಕತೆ ನಡೆಯುತ್ತಿದ್ದ ಕಾಲವಾಗಿತ್ತು. ಇದು ತಮ್ಮ ಸಹೋದ್ಯೋಗಿಗಳು ಉದ್ದೇಶಪೂರ್ವಕವಾಗಿ ಮಾಡಿದ ಕೀಟಲೆ ಎಂದು ವಡ್ಡರ್ಸೆಯವರು ಬಹಳ ನೊಂದಿದ್ದರು.

14ನೇ ಪುಟಕ್ಕೆ...

ಸೂರ್ಯ ಇವರೊಬ್ಬರೇ...

ಗಿರಿಜಾ ಶಾಸ್ತ್ರಿ



ಎ.ವಿ. ಸೂರ್ಯನಾರಾಯಣ ಸ್ವಾಮಿ

'ತರೀಕೆರೆನಲ್ಲಿ ನಾವಿದ್ದಾಗ ಅಲ್ಲೊಬ್ಬ ಯಾಕೂಬ್ ಸಾಹೇಬರು ಅಂತಿದ್ದರು, ವ್ಯಾಪಾರಿ. ಅವರು, ಕ್ಷತ್ರಿಯರ ಸಮಾಜ, ವೀರಶೈವರ ಸಮಾಜ, ಕುರುಬರ ಸಮಾಜ, ಮುಸ್ಲಿಮರ ಸಮಾಜ, ಬ್ರಾಹ್ಮಣರ ಸಮಾಜ ಹೀಗೆ ಎಲ್ಲಾ ಸಮಾಜದವರ ಮನೆಗೂ ಅವರಾಗಿಯೇ ಹೋಗಿ 'ನಿಮ್ಮ ಮನೇನಲ್ಲಿ ಮದುವೆ ಇದೆಯಂತೆ, ಮುಂಜಿ ಇದೆಯಂತೆ, ಗೃಹಪ್ರವೇಶ ಇಟ್ಟುಕೊಂಡಿದ್ದೀರಂತೆ. ನೀವೇನೂ ಯೋಚ್ನೆ ಮಾಡಬೇಡಿ. ನಮ್ಮ ಅಂಗಡಿಯಿಂದ ಸಾಮಾನು ಸರಂಜಾಮು ತೊಗೊಂಡು ಹೋಗಿ. ಅಕ್ಕಿಬೇಕಾ ತಗೊಳ್ಳಿ, ರಾಗಿ ಬೇಕಾ, ಸಕ್ಕರೆ ಬೇಕಾ? ಏನು ಬೇಕಾದರೂ ತೊಗೊಂಡು ಹೋಗಿ. ಈ ತಿಂಗಳು ಆಗದಿದ್ದರೆ, ಮುಂದಿನ ಆರು ತಿಂಗಳು... ಅದೂ ಆಗದಿದ್ದರೆ ವರುಷ ಆದಮೇಲೆ ದುಡ್ಡು ಕೊಡಿ. ನಾನೇನು ದುಡ್ಡು ಕೇಳಿದೆನೆ' ಎಂದು ಹೇಳುತ್ತಿದ್ದರು.

ಈ ಮಾತುಗಳನ್ನು ಹೇಳಿದವರು ಮೈಸೂರಿನ ಎ.ವಿ. ಸೂರ್ಯನಾರಾಯಣ ಸ್ವಾಮಿಯವರು. ಅವರು ಮೂಲತಃ ತರೀಕೆರೆಯವರು. ಮೈಸೂರಿನ ಶಾರದಾವಿಲಾಸ ಕಾಲೇಜಿನಲ್ಲಿ ಕನ್ನಡ ಪ್ರಾಧ್ಯಾಪಕರಾಗಿದ್ದವರು. ಕಟ್ಟಾ ಸಂಪ್ರದಾಯಸ್ಥ ಮನೆಯಲ್ಲಿ ಹುಟ್ಟಿದ ಅವರಿಗೆ ಮುಸ್ಲಿಂ ಜನರ ಜೊತೆ ಇರುವ ಒಡನಾಟ ಬಹಳ ಆಶ್ಚರ್ಯಕರವಾದುದು. ಅಧಿಕ ಸಂಖ್ಯೆಯಲ್ಲಿ ಅವರಿಗೆ ಮುಸ್ಲಿಂ ಗೆಳೆಯರಿದ್ದಾರೆ. 83 ವರುಷದ ವೃದ್ಧರಾದ ಅವರು ಹಾಕಿಕೊಳ್ಳುವುದೂ ಒಂದು ಕಲ್ಲಿ ಜುಬ್ಬಾ ಮತ್ತು ಪೈಜಾಮ. ಅದನ್ನು ಹೊಲಿದು ಕೊಡುವವರೂ ಮುಸ್ಲಿಮರೇ!

ಎರಡೂ ಧರ್ಮಗಳ ಸಮನ್ವಯ ಸೇತುವಿನಂತೆ ದೃಢವಾಗಿ ನಿಂತಿರುವ ಅವರನ್ನು ಕಾಣಲೆಂದೇ ಸೀತಾರಾಮ ಅವರು ನಮ್ಮನ್ನು ಲಿಂಗಾಂಬುಧಿ ಪಾರ್ಕ್‌ನ ಬಳಿ ಇರುವ ಅವರ ಮನೆಗೆ ಕರೆದುಕೊಂಡು ಹೋಗಿದ್ದರು.

ಸೂರ್ಯನಾರಾಯಣ ಸ್ವಾಮಿಯವರ ಮನೆಯಲ್ಲಿ ಕುಳಿತಿದ್ದೆವು. ಸ್ವಲ್ಪ ಹೊತ್ತಿನ ನಂತರ ಅಸ್ಲಾಮ್ ಎನ್ನುವ ವ್ಯಕ್ತಿಗೆ ಫೋನ್ ಮಾಡಿ, 'ಇಲ್ಲಿ ಯಾರೋ ಒಬ್ಬರು ಬಂಧುಗಳು ಬಂದಿದ್ದಾರೆ, ಮಾತನಾಡಿ. ನಮ್ಮ ಸಂಬಂಧದ ಬಗ್ಗೆ ನೀವೇ ಹೇಳಿ, ನಾನು ಹೇಳೋದಲ್ಲ' ಎಂದು ಮೊಬೈಲನ್ನು ನನ್ನ ಕೈಗೆ ಕೊಟ್ಟರು. ಗುರುತು ಪರಿಚಯವಿಲ್ಲದವರ ಬಳಿ ಏನು ಮಾತನಾಡುವುದು? ಆದರೂ ಹಿರಿಯರ ಆದೇಶ ತಿರಸ್ಕರಿಸಬಾರದೆಂದು ಫೋನ್ ತೆಗೆದುಕೊಂಡೆ. ಆ ವ್ಯಕ್ತಿ ಅಪಘಾತದಲ್ಲಿ ಗಾಯಗೊಂಡು ಕಾಲಿಗೆ ಪೆಟ್ಟಾಗಿ ಆಸ್ಪತ್ರೆಯಲ್ಲಿ ಉಪಚಾರ ಪಡೆಯುತ್ತಿದ್ದರು. ಅಲ್ಲಿಂದಲೇ ಮಾತು. ಸೂರ್ಯನಾರಾಯಣ ಸ್ವಾಮಿಯವರ ಉಪಕಾರ ಸ್ಮರಣೆ ಮಾಡುತ್ತಾ, 'ಅವರು ನನಗೆ ನನ್ನ ತಾಯಿ, ತಂದೆ ಇದ್ದಂತೆ... ಪೈಗಂಬರ್ ತರಾ. ಇಲ್ಲಿಗಂಟ ಅಂಥಾ ಮನ್ಶ್ಯಾನನ್ನೇ ನೋಡಿಲ್ಲ. ನಾನು ಅವರ ಹತ್ತಿರ ಮಾತನಾಡಿದರೆ ಒಂದು ರೀತಿಯ ಸುಕೂನ್ (ಸಮಾಧಾನ) ಸಿಗ್ತದೆ' ಎಂದು ಹೇಳುತ್ತಾ ಭಾವುಕರಾಗಿ ಅತ್ತುಬಿಟ್ಟರು. ಅಪರಿಚಿತಳಾದ ನಾನು ಅವರಿಗೆ ಸಮಾಧಾನ ಮಾಡುವಾಗ ನನ್ನ ಗಂಟಲೂ ಗದ್ಗದಿತವಾಯ್ತು.

ಸೂರ್ಯನಾರಾಯಣರ ಬಳಿ ಹೀಗೆ ಅಸಂಖ್ಯಾತ ಅನುಭವ ಕಥನಗಳಿವೆ. ಅವುಗಳನ್ನು ಅಷ್ಟೇ ಸ್ವಾರಸ್ಯಕರವಾಗಿ ಅವರು ಹೇಳುತ್ತಾರೆ. ಅದರ ಒಂದು ಮಾದರಿಯನ್ನು ನಾನು ಅಲ್ಲಲ್ಲಿ ಅವರ ಮಾತುಗಳಲ್ಲೇ ಇಲ್ಲಿ ಹೇಳಿದ್ದೇನೆ. ಅವರ ನೆನಪಿನ ಪ್ರವಾಹ ಎಷ್ಟು ರಭಸವಾದುದೆಂದರೆ ಒಂದು ಕತೆಯನ್ನು ಹೇಳುತ್ತಾ ಇನ್ನೇನೋ ನೆನಪಾಗಿ ಮತ್ತೊಂದು ಕತೆಗೆ ಜಿಗಿಯುವುದು, ಅಲ್ಲಿಂದ ಮತ್ತೊಂದಕ್ಕೆ ಜಿಗಿತ. 'ಯಾಕೂಬ್ ಕತೆ ಹೇಳ್ತಿದ್ರಿ, ಆಮೇಲೇನಾಯಿತು ಮುಂದುವರೆಸಿ' ಎಂದು ಸೀತಾರಾಮ ಅವರನ್ನು ಮತ್ತೆ ಟ್ರ್ಯಾಕಿಗೆ ತರುವುದು. ಹೀಗೆ ಸುಮಾರು ಒಂದೂವರೆ ಗಂಟೆ ಅವರು ಉತ್ಸಾಹದ ಬುಗ್ಗೆಯಾಗಿದ್ದರು. ನಮಗೆ ಆ ಪುಸ್ತಕ, ಈ ಪುಸ್ತಕ ತೋರಿಸಲು ಒಳ ಹೊರಗೆ ಓಡಾಟ. ನಾನು ಕುಳಿತಿದ್ದೆ. ಅವರು ನಿಂತು ಈ ಪುಟ ನೋಡಿ... ಇಲ್ಲಿ ನೋಡಿ... ಇದು ತುಂಬಾ ಮಹತ್ವದ್ದು ಇಲ್ಲಿ' ಎನ್ನುತ್ತಿದ್ದರು. ಈ ಹಿರಿಯಜೀವ ಕನ್ನಡಕವಿಲ್ಲದೆಯೇ ಓದುವುದನ್ನು ಕಂಡಾಗ ಪರಮಾಶ್ಚರ್ಯ. ಇದುವರೆಗೆ ಕಣ್ಣಿಗೆ ಯಾವ ಪೊರೆಯೂ ಹತ್ತಿಲ್ಲ. ತುಂಬಾ ನಿರ್ಮಲನೋಟ!

'ನೀವು ನಿಂತಿದ್ದೀರ ನಾನು ಹೀಗೆ ಕುಳಿತು ಕೇಳುವುದು ನನಗೆ ಹಿಂಸೆಯಾಗುತ್ತೆ' ಎಂದಾಗ, 'ಇಲ್ಲ, ನೀವು ಕೂತ್ಕೊಳ್ಳಿ' ಎಂದು ಬಲವಂತವಾಗಿ ನನ್ನ ಕೂರಿಸಿ, ತಾವು ಬಾಗಿ ನಿಂತು ತಮ್ಮ ಪುಸ್ತಕದ ಮೇಲೆ ಬೆರಳಾಡಿಸುತ್ತಾ ನೆನಪಿನ ಹೊತ್ತಿಗೆಗಳನ್ನು ಬಿಚ್ಚುತ್ತಿದ್ದರು. ಸಾವಿರಾರು ಪುಟಗಳ ಕನ್ನಡ ಕಾವ್ಯವನ್ನು ಅವರು ಸಂಪಾದಿಸಿ ಪ್ರಕಟಿಸಿದ ಕೃತಿ 'ಗೆಜ್ಜೆ ನಾದ'. ಹಾಗೆಯೇ ಮಹತ್ವದ ಕೃತಿಗಳ ಉಲ್ಲೇಖಗಳಿಂದ ಹಿಡಿದು ಆಟೋರಿಕ್ಷಾಗಳ ಮೇಲೆ ದಾಖಲಾಗಿರುವ ಉಲ್ಲೇಖಗಳವರೆಗೆ ಸಂಗ್ರಹವನ್ನೂ ಗ್ರಂಥದ ರೂಪದಲ್ಲಿ ಹೊರತಂದಿದ್ದಾರೆ.

13ನೇ ಪುಟಕ್ಕೆ

ಕೃಷ್ಣಾಕುಮಾರಿಗೆ 100

ಡಾ.ಜಿ.ಕೃಷ್ಣಪ್ಪ

ಬೇಂದ್ರೆಯವರ 'ಕೃಷ್ಣಾಕುಮಾರಿ'ಗೀಗ ನೂರರ ಸಂಭ್ರಮ. ಸೌಂದರ್ಯದ ಖನಿಯಾಗಿದ್ದ ದುರಂತ ನಾಯಕಿಯ ಕುರಿತ ಈ ಖಂಡಕಾವ್ಯದ ವೈಶಿಷ್ಟ್ಯದ ಮೇಲೊಂದು ಹಿನ್ನೋಟ...

ಬೇಂದ್ರೆಯವರ ಮೊದಲ ಪ್ರಕಟಿತ ಕೃತಿ ಕೃಷ್ಣಾಕುಮಾರಿ ಒಂದು ಖಂಡ ಕಾವ್ಯ. ಅದು 1922ರಲ್ಲಿ ಪ್ರಕಟವಾಯಿತು. ಅದನ್ನು ಧಾರವಾಡದ 'ಶಾರದಾ ಮಂಡಲ ಪುಸ್ತಕ ಮಾಲೆ'ಯಿಂದ ಪ್ರಕಟಿಸಿದವರು ಆಲೂರು ವೆಂಕಟರಾಯರು. ಅವರು ಅದರ 'ಬಿನ್ನಹ'ದಲ್ಲಿ, 'ಈ ಅರೆ ಅರಳಿದ ಮೊಗ್ಗೆಯ ಸುವಾಸನೆಯನ್ನು ಅರಸಿಕರು ಕೂಡಾ ಮೂಸಿಸಿ ಮೋದಪಡಲೆಂದು ಹಾರೈಸುವ' ಎಂದಿದ್ದಾರೆ.

ಬೇಂದ್ರೆಯವರನ್ನು ಸೆಳೆದು ಆಡಿಸಿದ ಕವಿ ಲಕ್ಷ್ಮೀಶ. ಆತನ ಕಾವ್ಯ ರಚನಾ ಶೈಲಿ, ಶಬ್ದಪ್ರಯೋಗ ಚಾತುರ್ಯ, ಪ್ರತಿಮಾ ಕೌಶಲಗಳನ್ನು 'ಕೃಷ್ಣಾಕುಮಾರಿ'ಯಲ್ಲಿ ಕಾಣಬಹುದು. ಈ ಕೃತಿಯನ್ನು ಅವರು 'ಪಾಮರರನ್ನು ರಂಜಿಸಿದ ಕವಿ ಲಕ್ಷ್ಮೀರಮಣನಾಸ್ಯಚಂದ್ರನಿಗೆ ಈ ನಕ್ಷತ್ರ ಮಾಲೆಯನ್ನು ಸಮರ್ಪಿಸುವೆನು' ಎಂದು ಅರ್ಪಿಸಿದ್ದಾರೆ. ನಕ್ಷತ್ರಮಾಲೆ ಎಂಬ ನುಡಿಗೆ ತಕ್ಕಂತೆ ಕಾವ್ಯದಲ್ಲಿ 27 ವಾರ್ಧಕ ಷಟ್ಪದಿಗಳಿವೆ. ಇದರಲ್ಲಿ ಇಪ್ಪತ್ತಾರು ವಯಸ್ಸಿನ ಯುವಕವಿಯ ಕಾವ್ಯ ಪ್ರಯೋಗದ ಉತ್ಸಾಹ, ಆದರ್ಶ, ಹೆಣ್ಣಿನ ಬಗೆಗಿನ ಗೌರವ ಅಂತಃಕರಣದ ಪ್ರಕಾಶವಿದೆ.

ಬೇಂದ್ರೆಯವರು ಆ ಖಂಡಕಾವ್ಯಕ್ಕೆ ಆಧರಿಸಿರುವುದು ಲೆ.ಕ. ಜೇಮ್ಸ್‌ಟಾಡ್ ಅವರ Annals and antiquities of Rajasthan (1929) ಮತ್ತು ಚ.ವಾಸುದೇವಯ್ಯ ಅವರ ಆರ್ಯಕೀರ್ತಿ (1896) ಪುಸ್ತಕಗಳು ಎಂದು ತಿಳಿಸಿದ್ದಾರೆ. ಅದರ ಕಥೆಯನ್ನು ಖಂಡಕಾವ್ಯದ ಪ್ರಾರಂಭದಲ್ಲಿ ಗದ್ಯರೂಪದಲ್ಲಿ ನೀಡಿದ್ದಾರೆ. ಹಾಗಾಗಿ ಅದು ಚಂಪೂ ಕಾವ್ಯಲಕ್ಷಣವನ್ನು ಹೊಂದಿದೆ. ಆ ಕಥೆ ಹೀಗಿದೆ:

ಉದಯಪುರದ ರಾಣಾ ಭೀಮಸಿಂಹನು ತನ್ನ ಪ್ರೀತಿಯ ಸುಂದರ ಮಗಳು ಕೃಷ್ಣಾಕುಮಾರಿಯನ್ನು ಜೋಧಪುರದ ರಾಜನಿಗೆ ಕೊಡಬೇಕು ಎಂದು ಮೊದಲೇ ಗೊತ್ತು ಮಾಡಿದ್ದ. ಅಕಸ್ಮಾತ್ತಾಗಿ ಜೋಧಪುರದ ರಾಜ ತೀರಿಹೋಗಲು ಜಯಪುರದ ಜಗತ್‌ಸಿಂಹನು ಕೃಷ್ಣಾಕುಮಾರಿಯನ್ನು ತನಗೆ ವಿವಾಹ ಮಾಡಿಕೊಡಲು ಭೀಮಸಿಂಹನಿಂದ ಒಪ್ಪಿಗೆ ಪಡೆದ.



ಯೌವನದ ದಿನಗಳಲ್ಲಿ ಬೇಂದ್ರೆ

ಅದೇ ಸಮಯದಲ್ಲಿ ಜೋಧಪುರದ ರಾಜನ ಸ್ಥಾನಕ್ಕೆ ಬಂದ ಮಾನಸಿಂಹನು ತಾನು ಕೃಷ್ಣಾಕುಮಾರಿಗೆ ತಕ್ಕ ವರನೆಂದು ಭೀಮಸಿಂಹನಿಗೆ ಹೇಳಿ ಕಳುಹಿಸಿದ. ಸಿಂಧ್ ಪ್ರಾಂತದ ರಾಜನು ಮಾನಸಿಂಹನ ಬೆಂಬಲಕ್ಕೆ ನಿಂತು ಜಗತ್‌ಸಿಂಹನನ್ನು ಸೋಲಿಸಿದ. ಅದೇ ಸಮಯಕ್ಕೆ ವಿಧಿ ಅಮೀರ್‌ಖಾನನನ್ನು ಅಲ್ಲಿಗೆ ಕಳುಹಿಸಿತು. ಅವನ ಕ್ರೌರ್ಯಕ್ಕೆ ರಜಪೂತರು ನಡುಗಿಹೋದರು.

ಅಂತಹ ಪರಿಸ್ಥಿತಿಯ ಒಂದು ರಾತ್ರಿ ಕೃಷ್ಣಾಕುಮಾರಿಯು ವಿಷಸೇವಿಸಿ ಕಾಳನಿದ್ರೆಗೆ ವಶವಾದಳು.

ಬೇಂದ್ರೆಯವರು ಕೃಷ್ಣಾಕುಮಾರಿಯ ಸಾವಿನ ರಾತ್ರಿಯನ್ನು ಅಮಾವಾಸ್ಯೆ ಎಂದು ಕಲ್ಪಿಸಿಕೊಂಡಿದ್ದಾರೆ. ಆ ತೆರೆಯ ಹಿಂದೆ ಮೇಳಗೊಂಡಿದ್ದ ಚಿಕ್ಕಿಗಳು ಸೌಂದರ್ಯಶಕ್ತಿಯನ್ನು ಕುರಿತು ಹಾಡಿದವು ಎಂದು ಚಿತ್ರಿಸಿದ್ದಾರೆ.

ಸೌಂದರ್ಯವೆಂಬ ಕಟುವಿಷವೇ ಪೀಯೂಷವೇ!
ಸೌಂದರ್ಯವೆಂಬಮೃತಗರ್ಭ ಬೇವೆ ಮಾವೆ!
ಸೌಂದರ್ಯವೆಂಬ ರತ್ನವ ಹೆಡೆಯೊಳಿಟ್ಟಿರುವ ಹಾವೆ,
ಸುರವಂದ್ಯ ಆವೆ!

ಹೆಣ್ಣಿನ ಸೌಂದರ್ಯ ಅಮೃತ, ಮಾವು, ಕಾಮಧೇನು. ಅಂದವೇ ಅದರ ಐಸಿರಿ. ಆ ಪವಿತ್ರಾತ್ಮಳನ್ನು ಕುಟುಂಬ ಮತ್ತು ಸಮಾಜ ಉತ್ತಮವಾಗಿ ಕಂಡು ಪೋಷಿಸದಿದ್ದರೆ ಆಕೆ ಕಟುವಿಷ, ಬೇವು, ಹಾವು ಆಗುತ್ತಾಳೆ ಎಂಬ ಚಿಂತನೆಯನ್ನು ಸಾರಿದ್ದಾರೆ.

ಕೃಷ್ಣಾಕುಮಾರಿಯು ವಿಷದ ಮೊದಲ ಬಟ್ಟಲನ್ನು ಕುಡಿಯುವಾಗ ತಮೋವಿಕಾರಗಳು ಪ್ರಬಲವಾಗುತ್ತವೆ. ಆಗ ಅವಳು ತನ್ನ ಜನ್ಮ, ಬಾಲ್ಯ, ಯೌವನ, ಹೆಣ್ತನ, ಚೆಲುವನ್ನು ನೆನೆದು ನೋಯುತ್ತಾಳೆ. ಕನ್ಯೆಯಾದ ತನ್ನನ್ನು ರಕ್ಷಿಸಲಾಗದ ರಾಜಪುತ್ರ ಕುಲದ ಷಂಡ ಗಂಡಸುತನಕ್ಕೆ ಥೂ ಎನ್ನುತ್ತಾಳೆ.

ವಿಷದ ಎರಡನೇ ಬಟ್ಟಲನ್ನು ಕುಡಿಯುವಾಗ ರಜೋಗುಣಗಳು ಮೇಲೆದ್ದು ಬರುತ್ತವೆ. 'ಗರ್ವದಿಂದಿರಾಗು ಕ್ಷತ್ರಿಯನ ಪ್ರೇಮದ ಪುತ್ರಿ' ಎಂದು ಸಾವನ್ನು ಎದುರಿಸಲು ಸಿದ್ಧಳಾಗುತ್ತಾಳೆ. ವಿಷದ ಮೂರನೇ ಬಟ್ಟಲನ್ನು ಕುಡಿಯುವಾಗ ಸಾತ್ವಿಕ ಬುದ್ಧಿಯು ಪ್ರಬಲವಾಗುತ್ತದೆ. 'ಸಾಯುವೆನು ಸಂತೋಷದಿಂದ' ಎಂದು ತೀರ್ಮಾನಿಸುತ್ತಾಳೆ. ಅವಳು ದೇವಸ್ವರೂಪರಾದ ತಾಯಿ ತಂದೆಯರಿಗೆ, ನಾಡಿಗೆ, ಸತ್ಯ ಸ್ವರೂಪದ ಪ್ರೇಮಕ್ಕೆ, ಈಶ್ವರನಿಗೆ ಪಂಚಪ್ರಾಣಗಳನ್ನು ಅರ್ಪಿಸಿದಳು ಎಂದು ಕವಿ ಬಣ್ಣಿಸಿದ್ದಾರೆ.

ಪರಾಂತಃಕರಣ ಪ್ರವೇಶವುಳ್ಳ ಕವಿ ಅಂಬಿಕಾತನಯದತ್ತರು ಕಾವ್ಯನಾಯಿಕೆಯ ನಿರ್ಯಾಣ ಮಂಗಳವನ್ನು ಹೀಗೆ ಹಾಡಿದ್ದಾರೆ.

ಪ್ರೇಮಲತೆ! ಮೂರ್ತಿಮಾನ್ ಪ್ರೇಮಲತೆಯೇ! ನಿನ್ನ
ಕಾಮಲತೆಯೆಂದು ಕಾಮಿಸಿದರೌ! ನಿನ್ನನ್ನು
ಹೋಮಿಸಿದರೌ ಕುಸುಮ ಸುಕುಮಾರ ಕುವರಿಯೇ
ಕಾಮಾಗ್ನಿ ಹೋತ್ರದಲ್ಲಿ!



ಕೃಷ್ಣಾಕುಮಾರಿ ಸೌಂದರ್ಯದ ಸಂಕೇತವಾಗಿದ್ದಾಳೆ. ಸೌಂದರ್ಯಕ್ಕೆ ಎಲ್ಲಾದರೂ ಸಾವುಂಟೇ, ದಿವ್ಯಾನುಭವದ (ಸತ್ಯ, ಶಿವ, ಸುಂದರ) ಮೂಲ ಲಕ್ಷಣಗಳಲ್ಲಿ ಒಂದಾದ ಸೌಂದರ್ಯವು ನಾಶವಾಗುತ್ತದೆ ಎನ್ನುವುದಾದರೆ ದಿವ್ಯಾನುಭವದ ಕಲ್ಪನೆಯನ್ನೇ ನಾವು ಮರುವಿವೇಚಿಸಬೇಕಾಗುತ್ತದೆ. ಹಾಗಾಗಿ ಈ ಖಂಡ ಕಾವ್ಯದಲ್ಲಿ ಕೃಷ್ಣಾಕುಮಾರಿ ಅಥವಾ ಸೌಂದರ್ಯ ಸಾಯುವುದಿಲ್ಲ. ಬದಲಾಗಿ ಇಲ್ಲಿ ಸೌಂದರ್ಯವೆಂಬುದು ತನ್ನ ಲೌಕಿಕ ಕೈಂಕರ್ಯವನ್ನು ನೀಗಿಕೊಂಡು ಅಲೌಕಿಕದ ಸೇವೆಗೆ ನಿಲ್ಲುತ್ತದೆ.

ಯಾವನೆನ್ನನು ದಿವ್ಯಗತಿಯ ಸೋಪಾನವನು
ಜೀವಭಾವದ ಬೆರಳುಕೊಟ್ಟು ಹತ್ತಿಸಿದನೋ
ಆ ವರೆಗೆ ಈಶ್ವರಗೆ ಶಾಶ್ವತದಿ
ಈ ಪಂಚಪ್ರಾಣವನರ್ಪಿಸಿದೆನು

ಎಂದು ಹಾಡಿ ದಿವ್ಯ ಜೀವನದ ಹೊಸ್ತಿಲಿಗೆ ಆಕೆ ಬರುತ್ತಾಳೆ. ಕೊನೆಗೂ ಸೌಂದರ್ಯ ಸಾಯುವುದಿಲ್ಲ. ಅರ್ಪಣೆಯಾಗುತ್ತದೆ.

ಸೂರ್ಯ ಇವರೊಬ್ಬರೇ...

12ನೇ ಪುಟದಿಂದ...

'ಯಾಕೂಬ್ ಸಾಹೇಬರಿಗೆ ಅವರ ತವರಾದ ಕೇರಳದಲ್ಲಿ ಏನೋ ಸಮಸ್ಯೆ. ತರೀಕೆರೆ ಬಿಡಬೇಕಾಯಿತು. 'ನೋಡ್ರಪ್ಪಾ ಊರಿನಲ್ಲಿ ಏನೋ ಸಮಸ್ಯೆ ಇದೆ. ನಾವು ಊರು ಬಿಡಬೇಕು. ಮುಂದಿನ ತಿಂಗಳಿಂದ ನಾವು ಇರೋದಿಲ್ಲ. ನಿಮ್ಮದೇನಾದರೂ ದುಡ್ಡಿನ ವ್ಯವಹಾರ ಇದ್ರೆ ಮುಗಿಸಿಕೊಂಡುಬಿಡಿ. ನಾನೇನಾದರೂ ಕೊಡಬೇಕಾಗಿದ್ರೆ ಹೇಳಿ ಕೊಡ್ತೀನಿ, ನೀವೇನಾದ್ರೂ ಕೊಡಬೇಕಾಗಿದ್ರೂ ಹೇಳಿ ಎಂದಾಗ, ಬ್ರಾಹ್ಮಣರು ಅತ್ತರು, ಕುರುಬರು ಅತ್ತರು, ಕ್ಷೌರಿಕರು ಅತ್ತರು, ಕ್ರಿಶ್ಚಿಯನ್ನರು ಅತ್ತರು, ಲಿಂಗಾಯಿತರು ಅತ್ತರು, ಮುಸ್ಲಿಮರು ಅತ್ತರು, ಎಲ್ಲಾರೂ ಪ್ರೀತಿಯಿಂದ ಅತ್ತರು.

ಯಾಕೂಬ್ ಸಾಹೇಬರು ಊರು ಬಿಡಬಾರದೆಂದು ಆಗ್ರಹಿಸಿ ಅವರ ಅಂಗಡಿಯ ಮುಂದೆ ಊರಿನ ನಾನೂರು-ಐನೂರು ಜನ ಜಮಾಯಿಸಿದರು. ಅವರ ಪ್ರೀತಿಯನ್ನು ನೋಡಿ ಯಾಕೂಬರೂ ಅತ್ತರು. ಆದರೆ, ಅವರು ಹೋಗಲೇ ಬೇಕಾಯಿತು. ಆಗ ಅವರನ್ನು ಕಳುಹಿಸಲು ರೈಲು ನಿಲ್ದಾಣದಲ್ಲಿ ಸಾವಿರದೈನೂರು ಜನ ನೆರೆದಿದ್ದರು. ರಾಮಭಟ್ಟರ ವೇದಮಂತ್ರ, ನರಸಿಂಹ ಭಟ್ಟರ ಭಾಷಣ ಎಲ್ಲಾ ಇತ್ತು. ಬ್ರಾಹ್ಮಣ ಹೆಂಗಸರೂ ಬಂದಿದ್ದರು. ಅವರ ಹೆಂಡತಿಗೆ ನಮ್ಮೂರ ಹೆಂಗಸರ ಕುಂಕುಮ! ಕುಂಕುಮಾನೂ ಕೊಟ್ಟರು. ಅವರು ಇಟ್ಕೊಳ್ಳೊ ಹಾಗಿಲ್ಲ. ಆದ್ರೂ ಇಟ್ಕೊಂಡರು. ಅವರ ಕುತ್ತಿಗೆಯಂತೂ ನೂರಾರು ಹಾರಗಳ ಭಾರದಿಂದ ಬಾಗಿತ್ತು. ಇದು ಸುಮಾರು 1952-53ರ ಕತೆ. ಇದೆಲ್ಲಾ ಯಾರಿಗೂ ಗೊತ್ತಿಲ್ಲ. ಈಗ ಇಂತಹ ಪರಿಸ್ಥಿತಿಯಲ್ಲಿ ಗೊತ್ತಾಗಿ ತಾನೇ ಏನು ಮಾಡತಾರೆ? ಇದನ್ನು ನಾನು ಕಿವಿಯಿಂದ ಕೇಳಿರುವುದಲ್ಲ. ಕಣ್ಣಾರೆ ನೋಡಿದ್ದೀನಿ' ಈ ಹಿರಿಯ ಜೀವ ಹೀಗೆ ಹೇಳುತ್ತಿದ್ದಾಗ ನಮಗೂ ಕಣ್ಮುಂದೆಯೇ ಎಲ್ಲ ಘಟನೆಗಳು ನಡೆದ ಅನುಭವ.

ಬ್ರಾಹ್ಮಣರ ಮನೆಯಲ್ಲಿ ಅನಂತ ಚತುರ್ದಶಿ ಹಬ್ಬದ ಆಚರಣೆ ಎಂದರೆ ಘನಘೋರ ಮಡಿ. ಬಹಳ ಕಟ್ಟುನಿಟ್ಟು. ಮನೆಯ ಸದಸ್ಯರೇ ಒಬ್ಬರಿಗೊಬ್ಬರು ಅಸ್ಪೃಶ್ಯರು ಇಲ್ಲಿ! ಸೂರ್ಯನಾರಾಯಣ ಸ್ವಾಮಿಯವರು ಅದಕ್ಕೆ ಸಂಬಂಧಿಸಿದ ಪ್ರಸಂಗವೊಂದನ್ನು ಹೇಳಿ ನಮ್ಮೆಲ್ಲರನ್ನೂ ದಂಗುಗೊಳಿಸಿದರು. 'ಅನಂತಚತುರ್ದಶಿಗೆ ಒಂದು ವಾರವಿದೆ ಎನ್ನುವಾಗಲೇ ಅನಂತನ ದಾರಾ... ಎಂದು ಬೀದಿಯಲ್ಲಿ ಮಾರಿಕೊಂಡು ಬರುವವರು ಮುಸ್ಲಿಮರೇ ಆಗಿದ್ದರು. ಅವರು ನಮ್ಮ ಮನೆಗೆ ಅನಂತನ ದಾರ ಕೊಡಲು ಬಂದಾಗ ಅವರಿಗೆ ಮಣೆ ಹಾಕಿ ವಿಶೇಷ ಮರ್ಯಾದೆ ಮಾಡಲಾಗುತ್ತಿತ್ತು. ಮಡಿಯಲ್ಲಿದ್ದ ನಮ್ಮ ಮಹಿಳೆಯರು ಒಳಗಿನಿಂದ ಬಂದು ಅವರ ಕೈಯಿಂದ ದಾರವನ್ನು ತೆಗೆದುಕೊಳ್ಳುತ್ತಿದ್ದರು. ಅದನ್ನು ಹಾಗೆಯೇ ತೆಗೆದುಕೊಂಡು ಹೋಗಿ ದೇವರ ಕೋಣೆಯಲ್ಲಿ ಇಡುತ್ತಿದ್ದರು. ನೀರನ್ನು ಪ್ರೋಕ್ಷಣೆ ಮಾಡಿ ಅದನ್ನೇನೂ ಮಡಿ ಮಾಡುತ್ತಿರಲಿಲ್ಲ. ಹಬ್ಬದ ದಿನ ಅದನ್ನು ಹಾಗೆಯೇ ತೆಗೆದು ಪುರೋಹಿತರಿಂದ ಕೈಗೆ ಕಟ್ಟಿಸಿಕೊಂಡು ಪೂಜೆ ಮಾಡುತ್ತಿದ್ದರು. ಅಂದಿನ ದಿನ ಅವರೆಲ್ಲರಿಗೂ ಊಟದ ಆಹ್ವಾನ ಕಳುಹಿಸಲಾಗುತ್ತಿತ್ತು. ಸಂಜೆ ಬಂದು ಅವರು ಊಟವನ್ನು ಮಾಡಿಕೊಂಡು ಹೋಗುತ್ತಿದ್ದರು.'

'ಎಷ್ಟೋ ಮುಸಲ್ಮಾನರ ಮದುವೆಗಳಿಗೆ ಹೋಗಿದ್ದೀನಿ. ಭಾನುವಾರ ಬರಬೇಡಿ, ಆಗ ನಮ್ಮ ಊಟ ಇರುತ್ತದೆ. ನೀವು ಶನಿವಾರವೇ ಬನ್ನಿ ಎಂದು ಹೇಳತಾ ಇದ್ರು. ನಿಮಗಾಗಿ ಮಾಡಿಸಿದ ವಿಶೇಷ ಖೀರು ಎಂದು ಮುಂದಿಟ್ಟಾಗ ಏನು ರುಚಿ ಅಂತೀರಾ' ಎಂದು ನೆನಪನ್ನು ಸವಿಯುತ್ತಾರೆ. 'ತರೀಕೆರೆನಲ್ಲಿದ್ದಾಗ ನಮ್ಮನೇಲಿ ಏನು ಕಾರ್ಯಕ್ರಮ ಆದರೂ ಅವರು ಬರಬೇಕು. ಅವರ ಮನೆಯಲ್ಲಿ ಏನು ಕಾರ್ಯಕ್ರಮಗಳಾದರೂ ನಾವು ಹೋಗಬೇಕು. ಅಸ್ಲಾಮ್ ಅವರ ಮನೆ ಮದುವೆಗೆ ಹೋಗಿದ್ದಾಗ, ನಮ್ಮ ಮನೆ ಮಂದಿಗೆಲ್ಲಾ ಉಡುಗೊರೆ ಕೊಟ್ಟು ಮರ್ಯಾದೆ ಮಾಡಿದರು. ಎಷ್ಟು ಪ್ರೀತಿ ತೋರಿಸಿದ್ರು ಅಂದ್ರೆ ನಮ್ಮವರು ನಮಗೆ ತೋರಿಸುವಷ್ಟೇ ಸಮಾನವಾದ ಪ್ರೀತಿಯನ್ನು ತೋರಿಸಿದರು. ಹೀಗೆ ಒಬ್ಬರು ನಡಕೊಂಡರೆ ಪ್ರಯೋಜನ ಇಲ್ಲ. ಹಿಂದೂ-ಕ್ರಿಶ್ಚಿಯನ್ನರು, ಹಿಂದೂ-ಮುಸಲ್ಮಾನರು, ಸವರ್ಣೀಯರು-ದಲಿತರು ಎಲ್ಲರೂ ಪರಸ್ಪರ ಹೀಗೇ ನಡಕೋಬೇಕು.

'1948-49ರ ಸಮಯ. ಮಹಮದ್ ಪೈಗಂಬರ್ ಜಯಂತಿಯ ದಿನ ಸೈಯದ್ ಮೌಲ್ವಿ ಖಾಸಿಮ್ ಎನ್ನುವವರು ನಮ್ಮೂರಿಗೆ ಬಂದು, ಎರಡು ದಿನ ಸಂಜೆ 6ರಿಂದ 8ರವರೆಗೆ ಉಪನ್ಯಾಸ ಮಾಡಿದರು. ಸುಮಾರು 1500 ಜನ ಸೇರಿದ್ದರು. ಅವರಲ್ಲಿ ಹಿಂದೂ, ಕ್ರಿಶ್ಚಿಯನ್, ಮುಸ್ಲಿಂ ಎಲ್ಲಾ ಇದ್ದರು. ಅಂದು ಅವರು ಮಾತನಾಡಿದ್ದು ಕುರಾನ್, ವೇದ ಮತ್ತು ಉಪನಿಷತ್ತುಗಳ ಬಗೆಗೆ - ಸಂಸ್ಕೃತ ಉಲ್ಲೇಖಗಳ ಸಮೇತ! ಬಾಲಕನಾದ ನನಗೆ ಅವರನ್ನು ನಮ್ಮ ಮನೆಗೆ ಕರೆದುಕೊಂಡು ಬರುವ ಆಸೆಯಾಯಿತು. ನಮ್ಮ ತಂದೆ ಅಂಚೆ ವೆಂಕಟರಾಮಯ್ಯ ಅಂತಾ, ಅವರು ಒಪ್ಪಿಕೊಂಡರು. ಮಾರನೆಯ ದಿನವೇ ಸಂಜೆ ನಾಲ್ಕು ಗಂಟೆಗೆ ಮೌಲ್ವಿಯವರು ಬಂದರು. ಅಲ್ಲಿ ವೇದ ವಿದ್ಯಾಪಾರಂಗತರಾದ ಇಪ್ಪತ್ತು ಇಪ್ಪತ್ತೈದು ಜನ ನೆರೆದಿದ್ದರು. ರಾಮಾಯಣ, ಮಹಾಭಾರತ, ಭಗವದ್ಗೀತೆಯ ಬಗ್ಗೆ ಸುಮಾರು ಎರಡು ಗಂಟೆಗಳ ಕಾಲ ಮೌಲ್ವಿಯವರು ಮಾತನಾಡಿದರು. ಅಂದು ಅವರು ನಮ್ಮ ಮನೆಯ ಜಗಲಿಯ ಮೇಲೆಯೇ ನಮಾಜು ಮಾಡಿದರು. ಅದೇ ಸಂದರ್ಭದಲ್ಲಿ ಬಿ.ಎಸ್. ಕೃಷ್ಣಮೂರ್ತಿಯವರು ಮಂಕುತಿಮ್ಮನ ಕಗ್ಗದ ವ್ಯಾಖ್ಯಾನ ಮಾಡಿದರು. ಮೌಲ್ವಿಯವರಿಗೆ ರೋಮಾಂಚನವಾಯಿತು. ಕೆಲವು ಕಗ್ಗಗಳನ್ನು ಅವರು ಬರೆದುಕೊಂಡರು ಕೂಡ. ಆಗ ಅವರಿಗೆ ಸಲ್ಲಿಸಿದ ಗೌರವಧನ ಐದು ರೂಪಾಯಿ. ಅದು ಆಗಿನ ಕಾಲಕ್ಕೆ ಬಹಳ ಒಳ್ಳೆಯ ಮೊತ್ತವೇ ಆಗಿತ್ತು.

ಶಿವಮೊಗ್ಗ ಸಹ್ಯಾದ್ರಿ ಕಾಲೇಜಿನಲ್ಲಿ ಅಬ್ದುಲ್ ಶಕಾಬ್ ಎಂಬ ಒಬ್ಬ ಶಿಕ್ಷಕರ ಬಗ್ಗೆ ಹೇಳುತ್ತಾ 'ಬಹಳಾ ದೊಡ್ಡ ಪಂಡಿತರು. ಏನು ಇಂಗ್ಲಿಷ್ ಅಂತೀರಾ? ಅದ್ಭುತ, ಶೇಕ್ಸ್‌ಪಿಯರ್ ಕೂಡ ತಲೆಮೇಲೆ ಕೈ ಇಟಗೋಬೇಕು, ಹಂಗೆ! ವಿದ್ಯಾರ್ಥಿ ವಿದಾಯಕೂಟದಲ್ಲಿ ನಾವು ಅವರಿಗೆ ಪ್ರವರವನ್ನು ಹೇಳುತ್ತಾ ಎರಡೂ ಕಿವಿಗಳನ್ನು ಮುಟ್ಟಿಕೊಂಡು, 'ವಸಿಷ್ಟ ಗೋತ್ರಃ ಆಶ್ವಾಲಾಯನ ಸೂತ್ರಃ ಸೂರ್ಯನಾರಾಯಣ ಶರ್ಮನ್ ಅಹಂ ಭೋ ಅಭಿವಾದಯೇ' ಎನ್ನುತ್ತಾ ನಮಸ್ಕಾರ ಮಾಡಿದೆವು. ಆಗ ಅವರು ತಮ್ಮ ಬೂಟುಗಳನ್ನೇ ತೆಗೆದುಬಿಟ್ಟರು! ನಿಮಗೆಲ್ಲಾ ಒಳ್ಳೆಯದಾಗಲಿ ಎಂದು ಆಶೀರ್ವಾದ ಮಾಡಿದರು. ಇದಕ್ಕೇನು ಹೇಳ್ತೀರಿ? ಹ್ಞೂಂ ಇದು ನಿಜಾನಮ್ಮಾ ಎನ್ನುವಂತೆ ದೃಢವಾದ ಮಾತುಗಳು ಪುಂಖಾನುಪುಂಖವಾಗಿ ಹೊಮ್ಮುತ್ತಿದ್ದವು. ನಾವು ಮಂತ್ರಮುಗ್ಧರಾಗಿದ್ದೆವು.

'ರಾಷ್ಟ್ರಗೀತೆಗೆ ಮೊದಲು ನಮ್ಮ ಮುನಿಸಿಪಲ್ ಶಾಲೆಯಲ್ಲಿ ಪ್ರತೀ ಶುಕ್ರವಾರ 'ಕುರಾನ್' ಪಠಣವಿರುತ್ತಿತ್ತು- ಹಾಗೆಯೇ 'ಸರ್ಮನ್ ಆನ್ ದ ಮೌಂಟನ್' ಪಠಣವೂ. ಕುರಾನ್‌ಅನ್ನು ರೆಹಮಾನ್ ಖಾನ್ ಪಠಿಸುತ್ತಿದ್ದ. ಅದು ನಮಗೆಲ್ಲಾ ಬಾಯಿಪಾಠವಾಗಿ ಬಿಟ್ಟಿರೋದು' ಎಂದು ಬಿಸ್ಮಿಲ್ಲಾಹ್ ಅಲ್-ರಹಮಾನ್ ಅಲ್-ರಹೀಮ್... ಎನ್ನುತ್ತಾ ಅವರ ನೆನಪಿನಲ್ಲಿದ್ದ ಕುರಾನಿನ ನಾಲ್ಕು ಸಾಲುಗಳನ್ನು ನಿರರ್ಗಳವಾಗಿ ಹೇಳಿಯೇ ಬಿಟ್ಟರು- ಜೊತೆಗೆ ವೇದ ಮಂತ್ರವನ್ನೂ.

'ಮಗನಿಗೆ ಮುಂಜಿಯಾದಾಗ ಧಾರ್ಮಿಕ ಕಾರ್ಯಕ್ರಮಕ್ಕೆ ಬರಲು ದಲಿತರು ಹಿಂಜರಿದರು. ಆದರೆ, ನಾನು ಆಶ್ವಾಸನೆ ನೀಡಿ ಆಗ್ರಹಪೂರ್ವಕ ಕರೆದಾಗ ಎಳೆ ಆಗುವ ಸಮಯಕ್ಕೆ ಸರಿಯಾಗಿ ಬಂದರು. ಆಶೀರ್ವಾದ ಕೂಡ ಮಾಡಿದರು. 2012ರಲ್ಲಿ ತರೀಕೆರೆಯ ಸುಬ್ರಹ್ಮಣ್ಯೇಶ್ವರ ದೇವಸ್ಥಾನದಲ್ಲಿ ಮಗನ ಮದುವೆ ನಡೆಯಿತು. ದಲಿತರು, ಮುಸ್ಲಿಮರು ಎಲ್ಲಾ ಜನರನ್ನು ಕರೆದಿದ್ದೆವು. ಎಲ್ಲರೂ ಎಲ್ಲರ ಜೊತೆಯಲ್ಲಿ ಕುಳಿತಿದ್ದರು. ಊಟ ಮಾಡಿಕೊಂಡು ಸಂತೋಷವಾಗಿ ಹೋದರು' ಎಂದು ಹಳೆಯ ನೆನಪುಗಳನ್ನು ಹಂಚಿಕೊಳ್ಳುವಾಗ ಅವರ ಮೊಗದ ಮೇಲೆ ವಿಶೇಷವಾದ ಸಂತೋಷ ಕಾಣುತ್ತಿತ್ತು.

ಅಬ್ದುಲ್ ರೆಹಮಾನ್ ಎಂಬ ಗೆಳೆಯನ ಬಗ್ಗೆ ಹೇಳುತ್ತಾ, 'ಅವನು ಮೌಲ್ವಿಯಾಗಿದ್ದ. ಪ್ರತೀ ಭಾನುವಾರ ಬೆಳಿಗ್ಗೆ ಬಂದರೆ ಮಧ್ಯಾಹ್ನದವರೆಗೂ ಇದ್ದು ಊಟ ಮಾಡಿಕೊಂಡು ಹೋಗೋನು. ಅವನು ಒಂದು ವರುಷದ ಕೆಳಗೆ ಹೋಗಿಬಿಟ್ಟ. ಆ ಸಂದರ್ಭದಲ್ಲಿ ಅವನ ಹೆಂಡತಿಯಿಂದ ಮಧ್ಯರಾತ್ರಿ ಮೂರು ಗಂಟೆಗೆ ಫೋನ್ ಬಂತು. ಯಜಮಾನರು ತೀರಿಕೊಂಡಿದ್ದನ್ನು ನಾನೇ ನಿಮಗೆ ತಿಳಿಸಬೇಕೆಂದು ಕರೆ ಮಾಡಿದ್ದೇನೆ. ಮಗನಿಗೂ ತಿಳಿಸಿಲ್ಲ. ಆದರೆ ನೀವು ದಯವಿಟ್ಟು ಬರಬೇಡಿ (ಕೋವಿಡ್ ಕಾಲ), ಬೆಳಿಗ್ಗೆಯೂ ಬರಬೇಡಿ. ನೀವು ಬಾರದಿದ್ದರೇನೇ ನನಗೆ ಸಂತೋಷ' ಎಂದ ಸಬೀನಾರ ಸಜ್ಜನಿಕೆ ಮತ್ತು ಇವರ ಬಗೆಗಿನ ಅವರ ಕಾಳಜಿಯ ಬಗ್ಗೆ ಮನದುಂಬಿ ಮಾತನಾಡುತ್ತಾರೆ. 'ಕೋವಿಡ್ ಪ್ರಕರಣಗಳು ತಣ್ಣಗಾದ ಮೇಲೆ ಸಬೀನಾ ಅವರನ್ನು ಕಾಣಲು ಹೋದಾಗ ನನ್ನ ಎರಡೂ ಕೈಗಳನ್ನು ಭದ್ರವಾಗಿ ಹಿಡಿದುಕೊಂಡು ಗಳಗಳ ಅತ್ತುಬಿಟ್ಟಳು, ನನ್ನ ಮತ್ತು ಅಬ್ದುಲ್ ರೆಹಮಾನ್ ಸ್ನೇಹ ಹಾಗಿತ್ತು' ಎಂದು ಆರ್ದ್ರರಾಗುತ್ತಾರೆ.

'ಇವೊತ್ತು ಒಳ್ಳೆಯವರು ಕೇಡಿಗಳ ಹಾಗೆ ಕಾಣಿಸ್ತಿದ್ದಾರೆ, ಕೇಡಿಗಳು ಒಳ್ಳೆಯವರ ಹಾಗೆ ಕಾಣಿಸ್ತಿದ್ದಾರೆ, ಏನು ಮಾಡೋದು...?' ಅಸಹಾಯಕತೆಯೊಂದು ಅವರ ದನಿಯಲ್ಲಿತ್ತು. ಪ್ರಸಕ್ತ ಸಂದರ್ಭ ಸೃಷ್ಟಿಸಿರುವ ಒತ್ತಡಗಳಿಗೆ ಉತ್ತರ ರೂಪವಾಗಿ 'ಬರೆಯಬೇಕಾದರೆ, ಬೆರೆಯಬೇಕಾದರೆ, ಕರೆಯಬೇಕಾದರೆ, ಅರಿಯ ಬೇಕಾದರೆ, ನುರಿಯಬೇಕಾದರೆ, ಎಚ್ಚರಿಕೆಯಿಂದ (provoke ಮಾಡಬಾರದು) ಇರಬೇಕು' ಎಂಬ ಕಿವಿಮಾತನ್ನೂ ಹೇಳಿದರು. ಉಪಾಧ್ಯಾಯರುಗಳು ಉದಾರಿಗಳಾಗಿರಬೇಕು ಎಂಬ ಮಹತ್ವದ ಮಾತನ್ನೂ ಒತ್ತಿ ಹೇಳಿದರು. ನಾವು ಹೊರಟಾಗ ಅವರ ಮಗನ ಕೈಲಿ ನನಗೆ ಕುಂಕುಮ ತಾಂಬೂಲವನ್ನು ಕೊಡಿಸಿದರು! (ಅವರ ಸೊಸೆ ಊರಿಗೆ ಹೋಗಿದ್ದರು. ಅವರ ಶ್ರೀಮತಿಯವರು ಗತಿಸಿ ಬಹಳ ಕಾಲವಾಗಿದೆಯಂತೆ). ನೀವು ಊಟ ಮಾಡಿಕೊಂಡೇ ಹೋಗಬೇಕು ಎಂದು ಆಗ್ರಹಿಸಿದರು. ನಿಮ್ಮ ಮಾತುಗಳೇ ನಮಗೆ ಭೂರಿ ಭೋಜನವೆಂದು ಅವರನ್ನು ಬೀಳ್ಕೊಂಡು ಹೊರಗೆ ಬಂದಾಗ, ಚಪ್ಪಲಿ ಮೆಟ್ಟಿಕೊಂಡು ನಮ್ಮ ಜೊತೆಗೆ ಬಿಸಿಲಿನಲ್ಲಿ ಸ್ವಲ್ಪ ದೂರದವರೆಗೆ ಸಾಗಿಬಂದರು. ಇಂತಹ ಮಾಗಿದ ಜೀವಿಗಳ ಅನುಭವದ ಮಾತುಗಳು ನಮ್ಮ ಸಾವಿನಗುಂಟ ಸಾಗಿಬರಲಿ. ಅವೇ ನಮಗೆ ಶ್ರೀರಕ್ಷೆಯಾಗಲಿ.

ಲಂಕಾ ಡೈರಿ

12ನೇ ಪುಟದಿಂದ...

1970ರ ದಶಕದಲ್ಲಿ ಶ್ರೀಲಂಕಾ ಮೇಲೆ ಅಮೆರಿಕ ಕಣ್ಣು ಹಾಕಿದಾಗ ಇಲ್ಲಿನ ತಮಿಳರು ಮತ್ತು ಸಿಂಹಳೀಯರ ಮಧ್ಯೆ ಘರ್ಷಣೆ ಪ್ರಾರಂಭವಾಗಲು ಭಾರತವೇ ಕಾರಣವಾಗಿ ದ್ವೀಪದಲ್ಲಿ ಎಲ್‌ಟಿಟಿಇ ಸಂಘಟನೆ ಹುಟ್ಟಿಕೊಂಡಿತು. ಆ ಘರ್ಷಣೆ ಸುದೀರ್ಘವಾಗಿ ನಡೆದು ಕೊನೆಗೆ 2009ರಲ್ಲಿ ಟೈಗರ್ ಪ್ರಭಾಕರನ್ ಹತ್ಯೆಯೊಂದಿಗೆ ಅಂತ್ಯಗೊಂಡಿತು. ಘರ್ಷಣೆಯನ್ನು ಹತ್ತಿಕ್ಕಲು ರಾಜೀವ್ ಗಾಂಧಿಯವರು ಶ್ರೀಲಂಕಾ ಸಹಾಯಕ್ಕೆ ಭಾರತದ ಮಿಲಿಟರಿಯನ್ನು ಕಳಿಸಿದ ಕಾರಣ ತಮಿಳುನಾಡಿನ ರಾಮನಾಥಪುರಂನಲ್ಲಿ ರಾಜೀವ್ ಗಾಂಧಿ ಅವರ ಹತ್ಯೆ ನಡೆದುಹೋಯಿತು.

ಶ್ರೀಲಂಕಾ ಅನೇಕ ಅಂತರರಾಷ್ಟ್ರೀಯ ಸಂಸ್ಥೆಗಳ ಸದಸ್ಯತ್ವವನ್ನು ಪಡೆದುಕೊಂಡಿದೆ. ಸಾರ್ಕ್, ಯು.ಎನ್, ಕಾಮನ್‌ವೆಲ್ತ್, ಜಿ-77 ಮತ್ತು ನಾನ್ ಅಲೈನ್‌ಮೆಂಟ್ ಸಂಘಟನೆಗಳು ಅದರಲ್ಲಿ ಮುಖ್ಯವಾದುವು. ದಕ್ಷಿಣಪೂರ್ವ ಏಷ್ಯಾ ದೇಶಗಳಲ್ಲಿ ಮಾನವ ಅಭಿವೃದ್ಧಿ ಸೂಚ್ಯಂಕ ಪಟ್ಟಿಯಲ್ಲಿ ಉನ್ನತ ಸ್ಥಾನ ಹಾಗೂ ತಲಾ ಆದಾಯ ಪಟ್ಟಿಯಲ್ಲೂ ಒಳ್ಳೆಯ ಸ್ಥಾನವನ್ನು ಆ ದೇಶ ಪಡೆದುಕೊಂಡಿತ್ತು. ಆದರೆ, ಈಗಿನ ಆರ್ಥಿಕ ಪರಿಸ್ಥಿತಿ ತೀರಾ ಗಂಭೀರವಾಗಿದೆ. ಅದು ಬಾಂಗ್ಲಾದೇಶ ಮತ್ತು ಪಾಕಿಸ್ತಾನಗಳಿಗಿಂತ ಕೆಳಗಿದೆ. 75 ವರ್ಷ ವಯಸ್ಸಿನ ಪ್ರಧಾನ ಮಂತ್ರಿ ಮಹಿಂದಾ ರಾಜಪಕ್ಸೆ ಮತ್ತು ಆತನ ಮೂವರು ತಮ್ಮಂದಿರು ಐದು ಮುಖ್ಯ ಸಚಿವ ಸ್ಥಾನಗಳನ್ನು ಹೊಂದಿದ್ದು ದೇಶದ ಶೇ 70ರಷ್ಟು ಬಜೆಟ್ ಹಣವನ್ನು ಅವರೇ ನಿರ್ವಹಿಸುತ್ತಿದ್ದಾರಂತೆ.

ಶ್ರೀಲಂಕಾಕ್ಕೆ ಬರುವ ಆರ್ಥಿಕ ಮೂಲಗಳೆಂದರೆ ಶ್ರೀಲಂಕಾ ಕಾರ್ಮಿಕರು ಮಧ್ಯಏಷ್ಯಾ ದೇಶಗಳಲ್ಲಿ ದುಡಿದು ಕಳುಹಿಸುವ ಹಣ ಮತ್ತು ಪ್ರವಾಸೋದ್ಯಮದಿಂದ ಬರುವ ವರಮಾನ. 2019ರ ಈಸ್ಟರ್ ದಿನದಂದು ನಡೆದ ಬಾಂಬ್ ಸ್ಫೋಟದಿಂದಾಗಿ 269 ಜನರು ಪ್ರಾಣ ಕಳೆದುಕೊಂಡರು.



ಶ್ರೀಲಂಕಾದ ನೆಗೊಂಬೊ ಬಂದರಿನ ಬಳಿ ಮೀನಿನ ಸಂಸ್ಕರಣೆಯಲ್ಲಿ ತೊಡಗಿರುವ ಕಾರ್ಮಿಕರು –ಎಎಫ್‌ಪಿ ಚಿತ್ರ

ಇದು ಶ್ರೀಲಂಕಾ ಪ್ರವಾಸೋದ್ಯಮಕ್ಕೆ ದೊಡ್ಡ ಹೊಡೆತ ನೀಡಿತ್ತು. ಕಳೆದ ಮೂರು ವರ್ಷಗಳಿಂದ ಕೋವಿಡ್ ಕಾರಣದಿಂದ ಪ್ರವಾಸೋದ್ಯಮ ಬಿದ್ದುಹೋಗಿದೆ.

2019ರಲ್ಲಿ ನಡೆದ ಚುನಾವಣಾ ಕಾಲದಲ್ಲಿ ರಾಜಪಕ್ಸೆ ಅವರು ಮುಂದಿನ 10 ವರ್ಷಗಳಲ್ಲಿ ಶ್ರೀಲಂಕಾ ದೇಶವನ್ನು ಸಂಪೂರ್ಣವಾಗಿ ಸಾವಯವ ಕೃಷಿಗೆ ಪರಿವರ್ತನೆ ಮಾಡುವುದಾಗಿ ಆಶ್ವಾಸನೆ ನೀಡಿದ್ದಲ್ಲದೆ ದೇಶದಾದ್ಯಂತ ಸಿಂಥೆಟಿಕ್ ಗೊಬ್ಬರ ಮತ್ತು ಕೀಟನಾಶಕಗಳನ್ನು ನಿಷೇಧಿಸಿಬಿಟ್ಟರು. ಜೊತೆಗೆ ಚೀನಾದಿಂದ ಬರಬೇಕಾಗಿದ್ದ 20 ಸಾವಿರ ಟನ್ ಸಾವಯವ ಗೊಬ್ಬರದಲ್ಲಿ ಅಪಾಯಕಾರಿ ಬ್ಯಾಕ್ಟೀರಿಯಾ ಇದೆಯೆಂದು ಅದನ್ನು ಪಡೆಯಲಿಲ್ಲ. ಇದರಿಂದ ಕುಪಿತಗೊಂಡ ಚೀನಾ, ಶ್ರೀಲಂಕಾದ ಸರ್ಕಾರಿ ಬ್ಯಾಂಕ್ ಆಫ್ ಪೀಪಲ್ಸ್ ಮತ್ತು ಬ್ಯಾಂಕ್ ಆಫ್ ಶ್ರೀಲಂಕಾವನ್ನು ಕಪ್ಪುಪಟ್ಟಿಗೆ ಸೇರಿಸಿಬಿಟ್ಟಿತು. ಶ್ರೀಲಂಕಾ ಜನರ ಆಹಾರಕ್ಕಾಗಿ ಅಕ್ಕಿಯನ್ನೇ ಹೆಚ್ಚಾಗಿ ಅವಲಂಬಿಸಿದ್ದು ಭತ್ತದ ಉತ್ಪಾದನೆ ಕುಸಿದುಹೋಗಿ ಹೊರ ದೇಶಗಳಿಂದ 45 ಸಾವಿರ ಕೋಟಿ ಡಾಲರ್ ಮೌಲ್ಯದ ಅಕ್ಕಿಯನ್ನು ಕೊಂಡುಕೊಳ್ಳಬೇಕಾಯಿತು.

ಹಣದುಬ್ಬರ ಹೆಚ್ಚಾಗಿ ಯಾವುದೇ ತರಕಾರಿ ಕೆ.ಜಿ.ಗೆ 400 ರೂಪಾಯಿ, ಅಕ್ಕಿ 250 ರೂಪಾಯಿ, ಹಾಲು ಲೀಟರ್‌ಗೆ 150 ರೂಪಾಯಿ, ನೀರು 70 ರೂಪಾಯಿಯಂತೆ ಮಾರಾಟವಾಗುತ್ತಿರುವುದಾಗಿ ತಿಳಿಯಿತು. ಕೊಲಂಬೊದಿಂದ ಕ್ಯಾಂಡಿ ಮತ್ತು ಕ್ಯಾಂಡಿಯಿಂದ ನುವುಲಾರ ಗಿರಿಧಾಮಗಳಿಗೆ ಹೋಗುವ ರಸ್ತೆಯ ಸುತ್ತಮುತ್ತಲಿನ ಪ್ರದೇಶಗಳು ಬೆಟ್ಟಗುಡ್ಡ, ಹೇರಳ ಹಸಿರುಕಾಡುಗಳಿಂದ ತುಂಬಿಕೊಂಡಿರುವುದು ಕಂಡುಬಂತು. ಇಲ್ಲೆಲ್ಲ ಭತ್ತ, ಕಬ್ಬು, ಹಣ್ಣು, ತರಕಾರಿ ಬೆಳೆಯಬಹುದಲ್ಲ ಎಂದು ಗೈಡ್‌ಗೆ ಕೇಳಿದಾಗ, ಆತ 'ಬೆಳೆಯಬಹುದು, ಆದರೆ ಸರ್ಕಾರ ರೈತರಿಗೆ ಪ್ರೋತ್ಸಾಹ ನೀಡುತ್ತಿಲ್ಲ, ಕಷ್ಟಪಟ್ಟು ಬೆಳೆದರೆ ನಷ್ಟವಾಗುತ್ತದೆ. ನೀರಿಗೆ ತೊಂದರೆ ಇಲ್ಲ. ಆದರೆ, ಯಾರೂ ಕಷ್ಟಪಡುವುದಿಲ್ಲ. ದಿನಗೂಲಿ 1ರಿಂದ 2 ಸಾವಿರ ರೂಪಾಯಿ ಇದೆ. ಗಾರೆ ಕೆಲಸದ ಮೇಸ್ತ್ರಿಗೆ ದಿನಕ್ಕೆ 4 ಸಾವಿರ ರೂಪಾಯಿ ಕೂಲಿ ಕೊಡಬೇಕು. ಹಣ ಕೊಟ್ಟರೂ ಕೆಲಸಕ್ಕೆ ಜನರು ದೊರಕುತ್ತಿಲ್ಲ' ಎಂದ. ಶ್ರೀಲಂಕಾದ ಟೀ ತೋಟಗಳಲ್ಲಿ ದುಡಿಯುತ್ತಿರುವವರು ಈಗಲೂ ತಮಿಳು ಜನರೇ ಆಗಿದ್ದಾರೆ.

ಮತ್ತೆ ಜನ ಹೇಗೆ ಜೀವನ ನಡೆಸುತ್ತಾರೆ ಎಂಬ ಕುತೂಹಲ ತಣಿಸಿಕೊಳ್ಳಲು ಹೋದಾಗ ಪ್ರತೀ ಕುಟುಂಬಕ್ಕೂ ತೆಂಗು, ಮಾವು, ಹಲಸಿನ ಮರಗಳಿದ್ದು, ಜೊತೆಗೆ ಭತ್ತ, ತರಕಾರಿ ಬೆಳೆದುಕೊಳ್ಳುತ್ತಾರೆ. ತೀರಾ ಬಡವರಾದವರಿಗೆ ಸರ್ಕಾರದಿಂದ ಒಂದಷ್ಟು ಹಣ ದೊರಕುತ್ತದೆ ಎಂದು ತಿಳಿಯಿತು.

ಶ್ರೀಲಂಕಾದಲ್ಲಿ ಚೀನಾ ಕೋಟ್ಯಂತರ ರೂಪಾಯಿಯನ್ನು ಯಾವಯಾವ ಲೆಕ್ಕಾಚಾರ ಹಾಕಿಕೊಂಡು ಖರ್ಚು ಮಾಡಿದೆಯೋ ರಾಜಕಾರಣಿಗಳಿಗೆ ಮಾತ್ರ ಗೊತ್ತು. ಜೊತೆಗೆ ಅದು ನೀಡಿದ ಸಾಲದಲ್ಲಿ ಸಾಕಷ್ಟು ಹಣ ರಾಜಕಾರಣಿಗಳ ಜೇಬು ಸೇರಿರುವುದಾಗಿ ಹೇಳಲಾಗುತ್ತಿದೆ. ಈಗ ಭಾರತವೂ ಸಾಕಷ್ಟು ಸಾಲ ಕೊಟ್ಟು, ಐಒಸಿಯಿಂದ ಪೆಟ್ರೋಲ್, ಡೀಸೆಲ್ ಸರಬರಾಜು ಮಾಡುತ್ತಿದೆ. ಶ್ರೀಲಂಕಾದಲ್ಲಿ ಕೇಳಿಬಂದ ಇನ್ನೊಂದು ವಿಷಯವೆಂದರೆ ಭಾರತ, ಉತ್ತರ ಶ್ರೀಲಂಕಾದ ಮೂರು ದ್ವೀಪಗಳನ್ನು ತನ್ನ ವಶಕ್ಕೆ ತೆಗೆದುಕೊಳ್ಳುತ್ತಿದೆಯಂತೆ. ಜೊತೆಗೆ ಅದಾನಿ ಕಂಪನಿ ಈ ದ್ವೀಪದಲ್ಲಿ ಇಂಧನ ಸರಬರಾಜು ಕೇಂದ್ರವನ್ನು ಸ್ಥಾಪಿಸುತ್ತಿದೆಯಂತೆ.

ಭಾರೀ ಇಕ್ಕಟ್ಟಿನಲ್ಲಿ ಸಿಲುಕಿಕೊಂಡಿರುವ ಶ್ರೀಲಂಕಾ ಸಾಲದ ಹೊರೆಯನ್ನು ಕಡಿತಗೊಳಿಸುವಂತೆ ಚೀನಾ ದೇಶವನ್ನು ಕೇಳಿಕೊಳ್ಳುತ್ತಿದೆ. ಜೊತೆಗೆ ಶ್ರೀಲಂಕಾದ ಅಧಿಕಾರಿಗಳು ಮತ್ತು ಸಚಿವರಿರುವ ನಿಯೋಗವೊಂದು ಸಾಲ ಮನ್ನಾ ಮಾಡಲು ಅಂತರರಾಷ್ಟ್ರೀಯ ಹಣಕಾಸು ಒಕ್ಕೂಟವನ್ನು ಕೇಳಿಕೊಳ್ಳಲು ಹೋಗಿದೆ. ವಿಪರ್ಯಾಸವೆಂದರೆ ಸಾಲ ಮಾಡಿದ್ದು ಮತ್ತು ಕಮಿಷನ್ ಹೊಡೆದಿದ್ದು ರಾಜಕಾರಣಿಗಳು. ಆದರೆ, ತೆರಿಗೆ ಕಟ್ಟುತ್ತಿರುವುದು ಮಾತ್ರ ಜನಸಾಮಾನ್ಯರು ಮತ್ತು ಸರ್ಕಾರಿ ಕೆಲಸಗಾರರು. ಭಾರತದ ಸಾಲವೂ ಬೆಳೆಯುತ್ತಿರುವುದು ದಿಗಿಲು ಹುಟ್ಟಿಸುತ್ತದೆ.

ಮುನ್ನೋಟ 24-04-2022 ರಿಂದ 30-04-2022

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ
ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — **ಅಶ್ವಿನಿ, ಭರಣಿ, ಕೃತ್ತಿಕಾ 1**
ಬೇಜವಾಬ್ದಾರಿ ಮಾತುಗಳಿಂದ ಇಕ್ಕಟ್ಟಿಗೆ ಸಿಲುಕುವ ಸಾಧ್ಯತೆ ಇದೆ. ಖರ್ಚು ಹೆಚ್ಚಾಗುವ ಸಾಧ್ಯತೆ ಇದೆ. ಅನಗತ್ಯ ಸಿಟ್ಟಿನಿಂದ ಆಗುವ ನಷ್ಟ ತಪ್ಪಿಸಲು ಸಮಾಧಾನದಿಂದ ಇರುವುದು ಒಳ್ಳೆಯದು. ನ್ಯಾಯಾಲಯದಲ್ಲಿನ ವ್ಯವಹಾರಗಳನ್ನು ಸ್ವಲ್ಪ ಮುಂದೂಡುವುದು ಒಳ್ಳೆಯದು. ಲೇವಾದೇವಿ ಮಾಡುವವರಿಗೆ ಬಾಕಿ ಹಣ ಬಂದು ಸಂತಸವಾಗುತ್ತದೆ.

ವೃಷಭ — **ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2**
ಕಚೇರಿ ಕೆಲಸಗಳಲ್ಲಿ ಜಾಗರೂಕರಾಗಿ ವ್ಯವಹರಿಸುವುದು ಒಳ್ಳೆಯದು. ಎದುರಾದ ಸಮಸ್ಯೆಯನ್ನು ಎದುರಿಸಲು ಸಹೋದ್ಯೋಗಿಗಳಿಂದ ಸಕಾಲಿಕ ಸಹಾಯ ಮತ್ತು ಸಲಹೆಗಳು ದೊರೆಯುತ್ತವೆ. ಕೌಟುಂಬಿಕ ಸಾಮರಸ್ಯದೊಂದಿಗೆ ಸಂತೋಷದ ಬದುಕು ನಿಮ್ಮದಾಗುವುದು. ಕುಟುಂಬದಲ್ಲಿ ಮಹಿಳೆಯರಿಗೆ ಹೆಚ್ಚಿನ ಸ್ವಾತಂತ್ರ್ಯ ದೊರೆಯುತ್ತದೆ.

ಮಿಥುನ — **ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3**
ಅಡ್ಡಿ ಆತಂಕಗಳಿಲ್ಲದೆ ನಿಮ್ಮ ಕೆಲವು ಕೆಲಸಗಳು ನೆರವೇರುವ ಸಾಧ್ಯತೆಯಿದೆ. ಮಧ್ಯವರ್ತಿಗಳ ಸಹಾಯದಿಂದ ವಿವಾಹ ಕಾರ್ಯ ನಡೆಯುವ ಸಾಧ್ಯತೆ ಇದೆ. ಉದ್ಯೋಗದಲ್ಲಿ ಹೆಚ್ಚಿನ ನಿಷ್ಠೆ, ಪ್ರಾಮಾಣಿಕತೆಯ ಪ್ರದರ್ಶನ ಅಗತ್ಯ. ಸಹೋದ್ಯೋಗಿಗಳೊಂದಿಗೆ ಬಹಳ ಉತ್ತಮ ಸಹಕಾರ ಏರ್ಪಡುತ್ತದೆ. ಭೂ ವ್ಯವಹಾರ ಮಾಡುವವರಿಗೆ ಸಮಾಧಾನಕರವಾದ ಫಲಿತಾಂಶ ದೊರೆಯುವ ಸಾಧ್ಯತೆ ಇದೆ.

ಕಟಕ — **ಪುನರ್ವಸು 4 ಪುಷ್ಯ, ಆಶ್ಲೇಷ**
ವ್ಯವಹಾರದಲ್ಲಿ ಮಿತವ್ಯಯವನ್ನು ಸಾಧಿಸುವಿರಿ. ಗಾಳಿಸುದ್ದಿಯ ಬಗ್ಗೆ ತಲೆಕೆಡಿಸಿಕೊಳ್ಳುವ ಅಗತ್ಯವಿಲ್ಲ. ನಿರ್ಲಕ್ಷ್ಯ ಮಾಡುವುದು ಒಳಿತು. ಹೆಚ್ಚಿನ ಜವಾಬ್ದಾರಿಗಳನ್ನು ನಿಭಾಯಿಸುವಲ್ಲಿ ಉತ್ತಮ ನೈಪುಣ್ಯವನ್ನು ಪಡೆಯುವಿರಿ. ವಾಹನ ಚಾಲನೆ ಮಾಡುವಾಗ ಎಚ್ಚರದಿಂದ ಇರುವುದು ಒಳ್ಳೆಯದು. ವಿದೇಶಿ ಪ್ರಯಾಣವನ್ನು ಬಯಸುತ್ತಿದ್ದವರಿಗೆ ಈಗ ಅವಕಾಶಗಳು ಒದಗುವ ಸಾಧ್ಯತೆ ಇದೆ.

ಸಿಂಹ — **ಮುಖ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1**
ಸೌಜನ್ಯದ ನಡವಳಿಕೆಯಿಂದ ಜನರ ನಡುವೆ ಗೌರವಾದರಗಳನ್ನು ಪಡೆಯುವಿರಿ. ಹಣದ ಒಳಹರಿವು ನಿಮ್ಮ ಅಗತ್ಯವನ್ನು ಪೂರೈಸುವಷ್ಟು ಇರುತ್ತದೆ. ಕಳೆದು ಹೋದ ವಸ್ತುಗಳು ಪುನಹ ದೊರೆಯುವ ಸಾಧ್ಯತೆಗಳಿವೆ. ಕ್ರೀಡಾಪಟುಗಳಿಗೆ ಹೆಚ್ಚಿನ ಸಾಧನೆಯನ್ನು ಮಾಡಲು ಬೇಕಾದ ಸಹಕಾರಗಳು ಒದಗಿಬರುತ್ತವೆ. ಹಿರಿಯರಿಂದ ಆಸ್ತಿ ಅಥವಾ ಧನಸಹಾಯ ಸಿಗುವ ಸಾಧ್ಯತೆಗಳಿವೆ.

ಕನ್ಯಾ — **ಉತ್ತರ ಫಲ್ಗುಣಿ 2,3,4 ಹಸ್ತ, ಚಿತ್ತಾ 1,2**
ಮಾತಿನಲ್ಲಿ ಕಠಿಣತೆ ಬೇಡ. ಅದು ನಿಮಗೆ ಮುಳುವಾಗುವ ಸಂದರ್ಭವಿದೆ. ಹಣದ ಒಳಹರಿವು ಮಂದಗತಿಯಲ್ಲಿರುತ್ತದೆ. ಆಸ್ತಿಪಾಸ್ತಿಗಳ ವಿಷಯದಲ್ಲಿ ಹೆಚ್ಚು ಎಚ್ಚರಿಕೆ ಇರಲಿ. ಭೂ ವ್ಯವಹಾರ ಮಾಡುವವರಿಗೆ ಹೆಚ್ಚಿನ ಗಳಿಕೆ ಇರುತ್ತದೆ. ಮಕ್ಕಳಿಗಾಗಿ ಹೆಚ್ಚು ಹಣ ಖರ್ಚು ಮಾಡಬೇಕಾದ ಸಂದರ್ಭವಿದೆ. ಸಾಲಗಾರರು ಬಂದು ವಾಪಸಾತಿಗಾಗಿ ಪೀಡಿಸುವ ಸಂದರ್ಭವಿದೆ.

ತುಲಾ — **ಚಿತ್ತಾ 3,4 ಸ್ವಾತಿ, ವಿಶಾಖ 1,2,3**
ಒಂದು ರೀತಿ ಆಲಸ್ಯ ಆವರಿಸುತ್ತದೆ. ಕಮಿಷನ್ ವ್ಯವಹಾರ ಮಾಡುವವರಿಗೆ ಆದಾಯ ಇರುತ್ತದೆ. ಮಹಿಳೆಯರಿಗೆ ಸಾಮಾಜಿಕ ಕಾರ್ಯಕ್ರಮಗಳಲ್ಲಿ ಸಾಕಷ್ಟು ಬಿಡುವಿಲ್ಲದ ಕೆಲಸವಿರುತ್ತದೆ. ಹಣದ ಒಳಹರಿವು ಸಾಮಾನ್ಯವಾಗಿರುತ್ತದೆ. ಸ್ವಂತ ವಾಹನಗಳ ವಿಷಯದಲ್ಲಿ ಹೆಚ್ಚು ಜಾಗರೂಕರಾಗಿರುವುದು ಬಹಳ ಉತ್ತಮ. ಆರ್ಥಿಕ ಒತ್ತಡಗಳಿಂದಾಗಿ ಸ್ವಲ್ಪ ಕಿರಿಕಿರಿ ಉಂಟಾಗುವ ಸಾಧ್ಯತೆ ಇದೆ.

ವೃಶ್ಚಿಕ — **ವಿಶಾಖ 4 ಅನುರಾಧ, ಜೇಷ್ಠ**
ವಿದ್ಯುತ್ ಸಲಕರಣೆಗಳನ್ನು ಮಾರಾಟ ಮಾಡುವವರ ವ್ಯವಹಾರ ವಿಸ್ತರಿಸುತ್ತದೆ. ಯಾಂತ್ರಿಕ ಸಲಕರಣೆಗಳ ಬಿಡಿಭಾಗಗಳನ್ನು ತಯಾರಿಸಿ ಮಾರಾಟ ಮಾಡುವವರ ವ್ಯವಹಾರ ವೃದ್ಧಿಸಿ ಆದಾಯ ಹೆಚ್ಚುವ ಸಾಧ್ಯತೆ ಇದೆ. ನಿಮ್ಮ ವೈಯಕ್ತಿಕ ವಿಚಾರಗಳನ್ನು ಇತರರೊಡನೆ ಹೇಳಿಕೊಳ್ಳುವುದು ನಿಮಗೆ ತೊಂದರೆಯಾಗಬಹುದು.


ಧನುಸ್ಸು — **ಮೂಲ, ಪೂರ್ವಾಷಾಢ, ಉತ್ತರಾಷಾಢ 1**
ಕ್ರೀಡಾಪಟುಗಳಿಗೆ ಹೆಚ್ಚಿನ ಸಾಧನೆ ಮಾಡುವ ಅವಕಾಶ ಒದಗುತ್ತದೆ. ಹಿರಿಯ ಅನುಭವಿ ಆಟಗಾರರಿಂದ ಸೂಕ್ತ ಮಾರ್ಗದರ್ಶನ ದೊರೆಯುತ್ತದೆ. ಹಣದ ಒಳಹರಿವು ಅಗತ್ಯಕ್ಕೆ ತಕ್ಕಷ್ಟು ಇರುತ್ತದೆ. ಉತ್ಪಾದನಾ ಕ್ಷೇತ್ರದಲ್ಲಿರುವವರಿಗೆ ಉತ್ತಮ ವ್ಯವಹಾರವಾಗಿ ಲಾಭ ಬರುತ್ತದೆ. ಉದ್ಯೋಗವನ್ನು ಅರಸುತ್ತಿರುವವರಿಗೆ ಉದ್ಯೋಗ ದೊರೆಯುವ ಸಾಧ್ಯತೆ ಇದೆ.

ಮಕರ — **ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2**
ಕುಟುಂಬದ ಸದಸ್ಯರೊಡನೆ ಸಂತೋಷವಾಗಿ ಕಾಲಕಳೆಯಲು ಇಚ್ಛಿಸುವಿರಿ. ದ್ವಿದಳ ಧಾನ್ಯಗಳನ್ನು ಮಾರಾಟ ಮಾಡುವವರಿಗೆ ಹೆಚ್ಚಿನ ಲಾಭವಿರುತ್ತದೆ. ಕಲಾವಿದರುಗಳಿಗೆ ಉತ್ತಮ ಗೌರವದ ಜೊತೆಗೆ ಹೆಚ್ಚಿನ ಸಂಭಾವನೆ ದೊರೆಯುತ್ತದೆ. ಹಿರಿಯ ವೈದ್ಯರಿಗೆ ಆಪಾದನೆ ಬರುವ ಸಂಭವವಿದೆ. ಹಾಗಾಗಿ ಎಚ್ಚರ. ಆತ್ಮೀಯರ ಜೊತೆಗೂಡಿ ದೂರ ಪ್ರಯಾಣ ಮಾಡುವ ಸಾಧ್ಯತೆಗಳಿವೆ.

ಕುಂಭ — **ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3**
ನಿಮ್ಮ ಕಾರ್ಯಯೋಜನೆಯ ಯಶಸ್ಸಿಗಾಗಿ ಸಾಕಷ್ಟು ಸಲಹೆಗಳು ಬಂದರೂ ಅದನ್ನು ಸ್ವಯಂ ತುಲನೆಮಾಡಿ ನಿರ್ಧಾರ ತೆಗೆದುಕೊಳ್ಳುವುದು ಬಹಳ ಉತ್ತಮ. ಯುವಕರಿಗೆ ಉದ್ಯೋಗದಲ್ಲಿ ಅಡೆತಡೆಗಳು ಬರುವ ಸಾಧ್ಯತೆಗಳಿವೆ. ಸರ್ಕಾರಿ ನೌಕರಿಯಲ್ಲಿ ಇರುವವರಿಗೆ ಅವರ ಕಾರ್ಯದಕ್ಷತೆಗೆ ತಕ್ಕಂತೆ ಬಡ್ತಿ ದೊರೆಯುವ ಸಾಧ್ಯತೆ ಇದೆ.

ಮೀನ — **ಪೂರ್ವಾಭಾದ್ರ 4 ಉತ್ತರಾಭಾದ್ರ, ರೇವತಿ**
ಸ್ವತಂತ್ರ ನಿರ್ಧಾರ ತೆಗೆದುಕೊಳ್ಳುವಾಗ ಬೇರೆಯವರ ಮೇಲೆ ಅದರ ಪರಿಣಾಮ ಏನಾಗುವುದೆಂದು ಯೋಚಿಸಿ ತೆಗೆದುಕೊಳ್ಳಿರಿ. ಇಲ್ಲವಾದಲ್ಲಿ ಆ ಪರಿಣಾಮದ ಬಿಸಿ ನಿಮಗೂ ತಟ್ಟುವುದು. ಆರ್ಥಿಕ ಸ್ಥಿತಿಯು ನಿಮ್ಮ ನಿರೀಕ್ಷೆಯಂತೆ ಇರುತ್ತದೆ. ದಿನಸಿ ವ್ಯಾಪಾರಿಗಳಿಗೆ ಹೆಚ್ಚಿನ ವ್ಯಾಪಾರವಾಗುವ ಲಕ್ಷಣಗಳಿವೆ. ಸ್ವಂತ ಆರೋಗ್ಯದ ಬಗ್ಗೆ ನಿರ್ಲಕ್ಷ್ಯ ಬೇಡ. ಬೇರೆಯವರ ವಾದವಿವಾದಗಳಿಗೆ ತಲೆ ಹಾಕುವುದು ಬೇಡ.

ಪದಬಂಧ 2735



ಮೇಲಿನಿಂದ ಕೆಳಕ್ಕೆ
1. ಸಂತೋಷ ನೀಡಲು ಹಾರಿಬರುವ ಬಹುಮಾನ 5
2. ಹದಿಹರೆಯದ ಹುಡುಗ 3
3. ಪುರಾತನ ನಗರದ ದೇವಾಲಯ 5
4. ಶಿವನ ಕೈಲಿರುವ ತಲೆಬುರುಡೆ 3
5. ನರಸಿಂಹ ಇದರಿಂದ ಒಡೆದು ಬಂದ 2
6. ದೋಸೆ ಇಡ್ಲಿ ಹಿಟ್ಟು ಕಲಿಸಿಟ್ಟಾಗ ಆಗುವ ಹೆಚ್ಚಳ 3
7. ವಿಜಯದಶಮಿಗೆ ಸಿಗುವ ಆನೆ ಮೇಲೆ ಕೂರುವ ಯೋಗ 5
9. ಈಶ್ವರನ ಕೈಲಿರುವ ತ್ರಿಶೂಲ 3
11. ರಸಭರಿತ ಮಾವು 3
12. ಬೊಗಸೆತುಂ.. ಹಿಡಿದ ಹೂವು 5
13. ಮೈ ಮುಖ ಒರೆಸಿಕೊಳ್ಳಲು ಬಳಸುವ ಅಂಗ್ಲ ಚೌಕ ವಸ್ತ್ರ 3
15. ಹಿಂದೂಸ್ಥಾನಿ ಸಂಗೀತದ ಪಕ್ಕವಾದ್ಯ 3
16. ಸಂಸ್ಕೃತದ ಕೊಳಲನ್ನು ನುಡಿಸುವಿಕೆ 5
17. ಕಾಗೆ ಕೂಗಿನಂತಹ ಅಹಿತವಾದ ಶಬ್ದ 3
18. ಓಟಕ್ಕೆ ಸಾಟಿಯಿಲ್ಲದ ಅಶ್ವ ಪಾದ 5
20. ಅಚ್ಚುಬರಹದಲ್ಲಿರುವುದು 3
21. ತೆವಳುವ ಕ್ಷುಲ್ಲಕ ಕ್ರಿಮಿ 2
22. ಎತ್ತರದ ಈ ರಂಗ ಈಗ ಎಲ್ಲಾ ಕ್ಷೇತ್ರಗಳಲ್ಲೂ ಲಭ್ಯ 3

ಎಡದಿಂದ ಬಲಕ್ಕೆ
1. ಕೃಷ್ಣ ಸತಿ ಸತ್ಯಭಾಮೆ ಬಯಸಿದ ಹೂ 4
3. ಮೈಯಲ್ಲಿ ಆನಂದದ ರೋಮಾಂಚನ 3
5. ಗಿರಿಗಳ ನಡುವಿನ ಹಳ್ಳಕೊಳ್ಳ 3
6. ಯಾವುದೇ ಸತ್ವವಿಲ್ಲ, ಶುಷ್ಕವಾದ ಅಹಂಕಾರ, ಪ್ರತಿಷ್ಠೆ 4
8. ಅಕ್ಷರದ ಬರಹ ರೂಪ 2
10. ಬೆರೆತು ಲೀನವಾಗು 3
12. ವಂಶ ಅಥವಾ ಪಂಗಡಕ್ಕೆ ಮುಳುವಾದವ 5
14. ಆಸ್ತಿ ಪಾಸ್ತಿಯ ಹಕ್ಕು ಪಡೆವ ಉತ್ತರಾಧಿಕಾರಿ 3
15. ಕನ್ನಡನಾಡಿನ ಜೀವನದಿಯ ಉಗಮಸ್ಥಾನ 5
17. ಹಾಕಿ ಚೆನ್ನಾಗಿ ತಿರುಗಿಸು 3
19. ಮಗುವನ್ನು ನಿದ್ದೆಗೆ ದೂಡುವ ಹಾಡು 2
21. ಮನೆಯಲ್ಲಿ ಇಲಿಯಾದರೂ ಬೀದಿಯಲ್ಲಿ ಹಾಕುವ ಪಾತ್ರ 4
23. ಅನುಕಂಪದ ಸೇವಕ 3
24. ಜಪದಿಂದ ಉಂಟಾದ ಉರಿ 3
25. ಹೇಷಾರವ ಕಟ್ಟಿದ ಕ್ಷೀರ 4

ಪದಬಂಧ ಉತ್ತರ -2734

ಮೇಲಿಂದ ಕೆಳಕ್ಕೆ
1.ತಾರಾವಿಲಾಸ 2.ಜಾತಿಸಮಾಜ 3.ತಿರುನಾಮ 4.ನುತಸ್ತುತ 7.ರಾಜೀನಾಮೆ 8.ರಿಪುಗಣಿ 10.ಮಾನದಂಡ 11.ನಸುನಗೆ 14.ರಸಭರಿತ 15.ಗೆಳತಿಪ್ರಿಯ 16.ಕೆಂಪುಕೋತಿ 17.ಪಿತೃಲೋಕ


ಎಡದಿಂದ ಬಲಕ್ಕೆ
1. ತಾಜಾತಾಜಾ 3.ತಿಳಿಬಾನು 5.ತಿಳಿದವರು 6.ವಿಪರ್ಯಾಸ 7.ರಾಮಚರಿತ 9ಸಮಾನಜನ 12.ಸುಮನಾ 13.ಮೆರವಣಿಗೆ 16.ಕೆಂಡಸಂಪಿಗೆ 18.ಭವಭೀತಿ 19.ಲೋಕಸಂಚಾರಿ 20.ತಿಳಿಪಾಕ 21.ತರುವಾಯ

ಬರೀ ಪುರಾಣವಲ್ಲ, ರಂಗಸಂಭವದ ಆತ್ಮಕಥೆ...

ನಿತ್ಯಾನಂದ ಬಿ. ಶೆಟ್ಟಿ

ಚಿತ್ರಕಲೆ, ರಂಗಭೂಮಿ, ಪುಸ್ತಕ ವಿನ್ಯಾಸ, ಪುಸ್ತಕ ಪ್ರಕಾಶನ, ಚಿತ್ರರಂಗ, ಸಾಹಿತ್ಯ, ಗೊಂಬೆಯಾಟ, ಮಕ್ಕಳ ಶಿಬಿರ ಹೀಗೆ ಸೃಜನಶೀಲ ಅಭಿವ್ಯಕ್ತಿಯ ಕ್ಷೇತ್ರಗಳಲ್ಲಿ ದಶಶಿರನಾಗಿ ಕೆಲಸ ಮಾಡಿದ ಚನ್ನಕೇಶವ ಬರೆದ ಪುಸ್ತಕ 'ರಂಗ ಪುರಾಣ'. ನೀನಾಸಂನಲ್ಲಿನ ತಮ್ಮ ಕಲಿಕೆಯ ದಿನಗಳು ಮತ್ತು ನಂತರ ತಿರುಗಾಟದ ದಿನಗಳ ಅನುಭವಗಳನ್ನು ಮೆಲುಕು ಹಾಕಿಕೊಂಡು ನೆನಪುಗಳನ್ನು ಆಯ್ದು ಕಟ್ಟಿದ ಹೂಮಾಲೆಯಂತಿದೆ ಈ ಪುಸ್ತಕ. ನೀನಾಸಂ ದಿನಗಳ ನಂತರದ ಚನ್ನಕೇಶವರ ಕ್ರಿಯಾಶೀಲತೆಯ ವಿವರಗಳು ಇಲ್ಲಿಲ್ಲ. ಆ ದಿನಗಳ ಬಳಿಕ ಚನ್ನಕೇಶವರ ಆಸಕ್ತಿ, ಅಭಿರುಚಿ ಮತ್ತು ಸೃಜನಶೀಲತೆಗಳು ಹೇಗಿದ್ದುವು ಎಂಬುದನ್ನು ಅಮೆರಿಕದ ಯೂನಿವರ್ಸಿಟಿ ಆಫ್ ನಾರ್ತ್ ಕೆರೊಲಿನಾದ ಪ್ರಾಧ್ಯಾಪಕಿ ಕಾಥಿ ಎ ಪರ್ಕಿನ್ಸ್ ಮತ್ತು ವಿವೇಕ ಶಾನಭಾಗ ಇಲ್ಲಿ ಸಂಕ್ಷಿಪ್ತವಾಗಿ ಹಿಡಿದಿಟ್ಟಿದ್ದಾರೆ. ಇವುಗಳ ಜೊತೆಗೆ ಸಹನಟರಾದ ಎಂ.ಎಸ್. ಜಹಾಂಗೀರ ಅವರ ಗಪದ್ಯ, ಮೌನೇಶ ಬಡಿಗೇರ ಅವರ ಪ್ರವೇಶಿಕೆ ಮತ್ತು ಶ್ರೀಧರ ಹೆಗ್ಗೋಡು ಅವರ ಕೆಲವೇ ಕೆಲವು ಮಾತುಗಳ ಹಿನ್ನುಡಿ ಈ ಕೃತಿಯ ಸೊಗಸನ್ನು, ಮಹತ್ವವನ್ನು ಹೆಚ್ಚಿಸಿವೆ.

ನಾಟಕವೊಂದರ ರಂಗಪ್ರಸ್ತುತಿಯ ಪೂರ್ವತಯಾರಿಯ ಪ್ರಕ್ರಿಯೆಯನ್ನು ಅಖೈರಾಗಿ ಹಿಡಿದಿಡುವುದು ಕಷ್ಟ. ಆ ಸಂಕೀರ್ಣ ಚಟುವಟಿಕೆಯನ್ನು ಸೂಕ್ಷ್ಮವಾಗಿ ಗಮನಿಸುತ್ತ, ಅಲ್ಲಿಯ ಮುಖ್ಯ ಅಂಶಗಳನ್ನು ಸೋಸಿಕೊಳ್ಳುತ್ತ, ಅದನ್ನು ಮರುಕಥಿಸುವಾಗ ಕೊಂಚ ತಾತ್ವಿಕಗೊಳಿಸುತ್ತ, ಆ ಎಲ್ಲವನ್ನೂ ಕಥನದ ದಾರದಲ್ಲಿ ಪೋಣಿಸುವ ಕೌಶಲ ಬಲ್ಲ ಚನ್ನಕೇಶವ ನಿಜಕ್ಕೂ ಮಾಯಗಾರ. ಈ ಪುಸ್ತಕದಲ್ಲಿ ಅವರು ಮಾಡಿರುವುದು ಗಾಳಿಯನ್ನು ಮುಷ್ಟಿಯಲ್ಲಿ ಹಿಡಿದು ಅದಕ್ಕೊಂದು ಆಕಾರ ಕೊಡುವ ಪ್ರಯತ್ನವನ್ನೇ.



ರಂಗಪುರಾಣ
ಲೇ: ಚನ್ನಕೇಶವ
ಪ್ರ: ಥಿಯೇಟರ್ ತತ್ಕಾಲ್ ಬುಕ್ಸ್
ಸಂ: 9901234161
ಪು: 168 ₹220

ರಂಗ ಪುರಾಣದ ಬಗ್ಗೆ ಕೇಳಬೇಕಾದುದು 'ಇದು ಯಾವ ಪ್ರಕಾರದ ಪುಸ್ತಕ' ಎಂಬ ನಿಖರ ಪ್ರಶ್ನೆಯನ್ನಲ್ಲ; ಬದಲಾಗಿ 'ಇದು ಏನೇನನ್ನು ಮಾಡುವ ಪುಸ್ತಕ' ಎಂಬ ಪ್ರಶ್ನೆಯನ್ನು. ಬದುಕಿನುದ್ದಕ್ಕೂ ತಾನು ತೊಡಗಿಕೊಂಡ ಕ್ಷೇತ್ರಗಳಲ್ಲಿ ಪರಿಪೂರ್ಣತೆಯ ಸಿದ್ಧಿಗಾಗಿ ಹಟಯೋಗಿಯಂತೆ ಕೆಲಸ ಮಾಡುತ್ತಿದ್ದ ಚನ್ನಕೇಶವರ ಈ ಪುಸ್ತಕಕ್ಕೆ ಹತ್ತು ಹಲವು ಆಯಾಮಗಳಿವೆ. ತೋರಮಟ್ಟಿಗೆ ರಂಗಶಿಕ್ಷಣ, ರಂಗಪ್ರದರ್ಶನದ ಅನುಭವ ಕಥನಗಳೇ ಇಲ್ಲಿದ್ದರೂ ಈ ಪುಸ್ತಕ ನಿಜವಾಗಿಯೂ ರಂಗಪ್ರಯೋಗವೊಂದರ ಆತ್ಮಕಥೆ. ಅಷ್ಟಲ್ಲದೆ ಈ ಪುಸ್ತಕ ಯಾವುದೇ ವಿದ್ಯೆಯ ಕಲಿಕೆ ಸಾಧ್ಯವಾಗುವುದು ಹೇಗೆ, ನಮ್ಮ ಸಮಗ್ರ ಶಿಕ್ಷಣ ವ್ಯವಸ್ಥೆ ಹೇಗಿದೆ, ನಮ್ಮ ಸಾಂಸ್ಕೃತಿಕ ನೀತಿ ಹೇಗಿದೆ ಎಂಬ ಪ್ರಶ್ನೆಗಳನ್ನೂ ತನ್ನ ಇಂಗಿತದಲ್ಲಿರಿಸಿದೆ.

ಪುಸ್ತಕದ್ದೇ ಒಂದು ನಿದರ್ಶನ. 'ರಂಗಶಿಕ್ಷಣ ಕೇಂದ್ರದ ದಿನಚರಿಯು ಕೋಲಾಟ ಆಡುವುದರೊಂದಿಗೆ ಶುರುವಾಗುತ್ತಿತ್ತು. ಹೊಸ ವಿದ್ಯಾರ್ಥಿಗಳಿಗೆ ಹಳೆಯ ವಿದ್ಯಾರ್ಥಿಗಳಾದ ತಿರುಗಾಟದ ನಟರೇ ಹಾಡಿನೊಂದಿಗೆ ಕೋಲಾಟ ಕಲಿಸಿಕೊಡಬೇಕಿತ್ತು. ಕೋಲಾಟವಾಡುವ ಹೊತ್ತಿನಲ್ಲೇ ಪಕ್ಕದ ಕೋಣೆಯಿಂದ 'ಮೀಡಿಯಾ' ಪಾತ್ರಧಾರಿ ಭವಾನಿಗೆ ನಿರ್ದೇಶಕ ಜಂಬೆಯವರು ಮಾತುಗಾರಿಕೆಯನ್ನು ಕಲಿಸುತ್ತಿದ್ದರು. ಅದರ ಮುಂದೆ ಕೋಲಾಟದ ಈ ಪೂರ್ವಭಾವಿ ಶಿಕ್ಷಣ ಬಹಳ ಸಪ್ಪೆಯೆನಿಸುತ್ತಿತ್ತು. ಕೋಲಾಟಕ್ಕೂ ನಟನೆಗೂ ಏನು ಸಂಬಂಧ ಎನ್ನುವ ಪ್ರಶ್ನೆಗಳೇಳುತ್ತಿದ್ದರೂ, ಒಂದು ವೃತ್ತಿಪರ ನಾಟಕದಲ್ಲಿ ಪಾತ್ರ ಮಾಡುವುದಕ್ಕೆ ಎಷ್ಟೊಂದು ತಯಾರಿಯ ಅಗತ್ಯವಿರುತ್ತದೆಯೆಂಬ ಅರಿವು ಮನಸ್ಸಿಗೆ ಬಂದು, ನಮ್ಮ ಕೋಲಿನ ಬಡಿತದ ತೀವ್ರತೆಯನ್ನು ಹೆಚ್ಚಿಸುತ್ತಿತ್ತು.' ಚನ್ನಕೇಶವರ ಈ ನಿರೂಪಣೆಯನ್ನು ಯಾವುದೇ ಕ್ಷೇತ್ರದ ಕಲಿಕೆಯ ಜೊತೆಗೆ ಇಟ್ಟು ನೋಡಬಹುದಾಗಿದೆ.

ನಟ-ನಟಿಯರು ಅಭಿನಯಕ್ಕಾಗಿ ತಮ್ಮ ಶರೀರವನ್ನು ಹದಗೊಳಿಸುವುದಕ್ಕಾಗಿ, ಲಯವನ್ನು ಸಿದ್ಧಿಸುವುದಕ್ಕಾಗಿ ಕೋಲಾಟವನ್ನು ಪ್ರತಿನಿತ್ಯ ಅಭ್ಯಾಸ ಮಾಡಿದರೆ; ವೈದ್ಯಕೀಯ, ಕಾನೂನು, ರಾಜಕೀಯ ಶಾಸ್ತ್ರ, ಅರ್ಥಶಾಸ್ತ್ರ, ಸಾಹಿತ್ಯ ಇತ್ಯಾದಿಗಳ ಕಲಿಕಾರ್ಥಿಗಳು ತಮ್ಮ ಶೈಕ್ಷಣಿಕ ತರಬೇತಿ ಮತ್ತು ಬೌದ್ಧಿಕ ಸಿದ್ಧಿಗಾಗಿ ಪ್ರತಿನಿತ್ಯ ಯಾವುದನ್ನು, ಹೇಗೆ ಅಭ್ಯಾಸ ಮಾಡಬೇಕು ಎಂದು ಯೋಚಿಸುವಂತೆಯೂ ಈ ಪುಸ್ತಕದ ನಿರೂಪಣೆ ಇದೆ.

ವಿಮರ್ಶೆ

ಚನ್ನಕೇಶವರಿಗೆ ತಾನು ಕಟ್ಟುವುದು 'ಪುರಾಣ'ವಷ್ಟೇ ಅಲ್ಲ ಎಂಬುದು ಗೊತ್ತಿದೆ. ಹಾಗಾಗಿ ಇದು ಬಿ.ವಿ. ಕಾರಂತ, ಜಂಬೆ, ಅಕ್ಷರ, ರಘುನಂದನ, ಜಹಾಂಗೀರ, ಅಚ್ಯುತ, ಆನಂದ, ಮೇಕಪ್ ನಾಣಿ, ಹನುಮಕ್ಕ, ಗ್ವಾಮಾರದನಳ್ಳಿ ಮಂಜುನಾಥ ಮೊದಲಾದವರ ಕುರಿತು ನಿರ್ಮಾಣವಾಗಿರುವ ಕಥೆ, ಉಪಕಥೆಗಳನ್ನು ಮಡಿಚಿಟ್ಟ ರಂಜನೀಯ ರಸಗವಳವಷ್ಟೇ ಅಲ್ಲ. ರಂಗವನ್ನು ನೋಡುವ, ನಟನೆಯನ್ನು ಅಭ್ಯಸಿಸುವ, ಬದುಕನ್ನು ಅರ್ಥೈಸುವ, ಸಮಾಜವನ್ನು ವಿಮರ್ಶಿಸುವ ಸ್ವತಂತ್ರ ಯೋಚನೆಯೂ ಇಲ್ಲಿ ಉದ್ದಕ್ಕೆ ಪ್ರವಹಿಸಿದೆ.

ಅನೇಕ ಸ್ವಾರಸ್ಯಕರ ಪ್ರಕರಣಗಳು ಇಲ್ಲಿವೆ. ಯಾವತ್ತೂ ನೀಟಾಗಿ ಬಾಚಿಸಿಕೊಂಡು ಮಲಗಿಯೇ ಇರುವ ಕಾರಂತರ ತಲೆಕೂದಲು 'ಸಂಗೀತ' ಎಂಬ ಪದ ಕೇಳಿದ ಕೂಡಲೇ ನಿಮಿರಿ ನಿಂತು ಕ್ಷೌರಿಕರಿಗೆ ಕತ್ತರಿಸಲು ಅನುಕೂಲವಾಗುವುದು, ಆರ್‌ಎಸ್‌ಎಸ್ ಕಾರ್ಯಕರ್ತರೂ, ತಿರುಗಾಟದ ಮ್ಯಾನೇಜರ್ರೂ ಆಗಿದ್ದ ಶ್ರೀಕಾಂತ ಹಾಗೂ ನಟ ಅಚ್ಯುತರ ನಡುವೆ ರಾಜಕೀಯ ವಿಷಯಗಳಲ್ಲಿ ಭಿನ್ನಮತ ಮತ್ತು ಲೌಕಿಕ ವಿಷಯಗಳಲ್ಲಿನ ಸಹಮತ, ಮಿಠಾಯಿ ಕಳ್ಳ ಜಹಾಂಗೀರ, ತಟ್ಟೀರಾಯನಿಗೆ ಮರಿಗಳು ಹುಟ್ಟಿದ್ದು, 'ಜತೆಗಿರುವನು ಚಂದಿರ' ನಾಟಕದ ಮದುವೆ ದೃಶ್ಯದಲ್ಲಿ ಸ್ವತಃ ತಹಸೀಲ್ದಾರ್ ರಂಗಕ್ಕೆ ಬಂದು 'ಬಡೇಮಿಯಾ'ನಿಗೆ ಐನೂರು ರೂಪಾಯಿ ಮುಯ್ಯಿ ಮಾಡಿದ್ದು, ಅದೇ ನಾಟಕವನ್ನು ಗಲಗಲಿಯ ಪಕ್ಕದ ಹಳ್ಳಿಯಲ್ಲಿ ಮಾಡಿದಾಗ ಆಲಮಟ್ಟಿ ಅಣೆಕಟ್ಟನ್ನು ಎತ್ತರ ಮಾಡಿದ್ದರಿಂದ ಮನೆ-ಜಮೀನು ಕಳೆದುಕೊಂಡ ಜನರ ಶೋಕತಪ್ತ ಪ್ರತಿಕ್ರಿಯೆ ಇತ್ಯಾದಿ ಘಟನೆಗಳನ್ನು ಚನ್ನಕೇಶವ ಮರುಕಥಿಸುವಾಗ ಮನುಷ್ಯರ ಹಾಡು-ಪಾಡುಗಳ, ಸೊಗಸು-ಸಂಕೀರ್ಣತೆಗಳು ಅನಾವರಣಗೊಳ್ಳುವ ಪರಿಯೇ ಚಂದ. ಹಾಗೆಯೇ ತಿರುಗಾಟದಲ್ಲಿದ್ದಾಗ ನಟರಿಗೆ ಹಂದಿಗಳು ಕೊಟ್ಟ ಕಾಟವೇ ಮೊದಲಾದ ಘಟನೆಗಳು ರಂಗಭೂಮಿಯನ್ನು ಕರ್ನಾಟಕ ಹೇಗೆ ಪರಿಗಣಿಸಿದೆ ಎಂಬುದನ್ನೂ ಹೇಳುತ್ತವೆ.

ರಂಜನೀಯ ಘಟನೆಗಳನ್ನು ಮತ್ತು ಗಹನ-ಗಂಭೀರ ವಿಷಯಗಳನ್ನು ಚನ್ನಕೇಶವ ಇಲ್ಲಿ 'ವಿಚಾರ-ವಿನೋದ'ವೆಂಬ 'ಸಮಾಸ ಪ್ರಕ್ರಿಯೆ'ಗೆ ಒಳಪಡಿಸಿದ್ದಾರೆ. ಪುಸ್ತಕದಲ್ಲಿ ನಿರೂಪಿತವಾದ ಪ್ರಸಂಗಗಳನ್ನು ವಿನೋದವಾಗಿಯಷ್ಟೇ ಕಂಡರೆ ಇಲ್ಲಿರುವ ವಿಚಾರದ ಮುಖ ಗೋಚರಿಸದೆ ಹೋಗಬಹುದು. ಉದಾಹರಣೆಗೆ ರಘುನಂದನರು, ಲಂಕೇಶರ 'ಈ ನರಕ ಈ ಪುಲಕ'ವನ್ನು ರಂಗಕ್ಕೆ ಅಳವಡಿಸುವಾಗ ನಟರನ್ನು ಚಡ್ಡಿಯಲ್ಲಿ ನಿಲ್ಲಿಸುತ್ತಾರೆ ಎಂದು ತಿಳಿದು ಹೆಗ್ಗೋಡಿನ ಬಟ್ಟೆ ಅಂಗಡಿಗಳಲ್ಲಿದ್ದ ಎಲ್ಲ ಕಾಚಾಗಳು ಮಧ್ಯಾಹ್ನದೊಳಗೆ ಖಾಲಿ ಆದ ತಮಾಷೆಯ ಘಟನೆ. ಈ ನಿರೂಪಣೆಯ ಜೊತೆಜೊತೆಗೆ ಚನ್ನಕೇಶವ ಕೊಡುವ ಇತರ ವಿವರಣೆಗಳು ಬೇರೆಯೇ ಲೋಕವನ್ನು ತೋರಿಸುತ್ತವೆ.

ರಘುನಂದನರು ತಮ್ಮ ನಾಟಕದ ಪೂರ್ವತಯಾರಿಯಲ್ಲಿ ಗೋಪಾಲಕೃಷ್ಣ ಅಡಿಗರ 'ತೆಗೆದುಕೋ ನೀಕೊಟ್ಟ ಎಲ್ಲ ವಸ್ತ್ರವಿಲಾಸ.... ಬೆತ್ತಲಾಗದೆ ಬಯಲು ಸಿಕ್ಕದಿಲ್ಲಿ' ಕವನವನ್ನು ರಂಗರೂಪಕ್ಕೆ ತರುವಾಗ ನಡೆದ ಪ್ರಕರಣವಿದು. ಈ ದೃಶ್ಯದ ಮೂಲಕ ರಘುನಂದನ, ರಂಗಭೂಮಿಯ ತತ್ತ್ವವನ್ನೂ, ಬದುಕಿನ ದರ್ಶನವನ್ನೂ ಒಟ್ಟಿಗೇ ಕಾಣಿಸುತ್ತಿದ್ದಾರೆ ಎಂಬ ಸೂಕ್ಷ್ಮವನ್ನು ತೋರಿಸುವುದರೊಂದಿಗೆ ನೂರೆಂಟು ತೂತು ಬಿದ್ದಿರುವ ನಟರ ಕಾಚಾಗಳನ್ನೂ ಚನ್ನಕೇಶವ ಪರಿಪರಿಯಾಗಿ ವರ್ಣಿಸುತ್ತಾರೆ. ಈಗ ಇದು ರಂಜನೀಯವೋ, ದಯನೀಯವೋ? ಬಡತನದ ರೂಪಕಗಳಂತಿರುವ ತೂತು ಕಾಚಾಗಳನ್ನು ಧರಿಸಿದ ನಟರ ಸ್ಥಿತಿಗೆ ಗಹಗಹಿಸಿ ನಗಬೇಕೋ ಅಥವಾ ದುಗುಡ ಪಡಬೇಕೋ? ಚನ್ನಕೇಶವ ಓದುಗರ ಸೂಕ್ಷ್ಮತೆಯನ್ನು ಇಲ್ಲಿ ಪರೀಕ್ಷೆಗೊಡ್ಡುತ್ತಿದ್ದಾರೆ. ಅರ್ಥಾತ್ ಲೇಖಕ ವಿಚಾರ-ವಿನೋದವನ್ನು 'ಸಮಾಸ ಪ್ರಕ್ರಿಯೆ'ಗೆ ಒಳಪಡಿಸಿ ಬರೆದಂತೆಯೇ; ಓದುಗರೂ ಈ 'ಸಮಾಸ ಪ್ರಕ್ರಿಯೆ'ಯನ್ನು ಅರ್ಥ ಮಾಡಿಕೊಳ್ಳದಿದ್ದರೆ ಪುಸ್ತಕದ ಪಾರಾಯಣ ಆಗುತ್ತದೆಯೇ ಶಿವಾಯಿ ಓದು ಆಗುವುದಿಲ್ಲ. ಬರಿದೆ ಓದುಗರಿಗೂ, ಸೂಕ್ಷ್ಮ ಓದುಗರಿಗೂ ವ್ಯತ್ಯಾಸವನ್ನು ಮಾಡುವಂತಿದೆ ಚನ್ನಕೇಶವರ ನಿರೂಪಣೆ.

ರಂಗ ಶಿಕ್ಷಣದ ಒಟ್ಟು ಸ್ವರೂಪದಲ್ಲಿ ಭಯವೂ, ಒತ್ತಡವೂ ಇದೆ. ಜೊತೆಗೆ ತುಂಟತನಕ್ಕೆ, ಸೃಜನಶೀಲ ವಿಲಾಸಗಳ ಸ್ವಚ್ಛಂದ ಹರಿವಿಗೆ ಮುಕ್ತ ಅವಕಾಶವೂ ಇದೆ. ಇದು ರಂಗಶಿಕ್ಷಣದಲ್ಲಿ ಮಾತ್ರ ಯಾಕಿದೆ, ಶಿಕ್ಷಣದ ಉಳಿದ ನಿಕಾಯಗಳಲ್ಲಿ ಇದು ಯಾಕೆ ಗೈರಾಗಿದೆ ಎಂಬ ಪ್ರಶ್ನೆಯನ್ನೂ ಈ ಪುಸ್ತಕ ನಮ್ಮೆದುರು ನಿಲ್ಲಿಸುತ್ತದೆ. ನೀನಾಸಂ ಸೇರಿದಂತೆ ಅನೇಕ ಒಳ್ಳೆಯ ರಂಗಶಾಲೆಗಳು ತಮ್ಮ ವಿದ್ಯಾರ್ಥಿಗಳಲ್ಲಿ ಬಹುತೇಕರನ್ನು ಸೃಜನಶೀಲರನ್ನಾಗಿಸಿವೆ, ಸ್ವತಂತ್ರರನ್ನಾಗಿಸಿವೆ, ಸಮರ್ಥರನ್ನಾಗಿಸಿವೆ. ಎಲ್ಲಕ್ಕಿಂತಲೂ ಹೆಚ್ಚು ಅವರನ್ನು ಸೆಕ್ಯುಲರ್‌ಗಳನ್ನಾಗಿಸಿವೆ. ಆದರೆ ಅದನ್ನದು ಹೇಗೆ ಸಾಧಿಸಿದೆ ಎಂಬುದು ಈ ಪುಸ್ತಕದಲ್ಲಿಲ್ಲ. ಅದಕ್ಕೇ ಇದು ಪುರಾಣವಾಗಿದೆ. ಇಲ್ಲದಿದ್ದರೆ ಇದೊಂದು ಗಂಭೀರ ಅಧ್ಯಯನದ ಸ್ವರೂಪವನ್ನು ಪಡೆದುಕೊಳ್ಳುತ್ತಿತ್ತೋ ಏನೋ?

ರಂಗಪುರಾಣವನ್ನು ಓದುವ ಅನುಭವ ಮತ್ತು ನಾಟಕ ನೋಡುವ ಅನುಭವ ಎರಡೂ ಒಂದೇ ಆಗಿವೆ. ಇಂತಹ ಒಂದು ಪುಸ್ತಕ ಕನ್ನಡದಲ್ಲಿ ಇದುವರೆಗೆ ಬಂದಿಲ್ಲ ಎಂಬುದು ಎಷ್ಟು ಸಂತೋಷದ ವಿಷಯವೋ, ಇದರ ಕರ್ತೃ ಚನ್ನಕೇಶವ ಈಗ ನಮ್ಮೊಡನಿಲ್ಲ ಎಂಬುದು ಅಷ್ಟೇ ದುಃಖದ ಮಾತೂ ಹೌದು.

ಶಿಕ್ಷಣ ಕ್ಷೇತ್ರದ ಹಲವು ಮುಖಗಳ ಅನಾವರಣ

ಶಿಕ್ಷಣತಜ್ಞರಾಗಿರುವ ಎಸ್.ವಿ. ಮಂಜುನಾಥ್ ಶಾಲೆ ಹಾಗೂ ಶಿಕ್ಷಣ ವ್ಯವಸ್ಥೆಯ ಕುರಿತು ಬರೆದ ಅನುಭವ ಕಥನ 'ಕಲಿವ ಶಾಲೆಯ ಹಲವು ಮುಖಗಳು'. ಈ ಕೃತಿಯು, ಶಿಕ್ಷಣ ವಿಷಯವನ್ನಿಟ್ಟುಕೊಂಡು ಪತ್ರಿಕೆಗಳಿಗೆ ಬರೆದ ಅಂಕಣಗಳ ಸಂಕಲನವಾಗಿದೆ. ಅಂಕಣಗಳನ್ನು ವಿಷಯವಾರು ವಿಂಗಡಿಸಿ ಸುದೀರ್ಘವಾಗಿ ವಿವರಿಸಿ ಪ್ರಕಟಿಸಿರುವುದು ಕೃತಿಯ ವಿಶೇಷ.

ಕೃತಿಯು ಬಿಡಿಲೇಖನಗಳ ಸಂಗ್ರಹವಾದರೂ, ಶಿಕ್ಷಣರಂಗದ ಕುರಿತು ಲೇಖಕರು ಬೀರಿದ ಸ್ಥೂಲನೋಟ ಇದಾಗಿದೆ. ಹಳ್ಳಿಯಲ್ಲಿನ ಸರ್ಕಾರಿ ಶಾಲೆಯಿಂದ ಹಿಡಿದು, ಅಭಿವೃದ್ಧಿಹೊಂದಿದ ರಾಷ್ಟ್ರ ಅಮೆರಿಕದಲ್ಲಿನ ಶಿಕ್ಷಣ ವ್ಯವಸ್ಥೆಯ ಬಗ್ಗೆಯೂ 'ಮಿಷಿಗನ್ ಡೈರಿ' ಎಂಬ ಲೇಖನದಲ್ಲಿ ಎರಡು ಭಾಗಗಳಲ್ಲಿ ವಿವರಣೆ ನೀಡಿರುವುದು ಕೃತಿಯ ವ್ಯಾಪ್ತಿಗೆ ಸಾಕ್ಷ್ಯ. ಇಲ್ಲಿನ ಬರಹಗಳು ಕೇವಲ ಉಲ್ಲೇಖವಲ್ಲ. ಬದಲಾಗಿ ನಮ್ಮ ಶಿಕ್ಷಣ ವ್ಯವಸ್ಥೆಯಲ್ಲಿ ಆಗಬೇಕಾದ ಬದಲಾವಣೆಗಳ ಬಗ್ಗೆ ಸಲಹೆಗಳೂ ಇಲ್ಲಿವೆ. ಆಧುನಿಕ ಮೂಲಸೌಕರ್ಯವಷ್ಟೇ ಮುಖ್ಯವಲ್ಲ, ಶಾಲೆಗಳಲ್ಲಿ ಗುಣಮಟ್ಟದ ಶಿಕ್ಷಕರು ಹಾಗೂ ಅತ್ಯುತ್ತಮ ಬೋಧನೆಯ ವಾತಾವರಣವೂ ಮುಖ್ಯ ಎನ್ನುವುದನ್ನು ಪರಿಗಣಿಸಬೇಕು ಎನ್ನುವುದನ್ನು ಮಿಷಿಗನ್ ಡೈರಿ ಮೂಲಕ ಲೇಖಕರು ಒತ್ತಿಹೇಳುತ್ತಾರೆ.

ಕೇರಳದಲ್ಲಿ ಶಿಕ್ಷಕರು ಮತ್ತು ಪೋಷಕರ ಸಂಘ (ಪಿಟಿಎ) ಹೇಗೆ ಸರ್ಕಾರಿ ಶಾಲೆಗಳನ್ನು ಮುನ್ನಡೆಸುತ್ತಿವೆ ಎನ್ನುವ ಕುರಿತು ಇರುವ ಲೇಖನ ಕರ್ನಾಟಕ ಮಾತ್ರವಲ್ಲ ದೇಶದ ಎಲ್ಲ ರಾಜ್ಯಗಳಿಗೂ ಮಾದರಿ. 'ಕೇರಳದ ಶೈಕ್ಷಣಿಕ ವ್ಯವಸ್ಥೆಯಲ್ಲೂ ಸಮಸ್ಯೆಗಳಿಲ್ಲ ಎಂದಲ್ಲ. ಆದರೆ ಅವುಗಳು ಈ ಸವಾಲು ಎದುರಿಸಲು ತಂತ್ರಗಳನ್ನು ರೂಪಿಸಿ ಮುಂದಕ್ಕೆ ಸಾಗುತ್ತಿವೆ' ಎಂದು ಉಲ್ಲೇಖಿಸುವ ಲೇಖಕರು ಇದೂ ಮಾದರಿಯಾಗಬೇಕು ಎನ್ನುತ್ತಾರೆ. ಶಿಕ್ಷಕರ ಮೇಲೆ ಸರ್ಕಾರ ಹೊರಿಸುವ ಶಿಕ್ಷಣೇತರ ಜವಾಬ್ದಾರಿ, ಅದರಿಂದ ಉಂಟಾಗುವ ಸಮಸ್ಯೆಗಳ ಬಗ್ಗೆ ಸಂಶೋಧನಾತ್ಮಕ ಲೇಖನವೂ ಇಲ್ಲಿದೆ. ಈಶಾನ್ಯ ಕರ್ನಾಟಕಕ್ಕೆ ಸಮಗ್ರ ಶೈಕ್ಷಣಿಕ ಯೋಜನೆಯನ್ನು ರೂಪಿಸಬೇಕಾದ ಅಗತ್ಯವನ್ನೂ ಇಲ್ಲಿ ವಿವರಿಸಲಾಗಿದೆ.

ಕೃತಿಯಲ್ಲಿನ ಬರಹ ಕೇವಲ ಲೇಖನವಾಗದೆ ಕ್ಷೇತ್ರಕಾರ್ಯದಲ್ಲಿ ಕಂಡುಬಂದ ಅನುಭವಗಳಾಗಿವೆ. ಅಷ್ಟೇ ಅಲ್ಲದೆ ಶಿಕ್ಷಣ ಕ್ಷೇತ್ರದ ಹಲವು ಆಯಾಮಗಳತ್ತ ದೃಷ್ಟಿಹರಿಸಿ ಆ ಕುರಿತು ವಿಶ್ಲೇಷಿಸುವ ಜೊತೆಗೆ ಶಿಕ್ಷಣ ಕ್ಷೇತ್ರದಲ್ಲಿ ಪ್ರಸ್ತುತ ಇರುವ ಸಮಸ್ಯೆಗಳನ್ನು, ಸವಾಲುಗಳನ್ನು ಹಾಗೂ ಅದಕ್ಕಿರುವ ಪರಿಹಾರದ ಅಂಶವನ್ನೂ ಕಟ್ಟಿಕೊಟ್ಟಿದೆ. ಶೈಕ್ಷಣಿಕ ಸುಧಾರಣೆಗೆ ಅಗತ್ಯವಾಗಿ ಇಡಬೇಕಾದ ಹೆಜ್ಜೆಗಳು, ವ್ಯವಸ್ಥೆಯ ಕಾರಣದಿಂದ ಶಿಕ್ಷಕರೊಳಗೇ ಹುಟ್ಟುವ ದ್ವಂದ್ವಗಳು, ಅಧಿಕಾರಿವರ್ಗ ಅನುಭವಿಸುವ ಒತ್ತಡ, ಶಿಕ್ಷಣ ವ್ಯವಸ್ಥೆಯಲ್ಲಿರುವ ವಾಸ್ತವವನ್ನು ಕೃತಿಯು ಉಲ್ಲೇಖಿಸಿದೆ. ಒಟ್ಟಿನಲ್ಲಿ ಶಿಕ್ಷಣ ಕ್ಷೇತ್ರದಲ್ಲಿನ ಹಲವು ವಿಷಯಗಳ ಕುರಿತು ಆರೋಗ್ಯಪೂರ್ಣ ಚರ್ಚೆಗೆ ಈ ಕೃತಿ ಕಾರಣವಾಗಲಿದೆ.



ಕಲಿವ ಶಾಲೆಯ ಹಲವು ಮುಖಗಳು
ಲೇ: ಎಸ್.ವಿ. ಮಂಜುನಾಥ್
ಪ್ರ: ಎಂ.ಎಂ.ಪಬ್ಲಿಕೇಷನ್, ಬೆಂಗಳೂರು
ಸಂ:9449353830
ಪು: 320 ₹300

ಅವಲೋಕನ

ಸಾಹಿತ್ಯ ಮೀಮಾಂಸೆಯ ವಿರಾಟ್ ರೂಪ

ಎಚ್. ದಂಡಪ್ಪ

ರೆನಿ ವೆಲೆಕ್, ಆಸ್ಟಿನ್ ವಾರೆನ್ ಅವರ 'ಥಿಯರಿ ಆಫ್ ಲಿಟರೇಚರ್' ಕೃತಿಯು ಕನ್ನಡ ಸಾಹಿತ್ಯ ವಿಮರ್ಶಕರಿಗೆ ಮೊದಲಿನಿಂದಲೂ ಆಕರ ಗ್ರಂಥವಾಗಿ ಬಳಕೆಯಾಗುತ್ತಾ ಬಂದಿದೆ. ಅದರಲ್ಲಿನ ಕೆಲವು ಲೇಖನಗಳನ್ನು ಅನುವಾದಿಸಿ 'ಸಾಹಿತ್ಯ ತತ್ವ' ಎಂಬ ಹೆಸರಿನಲ್ಲಿ ಈಗಾಗಲೇ ಪುಸ್ತಕ ರೂಪದಲ್ಲಿ ಪ್ರಕಟಿಸಲಾಗಿದೆ. 'ಥಿಯರಿ ಆಫ್ ಲಿಟರೇಚರ್' ಕೃತಿಯನ್ನು ಇಂದಿನ ಓದುಗ ಮತ್ತು ವಿಮರ್ಶಕರನ್ನು ಗಮನದಲ್ಲಿಟ್ಟುಕೊಂಡು ಜೆ.ಎನ್. ಶಾಮರಾವ್ ಅವರು 'ಸಾಹಿತ್ಯ ಮೀಮಾಂಸೆ' ಎಂಬ ಶೀರ್ಷಿಕೆಯಡಿಯಲ್ಲಿ ಅನುವಾದಿಸಿದ್ದಾರೆ.

ಅನುವಾದ ಮಾಡುವಾಗ ಕನ್ನಡದ ಸಂದರ್ಭಕ್ಕೆ ಒಗ್ಗದ ಇಂಗ್ಲಿಷ್ ಸಾಹಿತ್ಯ ಕೃತಿಗಳ ಅನಗತ್ಯ ಉದ್ಧರಣೆಗಳನ್ನು, ಕೆಲವು ಭಾಗಗಳನ್ನು ಬಿಟ್ಟು ಕನ್ನಡ ಓದುಗರಿಗೆ ಅಗತ್ಯವಾದ ಲೇಖಕರ ಕೃತಿಗಳ ಭಾಗಗಳನ್ನು ಉಳಿಸಿಕೊಂಡು, ಮೂಲ ಲೇಖನಗಳ ಆಶಯಗಳಿಗೆ ಚ್ಯುತಿ ಬರದಂತೆ ನಿರೂಪಣೆ ಮಾಡಲಾಗಿದೆ. ಇದನ್ನು ಅನುವಾದಕರೇ ಅರಿಕೆಯಲ್ಲಿ ಹೇಳಿಕೊಂಡಿದ್ದಾರೆ. ಜೊತೆಗೆ ಇಲ್ಲಿನ ಅನುವಾದದ ಬಗ್ಗೆ ಹೇಳುವಾಗ ಸಂಗ್ರಹ-ಕನ್ನಡ ನಿರೂಪಣೆ ಎಂದು ಕರೆದು ಈ ಕೃತಿಯನ್ನು ಮೂಲಕೃತಿಯ ಯಥಾವತ್ ಅನುವಾದವೆಂಬಂತೆ ನಿರೂಪಿಸಿರುವುದಿಲ್ಲ ಎಂದೂ ಹೇಳಿದ್ದಾರೆ. ಇಲ್ಲಿನ ಲೇಖನಗಳನ್ನು ಓದಿದಾಗ ಅವರ ಅನುವಾದದ ಕ್ರಮ ಸರಿಯಾಗಿದೆ ಎಂಬುದು ಸ್ಪಷ್ಟವಾಗುತ್ತದೆ.

ಈ ಕೃತಿಯಲ್ಲಿ ನಾಲ್ಕು ಭಾಗಗಳಿವೆ. 1. ಸಾಹಿತ್ಯದ ಲಕ್ಷಣ ನಿರೂಪಣೆ ಹಾಗೂ ವೈಶಿಷ್ಟ್ಯ 2. ಸಾಹಿತ್ಯಕ ಅಧ್ಯಯನದ ಪೂರ್ವಸಿದ್ಧತೆ 3. ಬಾಹ್ಯ ದೃಷ್ಟಿಕೋನದಿಂದ ಸಾಹಿತ್ಯದ ಅಧ್ಯಯನ 4. ಸಾಹಿತ್ಯದ ಆಂತರಿಕ ಸ್ವರೂಪದ ಅಧ್ಯಯನ.

ಮೊದಲನೆಯ ಭಾಗದಲ್ಲಿ ಸಾಹಿತ್ಯ ಮತ್ತು ಸಾಹಿತ್ಯದ ಅಧ್ಯಯನ, ಸಾಹಿತ್ಯದ ಸ್ವರೂಪ, ಸಾಹಿತ್ಯದ ಪ್ರಯೋಜನ, ಮೀಮಾಂಸೆ, ವಿಮರ್ಶೆ ಮತ್ತು ಸಾಹಿತ್ಯಚರಿತ್ರೆ, ಸಾಮಾನ್ಯ ಸಾಹಿತ್ಯ, ತೌಲನಿಕ ಸಾಹಿತ್ಯ ಮತ್ತು ರಾಷ್ಟ್ರೀಯ ಸಾಹಿತ್ಯ ಎಂಬ ಐದು ಲೇಖನಗಳಿದ್ದು ಆಯಾ ಶೀರ್ಷಿಕೆಗೆ ಅನುಗುಣವಾಗಿ ವಿವರಣೆಗಳಿವೆ. ಲೇಖಕ ತನ್ನ ಕೃತಿಯಲ್ಲಿ ಏನನ್ನು ಹೇಳುತ್ತಿದ್ದಾನೆ, ಯಾವ ಬಗೆಯ ಬದುಕಿನ ಅನುಭವಗಳನ್ನು ನಿರೂಪಿಸುತ್ತಿದ್ದಾನೆ, ತತ್ಕಾಲೀನತೆ ಸಾರ್ವತ್ರಿಕ ಸಾರ್ವಕಾಲಿಕತೆಯನ್ನು ಅವನು ಬಳಸಿರುವ ಭಾಷೆಯಲ್ಲಿ ಹಿಡಿದಿಡಲು ಹೇಗೆ ಸಾಧ್ಯವಾಗಿದೆ, ಯಾವ ಯಾವ ವಿಶಿಷ್ಟವಾದ ಅಂಶಗಳು ಕೂಡಿ ಆ ಕೃತಿಯನ್ನು ಕಲಾತ್ಮಕಗೊಳಿಸಿವೆ, ಕಲಾತ್ಮಕಗೊಂಡಿರುವ ಬಗೆ ಹೇಗೆ, ಕಲಾತ್ಮಕಗೊಂಡಿರುವ ಕಲಾವಿಧಾನಗಳು ಯಾವುವು, ಕಲಾತ್ಮಕತೆಯ ಮೂಲಕ ಓದುಗನಿಗೆ/ವಿಮರ್ಶಕನಿಗೆ ಆ ಕೃತಿ ಕೊಡುವ ತಾತ್ವಿಕ ವಿಚಾರಗಳು ಯಾವುವು, ತೌಲನಿಕ ಅಧ್ಯಯನದ ಸ್ವರೂಪ, ಪ್ರಯೋಜನ ಏನು ಇತ್ಯಾದಿ ವಿಚಾರಗಳನ್ನು ಆಪ್ತವಾಗಿ ಓದುಗರಿಗೆ ಕಟ್ಟಿಕೊಡುತ್ತದೆ.

'ಬಾಹ್ಯ ದೃಷ್ಟಿಕೋನದಿಂದ ಸಾಹಿತ್ಯದ ಅಧ್ಯಯನ' ಎಂಬ ಮೂರನೇ ಭಾಗದಲ್ಲಿ ಅನ್ಯ ಜ್ಞಾನಶಿಸ್ತುಗಳ ಮೂಲಕ ಸಾಹಿತ್ಯದ ಅಧ್ಯಯನ ಮಾಡುವ ವಿಧಾನ ಕುರಿತು ಐದು ಲೇಖನಗಳಿವೆ. ಸಾಹಿತ್ಯವನ್ನು ಜೀವನ ಚರಿತ್ರೆ, ಮನೋವಿಜ್ಞಾನ, ಸಮಾಜ, ತತ್ವಶಾಸ್ತ್ರ ಮತ್ತು ಇತರೆ ಮಾನವಿಕಗಳು ಹಾಗೂ ಇತರ ಕಲೆಗಳ ಜೊತೆ ಯಾವ ಬಗೆಯಲ್ಲಿ ಅನುಸಂಧಾನಗೊಳಿಸಿ ಅಧ್ಯಯನ ಮಾಡಬೇಕೆಂಬ ವಿವರಗಳಿವೆ. ಸಾಹಿತ್ಯ/ಕಾವ್ಯವು ಸಾಮಾಜಿಕ, ಧಾರ್ಮಿಕ ಸಾಂಸ್ಕೃತಿಕ, ವಿಜ್ಞಾನ, ಮಾನವಿಕಗಳನ್ನು ಸಹಜವಾಗಿಯೇ ಯುಗಧರ್ಮಕ್ಕೆ ಅನುಗುಣವಾಗಿ ಅಂತರ್ಗತವಾಗಿಸಿಕೊಂಡಿರುತ್ತದೆ. ಅವುಗಳು ಭಾಷೆಯಲ್ಲಿ ಕಲಾತ್ಮಕಗೊಂಡಿರುವ ಬಗೆಗಳನ್ನು ನಾವು ಅಂದರೆ ಓದುಗರು ವಿಮರ್ಶಕರು ವಿವರಿಸಿಕೊಳ್ಳಬೇಕು.

ಒಳನೋಟ

ಕಲಾತ್ಮಕತೆಯ ಜೊತೆಯಲ್ಲಿಯೇ ಇದನ್ನು ನಾವು ವಿಶ್ಲೇಷಣೆ ಮಾಡಬೇಕಾಗುತ್ತದೆ. ಕಲಾತ್ಮಕತೆಯ ಅರಿವಿಲ್ಲದೆ ಕೃತಿಯಲ್ಲಿ ಅನ್ಯಜ್ಞಾನಗಳನ್ನು ಹುಡುಕಿದರೆ ಸಾಹಿತ್ಯಕ್ಕೆ ಅಲ್ಲಿ ಬೆಲೆ ಇಲ್ಲ. ಆಯಾ ಜ್ಞಾನ, ವಿಜ್ಞಾನಗಳ ಕೃತಿಗಳನ್ನೇ ಓದಿಕೊಳ್ಳಬಹುದು. ಇತರೆ ಜ್ಞಾನ, ವಿಜ್ಞಾನಗಳು ಒಂದು ಸಾಹಿತ್ಯ ಕೃತಿಯಲ್ಲಿ ಅಂತರ್ಗತವಾಗಿದ್ದರೆ ಕಲಾತ್ಮಕತೆಗೆ ಚ್ಯುತಿ ಬರುವುದಿಲ್ಲ. ಕಲಾತ್ಮಕತೆ ಆಯಾ ಲೇಖಕನ ಸಾಮರ್ಥ್ಯವನ್ನು ಅವಲಂಬಿಸಿರುತ್ತದೆ. ಅನ್ಯ ಜ್ಞಾನಶಿಸ್ತುಗಳ ಮೂಲಕ ಸಾಹಿತ್ಯವನ್ನು ಪ್ರವೇಶಿಸುವ ಬಗೆಗಳನ್ನು ಅದರ ಸಾಧಕ ಬಾಧಕಗಳನ್ನು ಈ ಭಾಗದಲ್ಲಿರುವ ಲೇಖನಗಳು ತಿಳಿಸಿಕೊಡುತ್ತವೆ.

ಸಾಹಿತ್ಯದ ಆಂತರಿಕ ಸ್ವರೂಪದ ಅಧ್ಯಯನ ಎಂಬ ವಿಭಾಗದಲ್ಲಿ ಪ್ರಸ್ತಾವನೆಯೂ ಸೇರಿದಂತೆ ಎಂಟು ಲೇಖನಗಳಿವೆ. ಸಾಹಿತ್ಯ ಕಲಾಕೃತಿಯ ಅಸ್ತಿತ್ವ, ಶಬ್ದ ಮಾಧುರ್ಯ, ಲಯ, ಛಂದಸ್ಸು, ಶೈಲಿ, ಶೈಲಿಶಾಸ್ತ್ರ, ಪ್ರತಿಮೆ, ರೂಪಕ ಸಂಕೇತ, ಪುರಾಣ, ಸಾಹಿತ್ಯ ಪ್ರಕಾರ, ಸಾಹಿತ್ಯ ಚರಿತ್ರೆ ಇತ್ಯಾದಿ ವಿಚಾರಗಳನ್ನು ಸ್ಥೂಲವಾಗಿ ಚರ್ಚಿಸುವ ಇಲ್ಲಿನ ಲೇಖನಗಳಿಗೂ ಮೂರನೇ ಭಾಗದ ಲೇಖನಗಳಿಗೂ ಅನ್ಯೋನ್ಯ ಸಂಬಂಧವಿರುವುದನ್ನು ಗುರುತಿಸಬಹುದು.

ಸಾಹಿತ್ಯವು ಭಾಷಿಕ ಅಭಿವ್ಯಕ್ತಿ. ಆದ್ದರಿಂದ ಆಕೃತಿಯು ಮುಖ್ಯವಾಗುತ್ತದೆ. ಆಕೃತಿಯಲ್ಲಿ ಪದಗಳು, ಅದರ ಮಾಧುರ್ಯ, ಲಯ, ಛಂದಸ್ಸು, ಶೈಲಿ, ಪ್ರತಿಮೆ, ರೂಪಕ, ಸಂಕೇತ ಪುರಾಣ, ಪ್ರಕಾರ, ಮುಂತಾದ ಭಾಷೆಗೆ ಸಂಬಂಧಿಸಿದ ಪರಿಕರಗಳು ಇರುತ್ತವೆ. ವಸ್ತುವಿನಲ್ಲಿ ಮನುಷ್ಯನ ಎಲ್ಲಾ ಬಗೆಯ ಭಾವನೆಗಳ ಜೊತೆಗೆ ಜ್ಞಾನ, ವಿಜ್ಞಾನಗಳು ಒಳಗೊಂಡಿರುತ್ತವೆ. ಆದ್ದರಿಂದ ಇವು ಒಂದಕ್ಕೊಂದು ಪೂರಕ ಮತ್ತು ಪೋಷಕ. ಸಾಂಸ್ಕೃತಿಕ ಪರಿಸರವೊಂದನ್ನು ಕಟ್ಟಿಕೊಡುವ ಕೃತಿಯ ಆಕೃತಿಯು ತನ್ನಲ್ಲಿ ಒಂದು ಕ್ರಿಯಾತ್ಮಕತೆಯನ್ನು ಒಳಗೊಂಡಿರುತ್ತದೆ. ಇದನ್ನೇ ಕಲಾತ್ಮಕತೆಯೆಂದು ಗುರುತಿಸಲಾಗುತ್ತದೆ.

ಎಲ್ಲಿ ಕಲಾತ್ಮಕತೆ ಇರುತ್ತದೋ ಅಲ್ಲಿ ಜೀವಂತಿಕೆ ಇರುತ್ತದೆ. ಆ ಜೀವಂತಿಕೆ ಕೃತಿಯನ್ನು ದೇಶ ಕಾಲ ಮೀರಿಸುತ್ತಾ ಹೋಗುತ್ತದೆ. ಪಂಪನ ಕಾವ್ಯಗಳನ್ನು ನಾವು ಈ ಕಾರಣದಿಂದಲೇ ಇಂದು ಓದುತ್ತಿದ್ದೇವೆ. ಈ ಜೀವಂತಿಕೆ, ಕ್ರಿಯಾಶೀಲತೆ ಸಾಹಿತ್ಯ ಕೃತಿಯಲ್ಲಿ ಪ್ರಕಟವಾಗುವುದು ಆಕೃತಿಯ ಮೂಲಕ. ಆದ್ದರಿಂದಲೇ ಯೇಟ್ಸ್ ಕವಿಯು 'ನರ್ತಕಿಯಿಂದ ನರ್ತನವನ್ನು ಹೇಗೆ ಬೇರ್ಪಡಿಸಲಾಗುವುದಿಲ್ಲವೋ ಹಾಗೇ ಆಕೃತಿಯನ್ನು ಆಶಯದಿಂದ ಬೇರ್ಪಡಿಸಲಾಗುವುದಿಲ್ಲ' ಎಂದು ಹೇಳುತ್ತಾನೆ. ಸುಂದರ ಪದಗಳ ಸಂಗ್ರಹ, ಆ ಪದಗಳ ಜೋಡಣೆಯ ವಾಕ್ಯಗಳು ಸೃಜನಾತ್ಮಕ ಪ್ರಕ್ರಿಯೆಯ ಭಾಷೆಯಾಗಿರುವುದಿಲ್ಲ ಎಂಬುದನ್ನು ನಾವು ನೆನಪಿಡಬೇಕು. ಆಗ ಬಾಹ್ಯದ ಅನ್ಯಶಿಸ್ತುಗಳ ಮೂಲಕವಾಗಲಿ, ಆಂತರಿಕ ಸ್ವರೂಪದ ಅಧ್ಯಯನಕ್ಕಾಗಲಿ ಒಳಪಡಿಸಿದಾಗ ಕೃತಿ ಗೆಲ್ಲುತ್ತದೆ.

ಸಾಹಿತ್ಯ ಅಧ್ಯಯನ ಮಾಡುವ ವಿದ್ಯಾರ್ಥಿಗಳಿಗೆ, ಸಾಹಿತ್ಯ ವಿಮರ್ಶೆಯಲ್ಲಿ ಪ್ರವೇಶ ಪಡೆಯುವ ಆಸಕ್ತರು ಈ ಕೃತಿಯನ್ನು ಕೈಪಿಡಿಯಂತೆ ಬಳಸಬಹುದು. ಶಾಮರಾವ್ ಅವರ ಅನುವಾದ ಎಲ್ಲಿಯೂ ತೊಡಕನ್ನು ಉಂಟುಮಾಡುವುದಿಲ್ಲ. ಸರಾಗ ಓದಿಗೆ ಪೂರಕವಾಗಿದೆ.



ರೆನಿ ವೆಲೆಕ್, ಆಸ್ಟಿನ್ ವಾರೆನ್‌ರ ಸಾಹಿತ್ಯ ಮೀಮಾಂಸೆ
ಸಂಗ್ರಹ–ಕನ್ನಡ ನಿರೂಪಣೆ: ಜೆ.ಎನ್. ಶಾಮರಾವ್
ಪ್ರ: ದಿವ್ಯಾ ಪ್ರಕಾಶನ
ಸಂ: 9945002444
ಪು: 184 ₹200

ಈ ಶೆಟ್ಟರ ಮಂಡೆಯಲ್ಲಿ ಬುದ್ಧಿ ಉಂಟೋ!

12ನೇ ಪುಟದಿಂದ...

ಪತ್ರಿಕೆಯಲ್ಲಿ ವ್ಯಂಗ್ಯಚಿತ್ರ ಪ್ರಕಟವಾದ ದಿನ ಅಳುಕುತ್ತಲೇ ಭೇಟಿಯಾದ ಪತ್ರಿಕೆಯ ನಿರ್ದೇಶಕರೊಬ್ಬರಿಗೆ 'ನನಗೆ ಶೆಟ್ರು ಏನೆಂದು ಗೊತ್ತು, ಶೆಟ್ರಿಗೆ ಬೇಜಾರು ಮಾಡ್ಕೊಳ್ಳಬೇಡಿ ಎಂದು ಹೇಳಿ' ಎಂದು ಬಂಗಾರಪ್ಪನವರೇ ಸಮಾಧಾನ ಮಾಡಿ ಕಳುಹಿಸಿದ್ದರಂತೆ'. ಆಗ ಬಂಗಾರಪ್ಪನವರ ಪ್ರಬುದ್ಧತೆ ನನಗೂ ಸ್ವಲ್ಪ ಸಮಾಧಾನ ನೀಡಿತ್ತು. ಒಟ್ಟಿನಲ್ಲಿ ಮುಂಗಾರು ಸಮರ ಹೊರಗೆ ಮಾತ್ರವಲ್ಲ, ಒಳಗೂ ನಡೆಯತೊಡಗಿತ್ತು. ಇದನ್ನು ಏನೆಂದು ಕರೆಯಬೇಕೋ ಗೊತ್ತಾಗುತ್ತಿಲ್ಲ. ವಿಧಿಯಾಟ ಅನ್ನಲು ಮನಸ್ಸಾಗುತ್ತಿಲ್ಲ!

ನನಗೆ ಈಗಲೂ ಒಂದು ಕನ್‌ಫ್ಯೂಷನ್ ಇದೆ. ಈ ರಘುರಾಮ ಶೆಟ್ಟರು ನಾಯಕನೋ ಅಥವಾ ದುರಂತ ನಾಯಕನೋ ಅಂತ. ಒಂದು ದೊಡ್ಡ ಕನಸನ್ನು ಕಂಡು, ಅದಕ್ಕೊಂದು ಮನೆ ಕಟ್ಟಿ, ಆ ಮನೆಯ ಭಾರವನ್ನು ಹೊತ್ತು, ಅದು ಕುಸಿಯುತ್ತಿದ್ದರೂ ಛಲ ಬಿಡದೆ ನೆಲಕಚ್ಚುತ್ತಾರಲ್ಲ, ಇದನ್ನು ನೋಡಿದರೆ ದುರಂತ ನಾಯಕ ಎಂದೆನ್ನಿಸುತ್ತದೆ. ಆದರೆ, ಅದೇ ಆ ಕ್ಷಣದಲ್ಲೇ, ಈ ವಡ್ಡರ್ಸೆ ರಘುರಾಮ ಶೆಟ್ಟಿ ಎಂಬ ಸಾಹಸಿಗ 'ಮುಂಗಾರು' ಪ್ರಕಾಶನ ಸಂಸ್ಥೆ ಎಂಬ, ಓದುಗರೇ ಮಾಲೀಕರಾಗಿದ್ದ ಪಬ್ಲಿಕ್ ಲಿಮಿಡೆಟ್ ಕಂಪನಿ ರಚಿಸಿ, ಓದುಗರ ಒಡೆತನದ ಸಂಸ್ಥೆ ಕಟ್ಟುತ್ತಾರಲ್ಲ- ಇದು ಇಂದು ಮಾಡಬೇಕಾಗಿರುವ ಸಾಹಸವಾಗೇ ಉಳಿದಿದೆ. ಈ ಸಂಪತ್ತನ್ನು ರಘುರಾಮ ಶೆಟ್ಟರು ನಾಡಿಗೆ ಬಿಟ್ಟು ಹೋಗಿದ್ದಾರೆ. ಇದನ್ನು ನೆನೆದು, ನಾಯಕಪಟ್ಟ ಮತ್ತು ದುರಂತ ನಾಯಕಪಟ್ಟ ಈ ಎರಡನ್ನೂ ತಕ್ಕಡಿಯಲ್ಲಿಟ್ಟು ತೂಗಿದಾಗ, ತಕ್ಕಡಿ ಮೇಲೆ ಕೆಳಗೆ ತೂಗಿ ತೂಗಿ, ನಾಯಕಪಟ್ಟ ಒಂದು ಗುಲಗಂಜಿ ತೂಕ ಹೆಚ್ಚಾಗಿ ತೂಗಿ, ಗೆದ್ದು ನಿಲ್ಲುತ್ತದೆ.

ಇಂದಿನ ನಮ್ಮ ಮಾಧ್ಯಮ ಕ್ಷೇತ್ರ ಅದರಲ್ಲೂ ದೃಶ್ಯ ಮಾಧ್ಯಮ ಕ್ಷೇತ್ರದ ಅವನತಿ ಕಂಡು ದುಃಖಿತನಾಗಿ ನನ್ನ ಸುಪ್ತಮನಸ್ಸು ರಘುರಾಮ ಶೆಟ್ಟರಿಗೆ ನಾಯಕ ಪಟ್ಟವನ್ನೇ ಆಯ್ಕೆ ಮಾಡಿತೇನೊ ಎಂದೆನಿಸುತ್ತದೆ. ಇರಲಿ, ಇದು ಮುಖ್ಯವೇ ಅಲ್ಲ. ಇಂದು ಮಾಧ್ಯಮ ಕ್ಷೇತ್ರವು ಸಮಸ್ಯೆಗಳನ್ನು ವರದಿ ಮಾಡುತ್ತಿದೆಯೋ ಅಥವಾ ಸಮಸ್ಯೆಗಳನ್ನು ಹುಟ್ಟುಹಾಕುತ್ತಿದೆಯೋ ಗೊತ್ತೇ ಆಗುತ್ತಿಲ್ಲ. ಉದಾಹರಣೆಗೆ, ಹಿಜಾಬ್ ಕೇಸ್‌ನಲ್ಲಿ ನಿಜವಾದ ಸಮಸ್ಯೆಯ ಪಾಲೆಷ್ಟು, ಇದನ್ನು ಸಮಸ್ಯಾತ್ಮಕ ಮಾಡಿದ ಮಾಧ್ಯಮಗಳ ಪಾಲೆಷ್ಟು ನಿರ್ಧರಿಸಿ ಹೇಳುತ್ತೀರಾ? ಇದೇ ರೀತಿ ಅನೇಕಾನೇಕ ಉದಾಹರಣೆಗಳನ್ನು ಹೇಳಬಹುದು. ಮಾಧ್ಯಮ ಕ್ಷೇತ್ರ ತನ್ನ ನೀತಿ, ನಿಯಮ, ಸಂಯಮ, ಮಾನ ಮಾರ್ಯದೆ, ಘನತೆಗಳನ್ನು ತಾನೇ ತುಳಿದು ನಿಂತಿದೆ.

ಇಂಥ ಸಂದರ್ಭದಲ್ಲಿ ರಘುರಾಮ ಶೆಟ್ಟರು ನೆನಪಾಗುತ್ತಾರೆ. ನೆನಪಾಗಬೇಕು ಕೂಡ. ಅವರ ಕನಸು 'ಓದುಗ ಒಡೆತನದ ಮಾಧ್ಯಮ'ದ ಪ್ರಯತ್ನ ಇಂದಾದರೂ ನನಸಾಗಬೇಕಾಗಿದೆ.

ಯಾಕೋ ಮಾತು ಗಂಭೀರ ಆಯ್ತು. ಇದನ್ನು ಬರೆಯುವಾಗ ಟಿ.ವಿ.ಯಲ್ಲಿ ಕತ್ತಿ ಝಳಪಿಸುತ್ತಾ 'ಲವ್ ಕೇಸರಿ ಸುದ್ದಿ' ಬರುತ್ತಿತ್ತು. 'ಲವ್ ಜಿಹಾದ್' ಅನ್ನು 'ಅವರು' ಮಾಡುತ್ತಾರೆಂದು 'ಇವರೇ' ಆರೋಪಿಸಿ ಅದಕ್ಕೆ ಪ್ರತಿಯಾಗಿ 'ಇವರು' ಲವ್ ಕೇಸರಿ ಮಾಡಿ ಎಂದು ಅಬ್ಬರಿಸುತ್ತಿದ್ದರು. 'ಅವರು' ಕಳ್ಳತನ ಮಾಡುತ್ತಾರೆಂದು 'ಇವರೇ' ಆರೋಪಿಸಿ 'ಇವರು' ದರೋಡೆ ಮಾಡಬೇಕು ಎಂಬಂತಿತ್ತು ಆ ವಾದ! ಈ ಟೈಮ್‌ನಲ್ಲೇ ನನಗೊಬ್ಬ ಕಿಡಿಗೇಡಿ ಹುಡುಗ ಫೋನ್ ಮಾಡಿ ತನ್ನ ಪರಿಚಯ ಮಾಡಿಕೊಂಡು, 'ಸರ್, ನಾನು ನಿಮ್ಮ ಅಭಿಮಾನಿ' ಅಂದ. 'ಆಯ್ತುಪ್ತ ಆಯ್ತು ಏನ್ ಸಮಾಚಾರ?' ಎಂದೆ. 'ನಾನೊಂದು ಪದ್ಯ ಹಾಡ್ತೀನಿ, ನನ್ನ ಹೆಸರನ್ನು ಯಾರಿಗೂ ಹೇಳಬಾರದು' ಅಂದುದಕ್ಕೆ 'ಆಯ್ತು, ನಾನು ಬೇರೆಯವರಿಗೆ ಹೇಳಿದರೆ ಒಂದು ಲಕ್ಷ ಕೊಡ್ತೀನಿ, ಟ್ರಾಫಿಕ್‌ನಲ್ಲಿದ್ದೇನೆ, ಬೇಗ ಹಾಡಪ್ಪ' ಎಂದು ಮನೆಯಲ್ಲೇ ಕೂತು ಅಂದೆ. ಅವನು ಜಾನಪದ ಮಟ್ಟಲ್ಲಿ ಹಾಡಿದ. ನಾನು ಅವನಿಗೆ 'ಶರಣಾದೆ' ಎಂದೆ. ಯಾಕೆಂದರೆ ಅವನು ಹಾಡಿದ್ದು ಲವ್ ಕೇಸರಿ, ಲವ್ ಜಿಹಾದ್‌ಗೆ ಉತ್ತರವಾಗಿತ್ತು. ಅವನ ಹಾಡು ಇದು:

ಮಾವಾ, ಮಾವಾ ಕೇಳೊ ಮಂಗ್ಯಾ
ಕತ್ತಿ ಝಳಪಿಸುತ ಬಂದು, ನನ ಮುಂದ ನಿಂದು
ಹಿಂಗ ಲವ್ ಮಾಡು, ಲವ್ ಮಾಡು ಅಂದರ
ಹೆಂಗ ಮಾಡಲೋ ಲವ್ವ, ಹೆಂಗ ಮಾಡಲೋ ಲವ್ವ
ನಿನ್ನ ಎದೆಯೊಳಗ ಇಲ್ಲದ ಲವ್ವ, ಮಾಡೆಂದರ ಹೆಂಗ
ಮಾಡಲೋ ಲವ್ವ
ಲವ್ ಲವ್ ಅಂದರ ಏನು ಮಾವ, ಏನು ಮಾವ?
ಕೇಳೊ ಮಾವಾ ಹೇಳುತೀನಿ, ನಾ ಹೇಳಿದ ಮೇಲ ನೀ ಕೇಳು
ಲವ್ವಲ್ಲಿ ಯುದ್ಧ ಯಾಕೋ ಮಾವ, ಲವ್ವೇ ಧರ್ಮವು ಕೇಳು
ಲವ್ವಂದರ ಕಾಮನಬಿಲ್ಲು, ಅದರೊಳಗೈತಿ ರಂಗು ರಂಗೇಳು
ಏಕ ಬಣ್ಣವಾದರದು ವಾಕರಿಕೆಯೊ, ಬಣ್ಣಬಣ್ಣದ
ಓಕುಳಿಯೋ ಲವ್ವು,
ಮಾವ, ರಂಗು ರಂಗಲ್ಲಿ ಬಾರೊ, ಕತ್ತಿ ಮುರಿದೆಸೆದು ಬಾರೊ
ಲವ್ವು ಮಾಡೋಣು ಬಾರೊ ಓಕುಳಿಯ ಆಡೋಣು ಬಾರೊ

ಹೆಂಗಪ್ಪ ಇದು? 'ಲವ್ ಜಿಹಾದ್' ಅಂತೆ, ಲವ್ ಅಂದರೆ ಎಲ್ಲರಿಗೂ ಗೊತ್ತು. ಜಿಹಾದ್ ಅಂದರೆ ಧರ್ಮಯುದ್ಧ ಅಂತೆ! ನಿಜವಾದ ಲವ್ ಧರ್ಮವನ್ನೂ ಮೀರುತ್ತದೆ. ಇನ್ನು ಲವ್ ಮತ್ತು ಯುದ್ಧ ಅಜಗಜಾಂತರ ಕ್ರಿಯೆಗಳು. ಹಾಗೇ ಇತ್ತೀಚೆಗೆ 'ಲವ್ ಕೇಸರಿ' ಅಂತ ರಂಗಪ್ರವೇಶ ಮಾಡಿದೆ. ಕೇಸರಿ ಅಂದರೆ ವಿರಕ್ತ! ಈ ಲವ್ ಮತ್ತು ಆ ವಿರಕ್ತಿ ಹೇಗೆ ಕೂಡುತ್ತವೆ? ವಿರಕ್ತಿ ಇರುವವರನ್ನು ಲವ್ ಮಾಡಿದರೆ, ಮಾಡಿದವರ ಪಾಡೇನು? ಜೊತೆಗೆ ಇದು ಗಂಡಸರ ಸಮಸ್ಯೆಯಾಗಿಬಿಟ್ಟಿದೆ. ಹೆಣ್ಣೆಂದರೆ ಮನಸ್ಸೇ ಇಲ್ಲದ ಕೀಲುಗೊಂಬೆ ಅಂತ ಈ ಗಂಡಸರು ಅಂದುಕೊಂಡಂತಿದೆ- ಹೀಗೆಲ್ಲಾ ಧರ್ಮಸೂಕ್ಷ್ಮತೆಯ ಚಿಂತೆ ಮಾಡುತ್ತಾ ನನ್ನ ತಲೆ ಕೆಟ್ಟು ಎಕ್ಕುಟ್ಟೋಗಿತ್ತು. ಇಂಥ ಸಂಕಷ್ಟದಲ್ಲಿ ಆ ಕಿಡಿಗೇಡಿ ಹುಡುಗನ ಜಾನಪದ ಮಟ್ಟು ಬಂದು ನನ್ನ ತಲೆ ನೇವರಿಸಿ ಸಾಂತ್ವನ ನೀಡಿತು. ಅದಕ್ಕಾಗಿ ಅವನಿಗೆ ಕೃತಜ್ಞತೆಗಳು.

ಕ್ಷಮೆ ಇರಲಿ, ನಾನು ಇಷ್ಟು ಮಾತಾಡಬೇಕೆಂದುಕೊಂಡಿರಲಿಲ್ಲ. ಈಗೊಂದು ವಿಸ್ಮಯ ಹೇಳಿ ನನ್ನ ಮಾತು ಮುಗಿಸುತ್ತೇನೆ. ಎಲ್ಲರಿಗೂ ಗೊತ್ತಿದೆ. ಅಸಮಾನತೆ ಮೌಲ್ಯದ ಚಾತುರ್ವರ್ಣದ ಹಿಂದೂ ಗುಂಪಿನ ಪ್ರತಿಪಾದಕ ಆರ್‌ಎಸ್‌ಎಸ್‌ನ ಶ್ರೀ ಗೋಲ್ವಾಲ್ಕರ್ ಹಾಗೂ ಹಿಂಸಾಮೂರ್ತಿ ಶ್ರೀ ನಾಥುರಾಂ ಗೋಡ್ಸೆಯರ ಕುಮೌಲ್ಯಗಳನ್ನು ಭಾರತದೆಲ್ಲೆಡೆ ಬಿತ್ತಿ ಬೆಳೆಯಲು ನಾಗಪುರದ ಆರ್‌ಎಸ್‌ಎಸ್ ಅವಿರತ ಪ್ರಯತ್ನಿಸುತ್ತಲೇ ಇದೆ. ಭಾರತದ ತುಂಬೆಲ್ಲಾ ಗೋಲ್ವಾಲ್ಕರ್ ಮತ್ತು ಗೋಡ್ಸೆ ನಿರ್ಮಾಣ ಮಾಡಲು ಸ್ಥಳಾವಕಾಶಕ್ಕಾಗಿ ಈ ಚಾತುರ್ವರ್ಣದ ಹಿಂದೂ ಗುಂಪು, ಭಾರತವನ್ನೆಲ್ಲಾ ಆವರಿಸಿಕೊಂಡಿರುವ ಗಾಂಧಿ ಮತ್ತು ಅಂಬೇಡ್ಕರ್‌ರನ್ನು ನಿರ್ನಾಮ ಮಾಡಲು ಸತತವಾಗಿ ಗಾಂಧಿ, ಅಂಬೇಡ್ಕರ್ ಎಂಬ ಆಲ ಮತ್ತು ಅರಳಿಮರಗಳನ್ನು ಕೊಚ್ಚಿ ತರಿದು ಕತ್ತರಿಸಿ ತುಳಿದು ಏನೆಲ್ಲಾ ಮಾಡುತ್ತಿದೆ. ಆದರೂ, ಆದರೂನುವೆ ಪೌರತ್ವ ಕಾಯ್ದೆ ತಿದ್ದುಪಡಿ (CAA, NRC) ಸಂದರ್ಭ ಭುಗಿಲೆದ್ದಾಗ ಅದರೊಳಗಿಂದ ಮೂಡಿದ ಗಾಂಧಿ, ಅಂಬೇಡ್ಕರ್ ಪ್ರಭಾವಳಿ ಭಾರತದ ತುಂಬಾ ಆವರಿಸಿಕೊಳ್ಳುವ ಪರಿ, ಇದೇನು ಚೋದ್ಯ! ಆಗ ಜನರ ಬೇಗುದಿಗೆ ಗಾಂಧಿ, ಅಂಬೇಡ್ಕರ್ ಸಾಂತ್ವನ ನೀಡಿದರೇ?

ಗಾಂಧಿಯವರನ್ನು ಕಡೆದು ಸತ್ವವನ್ನಷ್ಟೇ ತೆಗೆದಿಟ್ಟುಕೊಂಡು ಪ್ರತಿಮೆ ಮಾಡಿ ನಿಲ್ಲಿಸಿದರೆ, ಅದರೊಳಗಿಂದ 'ಸಹನೆ ಮತ್ತು ಪ್ರೀತಿ' ಸೂಸುತ್ತವೆ. ಹಾಗೆ ಅಂಬೇಡ್ಕರ್‌ಗಾಗಿಯೂ ಈ ನೆಲ ಕಾತರಿಸುತ್ತಿದೆ. ನ್ಯಾಯಕ್ಕೆ ನ್ಯಾಯದ ಹಕ್ಕೇ ಇಲ್ಲದ ಸಂದರ್ಭದಲ್ಲಿ ನ್ಯಾಯಕ್ಕೇನೇ ನ್ಯಾಯದ ಹಕ್ಕು ಸಿಗುವಂತಾಗಲು ಕಾರಣರು ಅಂಬೇಡ್ಕರ್. ಅಂಬೇಡ್ಕರ್ ಅವರನ್ನು ಕಡೆದು ಸತ್ವವನ್ನಷ್ಟೇ ತೆಗೆದಿಟ್ಟುಕೊಂಡು ಪ್ರತಿಮೆ ಮಾಡಿ ನಿಲ್ಲಿಸಿದರೆ ಅದರೊಳಗಿಂದ ನ್ಯಾಯ, ಸಮಾನತೆ ಸೂಸುತ್ತವೆ. ಸಹನೆ, ಪ್ರೀತಿ, ನ್ಯಾಯ, ಸಮಾನತೆಯ ಜಲಕ್ಕಾಗಿ ಭಾರತದ ನೆಲ ಚಾತಕ ಪಕ್ಷಿಯಂತೆ ಕಾಯುತ್ತಿಲ್ಲವೇ? ಭಾರತಕ್ಕೆ ಗಾಂಧಿ, ಆಮ್ಲಜನಕ ನೀಡುವ ಅರಳಿ ಮರದಂತೆ ಹಾಗೂ ಅಂಬೇಡ್ಕರ್, ಆಸರೆ ನೀಡುವ ಆಲದ ಮರದಂತೆ ಇರಬಹುದೇ?

(ವಡ್ಡರ್ಸೆ ರಘುರಾಮ ಶೆಟ್ಟರ ಲೇಖನಗಳ ಸಂಗ್ರಹ 'ಬೇರೆಯೇ ಮಾತು' ಕೃತಿ ಬಿಡುಗಡೆ ಸಮಾರಂಭದಲ್ಲಿ ಮಾಡಿದ ಭಾಷಣದ ಅಕ್ಷರರೂಪ)

ಮೊದಲ ಓದು

ಪುಟ್ಟ ಕಥೆಗಳ ದೊಡ್ಡ ಕ್ಯಾಪ್ಸೂಲ್

ಅಲರುಗಳು ಅರಳುವ ಮುನ್ನ ಹೊಸಕುವ ಶಕ್ತಿಗಳು ಹೇಗೆಲ್ಲಾ ಇವೆ ಎಂಬುದಕ್ಕೆ 'ಅರಳದ ಅಲರು' ಕಥೆಯ ನಾಯಕಿಯೇ ಉದಾಹರಣೆ. ಇಂಥ ಬಹುತೇಕ ಸ್ತ್ರೀಪ್ರಧಾನ ಮನೋಭೂಮಿಕೆಯ 14 ಕಥೆಗಳು ಈ ಹೊತ್ತಗೆಯಲ್ಲಿವೆ.

ಇಲ್ಲಿ ಹಲವು ಕಥೆಗಳಲ್ಲಿ ಗಮನ ಸೆಳೆಯುವುದು ರಾಯಚೂರು– ಕೊಪ್ಪಳ ಸೀಮೆಯ ಭಾಷಾ ಸೊಗಡು. ಹಳ್ಳಿಯ ಸನ್ನಿವೇಶಗಳನ್ನು ಹೇಳುವಲ್ಲಿ ಪೂರ್ತಿ ಆಯಾ ಪ್ರಾದೇಶಿಕ ಸೊಗಡನ್ನು ಪರಿಣಾಮಕಾರಿಯಾಗಿ ಬಳಸಿಕೊಂಡು ನಿರೂಪಿಸಲಾಗಿದೆ. ಕಾಲಕ್ಕೆ ತಕ್ಕಂತೆ ಬದಲಾಗುವ ಸೋಮಕ್ಕನ ಸ್ವಭಾವ ('ದೇವರು ಕಣ್ಬಿಟ್ಟರೆ' ಕಥೆ) ಮನುಷ್ಯ ಸಹಜ ವರ್ತನೆಯನ್ನು ತೆರೆದಿಟ್ಟಿದೆ. ಸಮಚಿತ್ತದ ಅಗತ್ಯವನ್ನೂ ಅಲ್ಲಲ್ಲಿ ಹೇಳಿದೆ.

'ಡ್ರೀಮ್‌ಗರ್ಲ್' ಕಥೆಯಲ್ಲಂತೂ ಪ್ರವಾಸಿ ವಾಹನವೇ ನಾಯಕಿ. ಅದರ ಸುತ್ತಲೇ ಇತರ ಪಾತ್ರಗಳು ಗಿರಕಿ ಹೊಡೆದು ಮಾತನಾಡುತ್ತವೆ. ಬದಲಾಗುವ ಆದರ್ಶ, ಪರಿಸ್ಥಿತಿ ಸೃಷ್ಟಿಸುವ ವೈರುಧ್ಯಗಳನ್ನು 'ಅಕ್ಷರ ಹಾದರ' ಹೇಳಿದೆ.

ಹೀಗೆ ಕಥೆಗಳಲ್ಲಿ ಅನುಭವ, ಅನುಭಾವಗಳು ಜೊತೆಯಾಗಿವೆ. ಹಳ್ಳಿಗಳಷ್ಟೇ ಅಲ್ಲ. ಪಟ್ಟಣದ ಸ್ಪರ್ಶವೂ ಹಲವು ಕಥೆಗಳಲ್ಲಿ ಇದೆ. ಸಣ್ಣ ಕಥೆಗಳ ಆಸಕ್ತರು ಓದಬಹುದಾದ ಒಳ್ಳೆಯ ಕ್ಯಾಪ್ಸೂಲ್‌ಗಳು ಈ ಹೊತ್ತಗೆಯಲ್ಲಿವೆ.



ಅರಳದ ಅಲರು
ಲೇ:ವಿಜಯಲಕ್ಷ್ಮೀ ಕೊಟಗಿ
ಪ್ರ: ಸ್ನೇಹಸ್ಪರ್ಶ ಪ್ರಕಾಶನ
ಸಂ: 9632240787
ಪು: 134 ₹140



ಶೇಕ್ಸ್‌ಪಿಯರ್‌ನ ನಿಜ‘ಬಣ್ಣ’ ಬಯಲು ಮಾಡಿದ ಶ್ರೀಮತಿ

ವೈ.ಕೆ.ಸಂಧ್ಯಾ ಶರ್ಮ

ಸಾಹಿತ್ಯ ಹಾಗೂ ರಂಗಪ್ರೇಮಿಗಳ ಆರಾಧ್ಯ ದೈವ ಶೇಕ್ಸ್‌ಪಿಯರ್‌ನ ಅಂತರಂಗದ ಬದುಕಿನ ಪಾತಾಳಿಗೆ ದುರ್ಬೀನಿಟ್ಟು ನೋಡಿದ ನಾಟಕವಿದು. ಖ್ಯಾತನಾಮರ ಹೆಂಡಂದಿರ ದನಿಗೆ ಹೊರತೂಬು ನೀಡಿದರೆ ಅವರ ಗಂಡಂದಿರ ಮುಖವಾಡಗಳು ಕಳಚಿ ನಿಜಬಣ್ಣ ಬಯಲಾಗುವುದು ಎಂಬ ಸೂಚ್ಯಾರ್ಥ ಇಂಥ ನಾಟಕಗಳ ಸಂದೇಶವೆನ್ನಬಹುದೇನೋ?

‘ಶೇಕ್ಸ್‌ಪಿಯರನ ಶ್ರೀಮತಿ’ ನಾಟಕ ಏಕವ್ಯಕ್ತಿ ಪ್ರದರ್ಶನವಾದರೂ ಎಲ್ಲೂ ಯಾಂತ್ರಿಕವಾಗಿರದೆ, ತನ್ನ ವೈವಿಧ್ಯಪೂರ್ಣ ಅಂಶಗಳಿಂದ ಸುಲಭವಾಗಿ ನೋಡಿಸಿಕೊಂಡು ಹೋದ ಸಮರ್ಥ ಪ್ರಯೋಗ. ಪ್ರಪ್ರಥಮವಾಗಿ ಶೇಕ್ಸ್‌ಪಿಯರನ ಹೆಸರೇ ಆಸಕ್ತಿಯನ್ನು ಹುಟ್ಟಿಸುವ ಕಥಾವಸ್ತು. ಜಗತ್ಪ್ರಸಿದ್ಧ ನಾಟಕಕಾರನ ಹೆಂಡತಿಯ ಮೂಲಕ ಅನಾವರಣಗೊಳ್ಳುವ ನಾಟಕ ಸಹಜವಾಗಿ ಕುತೂಹಲ ದಕ್ಕಿಸಿಕೊಳ್ಳುವ ನಂಬಿಕೆಯನ್ನು ಹುಸಿಗೊಳಿಸಲಿಲ್ಲ.

‘ಕ್ರಿಯೇಟಿವ್ ಥಿಯೇಟರ್’ ಅರ್ಪಿಸಿದ ‘ಶೇಕ್ಸ್‌ಪಿಯರನ ಶ್ರೀಮತಿ’ ಲೇಖಕ ಉದಯ್ ಇಟಗಿಯವರು ವಿವಿಧ ಆಕರಗಳಿಂದ ಸಂಗ್ರಹಿಸಿ ಬರೆದ ಸ್ವೋಪಜ್ಞತೆಯನ್ನು ತೋರಿದ ಸ್ವಾರಸ್ಯಕರ ಏಕವ್ಯಕ್ತಿ ರಂಗಪ್ರಯೋಗ. ರಂಗದ ಮೇಲೆ ತರಲು ಸವಾಲಾಗಬಲ್ಲಂಥ ನಾಟಕವನ್ನು ನಿರ್ದೇಶಕ ವಿಶ್ವರಾಜ್ ಪಾಟೀಲ ಮನಮುಟ್ಟುವಂತೆ ಹರಿತವಾಗಿ ನಿರ್ದೇಶಿಸಿದ್ದಾರೆ. ಎಲ್ಲಕ್ಕಿಂತ ಮುಖ್ಯವಾಗಿ ಶ್ರೀಮತಿಯ ಅಂತರಂಗವನ್ನು, ತುಮುಲ-ವಿಷಾದಗಳನ್ನು ನೋಡುಗರಿಗೆ ಪರಿಣಾಮಕಾರಿಯಾಗಿ ಮುಟ್ಟಿಸಿದವರು ಹಿರಿಯ ಕಲಾವಿದೆ ಲಕ್ಷ್ಮೀ ಚಂದ್ರಶೇಖರ್.

ಜನಪ್ರಿಯತೆ ಮತ್ತು ಖ್ಯಾತಿಯನ್ನು ವಿಶ್ವದಾದ್ಯಂತ ಪಡೆದುಕೊಂಡಿರುವ ರಂಗಪ್ರೇಮಿಗಳ ಆರಾಧ್ಯದೈವ ಶೇಕ್ಸ್‌ಪಿಯರನ ಅಂತರಂಗದ ಬದುಕಿನ ಪಾತಳಿಗೆ ದುರ್ಬೀನಿಟ್ಟು ನೋಡುವ ಈ ಪ್ರಯತ್ನ ರಂಗದ ಮೇಲೆ ಹೇಗೆ ಅರಳುವುದೋ ಎಂಬ ಕುತೂಹಲ ದೊಡ್ಡದಾಗಿತ್ತು. ಕ್ರಿ.ಶ. ಹದಿನಾರು ಮತ್ತು ಹದಿನೇಳನೆಯ ಶತಮಾನದ ಕಾಲಘಟ್ಟದಲ್ಲಿ ಇಂಗ್ಲೆಂಡಿನಲ್ಲಿ ಜೀವಿಸಿದ್ದು, ನಾಟಕ ಮತ್ತು ಕಾವ್ಯಕ್ಕೆ ಹೊಸದಿಕ್ಕನ್ನು ತೋರಿದ ಮಹತ್ವದ ಬರಹಗಾರ ವಿಲಿಯಂ ಶೇಕ್ಸ್‌ಪಿಯರ್. ಜಗದ ಕಣ್ಣಿಗೆ ಕಂಡಿದ್ದಕ್ಕಿಂತ ವಿಭಿನ್ನವಾಗಿ ಅವನ ಹೆಂಡತಿ ಆನಿ ಹ್ಯಾಥ್ವೆಯ ಸ್ವಗತದ ಮಾತುಗಳಿಂದ ಅವನ ವ್ಯಕ್ತಿತ್ವವನ್ನು ಒರೆಗೆ ಹಚ್ಚುವ ಬಗೆ ವಿಶಿಷ್ಟವಾಗಿತ್ತು. ಬಹು ಸರಳವಾದ ಭಾಷೆಯಲ್ಲಿ ಶ್ರೀಮತಿ ತನ್ನ ಸರಳ-ಬಿಚ್ಚುಮನದ ಸ್ವಭಾವಕ್ಕನುಗುಣವಾಗಿ ಗೊಂದಲಮಯವಾದ ಅವನ ಬದುಕಿನ ಹೆಜ್ಜೆಗಳನ್ನು ತಾನು ಕಂಡಂತೆ ತೆರೆದಿಡುವ ಪರಿ ಆಪ್ಯಾಯಮಾನ.



ಶೇಕ್ಸ್‌ಪಿಯರ್‌ನ ಶ್ರೀಮತಿ ಪಾತ್ರದಲ್ಲಿ ಲಕ್ಷ್ಮೀ ಚಂದ್ರಶೇಖರ್

ಅವಳಿಗಿಂತ ಎಂಟು ವರ್ಷ ಕಿರಿಯನಾದ ಹದಿನೆಂಟರ ಯುವಕ ಶೇಕ್ಸ್‌ಪಿಯರ್ ತಾನಾಗೇ ಅವಳ ಸ್ನೇಹ ಬಯಸಿ, ಮುಂದುವರೆದು, ಆಕೆಯ ಗರ್ಭಕ್ಕೆ ಕಾರಣನಾಗಿ ಪಂಚಾಯಿತಿಯ ತೀರ್ಮಾನಕ್ಕೆ ಮಣಿದು ಒತ್ತಾಯಕ್ಕೆ ಅವಳನ್ನು ಮದುವೆಯಾದವನು. ರಸಿಕ, ಚಂಚಲಚಿತ್ತ ಗಂಡನ ಬಗ್ಗೆ ಅವಳಿಗೆ ಸದಾ ಗುಮಾನಿ-ಗೊಂದಲ. ಸಿರಿವಂತ ಮನೆತನದ ಸೋಮಾರಿ ಅತ್ತೆ, ಬೇಜವಾಬ್ದಾರಿ ಸ್ವಭಾವದ ಕುಡುಕ ಮಾವ, ಜೊತೆಗೆ ತಿಕ್ಕಲುತನದ ಸುಳ್ಳುಗಾರ, ಸ್ತ್ರೀಲೋಲುಪ ಗಂಡನೊಡನಾಟದ ಸಂಸಾರದಲ್ಲಿ ಮೂರುಮಕ್ಕಳು ಬೇರೆ. ಏಕಾಂಗಿಯಾಗಿ ಸಂಸಾರ ನಿಭಾಯಿಸುವ ಗಟ್ಟಿಗಿತ್ತಿ ಹೆಣ್ಣಾಗಿ ಆಕೆ, ಮನೆಯಲ್ಲೇ ಸಣ್ಣಪುಟ್ಟ ಕೆಲಸಗಳಿಂದ ಹಣ ಸಂಪಾದಿಸುವ ಶ್ರಮಜೀವಿ.

ಸಂಸಾರದ ಜವಾಬ್ದಾರಿ ಹೊರದ ಗಂಡ ಲಂಡನ್ನಿಗೆ ಪಲಾಯನ ಮಾಡಿ, ಅಲ್ಲಿ ಹೆಣ್ಣು-ಹೆಂಡಗಳ ಸಹವಾಸದಲ್ಲಿದ್ದರೂ ಅದನ್ನು ಪ್ರತಿಭಟಿಸದ ಒಳ್ಳೆಯ ಹೆಂಡತಿ ಇವಳು. ಸಲಿಂಗಕಾಮಿಯಾಗಿಯೂ ಆಗಿದ್ದ ಅವನ ಎಲ್ಲ ದೌರ್ಬಲ್ಯಗಳ ಬಗ್ಗೆ ತಿಳಿದಿದ್ದರೂ ಇವಳು ತಲೆಕೆಡಿಸಿಕೊಳ್ಳದ ಪ್ರಶಾಂತೆ. ಅವನ ಸಾನೆಟ್ಟಿನಂತೆ ತಾನು ಅವನ ಪಾಲಿಗೆ ‘ಬೇಸಿಗೆಯ ಹಗಲಾಗದೆ, ಚಳಿಗಾಲದ ದಿನದಂತೆ’ ಆದ ತಾನು ಅವನ ಮೈ-ಮನ ಬೆಚ್ಚಗಿರಿಸಲಾಗಲಿಲ್ಲ ಎಂಬ ವಿಷಾದವೂ ಅವಳಲ್ಲಿದೆ. ಸಾಹಿತ್ಯಪ್ರೇಮಿಯಲ್ಲದ ತಾನು ಅವನಿಗೆ ಸರಿಜೋಡಿಯಲ್ಲ ಎಂಬ ಅರಿವೂ ಇದೆ.

ಪ್ರಪಂಚದ ಎಲ್ಲ ಕವಿಗಳು, ಲೇಖಕರು ಸುಳ್ಳುಗಾರರೇ ಎಂದು ಮೂದಲಿಸುವ ಶ್ರೀಮತಿ, ‘ಗಂಡಂದಿರ ಮನಸ್ಸನ್ನು ಮಾತ್ರ ಬಗೆದು ನೋಡಬಾರದು. ಅದು ನಿಗೂಢ-ಹೊಲಸು’ ಎಂದು ಬಹು ಮಾರ್ಮಿಕವಾಗಿ ನುಡಿಯುತ್ತಾಳೆ. ತಮ್ಮದು ವಿರಸ ದಾಂಪತ್ಯವಾದರೂ ಗಂಡನ ಬರವಣಿಗೆ ಶಕ್ತಿಯ ಬಗ್ಗೆ ಮೆಚ್ಚುವ ಅವಳಲ್ಲಿ ಅವನ ಕೆಟ್ಟಚಾಳಿಗಳ ಬಗ್ಗೆ ತಿರಸ್ಕಾರ ಇದ್ದೇ ಇರುತ್ತದೆ. ಬೈಬಲ್‌ಅನ್ನು ನಂಬಿದ ತಾನು ಸದ್ಗೃಹಿಣಿ, ನೆಟ್ಟಗೆ ಬಾಳುತ್ತಿರುವ ತನಗೇನೂ ತಿಳಿಯದು ಎಂದು ಎಲ್ಲವನ್ನೂ ಮುಕ್ತವಾಗಿ ಮಾತನಾಡುವ ಶ್ರೀಮತಿ, ಹತ್ತಿರವಿದ್ದೂ ದೂರ ಉಳಿದ ಗಂಡನ ಅಸಾಂಗತ್ಯದ ಬಗ್ಗೆ ಜರಡಿ ಹಿಡಿದು ಜಾಲಾಡುವ, ವಿಶ್ಲೇಷಿಸುವ ವಿಚಾರಗಳು ಬಹು ಅರ್ಥಗರ್ಭಿತ.

‘ಪ್ರಸಿದ್ಧ ವ್ಯಕ್ತಿಗಳ ಬದುಕಿನ ಚಿತ್ರಣ ಕಟ್ಟಿಕೊಡುವಾಗ ಅವರ ಬದುಕಿನಲ್ಲಿ ಬಂದ ಇತರೆ ಹೆಣ್ಣುಮಕ್ಕಳ ಕುರಿತು ಹೈಲೈಟ್ ಮಾಡುತ್ತಾರೆಯೇ ವಿನಾ ಅವರ ಕೈಹಿಡಿದ ಹೆಂಡತಿಯ ವಿಷಯವನ್ನು ಮಾತ್ರ ಎಲ್ಲೂ ಹೊರಗೆಡಹುವುದೇ ಇಲ್ಲ’ ಎಂಬ ವಿಷಾದ ವ್ಯಕ್ತಪಡಿಸುತ್ತಾಳೆ. ‘ಪ್ರಸಿದ್ಧರು ಪ್ರಸಿದ್ಧಿಗೆ ಬರುವುದರ ಹಿಂದೆ ಅವರ ಹೆಂಡತಿಯರ ಶ್ರಮ, ತ್ಯಾಗದ ದೊಡ್ಡಕಥೆಯನ್ನು ಯಾರೂ ಲೆಕ್ಕಿಸುವುದಿಲ್ಲ’ ಎಂಬ ಅವಳ ನೋವಿನ ಹಳವಂಡ ಆಕೆಯ ಬದುಕಿನ ನಿಃಶಬ್ದ ಕ್ರೌರ್ಯ-ದುರಂತವನ್ನು ಎತ್ತಿ ಹಿಡಿಯುತ್ತದೆ.

ಶೇಕ್ಸ್‌ಪಿಯರ್ ತನ್ನ ಜೀವಿತಾವಧಿಯ ಕಡೆಯ ಐದುವರ್ಷಗಳು ಹೆಂಡತಿಯ ಆರೈಕೆಯಲ್ಲೇ ಇದ್ದರೂ ಅವನು ತನ್ನ ಹಳೆಯ ಗೆಳೆತನದ ಗುಂಗಿನಲ್ಲೇ ಇದ್ದನೇ ಎಂಬ ಅಸ್ಪಷ್ಟತೆ-ಅಪರಿಚಿತತೆ ಅವಳ ಬೆರಗು. ತನ್ನ ಐವತ್ತೆರಡನೆಯ ಹುಟ್ಟಿದಹಬ್ಬದ ದಿನವೇ ಮರಣಿಸಿದ ಶೇಕ್ಸ್‌ಪಿಯರ್‌ನ ವಂಶ ತನ್ನ ಮಕ್ಕಳೊಂದಿಗೆ ಕೊನೆಯಾದ ಬಗ್ಗೆ ಶ್ರೀಮತಿ ವಿಷಾದಿಸಿದರೂ, ಎಂದಿಗೂ ಆಪ್ತವಾಗದ ಗಂಡ ಎಂದಿಗೂ ತನ್ನ ಕನಸಿನಲ್ಲಿ ಸುಳಿದಿಲ್ಲ ಎಂಬ ಕಹಿಭಾವನೆಯನ್ನು ಒಸರಿಸುವ ಅವಳ ನಿಟ್ಟುಸಿರ ಅಭಿವ್ಯಕ್ತಿಯಲ್ಲಿ ಪ್ರಸಿದ್ಧ ಕವಿಯ ಹೆಂಡತಿಯರ ಅಸಮ ದಾಂಪತ್ಯದ ಸಾರ್ವತ್ರಿಕತೆಯನ್ನು ಬಿಂಬಿಸುತ್ತಾಳೆ.



ಶೇಕ್ಸ್‌ಪಿಯರ್‌ನ ಶ್ರೀಮತಿಯಲ್ಲವೇ? ನನ್ನದು ಬರೀ ತುಮುಲ, ವಿಷಾದ ಭಾವ...

ನಾಟಕ ನೋಡಿದ ಮೇಲೆ ಜಗಮೆಚ್ಚಿದ ಶೇಕ್ಸ್‌ಪಿಯರ್‌ನ ಪ್ರತಿಭೆ-ಅವನ ಹೆಂಡತಿಯ ಅಂತರಂಗದ ತೊಳಲಾಟ-ಸ್ಪಂದನಗಳ ಓಘದ ಮುಂದೆ ಮಂಕಾಗಿ ತೋರುತ್ತದೆ. ಎಲ್ಲ ಪ್ರಸಿದ್ಧರ ಹೆಂಡತಿಯರ ಅಂತರಂಗದ ಜ್ವಾಲಾಮುಖಿಗಳಿಗೆ ಕನ್ನಡಿ ಹಿಡಿವ, ಶೇಕ್ಸ್‌ಪಿಯರ್‌ನ ಹೆಂಡತಿ ಮೇಲ್ನೋಟಕ್ಕೆ ಒರಟಳಂತೆ ಕಂಡರೂ ಅವಳ ಪ್ರಾಮಾಣಿಕತೆಯ ವ್ಯಕ್ತಿತ್ವ ಕಂಡು ಮನಸ್ಸು ಮಿಡಿಯುತ್ತದೆ.

ಶೇಕ್ಸ್‌ಪಿಯರ್‌ನ ಹೆಂಡತಿಯಾಗಿ ಹೃದಯಸ್ಪರ್ಶಿ ಅಭಿನಯ ನೀಡಿದ ಲಕ್ಷ್ಮೀ ಚಂದ್ರಶೇಖರ್ ಪಾತ್ರಕ್ಕೆ ನ್ಯಾಯ ಒದಗಿಸಿದ್ದಾರೆ. ನಾಟಕಾವಧಿ ಒಂದು ಗಂಟೆಯುದ್ದಕ್ಕೂ ಎಲ್ಲೂ ಬೇಸರ ಹಣಕದಂತೆ ರಂಗದ ಮೇಲಿನ ಆಕೆಯ ಚಲನೆ, ಚಟುವಟಿಕೆಗಳು ಪೂರಕವಾಗಿವೆ. ಇದನ್ನು ಆಗುಮಾಡಿದ ನಿರ್ದೇಶಕ ವಿಶ್ವರಾಜ್ ಅಭಿನಂದನೀಯರು. ರಂಗಸಜ್ಜಿಕೆ- ರಂಗಪರಿಕರ (ವಿಶ್ವನಾಥ ಮಂಡಿ) ಧ್ವನಿ ಸಂಯೋಜನೆ (ಗಜಾನನ ನಾಯ್ಕ) ಬೆಳಕಿನ ವಿನ್ಯಾಸ (ಮುದ್ದಣ್ಣ ರಟ್ಟಿಹಳ್ಳಿ) ವಸ್ತ್ರವಿನ್ಯಾಸ (ಮಂಗಳಾ ಎನ್.) ಪ್ರಸಾಧನ (ರಾಮಕೃಷ್ಣ ಕನ್ನರಪಾಡಿ) ಪರಿಪೂರ್ಣವಾಗಿತ್ತು. ಎಲ್ಲ ಅಂಶಗಳಲ್ಲೂ ನೋಡುಗನಿಗೆ ತೃಪ್ತಿ ನೀಡಿದ್ದು ನಾಟಕದ ಗೆಲುವು!

ಖ್ಯಾತನಾಮರ ಹೆಂಡಂದಿರ ದನಿಗೆ ಹೊರತೂಬು ನೀಡಿದರೆ ಅವರ ಗಂಡಂದಿರ ಮುಖವಾಡಗಳು ಕಳಚಿ ನಿಜಬಣ್ಣ ಬಯಲಾಗುವುದು ಎಂಬ ಸೂಚ್ಯಾರ್ಥ ಇಂಥ ನಾಟಕಗಳ ಸಂದೇಶವೆನ್ನಬಹುದೇನೋ?

ರಜಾ ಮಜಾ ಮಜಕೂರ

• ಎಂ.ಎಸ್.ಪೂಜಾರ

ಪದ – ಪರಿಚಯ – ಪರೀಕ್ಷೆ

ಕೆಳಗೆ ಕೊಟ್ಟಿರುವ ಎರಡೂ ಪದಗಳ ಅಕ್ಷರಗಳನ್ನು ಪುನಃ ಬಳಸಿಕೊಂಡು ನಾಲ್ಕು ಅಕ್ಷರಗಳ ಒಂದೇ ಪದ ಮಾಡಿ. ಅಕ್ಷರಗಳು ಸ್ಥಾನಪಲ್ಲಟವಾಗಬಹುದು.

1 ರಮಾ + ವನ =	26 ಲವ + ನತ್ತು =
2 ತಿವಿ + ನಾಯಿ =	27 ಸಲ + ಮತ್ತು =
3 ಅರ + ಲಂಕಾ =	28 ಮನು + ಅತಿ =
4 ಜರಿ + ನವ =	29 ಕದ + ಸತ್ತು =
5 ಸವಿ + ಕಸಿ =	30 ಕರ + ಹತ್ತು =
6 ಮೇಕೆ + ಅರಿ =	31 ಮಾತೆ + ಕದ =
7 ರಾಮು + ಕತ್ತು =	32 ಮಾಡ + ಜಾಲಿ =
8 ನಯ + ಜಮಾ =	33 ಹಣ + ವಾರಿ =
9 ರಂಪ + ಪರೆ =	34 ತಡ + ಆಳಿ =
10 ಅರ + ನಾದ =	35 ಬಲು + ಕಡ =
11ಹಣ + ಗರ =	36 ಸೋಡಿ + ಲಾಗ =
12 ನವ + ಬಾಲ =	37 ಲವ + ಸತ್ತು =
13 ಅತಿ + ನವ =	38 ಹರಿ + ದಾರ =
14 ಅಣಿ + ಗತ =	39 ಆದಿ + ಪಾತ =
15 ಹಿರಿ + ಮಗಿ =	40 ಮಾನ + ಅತ್ತು =
16 ನಾಕ + ಗರಿ =	41 ಸದ್ದು + ಹರ =
17 ಜಾಣೆ + ಗರ =	42 ಸ್ವರ + ಸತಿ =
18 ಸಂತ + ಭಾವಿ =	43 ಕಾವು + ಸಾರ =
19 ರಾಗಿ + ಜರಿ =	44 ರಂಗ + ಪಾತ =
20 ರಾಸು + ರಾಜಿ =	45 ಭಾಗ + ನಡಿ =
21 ತಾಣ + ರಾಗ =	46 ಸರ + ಹೋದ =
22 ಹವಿ + ಸುರಿ =	47 ತಾತ + ರಮ್ಯ =
23 ಅರ + ಗಜ =	48 ಪತಿ + ರಿಣ =
24 ಕತ್ತು + ರಸ =	49 ರಾಧಾ + ನಿಜ =
25 ಆನೆ + ಪಾದ =	50 ತಡ + ಕಾಯಿ =

ಸ್ವಾರಸ್ಯಕರ ಸಂಕಲನ

ಒಂದು ಸಂಖ್ಯೆಯನ್ನು ಎಡದಿಂದಲೂ ಹಾಗೂ ಬಲದಿಂದಲೂ ಓದಿದಾಗ ಒಂದೇ ಸಂಖ್ಯೆ ಆಗುವುದನ್ನು ಮಾಲಾ ಸಂಖ್ಯೆ ಎಂದು ಕರೆಯುತ್ತಾರೆ. ಉದಾಃ 5834385.

ಇಂಥ ಮಾಲಾ ಸಂಖ್ಯೆಗಳನ್ನು ಸಂಕಲನ ಕ್ರಿಯೆಯಿಂದ ಪಡೆಯುವ ಒಂದು ಮೋಜಿನಾಟ ಇಲ್ಲಿದೆ.

ಒಂದು ಸಂಖ್ಯೆಯನ್ನು ತೆಗೆದುಕೊಂಡು ಅದನ್ನು ತಿರುವುಮುರುವು ಮಾಡಿ ಅವೆರಡೂ ಸಂಖ್ಯೆಗಳನ್ನು ಕೂಡಿಸಬೇಕು. ಬಂದ ಉತ್ತರವನ್ನು ಮತ್ತೆ ತಿರುವು-ಮುರುವು ಮಾಡಿ ಕೂಡಿಸುತ್ತ ಹೀಗೆ ಮುಂದುವರಿದರೆ ಒಂದು ಮಾಲಾ ಸಂಖ್ಯೆ ಸಿಗುತ್ತದಂತೆ.

ಉದಾಃ

97
+79
176
+671
847
+748
1595
+5951
7546
+6457
14003
+30041
44044

ಮಾಲಾ ಸಂಖ್ಯೆ

ಸ್ವಾರಸ್ಯಕರ ಸಂಖ್ಯಾಟ

1 ಮರಳಿ ಮೂಲಸಂಖ್ಯೆಗೆ...

ಮೂರು ಅಂಕಿಯ ಒಂದು ಸಂಖ್ಯೆ ಬರೆದುಕೊಳ್ಳಿ. ಆದರೆ, ಅದು 3ರಿಂದ 9ರಿಂದ ಭಾಗ ಹೋಗಬಾರದು. ಉದಾಃ 467 ಇಲ್ಲಿ ಮೊದಲ ಅಂಕಿ 4ರ ಮೇಲೆ ಬೆರಳಿಟ್ಟು ಮುಚ್ಚು. ಉಳಿದ 67ರ 6 + 7 ಕೂಡಿಸು 13 ಮತ್ತೆ 1 + 3 = 4 ಅದನ್ನು ಮೇಲಿನ ಸಂಖ್ಯೆಯ 467ರ 4ರ ಕೆಳಗೆ ಬರೆ. ಈಗ 6ರ ಮೇಲೆ ಬೆರಳಿಟ್ಟು ಮುಚ್ಚು. ಈಗ 6ರ ಮೇಲೆ ಬೆರಳಿಟ್ಟು ಮುಚ್ಚು. ಈಗ 47ರ ಸೂಚ್ಯಂಕ 4 + 7 = 11 ಮತ್ತು 1 + 1 = 2 ಈ ಎರಡನ್ನೂ 467ರ 6 ಕೆಳಗೆ ಬರೆ ಮತ್ತೆ 7ರ ಮೇಲೆ ಬೆರಳಿಟ್ಟು ಮುಚ್ಚು. ಉಳಿದ 46ರ 4 + 6 = 10 ಮತ್ತು 1 + 0 = 1ನ್ನು 467ರ 7 ಕೆಳಗೆ ಬರೆ. ಈಗ ಒಟ್ಟಾಗಿ 467ರ ಕೆಳಗೆ ಹೊಸ ಮೂರಂಕಿಗಳು 421 ಸಿಕ್ಕವು. ಹೀಗೆ ಮುಂದುವರಿದರೆ 18ನೇ ಬಾರಿಗೆ ಮೂಲಸಂಖ್ಯೆ ನೋಡಿರಿ.

467	532
421	578
356	643
298	791
812	187
319	689
134	865
754	245
923	976
	467

2 ಮರಳಿ ಮೂಲ ಸಂಖ್ಯೆಗೆ...

ಹತ್ತರೊಳಗಿನ ಒಂದು ಅಂಕಿಯನ್ನು ಮೇಲೆ ಬರೆದುಕೊಳ್ಳಿ. ಕೆಳಗೆ ಮತ್ತೊಂದು ಅಂಕಿಯನ್ನು ಬರೆದುಕೊಳ್ಳಿ. ಅವೆರಡನ್ನೂ ಕೂಡಿಸಿ ಬಂದ ಬಿಡಿಸ್ಥಾನದ ಅಂಕಿಯನ್ನು ಮತ್ತೆ ಮೊದಲಿನ ಸಂಖ್ಯೆಯ ಬದಿಗೆ ಬರೆಯಿರಿ. ಕೈಲೆ ಬಿಟ್ಟು ಬಿಡಿ. ಅದರ ಕೆಳಗೆ ಹಿಂದಿನ ಸಂಖ್ಯೆಯ ಮೇಲಿನ ಅಂಕಿಯನ್ನೇ ಮತ್ತೆ ಎರಡನೇ ಅಂಕಿಯ ಕೆಳಗೆ ಬರೆಯಿರಿ. ಈಗ ಮತ್ತೆ ಕೂಡಿಸಿ ಈಗ ಬಂದ ಸಂಖ್ಯೆಯ ಬಿಡಿ ಅಂಕಿಯನ್ನು ಹಿಂದಿನಂತೆ ಅದರ ಪಕ್ಕದಲ್ಲಿ ಬರೆದು ಎರಡನೇ ಸಂಖ್ಯೆಯ ಮೇಲಿನ ಅಂಕಿಯನ್ನೇ ಮೂರನೇ ಅಂಕಿಯ ಕೆಳಗೆ ಬರೆದು ಮತ್ತೆ ಕೂಡಿಸಿ ಹೀಗೆ ಮುಂದುವರಿಸಿ ಮೊಟ್ಟ ಮೊದಲು ಬರೆದುಕೊಂಡಿದ್ದ ‘ಅಂಕಿ ಜೋಡಿ’ಯೇ ಪುನಃ ಬರುವವರೆಗೂ ಕೂಡಿಸಿರಿ. ಅಲ್ಲಿಗೆ ಆಟ ಮುಕ್ತಾಯ. ಈ ಆಟದಿಂದ ಮಾನಸಿಕವಾಗಿ ಸಂಕಲನ ಮಾಡುವ ಕ್ರಿಯೆ ತೀವ್ರವಾಗುವುದು.

ಉದಾಃ 7 ಮೊಟ್ಟ ಮೊದಲ
+ 6 ಜೋಡಿ ಅಂಕಿಗಳು

ಈಗ ಆಟ ಪ್ರಾರಂಭ

+ 7 3 0 3 3 6 9 5 4 9 3 2 5 7 2 9 1 0 1 1 2 3 5 8 3 1 4 5 9 4
6 7 3 0 3 3 6 9 5 4 9 3 2 5 7 2 9 1 0 1 1 2 3 5 8 3 1 4 5 9

3 7 0 7 7 4 1 5 6 1 7 8 5 3 8 1 9 0 9 9 8 7 5 2 7 9 6 5 1 6 7
4 3 7 0 7 7 4 1 5 6 1 7 8 5 3 8 1 9 0 9 9 8 7 5 2 7 9 6 5 1 6

ಇಂಥ ಬೇರೆ ಬೇರೆ ಅಂಕಿ ಜೋಡಿಗಳನ್ನು ಬಳಸಿಕೊಂಡು ನೀವೂ ಆಡಿ ನೋಡಿ



ರಜ–ಮಜ

ಸೂಟಿಯು ಬಂದರೆ ಸಾಕು
ಆಟವೆ ಆಟ ನಮಗೆಲ್ಲ
ಪಾಠವ ಓದುವ ಗೋಳಿಲ್ಲ
ಊಟದ ಪರಿವೆಯೂ ನಮಗಿಲ್ಲ

ರಾಮು ಸೋಮು ಕೂಡಲು ಸಾಕು
ಕ್ರಿಕೆಟ್ ಆಟವ ಆಡುವೆವು
ಕಿಟ್ಟು ಪುಟ್ಟು ಕರೆದರೆ ಸಾಕು
ಈಜಲು ಬಾವಿಗೆ ಓಡುವೆವು

ರಂಗ–ಸಂಗ ಕೂಡಲು ಸಾಕು
ಗೋಲಿಯ ಆಟವ ಆಡುವೆವು
ಕಲ್ಲ–ಮಲ್ಲ ಸೇರಲು ಸಾಕು
ಗೇಲಿಯ ಮಾಡುತ ನಗುತಿಹೆವು

ಗೋಪು ಪಾಪು ಸೇರಲು ಸಾಕು
ಮಾವಿನ ತೋಪಿಗೆ ಹೋಗುವೆವು
ನಿಂಗ–ರವಿಯು ಕೂಡಲು ಸಾಕು
ಜೇನನು ಬಿಡಿಸಿ ತಿನ್ನುವೆವು

ಡಬ್ಬ ಚುಕ್ಕ ಶೀರ್ಷಿಕೆಯ

ದೊಡ್ಡಾಟ

• ಕಲೆ–ಪರಿಕಲ್ಪನೆ: ಸುರೇಶ ಆರ್. ಅರ್ಕಸಾಲಿ



ಇದು ದೊಡ್ಡಾಟ. ಸುಮಾರು 150 ವರ್ಷಗಳ ಇತಿಹಾಸವಿರುವ ಜನಪದ ಕಲಾ ಪ್ರಕಾರ. ಬಳ್ಳಾರಿ, ಹಾವೇರಿ, ಧಾರವಾಡ, ಗದಗ, ಬೆಳಗಾವಿ ಮುಂತಾದ ಜಿಲ್ಲೆಗಳಲ್ಲಿ ಪ್ರದರ್ಶನ ನಡೆಯುತ್ತದೆ



ದೊಡ್ಡಾಟ ಪ್ರದರ್ಶನಕ್ಕೆ ಗಟ್ಟಿ ಕಟ್ಟಿಗೆಯ ತೊಲೆಗಳಿಂದ ಎತ್ತರವಾಗಿ ವೇದಿಕೆ ನಿರ್ಮಿಸಲಾಗುತ್ತದೆ. ಅಲ್ಲಿ ಬಲಭಾಗದಲ್ಲಿ ಹಾರ್ಮೋನಿಯಂ, ಮೃದಂಗ, ಶಹನಾಯಿ, ತಾಳಗಳೊಂದಿಗೆ ಕಥೆಗಾರರ ಹಿಮ್ಮೇಳವಿರುತ್ತದೆ



ದೊಡ್ಡಾಟಕ್ಕೆ ಪರಂಪರಾಗತ ಸಾಂಪ್ರದಾಯಿಕ ಬಣ್ಣಗಾರಿಕೆ ಬೇಕು. ಬೆಣ್ಣೆ, ಕೊಬ್ಬರಿ ಎಣ್ಣೆಯೊಂದಿಗೆ ಹುಡಿವರ್ಣಗಳ ಮಿಶ್ರಣ ಮಾಡಿ ಮಾಡುವ ವರ್ಣಾಲಂಕಾರ ತನ್ನದೇ ಆದ ವೈಶಿಷ್ಟ್ಯ ಹೊಂದಿದೆ



ಇದು ದೊಡ್ಡಾಟದಲ್ಲಿ ಕಾಣುವ ಸವ್ಯಸಾಚಿ ಅರ್ಜುನ ಪಾತ್ರಧಾರಿಯ ವೇಷ. ಕಿರೀಟ, ಭುಜಕಿರೀಟಗಳು, ಭಾತಿ, ಕಾಶಿ, ರಟ್ಟೆಕಟ್ಟು, ಮುಂಗೈಕಟ್ಟು ವಸ್ತ್ರವಿನ್ಯಾಸವನ್ನು ನೋಡಬಹುದು. ಭಾವ ಭಂಗಿ ನೋಡುಗನನ್ನು ಸೆಳೆಯುತ್ತದೆ



ಇದು ಭೀಮ-ದುರ್ಯೋಧನರ ಗದಾಯುದ್ಧ ಪ್ರಸಂಗದ ದೃಶ್ಯ. ರಾಮಾಯಣ, ಮಹಾಭಾರತಗಳ ಲಂಕಾದಹನ, ಕುರುಕ್ಷೇತ್ರ, ರಕ್ತರಾತ್ರಿ, ಕೃಷ್ಣಾರ್ಜುನರ ಕಾಳಗ, ಇನ್ನೂ ಹಲವು ಸಂದರ್ಭಗಳ ಪೌರಾಣಿಕ ಕಥಾವಸ್ತುಗಳನ್ನು ದೊಡ್ಡಾಟಗಳು ಹೊಂದಿರುತ್ತವೆ



ಹಲ ಹಲಲ ಶಹಬ್ಬಾಷ್.... ಹೀಗೆ ಪಾತ್ರಧಾರಿಗಳೇ ಸಂಭಾಷಣೆ ಹೇಳಿ, ಹಾಡುತ್ತ ವಿಶಿಷ್ಟವಾಗಿ ನೃತ್ಯ ಮಾಡುತ್ತಾರೆ. ರಾತ್ರಿಯಿಂದ ಬೆಳಗಿನಜಾವದವರೆಗೂ ನಡೆಯುತ್ತದೆ. ದೊಡ್ಡಾಟ ಗಡುಸುತನದ ತನ್ನದೇ ವಿಶಿಷ್ಟ ಶೈಲಿ ಹೊಂದಿದೆ



ಮಜ ಮಜ ಮಜಕೂರದ ಕಳೆದ ಸಂಚಿಕೆಯ ಪ್ರಶ್ನೆಗಳಿಗೆ ಸರಿ ಉತ್ತರ ನೀಡಿದ ಮಕ್ಕಳ ಹೆಸರುಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಕಳೆದ ಸಂಚಿಕೆಯ ‘ಮಜಕೂರ’ಕ್ಕೆ ಪ್ರತಿಕ್ರಿಯಿಸಿದ ಆಯ್ದ ಮೂವರು ಪುಟಾಣಿಗಳು



ಪ್ರತೀಕ್ಷಾ ಜೋಯ್ಸ್
ಆನಂದಪುರಂ (ಶಿವಮೊಗ್ಗ)



ನಮಿತಾ ಹರದರ
ತಾಳಿಕೋಟಿ (ವಿಜಯಪುರ)



ಆಯುಷ್ ಎಂ.ಎನ್.,
ಭಾಗ್ಯನಗರ (ಕೊಪ್ಪಳ)

majakoora@prajavani.co.in



ಅಭಿಷೇಕ್ ವರ್ಮಾ, ರಜತ್ ಚೌಹಾನ್ ಮತ್ತು ಅಮನ್ ಸೈನಿ– ಟ್ವಿಟರ್ ಚಿತ್ರ

ಆರ್ಚರಿ ವಿಶ್ವಕಪ್: ಚಿನ್ನಕ್ಕೆ ಗುರಿಯಿಟ್ಟ ಭಾರತ ತಂಡ

ಅಂತಲ್ಯ, ಟರ್ಕಿ (ಪಿಟಿಐ): ಭಾರತ ಪುರುಷರ ಕಾಂಪೌಂಡ್ ತಂಡವು ಫ್ರಾನ್ಸ್ ತಂಡವನ್ನು ರೋಚಕ ಹಣಾಹಣಿಯಲ್ಲಿ ಮಣಿಸಿ ವಿಶ್ವಕಪ್ ಸ್ಟೇಜ್ 1 ಆರ್ಚರಿ ಚಾಂಪಿಯನ್‌ಷಿಪ್‌ನಲ್ಲಿ ಚಿನ್ನದ ಪದಕ ಜಯಿಸಿತು.

ಇಲ್ಲಿ ಶನಿವಾರ ನಡೆದ ಫೈನಲ್ ಪಂದ್ಯದಲ್ಲಿ ಅಭಿಷೇಕ್ ವರ್ಮಾ, ರಜತ್ ಚೌಹಾನ್ ಮತ್ತು ಅಮನ್ ಸೈನಿ ಅವರನ್ನೊಳಗೊಂಡ ಭಾರತ ತಂಡವು 232–231ರಿಂದ ಫ್ರಾನ್ಸ್‌ನ ಜೀನ್ ಫಿಲಿಪ್ ಬೌಲ್ಚ್, ಕ್ವೆಂಟಿನ್ ಬೇರಾಯರ್ ಮತ್ತು ಆ್ಯಡ್ರಿಯನ್ ಗೊಂಟಿಯರ್ ಅವರನ್ನು ಸೋಲಿಸಿದರು.

ಐದು ವರ್ಷಗಳ ಬಳಿಕ ವಿಶ್ವಕಪ್‌ನಲ್ಲಿ ಭಾರತ ಪುರುಷರ ಕಾಂಪೌಂಡ್ ತಂಡವು ಚಿನ್ನ ಜಯಿಸಿದೆ. 2017ರಲ್ಲಿ ಶಾಂಘೈನಲ್ಲಿ ತಂಡವು ಅಗ್ರಸ್ಥಾನ ಗಳಿಸಿತ್ತು.

ಈ ಟೂರ್ನಿಯಲ್ಲಿ ಮತ್ತೊಂದು ಪದಕವನ್ನು ಗೆಲ್ಲುವ ಅವಕಾಶವನ್ನು ಭಾರತ ಕಳೆದುಕೊಂಡಿತು. ಅಭಿಷೇಕ್ ವರ್ಮಾ– ಮುಸ್ಕಾನ್ ಕಿರಾರ್ ಮಿಶ್ರ ಜೋಡಿ ವಿಭಾಗದ ಕಂಚಿನ ಪದಕದ ಪ್ಲೇ ಆಫ್‌ನಲ್ಲಿ 156–157ರಿಂದ ಕ್ರೊವೇಷ್ಯಾ ತಂಡಕ್ಕೆ ಸೋತಿತು.

‘ಈ ಟೂರ್ನಿಗಾಗಿಯೇ ನಾವು ವಿಶೇಷವಾಗಿ ತಯಾರಿ ನಡೆಸಿದ್ದೆವು. ಮಾನಸಿಕವಾಗಿ ಬಲಿಷ್ಠವಾಗಿದ್ದೆವು. ಮುಂಬರುವ ಏಷ್ಯನ್ ಗೇಮ್ಸ್‌ನಲ್ಲೂ ಇದೇ ರೀತಿಯ ಸಾಮರ್ಥ್ಯ ತೋರುವ ಬಯಕೆಯಿದೆ’ ಎಂದು 24 ವರ್ಷದ ಅಮನ್ ಸೈನಿ ಹೇಳಿದ್ದಾರೆ.

ತರುಣದೀಪ್ ರಾಯ್ ಮತ್ತು ರಿಧಿ ಫೊರ್ ಅವರು ರಿಕರ್ವ್ ಮಿಶ್ರ ಜೋಡಿ ವಿಭಾಗದಲ್ಲಿ ಭಾನುವಾರ ಚಿನ್ನದ ಪದಕಕ್ಕಾಗಿ ಸೆಣಸಲಿದ್ದಾರೆ.

ಫುಟ್‌ಬಾಲ್: ಆರ್ಸೆನಲ್ ಜಯಭೇರಿ

ಲಂಡನ್ (ರಾಯಿಟರ್ಸ್): ಪ್ರೀಮಿಯರ್ ಲೀಗ್ ಫುಟ್‌ಬಾಲ್ ಟೂರ್ನಿ ಅಗ್ರ ನಾಲ್ಕರಲ್ಲಿ ಸ್ಥಾನ ಗಳಿಸುವ ಮ್ಯಾಂಚೆಸ್ಟರ್ ಯುನೈಟೆಡ್ ತಂಡದ ವಿಶ್ವಾಸಕ್ಕೆ ಆರ್ಸೆನಲ್ ಪೆಟ್ಟು ನೀಡಿತು. ಶನಿವಾರ ಇಲ್ಲಿ ನಡೆದ ಪಂದ್ಯದಲ್ಲಿ 3–1ರಿಂದ ಆರ್ಸೆನಲ್ ಗೆದ್ದಿತು.


ಆರ್ಸೆನಲ್ ತಂಡದ ಪರ ನ್ಯೂನೊ ಟಾವರೆಸ್ ಮೂರನೇ ನಿಮಿಷದಲ್ಲೇ ಗೋಲಿನ ಖಾತೆ ತೆರೆದರು. ಬುಕಾಯೊ ಸಾಕಾ 32ನೇ ನಿಮಿಷದಲ್ಲಿ ದೊರೆತ ಪೆನಾಲ್ಟಿ ಅವಕಾಶವನ್ನು ಗೋಲಿನಲ್ಲಿ ಪರಿವರ್ತಿಸಿ ತಂಡದ ಮುನ್ನಡೆ ಹೆಚ್ಚಿಸಿದರು. 34ನೇ ನಿಮಿಷದಲ್ಲಿ ಕ್ರಿಸ್ಟಿಯಾನೊ ರೊನಾಲ್ಡೊ ಕಾಲ್ಚಳಕ ತೋರಿ ಮ್ಯಾಂಚೆಸ್ಟರ್ ಯುನೈಟೆಡ್ ತಂಡದ ಆಸೆಯನ್ನು ಚಿಗುರಿಸಿದರು. ಆದರೆ 70ನೇ ನಿಮಿಷದಲ್ಲಿ ಗ್ರ್ಯಾನಿಟ್ ಕ್ಸಾಕಾ ಗೋಲು ಗಳಿಸಿ ಆರ್ಸೆನಲ್ ಮುನ್ನಡೆಯನ್ನು ಹೆಚ್ಚಿಸಿದರು.

ಏಷ್ಯನ್ ಕುಸ್ತಿ ಚಾಂಪಿಯನ್‌ಷಿಪ್: ಬಜರಂಗ್ ಪೂನಿಯಾಗೆ ಬೆಳ್ಳಿ

ರವಿ ತಂತ್ರಗಳಿಗೆ ಒಲಿದ ಚಿನ್ನ

ಉಲನ್ ಬಾತಾರ್, ಮಂಗೋಲಿಯ (ಪಿಟಿಐ): ಬಲಶಾಲಿ ಪಟ್ಟು ಮತ್ತು ತಂತ್ರಗಳ ಮೂಲಕ ಮಿಂಚಿದ ರವಿ ದಹಿಯಾ ಅವರು ಕುಸ್ತಿಯಲ್ಲಿ ತಮ್ಮ ಸಾಮರ್ಥ್ಯವನ್ನು ಮತ್ತೊಮ್ಮೆ ಸಾಬೀತು ಮಾಡಿದರು. ಏಷ್ಯನ್ ಕುಸ್ತಿ ಚಾಂಪಿಯನ್‌ಷಿಪ್‌ನಲ್ಲಿ ಚಿನ್ನದ ಪದಕ ಗೆದ್ದು ಸಂಭ್ರಮಿಸಿದರು. ಆದರೆ ಬಜರಂಗ್ ಪೂನಿಯಾ ಬೆಳ್ಳಿ ಪದಕಕ್ಕೆ ಸಮಾಧಾನಪಟ್ಟುಕೊಂಡರು.

ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಬೆಳ್ಳಿ ಗೆದ್ದಿದ್ದ ರವಿ ದಹಿಯಾ ಶನಿವಾರ ನಡೆದ 57 ಕೆಜಿ ವಿಭಾಗದ ಫೈನಲ್ ಬೌಟ್‌ನಲ್ಲಿ ಕಜಕಸ್ತಾನದ ರಖತ್ ಕಲ್ಜಾನ್ ವಿರುದ್ಧ ತಾಂತ್ರಿಕವಾಗಿ ಮೇಲುಗೈ ಸಾಧಿಸಿ ಗೆಲುವು ಸಾಧಿಸಿದರು. 24 ವರ್ಷದ ರವಿ ಆರಂಭಿಕ ಬೌಟ್‌ಗಳಲ್ಲಿ ಮೊದಲು ಹಿನ್ನಡೆ ಅನುಭವಿಸಿ ನಂತರ ಚೇತರಿಸಿಕೊಂಡಿದ್ದರು. ಆದರೆ ಚಿನ್ನದ ಪದಕದ ಬೌಟ್‌ನಲ್ಲಿ ಆರಂಭದಿಂದಲೇ ಆಧಿಪತ್ಯ ಸ್ಥಾಪಿಸಿ ಎದುರಾಳಿಯನ್ನು ಮಣಿಸಿದರು.



ರವಿ ದಹಿಯಾ – ಟ್ವಿಟರ್ ಚಿತ್ರ

ಸೋನೆಪತ್‌ನ ನಹರಿ ಗ್ರಾಮದ ರವಿ ಮೊದಲ ಬೌಟ್‌ನಲ್ಲಿ ಜಪಾನ್‌ನ ರಿಕುಟೊ ಅರೈ ವಿರುದ್ಧ ಮತ್ತು ಎರಡನೇ ಬೌಟ್‌ನಲ್ಲಿ ಮಂಗೋಲಿಯದ ಜನಬಜರ್ ಜಂಡನ್‌ಬುಡ್ ವಿರುದ್ಧ ಜಯ ಗಳಿಸಿದ್ದರು.

ಕಲ್ಜಾನ್ ಆರಂಭದಲ್ಲಿ ಭಾರತದ ಕುಸ್ತಿಪಟುವನ್ನು ನೆಲಕ್ಕೆ ಕೆಡವಿ ಸ್ವಲ್ಪ ಹೊತ್ತು ಮೇಲೇಳದಂತೆ ಮಾಡಿದರು. ನಂತರ ರವಿ ಆಧಿಪತ್ಯ ಸ್ಥಾಪಿಸಿದರು. ಎಡಗಾಲನ್ನು ಗುರಿಯಾಗಿರಿಸಿಕೊಂಡು ಆಕ್ರಮಣ ನಡೆಸಿದ ಅವರು ಸತತವಾಗಿ ಎರಡು ಪಾಯಿಂಟ್‌ಗಳನ್ನು ಗಳಿಸಿ ಮುನ್ನಡೆದರು. ಇದರಿಂದಾಗಿ ಈ ಬಾರಿ ಭಾರತಕ್ಕೆ ಮೊದಲ ಚಿನ್ನ ಗೆದ್ದುಕೊಡಲು ಅವರಿಗೆ ಸಾಧ್ಯವಾಯಿತು.

70 ಕೆಜಿ ವಿಭಾಗದಲ್ಲಿ ಗೌರವ್ ಬಲಿಯಾನ್ ಬೆಳ್ಳಿ ಪದಕ ಗಳಿಸಿದರು. ಸೀನಿಯರ್ ವಿಭಾಗದಲ್ಲಿ ಇದೇ ಮೊದಲ ಬಾರಿ ಕಣಕ್ಕೆ ಇಳಿದ ನವೀನ್ 70 ಕೆಜಿ ವಿಭಾಗದಲ್ಲಿ ಕಂಚಿನ ಪದಕ ಗಳಿಸಿದರು. ಸತ್ಯಾವರ್ತ್ ಕಾಡಿಯನ್ 97 ಕೆಜಿ ವಿಭಾಗದ ಕಂಚಿನ ಪದಕ ಗೆದ್ದುಕೊಂಡರು.